ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ – 2023)

## ಭಾಗ – 1

@KTBS NOT TO BE REPUBLISHED

# 7

## ಏಳನೆಯ ತರಗತಿ

## ಕನ್ನಡ ಮಾಧ್ಯಮ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

ನಂ. 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1ರಿಂದ 4ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5ರಿಂದ 10ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach)ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಪಠ್ಯಕ್ರಮ-2005ರಂತೆ ಗಣಿತವು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದನ್ನು ಬಿಟ್ಟು ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತೆ ಮಾಡಬೇಕು. ಅದು ಸಹಕಾರೀ ಕಲಿಕೆಗೂ

@KTBS NOT TO BE REPUBLISHED

ಪೂರಕವಾಗಿರಬೇಕು. ಬಹುತೇಕ ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಗಣಿತವೆಂದರೆ ಭಯ. ಈ ಭಯವನ್ನು ಹೋಗಲಾಡಿಸಲು ವಿನೋದಗಣಿತ, ಕಥೆಗಳು, ಒಗಟುಗಳು, ಗೂಢಪ್ರಶ್ನೆಗಳು ಮುಂತಾದ ಅಂಶಗಳನ್ನು ಸೇರಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಚಟುವಟಿಕೆಯ ಮೂಲಕ ಅಥವಾ ಕುತೂಹಲ ಕೆರಳಿಸುವ ಕಥೆಗಳ ಮೂಲಕ ಪ್ರತಿಯೊಂದು ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪ್ರಾಚೀನ ಭಾರತದ ಶ್ರೇಷ್ಠ ಗಣಿತ ಶಾಸ್ತ್ರಜ್ಞರ ಕೊಡುಗೆಗಳನ್ನು ಸೂಕ್ತ ಸಂದರ್ಭಗಳಲ್ಲಿ ಕೊಡಲಾಗಿದೆ.

ನಾವಿಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವಿಸುತಿದ್ದೇವೆ. ಕಳೆದ ಅರ್ಧಶತಮಾನದಲ್ಲಿ ಮಾನವನ ಅದ್ಭುತ ಕನಸುಗಳು ನನಸಾಗಿ ಮಾನವ ತನ್ನ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದ್ದಾನೆ. ಜೀವನವನ್ನು ಸುಗಮವನ್ನಾಗಿಸಲು ಅತ್ಯಾವಶ್ಯಕವಾದ ಸಕಲ ವಸ್ತುಗಳನ್ನು ತಯಾರಿಸಿದ್ದಾನೆ. ಹಾಗೆಯೇ ಭೋಗ ವಿಲಾಸ ಜೀವನಕ್ಕೆ ಮಾರುಹೋಗಿ ಇಂದು ಮೂಲ ವಿಜ್ಞಾನವನ್ನೇ ಮರೆಯುವ ಹಂತಕ್ಕೆ ಮಾನವ ತಲುಪಿರುವುದು ಒಂದು ದುರಂತವೇ ಆಗಿದೆ. ಭೋಗ ಜೀವನಕ್ಕೆ ಪುಷ್ಠಿಯನ್ನು ಕೊಡುವ ತಂತ್ರಜ್ಞಾನದತ್ತ ಇಂದು ನಮ್ಮ ಒಲವಿದ್ದು ಮೂಲವಿಜ್ಞಾನದತ್ತ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಈಗಲಾದರೂ ನಮ್ಮ ಯುವಕ ಯುವತಿಯರು ವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಸಂಪ್ರದಾಯವನ್ನು ಮುಂದುವರಿಸುವರೆಂದು ಆಶಿಸಿ ಮುಂದೆ ಬರುವ ನೂತನ ವಿಜ್ಞಾನ ಪುಸ್ತಕಗಳಲ್ಲಿ ಅವರಿಗೆ ಯೋಚಿಸುವುದು, ಆಳವಾದ ಅಧ್ಯಯನ ಮಾಡುವುದು, ಪ್ರಯೋಗಗಳನ್ನು ಮಾಡುವುದು ಹಾಗೂ ಅವರಲ್ಲಿ ಸೃಜನಶೀಲತೆಯನ್ನು ಬೆಳೆಸುವತ್ತ ಒಲವನ್ನುಂಟುಮಾಡಲು ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿದೆ. ಕಲಿಕೆ ಚಟುವಟಿಕೆಗಳ ಸುತ್ತಲೂ ಹೆಣೆಯುವಂತೆ ಮಾಡಲು ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಗುರುವೃಂದದವರ ಸಹಕಾರವು ಅತ್ಯಾವಶ್ಯಕ.

7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದ್ದು, ಎನ್‌ಸಿಎಫ್ 2005 ಹಾಗೂ ಕೆಸಿಎಫ್ 2007 ಇವುಗಳಲ್ಲಿ ಕಂಡುಬರುವ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಂತವಾಗಿ ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹೊಂದಿಸಲಾಗಿದೆ. ಅವುಗಳೊಂದಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ರಚಿಸಲಾಗಿದೆ. ಆದರೆ ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳು ಪುಸ್ತಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು.

©KTBS NOT TO BE REPUBLISHED

# ಪರಸ್ಪರ

ನಿನ್ನೆ, ಇಂದು ಮತ್ತು ನಾಳೆಗಳು ಇಂದು ಈ ಕ್ಷಣದಲ್ಲಿ ಸೇರಿಕೊಂಡಿರುತ್ತವೆ ಎನ್ನುವ ವಿವೇಕವನ್ನು ಅಲ್ಲಮಪ್ರಭು ಹೇಳುತ್ತಾ ಚರಿತ್ರೆ ಎನ್ನುವುದು ಗುಪ್ತಗಾಮಿನಿಯಾಗಿ ಹರಿಯುತ್ತಿರುತ್ತದೆ. ಕೆಲವೊಮ್ಮೆ ಮೂರ್ತವಾಗಿ ಮತ್ತೆ ಕೆಲವೊಮ್ಮೆ ಅಮೂರ್ತವಾಗಿ ತನ್ನನ್ನು ಪ್ರಕಟಿಸಿಕೊಳ್ಳುತ್ತಿರುತ್ತದೆ. ಘಟನೆಗಳಾಗಿ, ವ್ಯಕ್ತಿಗಳಾಗಿ, ಮೌಲ್ಯಗಳಾಗಿ ವಿವಿದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇಂದು ಜಗತ್ತು ಧರ್ಮ, ಬಣ್ಣ, ಲಿಂಗ, ಭಾಷೆ, ಪ್ರಾದೇಶಿಕತೆ, ಬಡವರು, ಶ್ರೀಮಂತರು ಎಂಬ ನೂರಾರು 'ಐಡೆಂಟಿಟಿ'ಗಳಲ್ಲಿ ಒಡೆದು ಹೋಗಿದೆ. ವಿವಿಧ ಆಸಕ್ತಿಗಳ ಸಂಘರ್ಷದಲ್ಲೇ ಜನರು ತಮ್ಮ ಚರಿತ್ರೆಯನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಇತಿಹಾಸವು ಕೇವಲ ಒಂದು ಸರಳ ರೇಖಾ ಮಾದರಿಯ ಬೆಳವಣಿಗೆಯಲ್ಲ. ಮನುಷ್ಯನು ಇತಿಹಾಸದ ಭಾಗವಾಗಿದ್ದುಕೊಂಡೇ ಹೊಸ ಟಿಸಿಲುಗಳನ್ನು ಸೃಷ್ಟಿಸುತ್ತಿರುತ್ತಾನೆ. ಇತಿಹಾಸವೆನ್ನುವುದು ಒಂದು ಬೆಳೆಯುತ್ತಿರುವ ಸರಪಳಿ ಇದ್ದ ಹಾಗೆ ಪ್ರತಿ ಕೊಂಡಿಯು ಒಂದು ತಲೆಮಾರು; ಮತ್ತು ತಲೆಮಾರುಗಳು ಸೃಷ್ಟಿಯಾಗುತ್ತಲೇ ಇರುತ್ತದೆ. ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಚರಿತ್ರೆಯು ಅದರ ಸಂಚಯಿಕ ರೂಪದಲ್ಲಿ ಅತ್ಯಂತ ಸಂಕೀರ್ಣವಾದದ್ದು. ಚರಿತ್ರೆಯೆನ್ನುವುದು ಮೂಲತಃ ಒಂದು ನಿರಂತರ ಪ್ರಕ್ರಿಯೆ. ಅದನ್ನು ಅರ್ಥೈಸಿಕೊಳ್ಳಬೇಕಾದ ಬೌದ್ಧಿಕ ಶಕ್ತಿಯನ್ನು ನಾವು ನಿರಂತರ ಅಧ್ಯಯನದಿಂದ ಮಾತ್ರ ಗಳಿಸಿಕೊಳ್ಳಲು ಸಾಧ್ಯ.

ಚರಿತ್ರೆಯು ಅತ್ಯಂತ ವಿಸ್ತಾರವಾದದ್ದು. ಏಷ್ಯ, ಯೂರೋಪ್ ಮತ್ತು ಅಮೆರಿಕ ಖಂಡಗಳ ಚರಿತ್ರೆಗಳನ್ನು ಮಾತ್ರ ನಾವು ಪಠ್ಯಗಳಲ್ಲಿ ಪರಿಚಯಿಸಿಕೊಂಡಿದ್ದೇವೆ. ಆಫ್ರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಖಂಡಗಳ ಚರಿತ್ರೆಗಳನ್ನು ಇನ್ನೂ ಸರಿಯಾಗಿ ಪರಿಚಯಿಸಿಕೊಳ್ಳಬೇಕಿದೆ. ಅಲ್ಲದೆ ಜಗತ್ತಿನಾದ್ಯಂತ ಸಂಶೋಧನೆಗಳು ಅಸಂಖ್ಯ ರೀತಿಯಲ್ಲಿ ನಡೆಯುತ್ತಿದೆ. ಅವುಗಳನ್ನು ಪಠ್ಯಕ್ರಮಗಳ ಚೌಕಟ್ಟಿಗೆ ತರುವುದು ದೊಡ್ಡ ಸವಾಲು. ಏರು ಸುರುಳಿಯ ಕ್ರಮವನ್ನು ಅನುಸರಿಸುತ್ತಿದ್ದೇವೆ ಎಂದು ಕೊಂಡರೂ ಅದು ಮತ್ತಷ್ಟು ವೈಜ್ಞಾನಿಕವಾಗಿ ರೂಪುಗೊಳ್ಳಬೇಕಿದೆ.

ಪ್ರಸ್ತುತ ಏಳನೇ ತರಗತಿಯ ಪಠ್ಯವು ಯೂರೋಪ್ ಮತ್ತು ಭಾರತದ ಚರಿತ್ರೆಗಳನ್ನು ಹೆಚ್ಚು ಒಳಗೊಂಡಿದೆ. ವಿವಿಧ ಖಂಡಗಳ ವಿಶೇಷ ಭೌಗೋಳಿಕ ಲಕ್ಷಣಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಭಾರತದ ಚರಿತ್ರೆಗೆ ಹೆಚ್ಚು ಅಧ್ಯಯನದ ವ್ಯಾಪ್ತಿಯನ್ನು ಒದಗಿಸಲಾಗಿದೆ. ಇತ್ತೀಚಿನ ಸಂಶೋಧನೆಗಳನ್ನು ಗಮನದಲ್ಲಿರಿಸಿಕೊಂಡು ವಿಷಯಾವಾರು ವಿವರಗಳನ್ನು ನೀಡಲಾಗಿದೆ. ಪಠ್ಯಕ್ರಮವೇ ತುಸು ಹೆಚ್ಚೆನಿಸುವುದರಿಂದ ವಿವರಗಳು ಸಹಜವಾಗಿಯೆ ಸ್ವಲ್ಪ ಹೆಚ್ಚಾಗಿ ಬಂದಿವೆ. ಈ ಹಂತದ ವಿದ್ಯಾರ್ಥಿಗಳಿಗೆ ಎಷ್ಟನ್ನು ತಿಳಿಸಬೇಕು ಎಂದು ತೀರ್ಮಾನಿಸುವುದೇ ಒಂದು ದೊಡ್ಡ ಸವಾಲಾಗಿತ್ತು.

ಈ ರಚನೆಯಾಗುವ ಸಂದರ್ಭದಲ್ಲಿ ಎದುರಾದ ಮತ್ತೊಂದು ಸವಾಲೆಂದರೆ ಧರ್ಮ, ಜಾತಿ, ಲಿಂಗ ಮುಂತಾದ ಸೂಕ್ಷ್ಮ ವಿಚಾರಗಳನ್ನು ಕುರಿತು ಹೇಗೆ ಬರೆಯಬೇಕೆಂಬುದು. ನಮ್ಮದು ಬಹುಮುಖಿ ಸಮಾಜ. ಏಳನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅತ್ಯಂತ ಸೂಕ್ಷ್ಮಾವಸ್ಥೆಯ ಮನೋಸ್ಥಿತಿಯನ್ನು ಹೊಂದಿರುತ್ತಾರೆ. ಜನಮುಖಿ ಮತ್ತು ಸಮಾಜಮುಖಿ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಈ ಪಠ್ಯದಲ್ಲಿ ಮಾಡಲಾಗಿದೆ.

**ಶಿಕ್ಷಕರ ಗಮನಕ್ಕೆ ತಪ್ಪದೆ ತರಬೇಕಾದ ಕೆಲವು ಅಂಶಗಳನ್ನು ನಾವಿಲ್ಲಿ ಹಂಚಿಕೊಳ್ಳುತ್ತಿದ್ದೇವೆ.**

- 7ನೇಯ ತರಗತಿಯ ಪಠ್ಯಪುಸ್ತಕದ ಪಠ್ಯವಸ್ತು 5 ಮತ್ತು 6ನೇ ತರಗತಿಯ ಪಠ್ಯವಸ್ತುವಿನ ಮುಂದುವರಿದ ಭಗವಾಗಿದೆ. ಆದ್ದರಿಂದ ಶಿಕ್ಷಕರು ಹಿಂದಿನ ತರಗತಿಗಳ ಪಠ್ಯವಸ್ತುವನ್ನು ಅರಿಯುವುದು ಸೂಕ್ತವೇ ಆಗಿದೆ.
- ಪಾಠದ ಪ್ರಾರಂಭ ಮತ್ತು ಕೊನೆಯನ್ನು ಐಕಾನಗಳ ಮೂಲಕ ಸೂಚಿಸಿದೆ. ಲಿಖಿತ ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಈ ಚೌಕಟ್ಟು ಮೀರದಿರಲಿ. ಬಾಕ್ಸ್‌ಗಳಲ್ಲಿ ನೀಡಲಾದ ಹೆಚ್ಚಿನ ಮಾಹಿತಿಯನ್ನು ಕುರಿತಾದ ಪ್ರಶ್ನೆಗಳನ್ನು ಲಿಖಿತ ಪರೀಕ್ಷೆಯಲ್ಲಿ ಕೇಳಬಾರದಾಗಿಯೂ ವಿನಂತಿ.
- ಪಾಠದ ಪ್ರಾರಂಭದಲ್ಲಿ ಪಾಠದ ಪರಿಚಯ ಮತ್ತು ಸಾಮರ್ಥ್ಯಗಳನ್ನು ಶಿಕ್ಷಕರ ಮಾರ್ಗದರ್ಶಕ್ಕಾಗಿ ಮಾತ್ರವೇ ನೀಡಲಾಗಿದೆ. ಅವನ್ನು ಶಿಕ್ಷಕರು ಅಂತರ್ಗತಗೊಳಿಸಿಕೊಳ್ಳಬೇಕೆಂಬುದು ನಮ್ಮ ಆಶಯ.
- ಪಠ್ಯಪುಸ್ತಕದ ಉತ್ತಮ ಅಂಶಗಳು ಮತ್ತು ಕೊರತೆಗಳನ್ನು ಶಿಕ್ಷಕರು ಕರ್ನಾಟಕ ಪಠ್ಯಪುಸ್ತಕ ಸಂಘದ ಮುಖ್ಯ ಸಂಯೋಜಕರಿಗೆ ತಿಳಿಸುವ ಪರಿಪಾಠವನ್ನು ಸ್ವಾಗತಿಸುತ್ತೇವೆ. ಪಠ್ಯಪುಸ್ತಕ ಪರಿಷ್ಕರಣೆಯ ಹಂತದಲ್ಲಿ ಶಿಕ್ಷಕರ ಸೂಕ್ತ ಸಲಹೆಗಳನ್ನು ಅಳವಡಿಸಲಾಗುವುದು. ಪೋಷಕರೂ ಈ ಕಾರ್ಯದಲ್ಲಿ ಭಾಗವಹಿಸುವುದಾದರೆ ಅದನ್ನು ಸ್ವಾಗತಿಸುತ್ತೇವೆ.
- ಸದರಿ ಪಠ್ಯಪುಸ್ತಕವನ್ನು ರೂಪುಗೊಳಿಸಲು ಸಹಕರಿಸಿದ ಎಲ್ಲರಿಗೂ ವಂದನೆಗಳು.

**ಡಾ. ಅಶ್ವತ್ಥನಾರಾಯಣ**
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ

NOT TO BE REPUBLISHED @KTBS

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು** : **ಡಾ. ಅಶ್ವತ್ಥನಾರಾಯಣ,** ಅಸೋಸಿಯೇಟ್ ಪ್ರೊಫೆಸರ್, ಇತಿಹಾಸ ವಿಭಾಗ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-560056.

**ಸದಸ್ಯರು** : **ಶ್ರೀ ಎಂ.ಎನ್.ಕಟ್ಟಿ,** ಭೂಗೋಳ ಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬಿ ಪಿ ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-560026.

**ಶ್ರೀ ಎನ್.ನಿಂಗರಾಜು,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಯಲಹಂಕ, ಬೆಂಗಳೂರು.

**ಶ್ರೀ ವೈ.ರಾಮಕೃಷ್ಣರಾವ್,** ರಾಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಎರ್ಮಾಳು ಬಡ ಅಂಚೆ, ಉಡುಪಿ ಜಿಲ್ಲೆ-574119.

**ಶ್ರೀ ಎಸ್.ಬಿ.ಕಡಕೋಳದವರ,** ಸಹಶಿಕ್ಷಕರು, ವಿದ್ಯಾರಣ್ಯ ಪಿ.ಯು. ಕಾಲೇಜು, ಪ್ರೌಢಶಾಲಾ ವಿಭಾಗ, ಧಾರವಾಡ-1.

**ಶ್ರೀಮತಿ ಕೆ.ವಿ.ಶಿಲ್ಪ,** ಸಹಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆ, ಚನ್ನಯ್ಯನ ಕೋಟೆ, ವಿರಾಜ ಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ.

**ಚಿತ್ರ ಕಲಾವಿದರು** : **ಶ್ರೀ ತಾರಾನಾಥ ಕೈರಂಗಳ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಂಚಿ ಕೊಳ್ನಾಡು, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.

**ಪರಿಶೀಲಕರು** : **ಶ್ರೀ ಎಂ. ರಾಘವೇಂದ್ರ ಪ್ರಭು,** ಇತಿಹಾಸ ಪ್ರೊಫೆಸರ್ (ನಿವೃತ್ತ), ಅನಂತ ಪ್ರಸಾದ, ದಂಬೆಲ್, ಅಶೋಕನಗರ ಅಂಚೆ, ಮಂಗಳೂರು-575006.

**ಶ್ರೀ ಕೆ.ಆರ್.ಮಂಜುನಾಥ್,** ಪ್ರಾಂಶುಪಾಲರು, ಎಮ್ ಇ ಎಸ್ ಪದವಿಪೂರ್ವ ಕಾಲೇಜು, ಬಿ ಟಿ ಎಮ್ ಲೇಔಟ್, ಬೆಂಗಳೂರು.

**ಸಂಪಾದಕ ಮಂಡಳಿ** : **ಡಾ. ಎಂ.ವಿ. ಶ್ರೀನಿವಾಸ್,** ಇತಿಹಾಸ ಪ್ರೊಫೆಸರ್ (ನಿವೃತ್ತ), ಹೆಚ್. ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ರಾಜ್ಯಶಾಸ್ತ್ರ ಪ್ರೊಫೆಸರ್ (ನಿವೃತ್ತ), 1105, ಪೂರ್ಣಪ್ರಜ್ಞಾನಗರ, ಉತ್ತರ ಹಳ್ಳಿ, ಬೆಂಗಳೂರು.

**ಡಾ. ಈಶ್ವರಪ್ಪ** ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಮುಖ್ಯ ಸಂಯೋಜಕರು** : **ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

: **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

: **ಶ್ರೀಮತಿ ಎಸ್.ಎನ್. ಲೀಲಾವತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

NOT TO BE REPUBLISHED ©KTBS

## ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

@KTBS
NOT TO BE REPUBLISHED

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ. ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

«Ãg t J ¸ï. dw
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

NOT TO BE REPUBLISHED
©KTBS

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ**
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಟಿ. ಆರ್. ಚಂದ್ರಶೇಖರ್**
ಸಮಾಲೋಚಕರು, 4ನೇ ಹಣಕಾಸು ಆಯೋಗ, 3ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.

**ಸದಸ್ಯರು :**

**ಡಾ. ಬಸವರಾಜ್**
ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**ಡಾ. ಎನ್.ಆರ್. ಹಡಪದ**
ಭೂಗೋಳಶಾಸ್ತ್ರ ಉಪನ್ಯಾಸಕರು, ಶ್ರೀ ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜು, ಬಿ.ಅರಳೀಕಟ್ಟಿ,
ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

**ಶ್ರೀ. ಹಂ. ಗು. ರಾಜೇಶ್**
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡೇರಿ, ಬೆಂಗಳೂರು ದಕ್ಷಿಣ ತಾ.
ಬೆಂಗಳೂರು–562130.

**ಶ್ರೀ. ಪಿ. ಎಂ. ಕಾಗೀನಕರ್**
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಚಂಗವಾರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ. ರಾಜಲಕ್ಷ್ಮಿ ಎಸ್**
ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ವಿಭಾಗ) ಶ್ರೀರಾಂಪುರಂ,
ಬೆಂಗಳೂರು, ಉತ್ತರ ವಲಯ–2, ಬೆಂಗಳೂರು ಉತ್ತರ ಜಿಲ್ಲೆ.

**ಶ್ರೀಮತಿ. ಶಾಹಿನಾ ಬೇಗಂ**
ಸಹ ಶಿಕ್ಷಕರು, ಸ್ತ್ರೀಸಮಾಜ, ಶೇಷಾದ್ರಿಪುರಂ ಪ್ರೌಢಶಾಲೆ, ಬೆಂಗಳೂರು ಉತ್ತರ ವಲಯ–2,
ಬೆಂಗಳೂರು ಉತ್ತರ ಜಿಲ್ಲೆ.

**ಕಲಾವಿದರು :**

**ಶ್ರೀ. ಡಿ.ಎನ್. ವೆಂಕಟೇಶ್**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ಜಿಲ್ಲೆ.

©KTBS NOT TO BE REPUBLISHED

## ಉನ್ನತ ಪರಿಶೀಲನ ಸಮಿತಿ

**ಡಾ. ಎಂ. ಎಸ್. ತಳವಾರ್**
#777, 'ಜೇನುಗೂಡು',
5ನೇ ಬ್ಲಾಕ್, ಬನಶಂಕರಿ 6ನೇ ಘಟ್ಟ,
ಮೆಟ್‌ಕಲ್ ಪಾಳ್ಯ,
ಬೆಂಗಳೂರು–60.

**ಡಾ. ಅಮರೇಶ ಯತಗಲ್**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಸ್ನಾತಕೋತ್ತರ ಕೇಂದ್ರ, ತೊರವಿ,
ವಿಜಯಪುರ – 586105.

**ಡಾ. ನಂದೀಶ್ವರ**
ಪ್ರಾಂಶುಪಾಲರು,
ಎಸ್.ಎಂ.ಆರ್. ಪಿ.ಯು. ಕಾಲೇಜು,
ಕಳ್ಳಂಬೆಳ್ಳ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – 572125.

**ಶ್ರೀ. ಮಂಜುನಾಥ ಐಲಿ**
ಇತಿಹಾಸ ಉಪನ್ಯಾಸಕರು,
ಸರಕಾರಿ ಪದವಿ ಪೂರ್ವ ಕಾಲೇಜು,
ಪೋಲಿಸ್ ಕಾಲೋನಿ, ರಾಯಚೂರು – 584101.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ «Ãg t J¸ï. dw**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

**ಶ್ರೀ PÆÃzAqgÁªÄAiÀÄ. J£ï**
ಉಪ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಸುಮಾ ಬಿ.ಕೆ**
ಹಿರಿಯ ಸಹಾಯಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

@KTBS
NOT TO BE REPUBLISHED

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಮುಖ್ಯವಾಗಿ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಲ್ಲಿ (೧) ಯಾವುದೇ ಜಾತಿ, ಧರ್ಮ, ಪಂಥ, ಸಮುದಾಯಗಳಿಗೆ ಅಥವಾ ವ್ಯಕ್ತಿಗಳಿಗೆ ಅಪಮಾನವಾಗುವ ಆಕ್ಷೇಪಾರ್ಹ ಅಂಶಗಳಿರದಂತೆ ಎಚ್ಚರ ವಹಿಸಬೇಕು (೨) ವಿಷಯಗಳನ್ನು ಕ್ರಮಬದ್ಧವಾಗಿ, ಕಾಲಪಟ್ಟಿಗನುಗುಣವಾಗಿ ಕೊಡಬೇಕು (೩) ಅನಗತ್ಯ ವಿಷಯಗಳು ತುಂಬಿತುಳುಕಾಡುವ ಮಾಹಿತಿಕೋಶವಾಗಿಸದೆ ಜ್ಞಾನಕೋಶಗಳಾಗಿ ಮಾಡಬೇಕು (೪) ಸ್ವಹಿತಾಸಕ್ತಿಯ ಯಾವ ಸಿದ್ಧಾಂತಗಳಿಗೂ ಜಾಗ ಕೊಡಕೂಡದು (೫) ಅರ್ಧಸತ್ಯ, ಅಸತ್ಯ, ಉತ್ಪ್ರೇಕ್ಷೆ, ನಿರ್ಣಯ ಮುಂತಾದವನ್ನು ಕೈಬಿಟ್ಟು ಅಧಿಕೃತ ಆಧಾರಗಳಿರುವ ಸಂಗತಿಗಳನ್ನಷ್ಟೇ ಮುಂದಿಡಬೇಕು (೬) ಎಲ್ಲ ವಿಷಯಗಳಿಗೆ ತಕ್ಕ ಪ್ರಾತಿನಿಧ್ಯ ಕೊಡಬೇಕು (೭) ಐತಿಹಾಸಿಕ ಉಪೇಕ್ಷಿತ ಸಂಗತಿಗಳನ್ನು, ಅವುಗಳ ಪ್ರಾಮುಖ್ಯಕ್ಕನುಗುಣವಾಗಿ ಪಠ್ಯಗಳಲ್ಲಿ ತರಬೇಕು (೮) ಎಲ್ಲ ಬಗೆ–ಯ ತಪ್ಪುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಗ್ಗಿಸಬೇಕು – ಎಂಬುದು ನಮ್ಮ ಆಶಯವಾಗಿತ್ತು. ಸಮಾಜವಿಜ್ಞಾನ ಪಠ್ಯವು ನಮ್ಮ ವಿದ್ಯಾರ್ಥಿಗಳನ್ನು ದೇಶದ ಬಗ್ಗೆ ಪ್ರೀತಿ ಅಭಿಮಾನಗಳುಳ್ಳ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಬೇಕೇ ಹೊರತು ದೇಶದ ಬಗ್ಗೆ, ದೇಶದೊಳಗಿನ ಹಲವು ಜಾತಿ, ಸಮುದಾಯ, ಭಾಷೆ, ಪಂಥಗಳ ಬಗ್ಗೆ ತಾತ್ಸಾರಭಾವವನ್ನು ತಾಳುವಂಥ ಜನಾಂಗವನ್ನು ಸೃಷ್ಟಿಸಬಾರದು ಎಂಬುದು ಪರಿಷ್ಕರಣೆಯ ಪ್ರತಿಹಂತದಲ್ಲೂ ನಾವು ವಹಿಸಿದ್ದ ಎಚ್ಚರಿಕೆಯಾಗಿತ್ತು.

NOT TO BE REPUBLISHED ©KTBS

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

@KTBS
NOT TO BE REPUBLISHED

# ಪುನರ್ ಪರಿಷ್ಕರಣ ಸಮಿತಿ

## ಅಧ್ಯಕ್ಷರು

**ಶ್ರೀ ರೋಹಿತ್ ಚಕ್ರತೀರ್ಥ,** ಸದಸ್ಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

## ಸದಸ್ಯರು

**ಡಾ. ರಾಜರಾಮ್ ಹೆಗಡೆ,** ನಿವೃತ್ತ ವಿಭಾಗ ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

**ಡಾ. ಎನ್. ಸತ್ಯಪ್ರಕಾಶ್,** ನಿವೃತ್ತ ಮುಖ್ಯೋಪಾಧ್ಯಾಯರು, ವಿ.ವಿ.ಎಸ್. ಪ್ರೌಢಶಾಲೆ, ಬೆಂಗಳೂರು.

**ಶ್ರೀ. ರಂಗನಾಥ,** ಪ್ರಾಂಶುಪಾಲರು, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

**ಶ್ರೀ. ಬಿ.ಕೆ. ವಾಸುಕಿ,** ಶಿಕ್ಷಕರು, ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಶಾಲೆ, ಬೆಂಗಳೂರು.

**ಡಾ. ಅನಂತಕೃಷ್ಣ ಭಟ್,** ಕೊಡಿಯಾಲಗುತ್ತು, ದ್ವಾರಕ, ಕೊಡಿಯಾಲ್ ಬೈಲ್, ಎರಡನೇ ಅಡ್ಡರಸ್ತೆ, ಮಂಗಳೂರು.

**ಡಾ. ವಿಠ್ಠಲ್ ಪೋತದಾರ,** ಹಿರಿಯ ಸಂಶೋಧನಾ ಸಂಯೋಜಕರು, ದಿ ಮಿಥಿಕ್ ಸೊಸೈಟಿ, ಬೆಂಗಳೂರು.

**ಶ್ರೀ ಕೆ.ಆರ್. ಮಂಜುನಾಥ್,** ಸಹ ಶಿಕ್ಷಕರು, ನ್ಯಾಷನಲ್ ಪ್ರೌಢಶಾಲೆ, ಬೆಂಗಳೂರು.

**ಶ್ರೀಮತಿ ಪಿ. ರಾಧಾ,** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬನಶಂಕರಿ 3ನೇ ಹಂತ, ಬೆಂಗಳೂರು.

**ಶ್ರೀ ಸಂದೀಪ್ ಕುಮಾರ ಪಿ.ಎಲ್.,** ಜಿ.ಪಿ.ಟಿ., ಸ.ಮಾ.ಪ್ರಾ. ಶಾಲೆ, ಸಿದ್ದನಹೊಸಹಳ್ಳಿ, ಬೆಂಗಳೂರು ಉತ್ತರ ವಲಯ–1.

## ಸಲಹೆಗಾರರು

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಶ್ರೀಮತಿ ಸುಮಾ ಬಿ.ಕೆ.,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

@KTBS NOT TO BE REPUBLISHED

# ಪರಿವಿಡಿ

L8A6T4


| ಅಧ್ಯಾಯದ ಸಂಖ್ಯೆ | ಇತಿಹಾಸ | ಪುಟ ಸಂಖ್ಯೆ |
|---|---|---|
| 1 | ಜಗತ್ತಿನ ಪ್ರಮುಖ ಘಟನೆಗಳು | 1 |
| 2 | ಮಧ್ಯಯುಗದ ಯುರೋಪ್ | 11 |
| 3 | ಭಾರತಕ್ಕೆ ಐರೋಪ್ಯರ ಆಗಮನ | 32 |
| 4 | ಹದಿನೆಂಟನೆಯ ಶತಮಾನದ ಭಾರತ (1707–1757) | 37 |
| 5 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ (1758–1856) | 44 |
| 6 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 52 |
| 7 | ಮೈಸೂರು ಮತ್ತು ಇತರ ಸಂಸ್ಥಾನಗಳು | 62 |
| 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | 91 |
| | **ಪೌರನೀತಿ** | |
| 9 | ಕೇಂದ್ರ ಸರ್ಕಾರ | 101 |
| 10 | ರಾಜ್ಯ ಸರ್ಕಾರ | 109 |
| | **ಭೂಗೋಳ ವಿಜ್ಞಾನ** | |
| 11 | ಭಾರತದ ಪ್ರಾಕೃತಿಕ ವಿಭಾಗಗಳು | 115 |
| 12 | ಉತ್ತರ ಅಮೆರಿಕ | 124 |
| 13 | ದಕ್ಷಿಣ ಅಮೆರಿಕ | 147 |


©KTBS NOT TO BE REPUBLISHED

H9W4S5

# ಅಧ್ಯಾಯ 1 ಜಗತ್ತಿನ ಪ್ರಮುಖ ಘಟನೆಗಳು

**ಪಾಠದ ಪರಿಚಯ**

ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಏಕೆ ಪರಿಗಣಿಸಲಾಗಿದೆ ಎಂಬ ವಿಚಾರ ನಿಮಗೆ ತಿಳಿದಿದೆಯೆ? ಇಲ್ಲಿ ಅನೇಕ ಮತಾವಲಂಬಿಗಳು ಸೌಹಾರ್ದದಿಂದ ಜೀವಿಸುತ್ತಾರೆ. ಕೆಲವು ರಿಲಿಜನ್‌ಗಳ ಬಗ್ಗೆ ಈಗ ತಿಳಿಯೋಣ.

ಮಧ್ಯಯುಗದಲ್ಲಿ ಯುರೋಪ್ ಮತ್ತು ಏಷ್ಯದಲ್ಲಾದ ಭಾರಿ ಸ್ಥಿತ್ಯಂತರಗಳು ಭಾರತದ ಮೇಲೆ ಪ್ರಭಾವ ಬೀರದಿರಲಿಲ್ಲ. ಮುಖ್ಯವಾಗಿ ಕ್ರೈಸ್ತ ಮತ್ತು ಇಸ್ಲಾಂ ರಿಲಿಜನ್‌ಗಳ ಉದಯ, ಬೆಳವಣಿಗೆ ಹಾಗೂ ಅವು ಬೀರಿರುವ ಪ್ರಭಾವಗಳನ್ನು ಭಾರತದ ಇತಿಹಾಸದ ಸಂದರ್ಭದಲ್ಲಿ ನಾವು ಗುರುತಿಸತಕ್ಕದ್ದು. ಈ ಪಾಠದಲ್ಲಿ ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಜೀವನ ಹಾಗೂ ಬೋಧನೆಗಳನ್ನು ವಿವರಿಸಲಾಗಿದೆ. ಜೊತೆಗೆ ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಮೂಡಿಬಂದ ಹಿನ್ನೆಲೆ, ಇಸ್ಲಾಮಿಕ್ ಸಾಮ್ರಾಜ್ಯದ ಸ್ಥಾಪನೆ, ಅರಬ್ಬರ ಕೊಡುಗೆ ಮತ್ತು ಜಾಗತಿಕ ಇತಿಹಾಸದ ಮೇಲೆ ಮಂಗೋಲರು ಮತ್ತು ಅಟೋಮನ್ ಟರ್ಕರ ಪ್ರಭಾವವನ್ನು ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವುದು.

2 ಅರಬ್ಬರು, ಮಂಗೋಲರು ಮತ್ತು ಟರ್ಕರ ಸಾಮ್ರಾಜ್ಯಗಳ ವಿಸ್ತರಣೆಯು ಭಾರತದ ಮೇಲೆ ಬೀರಿರುವ ಪ್ರಭಾವವನ್ನು ಅರಿತುಕೊಳ್ಳುವುದು.

3 ಕ್ರೈಸ್ತ ಮತ್ತು ಮುಸಲ್ಮಾನರ ಪವಿತ್ರ ಸ್ಥಳಗಳು ಮತ್ತಿತರ ಸಂಬಂಧಿತ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

**ಇತಿಹಾಸ ಎಂದರೇನು?** ಇತಿಹಾಸವು ಗತಕಾಲದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುತ್ತದೆ. ಅದು ಮಾನವನ ಸಾಧನೆಗಳನ್ನು ತಿಳಿಸುತ್ತದೆ. ಆಗಿಹೋದ ಘಟನೆಯನ್ನು ಹೇಳುವಾಗ ಮೂರು ಅಂಶಗಳು ಅಲ್ಲಿ ಇದ್ದೇ ಇರುತ್ತವೆ. ಅವೆಂದರೆ – ಯಾವಾಗ ನಡೆಯಿತು? ಎಲ್ಲಿ ನಡೆಯಿತು? ಸಂಬಂಧಪಟ್ಟವರು ಯಾರು? ಈ ಪ್ರಶ್ನೆಗಳಿಗೆ ಉತ್ತರವಾಗಿ ಇತಿಹಾಸದಲ್ಲಿ ಇಸವಿಗಳು, ಸ್ಥಳಗಳು ಹಾಗೂ ವ್ಯಕ್ತಿಗಳ ಹೆಸರುಗಳು ಬರುತ್ತವೆ.

ಈ ಕೆಳಗಿನ ಘಟನೆಯಲ್ಲಿ ಬಂದಿರುವ ಇಸವಿ, ಸ್ಥಳ ಮತ್ತು ವ್ಯಕ್ತಿಯನ್ನು ಗಮನಿಸಿ: "ಸಾಮಾನ್ಯ ಶಕ 1674ರಲ್ಲಿ ಶಿವಾಜಿಯ ಪಟ್ಟಾಭಿಷೇಕ ರಾಯಗಢದಲ್ಲಾಯಿತು."

## ಕ್ರೈಸ್ತ ರಿಲಿಜನ್

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಮತಗಳಲ್ಲಿ ಕ್ರೈಸ್ತ ಮತ್ತು ಇಸ್ಲಾಂ ರಿಲಿಜನ್‌ಗಳನ್ನು ಹೆಸರಿಸಬಹುದು. ಅವುಗಳ ಉದಯ, ವಿಕಾಸ ಹಾಗೂ ಅವು ಬೀರಿರುವ ಪ್ರಭಾವಗಳನ್ನು ನಾವೀಗ ತಿಳಿಯೋಣ.

NOT TO BE REPUBLISHED @KTBS

ಕ್ರೈಸ್ತರಿಲಿಜನ್ ಎರಡು ಸಾವಿರ ವರ್ಷಗಳಷ್ಟು ಹಿಂದಿನದು. ಅದರ ಸ್ಥಾಪಕ ಯೇಸುಕ್ರಿಸ್ತ (ಜೀಸಸ್ ಕ್ರೈಸ್ಟ್). 'ಬೈಬಲ್' ಕ್ರೈಸ್ತರ ಪವಿತ್ರ ಗ್ರಂಥ. ಬೈಬಲ್‌ನಲ್ಲಿ ಯೇಸುಕ್ರಿಸ್ತರ ಜೀವನದ ವಿವರಗಳು ಹಾಗೂ ಉಪದೇಶಗಳಿವೆ.

'ಜೀಸಸ್' ಕನ್ನಡದಲ್ಲಿ 'ಯೇಸು', 'ಕ್ರೈಸ್ಟ್' ಪದದ ಅರ್ಥ 'ರಕ್ಷಕ'.

**ಯೇಸುಕ್ರಿಸ್ತನ ಜೀವನ:** ಯೇಸು ಬೆತ್ಲಹೆಂ (ಇಸ್ರೇಲ್) ಎಂಬಲ್ಲಿ ಮೇರಿ ಎಂಬಾಕೆಯ ಮಗನಾಗಿ ಜನಿಸಿದರು. ಅವರಿಗೆ ಸುಮಾರು ಮೂವತ್ತು ವರ್ಷವಾದಾಗ ಮನೆಯಿಂದ ಹೊರಟು ಬಡವರು ಮತ್ತು ದೀನರ ಸೇವೆ ಮಾಡತೊಡಗಿದರು. ಕರುಣೆಯೇ ಧರ್ಮದ ಮೂಲವೆಂದು, ಕತೆಗಳ ಮೂಲಕ ಉದಾಹರಣೆ ನೀಡಿ ಉಪದೇಶ ಮಾಡುತ್ತಿದ್ದರು.

ಯೇಸುವಿನ ಅನುಯಾಯಿಗಳು ಹೆಚ್ಚಿದಂತೆ ಅವರ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು. ಧಾರ್ಮಿಕ ಮುಂದಾಳುಗಳು ಯೇಸುವನ್ನು ವಿರೋಧಿಸಿದರು. ಯೇಸು ರಾಜದ್ರೋಹಿಯೆಂಬ ತಪ್ಪು ಹೊರಿಸಿ, ಅವರನ್ನು ಶಿಲುಬೆಗೆ ಏರಿಸಿದರು. (ಅಪರಾಧಿಗಳಿಗೆ ಆ ಕಾಲದಲ್ಲಿ ನೀಡುತ್ತಿದ್ದ ಮರಣ ದಂಡನೆಯೆಂದರೆ ಶಿಲುಬೆಗೇರಿಸುವುದು).

**ಬೋಧನೆಗಳು:** • ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದರು. • ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೇಕೆಂದು ಬೋಧಿಸಿದರು. "ನಿಮ್ಮ ನೆರೆಯವನನ್ನು ನಿಮ್ಮಂತೆ ಪ್ರೀತಿಸಿ", "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿ". • ಮಾನವ ಸೇವೆಯೇ ದೇವರ ಸೇವೆ ಎಂದರು.

ಯೇಸು ಕಾಲವಾದ ಅನಂತರ ಅವರ ಬೋಧನೆಗಳನ್ನು ಅವರ ಹನ್ನೆರಡು ಮಂದಿ ಪರಮ ಶಿಷ್ಯರು ಉತ್ಸಾಹದಿಂದ ಪ್ರಚಾರ ಮಾಡಿದರು. ಪರಿಣಾಮವಾಗಿ ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತ ಸಮುದಾಯಗಳು ಅಲ್ಲಲ್ಲಿ ನೆಲೆಗೊಂಡವು. ಇದೇ ವೇಳೆ ಕ್ರೈಸ್ತರು ನಾನಾ ರೀತಿಯಲ್ಲಿ ಹಿಂಸೆಗೆ ಒಳಗಾದರು. ಕಾಲಗತಿಯಲ್ಲಿ ರೋಮನ್ ಸಾಮ್ರಾಜ್ಯವು ಕ್ರೈಸ್ತ ರಿಲಿಜನ್‌ಗೆ ಮಾನ್ಯತೆ ನೀಡಿತು.

ನಂತರ ಇಟಲಿಯ ರೋಮ್ ನಗರವು ಕ್ರೈಸ್ತರ ಮುಖ್ಯ ಕೇಂದ್ರವಾಗಿ ಬೆಳೆಯಿತು. ಅಲ್ಲಿನ ಪೋಪ್ ಕ್ರೈಸ್ತರ ಪರಮಗುರುಗಳಾದರು. ಯುರೋಪ್ ಮತ್ತು ಜಗತ್ತಿನ ಇತರ ಭಾಗಗಳಿಗೆ ಕ್ರೈಸ್ತ ಪ್ರಚಾರಕರು ತೆರಳಿ ಅಲ್ಲಿ ಕ್ರೈಸ್ತ ರಿಲಿಜನ್ ಅನ್ನು ಹರಡಿದರು. ಕಾಲಕ್ರಮೇಣ ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಬೆಳೆಯಿತು. ಅದರೊಂದಿಗೆ ಪೋಪ್‌ಗುರುಗಳ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಹೆಚ್ಚಾಗತೊಡಗಿತು.

**ಚಟುವಟಿಕೆ:** ಶಾಂತಿದೂತ ಯೇಸುಕ್ರಿಸ್ತರನ್ನು ಶಿಲುಬೆಗೆ ಏರಿಸಿದುದು ಒಂದು ಪಾಪ ಕೃತ್ಯ. ಮಿತ್ರರೊಂದಿಗೆ ಚರ್ಚಿಸಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

© KTBS NOT TO BE REPUBLISHED

# ಇಸ್ಲಾಂ ರಿಲಿಜನ್

ಮಹಮ್ಮದ್ ಪೈಗಂಬರರು ಇಸ್ಲಾಂ ರಿಲಿಜನ್‌ನ ಸ್ಥಾಪಕರು. ಅವರು ಅರಬ್ ದೇಶದ ಮೆಕ್ಕ ನಗರದಲ್ಲಿ ಜನಿಸಿದರು.

ಪೈಗಂಬರ ಎಂದರೆ ದೇವರ ಸಂದೇಶವನ್ನು ಸಾರುವವರು; ಪ್ರವಾದಿ.

ಇಸ್ಲಾಂಪೂರ್ವದ ಅರಬ್‌ದೇಶದಲ್ಲಿ ಅನೇಕ ಚಿಕ್ಕಪುಟ್ಟ ಪಂಗಡಗಳಿದ್ದವು. ಅವುಗಳಲ್ಲಿ ಒಗ್ಗಟ್ಟಿರಲಿಲ್ಲ. ಮೆಕ್ಕದಲ್ಲಿದ್ದ ಕಾಬಾ ಮಂದಿರವು ದೊಡ್ಡ ಯಾತ್ರಾಕ್ಷೇತ್ರವಾಗಿತ್ತು. ಅಲ್ಲಿ ವಿಗ್ರಹಾರಾಧನೆ ರೂಢಿಯಲ್ಲಿತ್ತು.

**ಪ್ರವಾದಿ ಮಹಮ್ಮದರ ಜೀವನ:** ಮಹಮ್ಮದರ ತಂದೆ ಅಬ್ದುಲ್ಲಾ, ತಾಯಿ ಅಮೀನಾ. ಅವರು ಹುಟ್ಟುವುದಕ್ಕೆ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದರು. ಪ್ರಾರಂಭದಲ್ಲಿ ಅವರು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ನೆರವಾಗತೊಡಗಿದರು. ಮುಂದೆ, ಖದೀಜಾ ಎಂಬ ಧನಿಕ ವಿಧವೆಯೊಬ್ಬಳು ಇವರನ್ನು ತನ್ನ ವ್ಯಾಪಾರದ ಪ್ರತಿನಿಧಿಯಾಗಿ ನೇಮಿಸಿಕೊಂಡಳು. ಮುಂದೆ ಮಹಮ್ಮದರ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ಅವರನ್ನು ಮದುವೆಯಾದಳು.

ತಮ್ಮ 40ನೆಯ ವಯಸ್ಸಿನಿಂದ ಮಹಮ್ಮದರು ಪ್ರಾರ್ಥನೆ ಮತ್ತು ಧ್ಯಾನಗಳಲ್ಲಿ ಮಗ್ನರಾಗಿರುತ್ತಿದ್ದರು. ಕಾಲಸರಿದಂತೆ ದೇವರ ಸಂದೇಶಗಳನ್ನು ಸಾರಲು ಆರಂಭಿಸಿದರು. ಅಂತಹ ಸಂದೇಶಗಳನ್ನು ಒಳಗೊಂಡ ಗ್ರಂಥವೇ ಇಸ್ಲಾಮಿನ ಮೂಲಗ್ರಂಥ – **ಕುರಾನ್**. ಇದು ಅರೇಬಿಕ್ ಭಾಷೆಯಲ್ಲಿದೆ.

'ಇಸ್ಲಾಂ' ಪದದ ಅರ್ಥ 'ಶರಣಾಗತಿ'. 'ಮುಸ್ಲಿಮ್' ಎಂದರೆ 'ಅಲ್ಲಾನಿಗೆ ಶರಣಾದವರು'.

ಕಾಲಕ್ರಮೇಣ ಪ್ರವಾದಿಯವರ ಅನುಯಾಯಿಗಳ ಸಂಖ್ಯೆ ಹೆಚ್ಚಿತು. ಆ ಕಾಲದ ಧಾರ್ಮಿಕ ಆಚಾರ ವಿಚಾರಗಳನ್ನು ಅವರು ಟೀಕಿಸಿದ್ದುದರಿಂದ ಅವರ ವಿರೋಧಿಗಳ ಸಂಖ್ಯೆ ಸಹ ಬೆಳೆಯಿತು. ಹೀಗಾಗಿ ಅವರು ಮೆಕ್ಕದಿಂದ ಮದೀನಾ ನಗರಕ್ಕೆ ಹೋಗಬೇಕಾಯಿತು. ಪ್ರವಾದಿಯವರು ಮೆಕ್ಕದಿಂದ ಮದೀನಕ್ಕೆ ಹೋದ ವರ್ಷದಿಂದಲೇ ಮುಸಲ್ಮಾನರ 'ಹಿಜಿರಾ' ಶಕೆ ಆರಂಭವಾದದ್ದು.

ಮದೀನಾದಲ್ಲಿ ಜನರು ಮಹಮ್ಮದರನ್ನು ಸ್ವಾಗತಿಸಿದರು. ಮುಂದೆ ಅವರು ಮೆಕ್ಕವನ್ನು ಗೆದ್ದುಕೊಂಡರು. ಅಲ್ಲಿದ್ದ ವಿಗ್ರಹಗಳನ್ನು ತೆಗೆಯಿಸಿದರು. ಅಲ್ಪಕಾಲದಲ್ಲೇ ಇಡೀ ಅರಬ್ ದೇಶದಲ್ಲಿ ಇಸ್ಲಾಂ ರಿಲಿಜನ್ ಹರಡಿತು.

NOT TO BE REPUBLISHED ©KTBS



*ಕಾಬಾ – ಮುಸಲ್ಮಾನರ ಪವಿತ್ರ ಕ್ಷೇತ್ರ, ಮೆಕ್ಕ*

## ಇಸ್ಲಾಮಿನ ಬೋಧನೆಗಳು

- ಅಲ್ಲಾನ ಹೊರತು ಬೇರೆ ದೇವರಿಲ್ಲ; ಮಹಮ್ಮದ್ ಅವರು ದೇವರ ಪ್ರವಾದಿ. ದೇವರನ್ನು ಯಾವ ಮೂರ್ತಿಯ ರೂಪದಲ್ಲೂ ಪೂಜಿಸಬಾರದು.
- ಪ್ರತಿಯೊಬ್ಬ ಮುಸಲ್ಮಾನನೂ ದೇವರ ಸೇವಕನಾಗಬೇಕು. ಪ್ರಾಮಾಣಿಕನಾಗಿರಬೇಕು.

ವ್ಯಾಪಾರಿಗಳು ಮೋಸ ಮಾಡಬಾರದು. ಬಡ್ಡಿ ವ್ಯವಹಾರ ಮಾಡಬಾರದು. ಶಿಶುಹತ್ಯೆ, ಹಂದಿ ಮಾಂಸ ತಿನ್ನುವುದು ಮತ್ತು ಮದ್ಯಪಾನ ಸಲ್ಲದು

- ಪ್ರತಿಯೊಬ್ಬ ಮುಸಲ್ಮಾನನೂ ದಿನಕ್ಕೆ ಐದು ಬಾರಿ ಕಾಬಾದ ದಿಕ್ಕಿಗೆ ಮುಖ ಮಾಡಿ ಪ್ರಾರ್ಥನೆ (ನಮಾಜ್) ಮಾಡಬೇಕು. ರಂಜಾನ್ ತಿಂಗಳಲ್ಲಿ ಹಗಲು ಉಪವಾಸ ಮಾಡಬೇಕು. ಶ್ರೀಮಂತರು ಬಡವರಿಗೆ ಕಡ್ಡಾಯವಾಗಿ ದಾನ (ಜಕಾತ್) ನೀಡಬೇಕು. ಸಾಧ್ಯವಾದಲ್ಲಿ ಜೀವಮಾನದಲ್ಲಿ ಒಂದು ಸಲವಾದರೂ 'ಹಜ್' (ಮೆಕ್ಕ) ಯಾತ್ರೆ ಮಾಡಬೇಕು.

NOT TO BE

**ಚಟುವಟಿಕೆ:** ಕ್ರಿಶ್ಚಿಯನ್ ಹಾಗೂ ಇಸ್ಲಾಂ ರಿಲಿಜನ್‌ಗಳು ಏನು ಬೋಧಿಸುತ್ತವೆ? ಅವುಗಳಲ್ಲಿನ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

**ಇಸ್ಲಾಮಿಕ್ ಸಾಮ್ರಾಜ್ಯ:** ಮಹಮ್ಮದರ ಉತ್ತರಾಧಿಕಾರಿಗಳನ್ನು ಖಲೀಫ ಎನ್ನುವರು. ಕಾಲಕ್ರಮದಲ್ಲಿ ಖಲೀಫರು ಯುದ್ಧಗಳನ್ನು ಹೂಡಿ, ವಿಜಯಗಳಿಸುತ್ತ ವಿಶಾಲವಾದ ಇಸ್ಲಾಮಿಕ್ ಸಾಮ್ರಾಜ್ಯವನ್ನು ಕಟ್ಟಿದರು. ಸಾಮ್ರಾಜ್ಯ ವಿಸ್ತರಣೆಗೊಂಡಂತೆ ಇಸ್ಲಾಮ್ ಅನುಯಾಯಿಗಳ ಸಂಖ್ಯೆ ಹೆಚ್ಚಿತು. ಅರಬ್ಬರು ಭಾರತದ ಮೇಲೂ ಆಕ್ರಮಣ ಮಾಡಿದರು. ಅವರು ಸಿಂಧ್ ಪ್ರಾಂತ್ಯವನ್ನು ವಶಪಡಿಸಿಕೊಂಡರಲ್ಲದೆ ಅಲ್ಲಿ ಇಸ್ಲಾಂ ರಿಲಿಜನ್ ಅನ್ನು ಹರಡಿದರು.

ಮುಂದೆ ಟರ್ಕರು ಅರಬ್ ಸಾಮ್ರಾಜ್ಯದ ಉತ್ತರಾಧಿಕಾರಿಗಳಾದರು. ಅವರು ಅಫ್‌ಘಾನಿಸ್ತಾನದ ಮೂಲಕ ಭಾರತವನ್ನು ಪ್ರವೇಶಿಸಿ ಹಲವಾರು ದಂಡಯಾತ್ರೆಗಳನ್ನು ನಡೆಸಿದರು. ಇವುಗಳ ಪರಿಣಾಮವಾಗಿ ಭಾರತದಲ್ಲಿ ದಿಲ್ಲಿಯ ಸುಲ್ತಾನರ ಆಳ್ವಿಕೆ ನೆಲೆಯೂರಿತಲ್ಲದೆ ಇಸ್ಲಾಂ ರಿಲಿಜನ್ ಹರಡಿತು.

## ಅರಬ್ಬರ ಕೊಡುಗೆ

- ಅರಬ್ಬರು ಗ್ರೀಕ್, ರೋಮನ್ ಮತ್ತು ಭಾರತೀಯ ಜ್ಞಾನವಿಜ್ಞಾನಗಳನ್ನು ಅರಗಿಸಿಕೊಂಡು ತಮ್ಮ ನಾಗರಿಕತೆಯನ್ನು ಶ್ರೀಮಂತಗೊಳಿಸಿದರು. ಬಾಗ್ದಾದ್ ಅವರ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು.
- ಅರಬ್ಬರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.

'ಅರೇಬಿಯನ್ ನೈಟ್ಸ್', ಉಮ್ಮರ್ ಖಯ್ಯಾಮನ 'ರುಬಾಯತ್' ಮತ್ತು ಫಿರ್ದೂಸಿಯ 'ಷಾನಾಮ' ಇವು ಪರ್ಷಿಯನ್ ಭಾಷೆಯ ಶ್ರೇಷ್ಠ ಕೃತಿಗಳು.

**ಚಟುವಟಿಕೆ:** ಅರಬ್ಬರು ಭಾರತೀಯ ಗಣಿತವನ್ನು ಪ್ರಪಂಚದ ಮೂಲೆ ಮೂಲೆಗೂ ಹರಡಿದರು. ಈ ವಿಚಾರ ಚರ್ಚಿಸಿ ಒಂದು ಲಘು ಪ್ರಬಂಧ ಬರೆಯಿರಿ.

- ಅರಬ್ಬರು ಬೀಜಗಣಿತ, ರಸಾಯನಶಾಸ್ತ್ರ ಮತ್ತು ಖಗೋಳಶಾಸ್ತ್ರಗಳಿಗೆ ಮಹತ್ವದ ಕೊಡುಗೆಯನ್ನಿತ್ತರು. ಭಾರತೀಯರಿಂದ ಶೂನ್ಯವೂ (ಝೀರೊ) ಸೇರಿದಂತೆ ಅಂಕೆಗಳ ಬಳಕೆ ಅರಿತುಕೊಂಡರು. ಅವುಗಳನ್ನು ಪಾಶ್ಚಾತ್ಯ ದೇಶಗಳಿಗೂ ಮುಟ್ಟಿಸಿದರು.
- ಅರಬ್ಬರು ಭವ್ಯವಾದ ಅರಮನೆ, ಮಸೀದಿ, ಗ್ರಂಥಾಲಯ ಮತ್ತು ಆಸ್ಪತ್ರೆಗಳನ್ನು ನಿರ್ಮಾಣ ಮಾಡಿದರು. ಮೆಕ್ಕ, ಮದೀನಾ, ಬಾಗ್ದಾದ್, ಜೆರೂಸಲಮ್ ಮುಂತಾದ ಕಡೆ ಅವರ ಭವ್ಯ ಮಸೀದಿಗಳಿವೆ. 'ಯುನಾನಿ' ಎಂಬ ವೈದ್ಯಪದ್ಧತಿ ಅರಬ್ಬರ ಕೊಡುಗೆಯಾಗಿದೆ.

NOT TO BE REPUBLISHED ©KTBS

# ರಿಲಿಜಸ್ ಯುದ್ಧಗಳು

ಯೆಹೂದಿಗಳು, ಕ್ರೈಸ್ತರು ಮತ್ತು ಮುಸಲ್ಮಾನರಿಗೆ ಪ್ಯಾಲೆಸ್ತೈನ್ ಹಾಗೂ ಅದರ ರಾಜಧಾನಿ ಜರೂಸಲಮ್ ಪವಿತ್ರ ಭೂಮಿಯಾಗಿತ್ತು. ಇದನ್ನು ವಶಪಡಿಸಿಕೊಳ್ಳುವುದಕ್ಕಾಗಿ ಕ್ರೈಸ್ತರು ಮತ್ತು ಮುಸಲ್ಮಾನರು ಒಂಭತ್ತು ಬಾರಿ ಯುದ್ಧಗೈದರು. ಈ ಯುದ್ಧಗಳನ್ನು ಇತಿಹಾಸದಲ್ಲಿ ರಿಲಿಜಸ್ ಯುದ್ಧಗಳು (ಕ್ರೂಸೇಡ್ಸ್) ಎನ್ನುತ್ತಾರೆ.



*ಜೆರೂಸಲಮ್*

**ಯುದ್ಧಗಳ ಕಾರಣ:** ಪ್ಯಾಲೆಸ್ತೈನ್ ಅಟೋಮನ್ ಟರ್ಕರ ವಶದಲ್ಲಿದ್ದರೂ ಕ್ರೈಸ್ತರು ಬಹುಕಾಲದಿಂದ ಅಲ್ಲಿಗೆ ಯಾತ್ರೆಗಾಗಿ ಹೋಗಿಬರುತ್ತಿದ್ದರು. ಟರ್ಕರು ಜೆರೂಸಲಮ್ ಯಾತ್ರಿಗಳ ಮೇಲೆ ನಿಷೇಧ ಹೇರಿದ್ದು ಈ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

ಮೊದಲನೆಯ ಯುದ್ಧದಲ್ಲಿ ಸುಮಾರು 40,000 ಕ್ರೈಸ್ತರು ಯುರೋಪಿನ ವಿವಿಧ ದೇಶಗಳಿಂದ ಕಾಲ್ನಡಿಗೆಯಲ್ಲಿಯೇ ಜರೂಸಲಂನತ್ತ ಮುನ್ನುಗ್ಗಿ ಅದನ್ನು ವಶಪಡಿಸಿಕೊಂಡರು. ಆದರೆ ಮುಂದಿನ ಯಾವ ಯುದ್ಧದಲ್ಲಿಯೂ ಕ್ರೈಸ್ತರು ಹೇಳಿಕೊಳ್ಳುವಂಥ ಜಯ ಸಾಧಿಸಲಿಲ್ಲ.

ದುರಂತಮಯವಾಗಿದ್ದ ನಾಲ್ಕನೆಯ ಕ್ರೂಸೇಡ್‌ನಲ್ಲಿ ಯುರೋಪಿನ ಸುಮಾರು 50,000 ಮಂದಿ ಭಾಗವಹಿಸಿದರು. ಆದರೆ ಕೆಲವರು ದಾರಿಯಲ್ಲಿಯೇ ಬಳಲಿಕೆಯಿಂದ ಅಸುನೀಗಿದರು. ಶತ್ರುಗಳು ಬಂಧಿತರನ್ನು ತಮ್ಮ ಗುಲಾಮರನ್ನಾಗಿ ಮಾಡಿದರು.

**ಯುದ್ಧದ ಪರಿಣಾಮಗಳು:** ಒಟ್ಟಿನಲ್ಲಿ ಪವಿತ್ರ ಭೂಮಿಯನ್ನು ವಶಪಡಿಸಿಕೊಳ್ಳುವುದರಲ್ಲಿ ಕ್ರೈಸ್ತರು ವಿಫಲರಾದರು. ಯುರೋಪ್ ಮತ್ತು ಏಷ್ಯದೊಳಗಿನ ಸಂಪರ್ಕ ಹಾಗೂ ವ್ಯಾಪಾರ ಸಂಬಂಧಗಳು ವೃದ್ಧಿಗೊಂಡವು.



*ಕ್ರೂಸೇಡ್ (ರಿಲಿಜನ್ ಯುದ್ಧದ) ಚಿತ್ರ*

## ಮಂಗೋಲರು

ಮಂಗೋಲಿಯ ಮಧ್ಯ ಏಷ್ಯದ ಸಮೃದ್ಧ ಹುಲ್ಲುಮೈದಾನಗಳ ನಾಡು. ಇಲ್ಲಿನ ಅಲೆಮಾರಿ ಜನರೇ ಮಂಗೋಲರು. ಪಶುಪಾಲನೆ ಅವರ ಮುಖ್ಯ ವೃತ್ತಿ.

**ಚಂಗಿಸ್ ಖಾನ್:** ಮಂಗೋಲರನ್ನು ಚಂಗಿಸ್ ಖಾನ್ ಒಂದುಗೂಡಿಸಿ ಏಷ್ಯದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಿದನು. ಆದರೆ ಈತನು ಮಾಡಿರುವ ಅಮಾನುಷ ಕೃತ್ಯಗಳು ಇತಿಹಾಸವನ್ನು ಓದುವವರ ಮೈ ನಡುಗಿಸುವಂತಹವು.

**ಕುಬ್ಲಾಯ್ ಖಾನ್:** ಕುಬ್ಲಾಯ್ ಖಾನ್ ಚಂಗಿಸ್ ಖಾನನ ಮೊಮ್ಮಗ. ಚೀನಾ ದೇಶದ ಚಕ್ರವರ್ತಿಯಾಗಿ ಕುಬ್ಲಾಯ್ ಖಾನ್ ಮೆರೆದನು. ಉತ್ತಮ ಆಡಳಿತಗಾರ; ದಯಾಳು ಸಾಮ್ರಾಟ. ಇವನು ಅನೇಕ ಜನಪರ ಕಾಮಗಾರಿಗಳನ್ನು ಕೈಗೊಂಡನು. ಕ್ಷಾಮಗಳು ತಲೆದೋರಿದಾಗ ಹಸಿದವರಿಗೆ ಅನ್ನದಾನ ಮಾಡಿದನು. ಕಲೆ ಮತ್ತು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು.



*ಚಂಗಿಸ್ ಖಾನ್*



*ಕುಬ್ಲಾಯ್ ಖಾನ್*

ಚೀನಾ ದೇಶದ ಧರ್ಮ–ಸಂಸ್ಕೃತಿಗಳು ಕುಬ್ಲಾಯ್ ಖಾನನ ಮೇಲೆ ಪ್ರಭಾವ ಬೀರಿದವು. ಈತನು ಬೌದ್ಧಮತಕ್ಕೆ ಪರಿವರ್ತನೆಗೊಂಡನು.

> ಉತ್ತಮರ ಸಂಪರ್ಕದಿಂದ ಪರಿವರ್ತನೆ ಸಾಧ್ಯ ಎಂಬುದಕ್ಕೆ ಕುಬ್ಲಾಯ್ ಖಾನ್ ಒಳ್ಳೆಯ ನಿದರ್ಶನ.

© KTBS NOT TO BE REPUBLISHED

**ತೈಮೂರ್:** ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನನ ಸಾಮ್ರಾಜ್ಯವನ್ನು ತೈಮೂರ್ ಮತ್ತೊಮ್ಮೆ ಕಟ್ಟಿದನು. ತೈಮೂರ್ ಅತಿ ಕ್ರೂರಿ. ಪರ್ಷಿಯ, ಇರಾಕ್, ಸಿರಿಯ, ಅಫ್‌ಘಾನಿಸ್ತಾನ ಹಾಗೂ ರಷ್ಯದ ಅನೇಕ ಭಾಗಗಳನ್ನು ಆಕ್ರಮಣ ಮಾಡಿ, ವಿಶಾಲ ಸಾಮ್ರಾಜ್ಯವನ್ನು ಕಟ್ಟಿದ. ಭಾರತವನ್ನು ಆಕ್ರಮಣ ಮಾಡಿ ಮೊಗಲ್ (ಮಂಗೋಲ್) ರಾಜ್ಯವನ್ನು ಸ್ಥಾಪಿಸಿದ ಬಾಬರ್ ಇದೇ ಸಂತತಿಯವನು.

## ಅಟೋಮನ್ ಟರ್ಕರು

ಅಲೆಮಾರಿ ಜನಾಂಗಕ್ಕೆ ಸೇರಿದ ಟರ್ಕರ ಮೂಲಸ್ಥಾನ ಮಧ್ಯ ಏಷ್ಯದ ತುರ್ಕಿಸ್ತಾನ (ಈಗಿನ ತುರ್ಕ್‌ಮೆನಿಸ್ತಾನ). ಇವರು ಇಸ್ಲಾಂ ಅನುಯಾಯಿಗಳಾದರು. ಕುಬ್ಲಾಯ್ ಖಾನನ ಸಾಮ್ರಾಜ್ಯ ಅವನತಿ ಕಂಡ ಬಳಿಕ, ಟರ್ಕರು ಸುತ್ತಮುತ್ತಲಿನ ವಿಶಾಲವಾದ ಪ್ರದೇಶಗಳನ್ನು ಆಕ್ರಮಿಸಿಕೊಂಡರು. 'ಅಟೋಮನ್' ಎಂಬ ಮಿಲಿಟರಿ ರಾಜ್ಯವನ್ನು ಕಟ್ಟಿದರು. ಭಾರತದ ಮೇಲೆ ಆಕ್ರಮಣ ನಡೆಸಿ, ಸಂಪತ್ತನ್ನು ಲೂಟಿ ಮಾಡಿ, ಸಾಕಷ್ಟು ಸಾವು ನೋವುಗಳಿಗೆ ಕಾರಣರಾದರು.

## ಇತಿಹಾಸದಲ್ಲಿ ಕಾಲಗಣನೆ (ಕ್ರಿ.ಶ.)

ಕಾಲಗಣನೆಯನ್ನು ಮಹತ್ವಪೂರ್ಣವಾದ ದಿನದಿಂದ ಆರಂಭಿಸಲಾಗುತ್ತದೆ. ಅಂಥ ಕಾಲಗಣನೆಯನ್ನು ಶಕ(ಶಕೆ) ಎನ್ನುತ್ತೇವೆ. ಕ್ರಿಸ್ತಶಕವು ಯೇಸುಕ್ರಿಸ್ತರು ಬದುಕಿದ ಕಾಲಾವಧಿಯ

ನಿರ್ದಿಷ್ಟ ವರ್ಷದಿಂದ ಪ್ರಾರಂಭವಾಗುತ್ತದೆ. ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ಸ್ಥಾಪನೆಯಾಯಿತು ಎಂದರೆ ಅದು ಸ್ಥಾಪನೆಯಾಗಿ ಯೇಸುವಿನ ವರ್ಷದಿಂದ 1336 ವರ್ಷಗಳು ಕಳೆದಿವೆ ಎಂದು ಅರ್ಥ. ಕ್ರಿಸ್ತಪೂರ್ವ (ಬಿ.ಸಿ.) 220 ಎಂದರೆ 'ನಮ್ಮ ಪ್ರಭುವಿನ ವರ್ಷ'ಕ್ಕೆ ಮುನ್ನ 220 ವರ್ಷಗಳ ಹಿಂದೆ ಎಂದು ಅರ್ಥ.

• ಕಾಲಗಣನೆಯನ್ನು ಇನ್ನಿತರ ಶಕೆಗಳಲ್ಲಿಯೂ ಮಾಡುತ್ತಾರೆ. ಶಾಲಿವಾಹನ, ಗುಪ್ತ, ವಿಕ್ರಮ, ಹಿಜರಿ ಇನ್ನೂ ಮುಂತಾದ ಶಕೆಗಳಿವೆ. ಸಾಮಾನ್ಯವಾಗಿ ಈಗ ಇತಿಹಾಸ ನಿರೂಪಣೆಯಲ್ಲಿ ಸಾಮಾನ್ಯಶಕ ಎಂಬುದು ರೂಢಿಯಲ್ಲಿದೆ.

• ಒಂದು ಶತಮಾನವೆಂದರೆ ನೂರು ವರ್ಷಗಳು. ನಾವು ಸಾಮಾನ್ಯಶಕ 21ನೇ ಶತಮಾನದವರು (2001ರಿಂದ 2100).

**ಚಟುವಟಿಕೆ:** ಕಾಲಗಣನೆಯ ವಿಚಾರದಲ್ಲಿ ಶಕೆಗಳ ಹೆಚ್ಚಿನ ವಿವರಗಳನ್ನು ಅಂತರಜಾಲದಿಂದ ಸಂಗ್ರಹಿಸಿ ಪಟ್ಟಿ ಮಾಡಿ.




• ಇಸವಿಗಳು ಮಾನವನ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಘಟನೆಗಳು ನಡೆದ ಕಾಲಕ್ರಮವನ್ನು ತಿಳಿಸುವುದೇ ಇಸವಿಗಳನ್ನು ಸೂಚಿಸುವ ಉದ್ದೇಶವಾಗಿದೆ. ಇಸವಿಗಳನ್ನು ಕಂಠಪಾಠ ಮಾಡುವುದಕ್ಕಾಗಿ ಮಾತ್ರವೇ ಹೇಳಲಾಗಿಲ್ಲ.

**ಕಾಲಗಣನೆ (ಕ್ರಿ.ಶ.)**

| | | |
|---|---|---|
| ಮತೀಯ ಯುದ್ಧಗಳು | – | 12–13ನೇ ಶತಮಾನ |
| ಮಕ್ಕಳ ಕ್ರೂಸೇಡ್ | – | 1212 |
| ಪ್ರವಾದಿ ಮಹಮ್ಮದ್ | – | ಸುಮಾರು 569–632 |
| ಹಿಜರಿ ಶಕ | – | 622ರಿಂದ ಪ್ರಾರಂಭ |
| ಚಂಗಿಸ್ ಖಾನ್ | – | 1162–1227 |
| ಕುಬ್ಲಾಯ್ ಖಾನ್ | – | 1215–1294 |
| ತೈಮೂರ್ | – | 1369–1405 |

© KTBS NOT TO BE REPUBLISHED

**ನಿಮಗೆ ತಿಳಿದಿರಲಿ**

ಬೆತ್ಲಹೆಂ – ಜೆರೂಸಲೇಂನ ಸಮೀಪದ ಒಂದು ಚಿಕ್ಕ ಪಟ್ಟಣ. ಇದು ಇಂದಿನ ಇಸ್ರೇಲ್‌ನ ಜೂಡಿಯ ಎಂಬ ಪ್ರದೇಶದಲ್ಲಿದೆ. ಯೇಸು ಯೆಹೂದಿ (ಹೀಬ್ರೂ) ಸಂತತಿಯವ.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಯೇಸುಕ್ರಿಸ್ತ ಎಲ್ಲಿ ಜನಿಸಿದರು? ಅವರ ತಾಯಿ ಯಾರು?

2 ಕ್ರೈಸ್ತಮತದ ಮೂಲಗ್ರಂಥ ಯಾವುದು?

3 ಯೇಸುಕ್ರಿಸ್ತರ ಮುಖ್ಯ ಬೋಧನೆಗಳು ಯಾವುವು?

4 ಪೋಪ್‌ಗುರುಗಳು ಎಂದರೆ ಯಾರು?

5 ಕ್ರೂಸೇಡ್ ಯುದ್ಧಗಳಿಗೆ ಮುಖ್ಯ ಕಾರಣ ಯಾವುದು?

6 ಮಹಮ್ಮದ್ ಪೈಗಂಬರ ಎಲ್ಲಿ ಜನಿಸಿದರು? ಇಸ್ಲಾಮಿನ ಮೂಲಗ್ರಂಥ ಯಾವುದು?

7 ಪ್ರವಾದಿ ಮಹಮ್ಮದರ ಮುಖ್ಯ ಬೋಧನೆಗಳು ಯಾವುವು?

8 ಅರಬ್ಬರ ಯಾವುದಾದರೂ ಎರಡು ಕೊಡುಗೆಗಳನ್ನು ಹೇಳಿ.

9 ಕುಬ್ಲಾಯ್ ಖಾನ್ ಯಾರು?

10 ಅಟೋಮನ್ ಟರ್ಕರ ಬಗ್ಗೆ ಟಿಪ್ಪಣಿ ಬರೆಯಿರಿ.

### ಚಟುವಟಿಕೆಗಳು

1 ಬೈಬಲಿನ ದೃಷ್ಟಾಂತ ಕಥೆಗಳನ್ನು ಓದಿ.

2 ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನು ಓದಿ.

3 ಪ್ರವಾದಿ ಮಹಮ್ಮದರ ಜೀವನ ಚರಿತ್ರೆಯನ್ನು ಓದಿ.

4 ಭೂಪಟದಲ್ಲಿ ಕ್ರೈಸ್ತ ಮತ್ತು ಇಸ್ಲಾಂ ರಿಲಿಜನ್‌ಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಿ.

NOT TO BE REPUBLISHED @KTBS

| ಅಧ್ಯಾಯ 2 | ಮಧ್ಯಯುಗದ ಯುರೋಪ್ |
|---|---|

D6E1G5

## 2.1 ಆಧುನಿಕ ಯುಗದ ಪ್ರಾರಂಭ – ಪುನರುಜ್ಜೀವನ

**ಪಾಠದ ಪರಿಚಯ**

ಇತಿಹಾಸಕಾರರು ಯುರೋಪಿನ ಸುದೀರ್ಘ ಇತಿಹಾಸವನ್ನು ಮೂರು ಯುಗಗಳಾಗಿ ವಿಂಗಡಿಸುವುದಿದೆ. ಅವುಗಳೆಂದರೆ – ಪ್ರಾಚೀನ ಯುಗ (ಸು.ಸಾ.ಶ.500ರವರೆಗೆ), ಮಧ್ಯ ಯುಗ (ಸು.ಸಾ.ಶ.500–1500) ಮತ್ತು ಆಧುನಿಕ ಯುಗ (ಸು.ಸಾ.ಶ.1500ರಿಂದ). ಮಧ್ಯ ಯುಗದಲ್ಲಿ ಕ್ಯಾಥೊಲಿಕ್ ಚರ್ಚ್ ಜನಜೀವನದ ಮೇಲೆ ಬಿಗಿಯಾದ ನಿಯಂತ್ರಣ ಸಾಧಿಸಿ ಸ್ವತಂತ್ರ ಚಿಂತನೆಯನ್ನು ಚಿವುಟಿಹಾಕಿತ್ತು. ಆದರೆ 15 ಮತ್ತು 16ನೇ ಶತಮಾನಗಳ ಕಾಲಾವಧಿಯಲ್ಲಿ ಮಧ್ಯ ಯುಗವು ಪರಿವರ್ತನೆಯ ಹೊಸ ಹಾದಿಯನ್ನು ಹಿಡಿಯಿತು. ಇಲ್ಲಿಂದ ಆಧುನಿಕ ಯುಗ ಆರಂಭಗೊಂಡಿತು. ಆಧುನಿಕ ಯುಗದ ಆರಂಭದ ಮೂರು ಮಹತ್ವಪೂರ್ಣ ಐತಿಹಾಸಿಕ ಬೆಳವಣಿಗೆಗಳೆಂದರೆ: ಪುನರುಜ್ಜೀವನ, ಧಾರ್ಮಿಕ ಸುಧಾರಣೆ ಮತ್ತು ಭೌಗೋಳಿಕ ಅನ್ವೇಷಣೆಗಳು.

ಪುನರುಜ್ಜೀವನ ಚಳವಳಿಯು ಪರಂಪರಾನುಗತವಾಗಿ ಬಂದ ನಂಬಿಕೆ ಆಚರಣೆಗಳನ್ನು ಪ್ರಶ್ನಿಸುವ ಮನೋಧರ್ಮವನ್ನು ಬೆಳೆಸಿತು. ಧರ್ಮದ ಬಗ್ಗೆ ಅಲ್ಲಿಯವರೆಗೂ ಜನರಿಗೆ ಇದ್ದ ಮನೋಭಾವವು ಬದಲಾಯಿತು. ಕ್ಯಾಥೊಲಿಕ್ ಚರ್ಚಿನ ವಿರುದ್ಧ ದೊಡ್ಡ ಆಂದೋಲನ ಆರಂಭವಾಯಿತು. ಇದರ ಪರಿಣಾಮವಾಗಿ 16ನೇ ಶತಮಾನದ ಯುರೋಪಿನಲ್ಲಿ ವ್ಯಾಪಕವಾದ ಧಾರ್ಮಿಕ ಸುಧಾರಣಾ ಚಳವಳಿಗಳು ನಡೆದವು. ಈ ಪಾಠದಲ್ಲಿ ಧಾರ್ಮಿಕ ಸುಧಾರಣೆಯ ಅರ್ಥ, ಕಾರಣಗಳು, ಗತಿ ಮತ್ತು ಪರಿಣಾಮಗಳನ್ನು ನಿರೂಪಿಸಲಾಗಿದೆ. ಮುಂದುವರೆದು ಪ್ರತಿಸುಧಾರಣೆ ಚಳವಳಿಯನ್ನು ಕುರಿತು ವಿವರಿಸಲಾಗಿದೆ.

15ನೇ ಮತ್ತು 16ನೇ ಶತಮಾನಗಳಲ್ಲಿ ನಡೆದ ಭೌಗೋಳಿಕ ಅನ್ವೇಷಣೆಗಳ ಮಹತ್ವ, ಕಾರಣಗಳು, ಗತಿ ಮತ್ತು ಪರಿಣಾಮಗಳನ್ನು ಈ ಪಾಠದಲ್ಲಿ ನಿರೂಪಿಸಲಾಗಿದೆ.

© KTBS NOT TO BE REPUBLISHED

**ಸಾಮರ್ಥ್ಯಗಳು**

1 ಪುನರುಜ್ಜೀವನದ ಪರಿಕಲ್ಪನೆಯನ್ನು ಮನದಟ್ಟು ಮಾಡಿಕೊಳ್ಳುವುದು.
2 ಪುನರುಜ್ಜೀವನಕ್ಕೆ ಕಾರಣವಾದ ಅಂಶಗಳು, ಪುನರುಜ್ಜೀವನದ ಪ್ರಾರಂಭ ಮತ್ತು ಲಕ್ಷಣಗಳನ್ನು ಅರ್ಥೈಸಿಕೊಳ್ಳುವುದು.
3 ಪುನರುಜ್ಜೀವನ ಚಳವಳಿ ಪ್ರೇರಿತ ಸಾಹಿತ್ಯ, ವಾಸ್ತುಶಿಲ್ಪ, ಚಿತ್ರಕಲೆ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಾದ ಬೆಳವಣಿಗೆಗಳನ್ನು ಅರಿಯುವುದು.
4 ಧಾರ್ಮಿಕ ಸುಧಾರಣೆ ಏನೆಂಬುದನ್ನು ಅರಿಯುವುದು.
5 ಸುಧಾರಣೆಯ ಕಾರಣಗಳನ್ನು ಅರ್ಥೈಸಿಕೊಳ್ಳುವುದು.
6 ಸುಧಾರಣೆಯಲ್ಲಿ ಮಾರ್ಟಿನ್ ಲೂಥರ್ ಮತ್ತು ಇತರರು ವಹಿಸಿದ ಪಾತ್ರವನ್ನು ತಿಳಿಯುವುದು.

7 ಪ್ರತಿಸುಧಾರಣೆಯ ಅರ್ಥ ಹಾಗೂ ಇಗ್ನೇಶಿಯಸ್ ಲಯೋಲಾನ ಪಾತ್ರವನ್ನು ಅರಿಯುವುದು.

8 ಸುಧಾರಣೆಯ ಪರಿಣಾಮಗಳನ್ನು ತಿಳಿದುಕೊಳ್ಳುವುದು.

9 ಅನ್ವೇಷಣೆಗಳಿಗೆ ಮೂಲವಾದ ಕಾರಣಗಳನ್ನು ಅರಿಯುವುದು.

10 ಸಮುದ್ರಯಾನಗಳ ಗತಿಯನ್ನು ತಿಳಿಯುವುದು.

11 ಅನ್ವೇಷಣೆಗಳು ಬೀರಿದ ಜಾಗತಿಕ ಪ್ರಭಾವಗಳನ್ನು ಅರ್ಥೈಸಿಕೊಳ್ಳುವುದು.

12 ಪ್ರಪಂಚದ ರೇಖಾ ನಕಾಶೆಯಲ್ಲಿ ಸಮುದ್ರಯಾನಗಳ ಮಾರ್ಗವನ್ನು ಗುರುತಿಸುವುದು.

ಗುರುಗಳು : ಮಕ್ಕಳೇ 'ಪುನರುಜ್ಜೀವನ' ಎಂದರೇನು ಗೊತ್ತೆ?

ವಿದ್ಯಾರ್ಥಿಗಳು : ಇಲ್ಲ ಗುರುಗಳೆ, ನಮಗೆ ಗೊತ್ತಿಲ್ಲ.

ಗುರುಗಳು : ಪುನರುಜ್ಜೀವನ ಎಂದರೆ 'ಮರುಹುಟ್ಟು' ( ರಿನೈಸಾನ್ಸ್ – Renaissance). ಇದಕ್ಕೆ ಪುನರುಜ್ಜೀವನ ಎಂಬ ಅರ್ಥವೂ ಇದೆ. ಪುನರುಜ್ಜೀವನವು ಸುಮಾರು ಸಾ.ಶ. 1400–1600ರ ಕಾಲಾವಧಿಯಲ್ಲಿ ಯುರೋಪಿನ ಸಾಹಿತ್ಯ, ಕಲೆ, ವಾಸ್ತುಶಿಲ್ಪ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಆಗಿರುವ ಹಲವಾರು ವಿಶಿಷ್ಟ ಬೆಳವಣಿಗೆಗಳನ್ನು ಸೂಚಿಸುತ್ತದೆ. ಪುನರುಜ್ಜೀವನ ಚಳವಳಿಯು ಬೌದ್ಧಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡುಬರುವ ಸೃಜನಶೀಲ ಬೆಳವಣಿಗೆಯನ್ನು ಅನಾವರಣ ಮಾಡುತ್ತದೆ. ಈ ಚಳವಳಿಯು ಆ ಕಾಲದ ಬದಲಾವಣೆಗಳ ಬಹುಮುಖಿ ಸಂಕೀರ್ಣತೆಯನ್ನು ಒಳಗೊಂಡು ಯೂರೋಪನ್ನು ಮಧ್ಯ ಯುಗದಿಂದ ಆಧುನಿಕ ಯುಗಕ್ಕೆ ಕೊಂಡೊಯ್ದಿತು.

ವಿದ್ಯಾರ್ಥಿಗಳು : ಈ ಚಳವಳಿಯು ಎಲ್ಲಿ ಆರಂಭವಾಯಿತು?

ಗುರುಗಳು : ಇದರ ಆರಂಭ ಇಟಲಿಯಲ್ಲಾಯಿತು.

ದ್ಯಾಮವ್ವ : ಪುನರುಜ್ಜೀವನದ ಲಕ್ಷಣಗಳು ಯಾವುವು ಗುರುಗಳೆ?

ಗುರುಗಳು : ಬಹಳ ಉತ್ತಮವಾದ ಪ್ರಶ್ನೆ. ಎಲ್ಲರೂ ಅವಶ್ಯವಾಗಿ ತಿಳಿಯಲೇ ಬೇಕಾದದ್ದು. ಪುನರುಜ್ಜೀವನವು ಹಲವು ಲಕ್ಷಣಗಳನ್ನು ಹೊಂದಿದೆ. ಅವುಗಳಲ್ಲಿ ಮಾನವತಾವಾದ ಮತ್ತು ವೈಚಾರಿಕತೆ ಮುಖ್ಯವಾದುದು.

ದೀಪಾಲಿ : ಮಾನವತಾವಾದ ಎಂದರೇನು?

ಗುರುಗಳು : ಪ್ರಪಂಚದ ಎಲ್ಲಾ ಆಗುಹೋಗುಗಳಲ್ಲಿ ಮಾನವನ ಪಾತ್ರವೇ ಅತಿ ಪ್ರಧಾನ ಎಂಬ ಭಾವನೆಯೇ ಮಾನವತಾವಾದ.

© KTBS NOT TO BE REPUBLISHED

ಪ್ರಾಚೀನ ಗ್ರೀಕ್ ಸಾಹಿತ್ಯವನ್ನು ಅಧ್ಯಯನ ನಡೆಸುತ್ತಿದ್ದ ವಿದ್ವಾಂಸರನ್ನು 'ಮಾನವಾಸಕ್ತರು' (humanists) ಎಂದು ಕರೆಯಲಾಗುತ್ತಿತ್ತು. ಪ್ರಾಪಂಚಿಕ ಜೀವನದಲ್ಲಿ ಮಾನವನೇ ಅತಿ ಪ್ರಮುಖ; ಮಾನವನು ಪಾಪಿಯಲ್ಲ, ಅವನು ದೇವರು ಸೃಷ್ಟಿಸಿದ ಜೀವಿಗಳಲ್ಲಿ ಅತಿಶ್ರೇಷ್ಠ ಎಂಬುದಾಗಿ ಅವರು ಸಾರಿದರು.

**ಗಣೇಶ** : ಹಾಗಾದರೆ ವೈಚಾರಿಕತೆ ಎಂದರೇನು ಗುರುಗಳೆ?

**ಗುರುಗಳು** : ವೈಚಾರಿಕತೆ ಎಂದರೆ ಪ್ರತಿಯೊಂದು ವಿಷಯವನ್ನು ಪೂರ್ವಾಗ್ರಹವಿಲ್ಲದೆ ವಿಚಾರ ಮತ್ತು ತರ್ಕದ ನೆಲೆಯಲ್ಲಿ ನೋಡುವುದೇ ಆಗಿದೆ. ಅದು ಸತ್ಯವೆಂದು ಕಂಡು ಬಂದರೆ ಮಾತ್ರ ಒಪ್ಪಿಕೊಳ್ಳುವುದಾಗಿದೆ.

ಪುನರುಜ್ಜೀವನ ಕಾಲದಲ್ಲಿ ಸ್ವರ್ಗ-ನರಕ ಮತ್ತು ಪರಲೋಕದ ಚಿಂತನೆಯನ್ನು ಪೂರ್ಣವಾಗಿ ಬಿಟ್ಟು ಇಹಲೋಕದ ವಿಷಯಗಳ ಬಗ್ಗೆ ತೀವ್ರ ಒಲವು ತಳೆಯಲಾಯಿತು. ಪ್ರಸ್ತುತ ಬದುಕಿಗೆ ಹೆಚ್ಚು ಒತ್ತನ್ನು ನೀಡಲಾಯಿತು.

**ಜೋಸೆಫ್** : ಇನ್ನೇನಾದರೂ ಲಕ್ಷಣಗಳಿವೆಯೇ ಗುರುಗಳೆ?

**ಗುರುಗಳು** : ಅವುಗಳನ್ನು ಹೊರತುಪಡಿಸಿ ಇನ್ನೆರಡು ಲಕ್ಷಣಗಳಿವೆ. ಅವೆಂದರೆ – ಒಂದನೆಯದು ಅಭಿಜಾತ ಭಾಷೆಗಳಾದ [classical languages] ಗ್ರೀಕ್ ಮತ್ತು ಲ್ಯಾಟಿನ್‌ಗಳನ್ನು ತೊರೆದು ಸ್ಥಳೀಯ ದೇಶಭಾಷೆಯಲ್ಲಿ ಸಾಹಿತ್ಯ ರಚನೆಯಾದುದಾಗಿದೆ. ಎರಡನೆಯದು, ಕಲಾಪ್ರವೃತ್ತಿಯಲ್ಲಿ ಸೃಜನಶೀಲತೆ ಮೂಡಿದುದಾಗಿದೆ.

ಪುನರುಜ್ಜೀವನದ ಚಿತ್ರಕಲಾವಿದರು ಹೊಸ ಹೊಸ ವಿಷಯಗಳನ್ನು ಆರಿಸಿಕೊಂಡರು. ವಾಸ್ತುಶಿಲ್ಪವು ಹೆಚ್ಚು ಮಾನವಕೇಂದ್ರಿತವಾಗಿತ್ತು. ಉದಾಹರಣೆಗೆ ಇಗರ್ಜಿಗಳು [churches] ಕೇವಲ ಪ್ರಾರ್ಥನಾ ಮಂದಿರಗಳಾಗಿರದೆ ಕಲಾತ್ಮಕ ವಾಸ್ತುಶಿಲ್ಪಗಳಾಗಿಯೂ ಮೂಡಿಬಂದವು.

**ಇಸ್ಮಾಯಿಲ್** : ಗುರುಗಳೆ, ಪುನರುಜ್ಜೀವನದ ಲಕ್ಷಣಗಳನ್ನು ನಾವು ಅರ್ಥಮಾಡಿಕೊಂಡೆವು. ದಯವಿಟ್ಟು ಪುನರುಜ್ಜೀವನದ ಕಾರಣಗಳನ್ನು ತಿಳಿಸಿಕೊಡುವಿರಾ?

**ಗುರುಗಳು** : ಖಂಡಿತಾ ಹೇಳುತ್ತೇನೆ. • ವಿಚಾರ ಸ್ವಾತಂತ್ರ್ಯವೇ ಪುನರುಜ್ಜೀವನದ ಪ್ರಧಾನ ಕಾರಣವಾಗಿತ್ತು. ಇನ್ನಿತರ ಕಾರಣಗಳು ಇವಾಗಿವೆ: • ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ, • ಭೌಗೋಳಿಕ ಅನ್ವೇಷಣೆಗಳ ಪ್ರಭಾವ, • ಮುದ್ರಣಯಂತ್ರದ ಶೋಧ, • ಶಿಕ್ಷಣದ ಪ್ರಸಾರಣ, • ಊಳಿಗಮಾನ್ಯ ಪದ್ಧತಿಯ ಅವನತಿ ಮುಂತಾದವು.

ಇಸ್ತಾನ್‌ಬುಲ್, ಈಗಿನ ಟರ್ಕಿ ದೇಶದ ಬಂದರು ನಗರ. ಇದನ್ನು ಹಿಂದೆ ಕಾನ್‌ಸ್ಟಂಟಿನೋಪಲ್, ಅದಕ್ಕೂ ಮೊದಲು ಇದನ್ನು ಬೈಜಾಂಟಿಯನ್ ಎನ್ನುತ್ತಿದ್ದರು.

© KTBS NOT TO BE REPUBLISHED

**ತಿಮ್ಮಕ್ಕ** : ಕಾನ್‌ಸ್ಟಂಟಿನೋಪಲ್ ನಗರದ ಮೇಲಿನ ಆಕ್ರಮಣವನ್ನು ವಿವರಿಸಿ ಗುರುಗಳೆ.

**ಗುರುಗಳು** : 15ನೇ ಶತಮಾನದ ಮಧ್ಯಭಾಗದಲ್ಲಿ (1453) ಟರ್ಕರ ಸುಲ್ತಾನ ಮೊಹಮ್ಮದನು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ ನಡೆಸಿದನು. ಆಕ್ರಮಣದಲ್ಲಿ ಟರ್ಕರು ಚಕ್ರವರ್ತಿ ಕಾನ್‌ಸ್ಟಂಟೈನ್‌ನಿಂದ ಈ ನಗರವನ್ನು ವಶಪಡಿಸಿಕೊಂಡರು. ಗಮನಿಸಬೇಕಾದ ಅಂಶವೆಂದರೆ, ಸಾ.ಶ. 1453ಕ್ಕಿಂತ ಹಿಂದೆ ಹನ್ನೊಂದು ಶತಮಾನಗಳ ಕಾಲ ಈ ನಗರವು ಪ್ರಸಿದ್ಧ ಜ್ಞಾನಾರ್ಜನೆಯ ಕೇಂದ್ರವಾಗಿತ್ತು.

**ರಜಿಯಾ** : ಆಕ್ರಮಣದ ಪರಿಣಾಮವೇನಾಯಿತು ಗುರುಗಳೆ?

**ಗುರುಗಳು** : ಅರಬ್ಬರಲ್ಲಿದ್ದಂತೆ ಟರ್ಕರಲ್ಲಿ ಉದಾರ ಮನೋಭಾವವಿರಲಿಲ್ಲ. ಕಲಿಕೆಯ ಬಗ್ಗೆ ಗೌರವವಿರಲಿಲ್ಲ. ಆ ನಗರದಲ್ಲಿದ್ದ ವಿದ್ವಾಂಸರು ಟರ್ಕರ ಭೀತಿಯಿಂದ ತಮ್ಮಲ್ಲಿದ್ದ ಅಮೂಲ್ಯ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳೊಂದಿಗೆ ಇಟಲಿ ಮತ್ತು ಯುರೋಪಿನ ಇನ್ನಿತರ ಭಾಗಗಳಿಗೆ ಪಲಾಯನ ಗೈದರು. ಇಟಲಿಯ ವಿವಿಧ ನಗರಗಳಲ್ಲಿ ನೆಲೆಸಿದ ಅವರು ಪ್ರಾಚೀನ ಜ್ಞಾನಪ್ರಚಾರ ಮಾಡತೊಡಗಿದರು. ಹೀಗೆ ಕಲಿಕೆಯು ಕಾನ್‌ಸ್ಟಂಟಿನೋಪಲಿನಿಂದ ಇಟಲಿಗೆ ಸ್ಥಳಾಂತರಗೊಂಡಿತು. ಇದು ಪುನರುಜ್ಜೀವನಕ್ಕೆ ಪ್ರೇರಣೆ ನೀಡಿತು.

ಜೊತೆಗೆ ಅದೇ ಕಾಲದಲ್ಲಿ ನಡೆದ ಭೌಗೋಳಿಕ ಅನ್ವೇಷಣೆಗಳಿಂದ ಯುರೋಪಿಯನ್ನರ ಸಂಪತ್ತು ಹೆಚ್ಚಿತು. ಭಾರತ, ಅಮೆರಿಕ ಮುಂತಾದ ದೇಶಗಳಿಗೆ ಸಮುದ್ರ ಮಾರ್ಗಗಳನ್ನು ಕಂಡುಹಿಡಿದರು. ಇದು ಯುರೋಪನ್ನು ವಸಾಹತುಶಾಹಿ ಶಕ್ತಿಯನ್ನಾಗಿ ಬದಲಾಯಿಸಿತು. ಹಾಗೆಯೇ ಊಳಿಗಮಾನ್ಯ ವ್ಯವಸ್ಥೆಯನ್ನು ಶಿಥಿಲಗೊಳಿಸಿತು.

**ಅತುಲ್** : ಮುದ್ರಣಯಂತ್ರ ಪುನರುಜ್ಜೀವನಕ್ಕೆ ಹೇಗೆ ಕಾರಣವಾಯಿತು ಗುರುಗಳೆ?

**ಗುರುಗಳು** : ಹದಿನೈದನೆಯ ಶತಮಾನದಲ್ಲಿ ಕಂಡುಹಿಡಿಯಲಾದ ಮುದ್ರಣಯಂತ್ರವು ಜ್ಞಾನಪ್ರಸಾರ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿತು. ಹಿಂದೆ ಒಬ್ಬನಿಗೆ ಒಂದು ವರ್ಷದಲ್ಲಿ ಕೇವಲ ಎರಡು ಪುಸ್ತಕಗಳನ್ನು ಮಾತ್ರ ಪ್ರತಿ ಮಾಡಲು ಸಾಧ್ಯವಾಗುತ್ತಿತ್ತು. ಮುದ್ರಣಯಂತ್ರದ ಸಹಾಯದಿಂದ ಒಂದೇ ವರ್ಷದಲ್ಲಿ ಪುಸ್ತಕವೊಂದರ 24,000 ಪ್ರತಿಗಳನ್ನು ಮುದ್ರಿಸಬಹುದಾಗಿತ್ತು. ಮುದ್ರಿತ ಪುಸ್ತಕಗಳ ಬೆಲೆ ಕಡಿಮೆಗೊಂಡು ಅವುಗಳಿಗೆ ಬೇಡಿಕೆ ಹೆಚ್ಚಿತು. ಮುದ್ರಣವು ಕೈಬರಹಕ್ಕಿಂತ ಹೆಚ್ಚು ಸ್ಪಷ್ಟವೂ ಸುಂದರವೂ ಆಯಿತು. ಓದುವ ಆಸಕ್ತಿ ಇದ್ದವರೆಲ್ಲರಿಗೂ ಸುಲಭವಾಗಿ ಪ್ರತಿಗಳು ದೊರೆಯುವಂತಾಯ್ತು.

© KTBS NOT TO BE REPUBLISHED



*ಗುಟೆನ್‌ಬರ್ಗ್ ಮುದ್ರಣಯಂತ್ರ*

ಸಾ.ಶ. 1450ರ ಸುಮಾರಿಗೆ ಜರ್ಮನಿಯ ಜಾನ್ ಗುಟೆನ್‌ಬರ್ಗ್ ಎಂಬವನು ಮೆಯಿನ್ಸ್ ಎಂಬ ಪಟ್ಟಣದಲ್ಲಿರುವ ತನ್ನ ಮುದ್ರಣಾಲಯದಲ್ಲಿ ಚಲಿಸುವ ಅಚ್ಚಿನ ಮೊಳೆಗಳನ್ನು ಬಳಸಿದನು. ಇದಕ್ಕೆ ಮೊದಲು ಪಡಿಯಚ್ಚುಗಳನ್ನು (ಬ್ಲಾಕ್ಸ್) ಉಪಯೋಗಿಸಲಾಗುತ್ತಿತ್ತು. ಹೊಸ ಹೊಸ ತಂತ್ರಜ್ಞಾನವು ಮಿಂಚಿನ ವೇಗದಲ್ಲಿ ಇಡೀ ಯುರೋಪಿನಲ್ಲಿ ಹಬ್ಬಿತು. ಇದನ್ನು ಎಲ್ಲ ವಿದ್ವಾಂಸರೂ ಪೋಪರೂ ಸ್ವಾಗತಿಸಿದರು. ವಿಲಿಯಂ ಕ್ಯಾಕ್ಸ್‌ಟನ್ ಎಂಬವನು ಸಾ.ಶ. 1477ರಲ್ಲಿ ಇಂಗ್ಲೆಂಡಿನಲ್ಲಿ ಸುಧಾರಿತ ಮುದ್ರಣಯಂತ್ರವನ್ನು ಸ್ಥಾಪಿಸಿದನು.

NOT TO BE REPUBLISHED @KTBS

**ನಿಂಗಪ್ಪ** : ಸಾಹಿತ್ಯಕ್ಷೇತ್ರಕ್ಕೆ ಪುನರುಜ್ಜೀವನ ನೀಡಿರುವ ಕೊಡುಗೆಗಳನ್ನು ವಿವರಿಸಿ ಗುರುಗಳೆ.

**ಗುರುಗಳು** : ಪುನರುಜ್ಜೀವನ ಕಾಲದಲ್ಲಿ ದೇಶಭಾಷೆ ಅಥವಾ ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ ರಚನೆಗೊಂಡಿತು. ಪರಿಣಾಮವಾಗಿ ಜನರ ಆಡುಭಾಷೆಗಳು ವಿಕಾಸ ಹೊಂದಿದವು. ಅನೇಕ ಲೇಖಕರು ಈ ಕಾಲದಲ್ಲಿ ವಿವಿಧ ಸಾಹಿತ್ಯ ಕೃತಿಗಳನ್ನು ರಚಿಸಿದರು.



*ಪೆಟ್ರಾರ್ಕ್*

ಲೇಖಕರಲ್ಲಿ ಪೆಟ್ರಾರ್ಕ್ ಮೊದಲಿಗನು. ಈತನಿಗೆ ಪ್ರಾಚೀನ ಗ್ರೀಕ್ ಮತ್ತು ರೋಮನ್ ಸಾಹಿತ್ಯದ ಮೇಲೆ ಅತೀವ ಅಭಿಮಾನವಿತ್ತು. ಈತನ ಭಾವಗೀತೆ ಮತ್ತು ಕಾವ್ಯಗಳು ಪ್ರಸಿದ್ಧ. ಯುವ ಸಾಹಿತಿಗಳು ಈತನಿಂದ ಪಡೆದ ಸ್ಫೂರ್ತಿ ಗಮನಾರ್ಹವಾದುದು. ಡಾಂಟೆ ಇಟಲಿಯ ಮಹಾಕವಿ. 'ದ ಡಿವೈನ್ ಕಾಮಿಡಿ' ಆತನ ಮಹಾಕಾವ್ಯ. ಬೊಕಾಷಿಯೊ ಒಬ್ಬ ಕುಶಲ ಕತೆಗಾರ. 'ಡೆಕಮೆರನ್' ಆತನ ಶ್ರೇಷ್ಠ ಸಾಹಿತ್ಯ ಕೃತಿ.

ಫ್ರೆಂಚ್ ಗದ್ಯ ಸಾಹಿತ್ಯಕ್ಕೆ ಒಂದು ಹೊಸ ಶೈಲಿಯನ್ನು ಕೊಟ್ಟವನೆಂದರೆ ಮತಸುಧಾರಕನಾದ ಜಾನ್ ಕ್ಯಾಲ್ವಿನ್. ಸರ್ವಾಂಟಿಸ್ ಸ್ಪೇನ್ ದೇಶದ ಪುನರುಜ್ಜೀವನ ಕಾಲದ ಮುಖ್ಯ ಸಾಹಿತಿ. ಈತನು ತನ್ನ 'ಡಾನ್ ಕ್ವಿಕ್ಸಾಟ್' ಎಂಬ ಪ್ರಸಿದ್ಧ ಸಾಹಿತ್ಯ ಕೃತಿಯಲ್ಲಿ ಮಧ್ಯ ಯುಗದ ಸರದಾರರನ್ನು (knights) ಗೇಲಿ ಮಾಡಿದನು.

ರಾಜರ ಮಿಲಿಟರಿಯಲ್ಲಿ ಅಪ್ರತಿಮ ಸೇವೆಯನ್ನು ಸಲ್ಲಿಸುತ್ತಿದ್ದವರಿಗೆ ನೀಡುತ್ತಿದ್ದ ಸೇವಾ ಮಾನ್ಯತೆಯನ್ನು ಸರದಾರ ಎಂದು ಕರೆಯುತ್ತಿದ್ದರು.

ಇಂಗ್ಲಿಷ್ ನಾಟಕಕಾರರಲ್ಲಿ ವಿಲಿಯಮ್ ಷೇಕ್ಸ್‌ಪಿಯರ್ ಪ್ರಮುಖನು. ಇವನು ಕೆಲವು ಶ್ರೇಷ್ಠ ನಾಟಕಗಳನ್ನು ರಚಿಸಿದನು. 'ಜೂಲಿಯಸ್ ಸೀಜರ್', 'ರೋಮಿಯೋ ಜ್ಯೂಲಿಯಟ್', 'ಕಿಂಗ್ ಲಿಯರ್', 'ಮ್ಯಾಕ್‌ಬೆತ್' ಇವೇ ಮುಂತಾದವು ಈತನ ನಾಟಕಗಳು. ಕಾಳಿದಾಸನಂತೆ ಇವನೊಬ್ಬ ಪ್ರತಿಭಾವಂತ ನಾಟಕಕಾರ.



*ಷೇಕ್ಸ್‌ಪೀಯರ್*

**ಮಾರ್ಗರೇಟ್** : ಸಾಹಿತ್ಯಕ್ಕೆ ಪುನರುಜ್ಜೀವನ ನೀಡಿದ ಕೊಡುಗೆಗಳನ್ನು ಹೇಳಿದಿರಿ ಗುರುಗಳೆ. ಇನ್ನು ವಾಸ್ತು, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗೆ ಅದು ನೀಡಿದ ಕೊಡುಗೆಗಳನ್ನು ಹೇಳುವಿರಾ?

**ಗುರುಗಳು** : ಪುನರುಜ್ಜೀವನದ ವಾಸ್ತು ಸೌಂದರ್ಯವನ್ನು ನಾವು ರೋಮಿನ ಸಂತ ಪೀಟರ ಚರ್ಚ್, ಲಂಡನಿನ ಸಂತ ಪಾಲ್ ಚರ್ಚ್ ಮುಂತಾದ ಚರ್ಚ್‌ಗಳಲ್ಲಿ ಕಾಣಬಹುದಾಗಿದೆ.



*ಸಂತ ಪೀಟರ ಚರ್ಚ್, ರೋಮ್*

© KTBS NOT TO BE REPUBLISHED

ಪುನರುಜ್ಜೀವನದ ವಾಸ್ತುಶಿಲ್ಪಿಗಳು ಮಧ್ಯ ಯುಗದ ಅಲಂಕರಣದ ಮತ್ತು ಆಡಂಬರದ ಗಾಥಿಕ್ ಶೈಲಿಯನ್ನು ಕೈಬಿಟ್ಟು, ಚೂಪಾದ ಮೊನೆಯುಳ್ಳ ಕಮಾನುಗಳ ಬದಲು ದುಂಡದಾದ ಕಮಾನುಗಳನ್ನು ಬಳಸಿದರು.

ಡೊನಾಟೆಲ್ಲೊ ಆ ಕಾಲದ ಮಹಾನ್ ಶಿಲ್ಪಿ. ಈತನು ನಿರ್ಮಿಸಿದ 'ಡೇವಿಡ್ ಪ್ರತಿಮೆ' ಶ್ರೇಷ್ಠವಾಗಿದೆ. ಹಾಗೆಯೇ ಮೈಕೆಲೆಂಜೆಲೊ ನಿರ್ಮಿಸಿದ 'ಮೋಸೆಸ್ ಪ್ರತಿಮೆ' ಭವ್ಯವಾಗಿದೆ.

**ಶಿವಮೂರ್ತಿ** : ಚಿತ್ರಕಲಾರಂಗದಲ್ಲಿ ಆದ ಸಾಧನೆಗಳನ್ನು ನಮಗೆ ತಿಳಿಸಿ, ಗುರುಗಳೆ.

**ಗುರುಗಳು** : ಇಟಲಿಯಲ್ಲಿ ಹದಿನಾರನೆಯ ಶತಮಾನದಲ್ಲಿ ಹಲವಾರು ಪ್ರತಿಭಾವಂತ ಚಿತ್ರಕಾರರಿದ್ದರು. ಅವರಲ್ಲಿ ಲಿಯೊನಾರ್ಡೊ ದ ವಿಂಚಿ ಮತ್ತು ಮೈಕೆಲೆಂಜೆಲೊ ಗಮನಾರ್ಹರು.



*ವರ್ಜಿನ್ ಆನ್ ದಿ ರಾಕ್ – ಲಿಯೊನಾರ್ಡೊ ದ ವಿಂಚಿ*



ಮೈಕೆಲೆಂಜೆಲೊ



ಮೋಸೆಸ್ – ಮೈಕೆಲೆಂಜೆಲೊ



ಲಿಯೊನಾರ್ಡೊ ದ ವಿಂಚಿ



ಮೊನಾಲಿಸಾ – ಲಿಯೊನಾರ್ಡೊ ದ ವಿಂಚಿ

@KTBS NOT TO BE REPUBLISHED

ಲಿಯೊನಾರ್ಡೊ ದ ವಿಂಚಿ ಅದ್ಭುತ ಚಿತ್ರಕಾರ, ಮೂರ್ತಿಶಿಲ್ಪಿ, ವಿಜ್ಞಾನಿ, ಇಂಜಿನಿಯರ್, ವಾಸ್ತುಶಿಲ್ಪಿ ಮತ್ತು ಗಣಿತಶಾಸ್ತ್ರಜ್ಞ. 'ವರ್ಜಿನ್ ಆನ್ ದಿ ರಾಕ್ಸ್', 'ದಿ ಲಾಸ್ಟ್ ಸಪ್ಪರ್' ಮತ್ತು 'ಮೊನಾಲಿಸಾ' ಆತನ ಪ್ರಸಿದ್ಧ ವರ್ಣಚಿತ್ರಗಳು.

ದ ವಿಂಚಿಯು ಎಲ್ಲ ಕಾರ್ಯಕ್ಷೇತ್ರಗಳಲ್ಲಿಯೂ ತನ್ನ ಸಮಕಾಲೀನರನ್ನು ಮೀರಿ ನಿಂತಿದ್ದ. ಆತನು ಹಾರುವಯಂತ್ರ, ಸಬ್‌ಮೆರಿನ್, ಪ್ಯಾರಾಚೂಟ್ ಮತ್ತು ಟ್ಯಾಂಕರ್ ಇವುಗಳ ವಿನ್ಯಾಸವನ್ನು ತಯಾರಿಸಿದ್ದನು. ಆದರೆ ಆತನ ವೈಜ್ಞಾನಿಕ ಸಾಧನೆಗಳು ಬಹುಕಾಲ ಬೆಳಕಿಗೆ ಬಾರದೆ ಅಜ್ಞಾತವಾಗಿಯೇ ಉಳಿದವು. ಆತನು ಓರ್ವ ಮಹಾನ್ ವಾಸ್ತುಶಿಲ್ಪಿಯೂ ಆಗಿದ್ದು ಇಟಲಿಯಲ್ಲಿ ಕಾಲುವೆಗಳನ್ನೂ ರಕ್ಷಣಾಕೋಟೆಗಳನ್ನೂ ನಿರ್ಮಿಸಿದ. ಸಂಗೀತ ಮತ್ತು ತತ್ವಶಾಸ್ತ್ರಗಳಲ್ಲಿಯೂ ಆತನಿಗೆ ಪ್ರೌಢಿಮೆಯಿತ್ತು. ಇವನು ಏಕ ಕಾಲದಲ್ಲಿ ಎರಡೂ ಕೈಗಳಿಂದ ಬರೆಯಬಲ್ಲವನಾಗಿದ್ದನೆಂದು ಹೇಳಲಾಗುತ್ತದೆ.

ಆದಿತ್ಯ : ಗುರುಗಳೇ, ಪುನರುಜ್ಜೀವನ ಕಾಲದಲ್ಲಿ ವಿಜ್ಞಾನ ಕ್ಷೇತ್ರದಲ್ಲಾದ ಪ್ರಗತಿಯನ್ನು ವಿವರಿಸಿ.

**ಗುರುಗಳು :** ಪುನರುಜ್ಜೀವನ ಕಾಲದಿಂದಲೇ ಆಧುನಿಕ ವಿಜ್ಞಾನದ ಬೆಳವಣಿಗೆ ಪ್ರಾರಂಭವಾಯಿತು ಎನ್ನಬಹುದು. ಖಗೋಳಶಾಸ್ತ್ರದಲ್ಲಿ ಕ್ರಾಂತಿಕಾರಕ ಮುನ್ನಡೆಯಾಯಿತು. ಪೋಲೆಂಡಿನ ಕೋಪರ್ನಿಕಸನು ಸೂರ್ಯನ ಸುತ್ತ ತಿರುಗುವ ಹಲವಾರು ಗ್ರಹಗಳಲ್ಲಿ ಭೂಮಿಯು ಒಂದಾಗಿದೆಯೆಂದು ತಿಳಿದಿದ್ದನು. ಆತನ ಸಂಶೋಧನೆಯು ಚರ್ಚಿನ ಸಿದ್ಧಾಂತಗಳಿಗೆ ವಿರುದ್ಧವಾಗಿದ್ದುದರಿಂದ ಅದನ್ನು ಗ್ರಂಥರೂಪದಲ್ಲಿ ಪ್ರಕಟಿಸಲು ಸಾಧ್ಯವಾಗಲಿಲ್ಲ.



*ಕೋಪರ್ನಿಕಸ್*

ಕೋಪರ್ನಿಕಸನ ಕಾಲಘಟ್ಟದಲ್ಲಿ ಸೂರ್ಯನು ಭೂಮಿಯ ಸುತ್ತ ತಿರುಗುವನೆಂದು ಟಾಲೆಮಿ ಹೇಳಿದ ಮಾತೇ ಚರ್ಚಿನ ಸಿದ್ಧಾಂತವಾಗಿತ್ತು.

ಮುಂದೆ, ಜರ್ಮನಿಯ ಗಣಿತಶಾಸ್ತ್ರಜ್ಞ ಕೆಪ್ಲರ್ ಎಂಬುವನು ಕೋಪರ್ನಿಕಸನ ವಾದವನ್ನು ಪ್ರಾಯೋಗಿಕವಾಗಿ ಸಾಧಿಸಿ ತೋರಿಸಿದನು.

ಇಟಲಿಯ ಖಗೋಳ ಶಾಸ್ತ್ರಜ್ಞನಾದ ಗೆಲಿಲಿಯೊ ದೂರದರ್ಶಕವನ್ನು ಕಂಡುಹಿಡಿದನು. ಇವನು ಕೋಪರ್ನಿಕಸನ ವಾದವನ್ನು ಬಲವಾಗಿ ಪ್ರತಿಪಾದಿಸಿದನು. ಆದುದರಿಂದ ಚರ್ಚ್ ಇವನನ್ನು ಬಂಧಿಸಿ ಚರ್ಚಿನ ನ್ಯಾಯಾಲಯಕ್ಕೆ (ಇನ್‌ಕ್ವಿಜಿಷನ್) ಒಳಪಡಿಸಿತು. ಬಲವಂತದ ತಪ್ಪೊಪ್ಪಿಗೆ ನಂತರ ಗೆಲಿಲಿಯೊನನ್ನು ಬಿಡುಗಡೆ ಮಾಡಿತು.

ಇಂಗ್ಲೆಂಡಿನ ಸರ್ ಐಸಾಕ್ ನ್ಯೂಟನನು ನೆಲದಿಂದ ಮೇಲಕ್ಕೆ ಏರಿದ ವಸ್ತುಗಳು ಪುನಃ ಕೆಳಗೆ ಬೀಳಲು 'ಗುರುತ್ವಾಕರ್ಷಣ' ಬಲವೇ ಕಾರಣ ಎಂಬುದನ್ನು ತೋರಿಸಿಕೊಟ್ಟನು.

ವಿಲಿಯಂ ಹಾರ್ವೆಯು (1478–1557) ಮಾನವ ದೇಹದಲ್ಲಿನ ರಕ್ತಪರಿಚಲನೆಯ ಕ್ರಮವನ್ನು ತೋರಿಸಿಕೊಟ್ಟನು.



*ಗೆಲಿಲಿಯೊ*

ವೆಸಾಲಿಯಸ್ ಎಂಬ ಬೆಲ್ಜಿಯಮ್ ವಿಜ್ಞಾನಿಯು ದೇಹದಲ್ಲಿ ರಕ್ತಸಂಚಾರದ ಬಗ್ಗೆ ಅಮೂಲ್ಯ ಗ್ರಂಥವನ್ನು ಪ್ರಕಟಿಸಿದನು. ಚರ್ಚಿನ ನಂಬುಗೆಯನ್ನು ಪ್ರಶ್ನಿಸಿದ್ದಕ್ಕಾಗಿ ಆತನನ್ನು ಮರಣದಂಡನೆಗೆ ಗುರಿಪಡಿಸಲಾಯಿತು!

ಗೆಲಿಲಿಯೊ ತನ್ನ ಪ್ರಯೋಗಗಳ ಮೂಲಕ ವಿವಿಧ ತೂಕದ ವಸ್ತುಗಳನ್ನು ಏಕಕಾಲದಲ್ಲಿ ಸಮಾನ ಎತ್ತರದಿಂದ ಕೈಬಿಟ್ಟಾಗ ಒಂದೇ ಸಮಯಕ್ಕೆ ಅವು ಭೂಮಿಯನ್ನು ತಲಪುತ್ತವೆ ಎಂದು ಸಾಬೀತುಗೊಳಿಸಿದನು. ಪೀಸಾ ಗೋಪುರದ ಮೇಲಿಂದ ವಿವಿಧ ತೂಕದ ಫಿರಂಗಿ ಗುಂಡುಗಳನ್ನು ಕೆಳಗೆ ಹಾಕಿ ಇದನ್ನು ಪ್ರಾಯೋಗಿಕವಾಗಿ ತೋರಿಸಿದನು.

ಹೀಗೆ ಪುನರುಜ್ಜೀವನವು ಆಧುನಿಕ ಸಮಾಜ ಮತ್ತು ನಾಗರಿಕತೆಗಳ ಮೇಲೆ ಮಹತ್ವದ ಪ್ರಭಾವವನ್ನು ಬೀರಿತು.

©KTBS NOT TO BE REPUBLISHED

# 2.2 ಧಾರ್ಮಿಕ ಸುಧಾರಣೆ

ರವಿವಾರ ಬೆಳಗಿನ ಪ್ರಾರ್ಥನೆ ಮುಗಿಸಿ ಚರ್ಚಿನಿಂದ ಹೊರಬರುತ್ತಿದ್ದಂತೆ, ಪೀಟರ್ ಮತ್ತು ಲಿಲ್ಲಿ ಕುತೂಹಲದಿಂದ ತಂದೆ ಜಾನ್‌ನಿಗೆ ಪ್ರಶ್ನೆಗಳನ್ನು ಕೇಳಲಾರಂಭಿಸಿದರು.

**ಪೀಟರ್ :** ಕ್ರೈಸ್ತರಲ್ಲಿಯೂ ಪಂಗಡಗಳಿವೆಯೆ?

**ಜಾನ್ :** ಕ್ರೈಸ್ತರಲ್ಲಿ ಅನೇಕ ಪಂಗಡಗಳಿವೆ. 'ಕ್ಯಾಥೊಲಿಕ್' ಮತ್ತು 'ಪ್ರಾಟೆಸ್ಟಂಟ್' ಎಂಬ ಎರಡು ಪಂಗಡಗಳು ಅವುಗಳಲ್ಲಿ ಪ್ರಮುಖ.

**ಪೀಟರ್ :** ಕ್ರೈಸ್ತರಲ್ಲಿ ಈ ಎರಡು ಪಂಗಡಗಳಾಗಲು ಕಾರಣಗಳೇನು?

**ಜಾನ್ :** ಮಧ್ಯಯುಗದ ರೋಮನ್ ಕ್ಯಾಥೋಲಿಕ್ ಚರ್ಚಿನಲ್ಲಿ ಹಲವಾರು ನೀತಿಬಾಹಿರ ಚಟುವಟಿಕೆಗಳು ನಡೆದವು. ಪೋಪ್ ಮತ್ತು ಚರ್ಚಿನ ಅಧಿಕಾರಿಗಳು ಸರಳ ಧಾರ್ಮಿಕ ಜೀವನವನ್ನು ನಡೆಸುವ ಬದಲು ರಾಜವೈಭವದಲ್ಲಿ ಮೆರೆಯುತ್ತಿದ್ದರು.

ರಾಜರು ಮತ್ತು ಪೋಪರ ಕಲಹಗಳ ಪರಿಣಾಮವಾಗಿ ಸಮಾಜದಲ್ಲಿ ಪೋಪರ ಬಗ್ಗೆ ಗೌರವ ಕಡಿಮೆಯಾಯಿತು. ಪೋಪ್ ರಾಜಕೀಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ರಾಜರು ಸಹಿಸಲಿಲ್ಲ. ಚರ್ಚಿನ ಅನೇಕ ಹುದ್ದೆಗಳನ್ನು ಮಾರಾಟಮಾಡಿ, ಅಪಾರ ಧನಸಂಪತ್ತನ್ನು ಸಂಗ್ರಹಿಸಲಾಗಿತ್ತು. ಈ ಕಾರಣಗಳಿಂದ ಜಾನ್ ವೈಕ್ಲಿಫ್, ಜಾನ್ ಹಸ್, ಮಾರ್ಟಿನ್ ಲೂಥರ್ ಮೊದಲಾದವರು ಚರ್ಚಿನ ಅವ್ಯವಹಾರಗಳನ್ನು ವಿವಿಧ ಕಾಲಘಟ್ಟಗಳಲ್ಲಿ ಬಯಲಿಗೆಳೆಯಲು ಆರಂಭಿಸಿದರು.

**ಜಾನ್ ವೈಕ್ಲಿಫ್ (1324–84):** ಜಾನ್ ವೈಕ್ಲಿಫ್‌ನನ್ನು 'ಧಾರ್ಮಿಕ ಸುಧಾರಣೆಯ ಉಷಾತಾರೆ' (Morning Star) ಎಂದು ಕರೆಯುವರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದ ಈತನು ಚರ್ಚಿನಲ್ಲಿಯ ಅವ್ಯವಹಾರಗಳನ್ನು ಬಯಲಿಗೆಳೆದನು.

**ಜಾನ್ ಹಸ್ (1367–1415):** ಈತನು ಚರ್ಚಿನ ಅನೈತಿಕ ನಡವಳಿಕೆಗಳನ್ನು ಕಟುವಾಗಿ ಟೀಕಿಸಿದನು. ಚರ್ಚಿನ ನ್ಯಾಯಾಲಯವು ಅವನನ್ನು ಕರೆಯಿಸಿ, ಚರ್ಚಿನ ತತ್ವಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿತು. ಇದಕ್ಕೆ ಪ್ರತಿಯಾಗಿ "ನನ್ನ ಆತ್ಮಸಾಕ್ಷಿಯ ವಿರುದ್ಧವಾದ ಯಾವುದೇ ವಿಚಾರಗಳನ್ನು ನಾನು ಒಪ್ಪಿಕೊಳ್ಳಲಾರೆ" ಎಂದು ಜಾನ್ ಹಸ್ ಉತ್ತರಿಸಿದ. ಚರ್ಚ್ ಹಾಗೂ ಚರ್ಚ್ ನ್ಯಾಯಾಲಯವನ್ನು ವಿರೋಧಿಸಿದ್ದಕ್ಕಾಗಿ ಅವನನ್ನು ಅಪರಾಧಿಯೆಂದು ಸಾರಿ ಜೀವಂತವಾಗಿ ಸುಡಲಾಯಿತು!

© KTBS NOT TO BE REPUBLISHED

ಕ್ಯಾಥೋಲಿಕ್ ಧರ್ಮದಲ್ಲಿ ಬಿರುಕು ಉಂಟಾಗಲು ಮತ್ತೊಂದು ಪ್ರಮುಖ ಕಾರಣವೆಂದರೆ 'ಪಾಪಕ್ಷಮಾಪಣ ಪತ್ರ'ಗಳ ಮಾರಾಟ. ರೋಮ್ ಪಟ್ಟಣದಲ್ಲಿ ಸಂತ ಪೀಟರ ಚರ್ಚ್ ಪುನರ್‌ನಿರ್ಮಿಸಲು ಪೋಪ್ ಹತ್ತನೆಯ ಲಿಯೋ ಅವರಿಗೆ ಹಣದ ಅವಶ್ಯಕತೆಯಿತ್ತು. ಅದಕ್ಕಾಗಿ ಪಾಪಕ್ಷಮಾಪಣ ಪತ್ರಗಳನ್ನು ಖರೀದಿಸಿದವರು ಪಾಪವಿಮುಕ್ತಗೊಂಡು ಸ್ವರ್ಗಕ್ಕೆ ಹೋಗುತ್ತಾರೆ; ಇವು ಸ್ವರ್ಗದ ರಹದಾರಿ ಪತ್ರಗಳೆಂಬ ಕುರುಡು ನಂಬಿಕೆಗಳನ್ನು ಹುಟ್ಟಿಸಲಾಯಿತು. ಇವೆಲ್ಲವುಗಳನ್ನು ತಿಳಿದ ಮಾರ್ಟಿನ್ ಲೂಥರ್, ಪೋಪರು ಹಣಕ್ಕಾಗಿ ಜನರ ಪಾಪ ತೊಳೆಯುವುದಾದರೆ, ಪುಕ್ಕಟೆಯಾಗಿ ಏಕೆ ಮಾಡಬಾರದೆಂದು ಪ್ರಶ್ನಿಸಿದನು.

ಲಿಲ್ಲಿ : ಮಾರ್ಟಿನ್ ಲೂಥರ್ ಯಾರು?

ಜಾನ್ : ಮಾರ್ಟಿನ್ ಲೂಥರ್ ಜರ್ಮನಿಯಲ್ಲಿ ಧಾರ್ಮಿಕಸುಧಾರಣಾ ಚಳವಳಿಯನ್ನು ಆರಂಭಿಸಿದ ನಾಯಕ. ಈತನು ಸಂತ ಆಗಸ್ಟಿನ್ ಚರ್ಚಿನ ಪಾದ್ರಿಯಾಗಿದ್ದನು.


ಮಾರ್ಟಿನ್ ಲೂಥರ್

ರೋಮ್ ಪಟ್ಟಣದಲ್ಲಿ ಪೋಪ್ ಮತ್ತು ಪಾದ್ರಿಗಳ ವೈಭೋಗದ ಜೀವನ ಶೈಲಿಯನ್ನು ಗಮನಿಸಿದ ಲೂಥರ್ ಚರ್ಚಿನ ವಿರುದ್ಧ ತಿರುಗಿ ಬಿದ್ದನು. ಅವನು ಪಾಪಕ್ಷಮಾಪಣ ಪತ್ರಗಳನ್ನು ಕುರಿತು ತೊಂಬತ್ತೈದು ಹೇಳಿಕೆಗಳನ್ನು ಬರೆದು ವಿಟೆನ್‌ಬರ್ಗ್ ಚರ್ಚಿನ ಹೆಬ್ಬಾಗಿಲಿಗೆ ಹಚ್ಚಿ ಜನರಲ್ಲಿ ಜಾಗೃತಿ ಮೂಡಿಸಿದನು.

©KTBS NOT TO BE REPUBLISHED

ಲೂಥರ್ ಬೈಬಲನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದ್ದರಿಂದ ಅದು ಸಾಮಾನ್ಯ ಜನರೆಲ್ಲರಿಗೂ ದೊರೆಯುವಂತಾಯಿತು. ಚರ್ಚಿನ ಧಾರ್ಮಿಕ ಸೇವೆಗಳಲ್ಲಿ ಲ್ಯಾಟಿನ್ ಭಾಷೆಯ ಬದಲಾಗಿ ಜರ್ಮನ್ ಭಾಷೆ ಬಳಸಲಾರಂಭಿಸಿದನು.

ಪೋಪರು ಲೂಥರನನ್ನು ಶಿಕ್ಷೆಗೆ ಗುರಿಪಡಿಸಲು ರೋಮಿನ ರಾಜನಿಗೆ ಆಜ್ಞಾಪಿಸಿದರು. ಆದರೆ ಲೂಥರನಿಗೆ ಅನೇಕ ರಾಜರ ಬೆಂಬಲವಿದ್ದುದರಿಂದ ಯಾವುದೇ ಶಿಕ್ಷೆ ವಿಧಿಸಲು ಸಾಧ್ಯವಾಗಲಿಲ್ಲ. ಕ್ಯಾಥೊಲಿಕ್ ಚರ್ಚಿನವರು ಲೂಥರನ ಅನುಯಾಯಿಗಳನ್ನು "ಪ್ರಾಟೆಸ್ಟಂಟ್ಸ್" (ಪ್ರತಿಭಟನಾಕಾರರು) ಎಂದು ಕರೆದರು. ಕಾಲಕ್ರಮೇಣ ಪ್ರಾಟೆಸ್ಟಂಟರು ಕ್ರೈಸ್ತ ಧರ್ಮದ ಒಂದು ಪಂಗಡವಾಗಿ ವಿಶ್ವದ ಎಲ್ಲಾ ದೇಶಗಳಲ್ಲಿ ಹರಡಿದರು.

ಪೀಟರ್ : ಇದರಿಂದ ಕ್ಯಾಥೊಲಿಕ್ ಚರ್ಚಿನ ಮೇಲೆ ಯಾವ ಪರಿಣಾಮವಾಯಿತು?

ಜಾನ್ : ಕ್ಯಾಥೊಲಿಕ್ ಚರ್ಚಿನ ಬಗ್ಗೆ ಜನರಲ್ಲಿ ಅನುಮಾನಗಳುಂಟಾದವು. ಜನರು ಚರ್ಚಿನಿಂದ ದೂರ ಸರಿಯಲಾರಂಭಿಸಿದರು. ರೋಮನ್ ಕ್ಯಾಥೊಲಿಕರು ತಮ್ಮ ಚರ್ಚಿನಲ್ಲಿ ಸುಧಾರಣೆಗಳು ಅವಶ್ಯವೆಂಬುದನ್ನು ಮನಗಂಡರು. ಈ

ಹಿನ್ನೆಲೆಯಲ್ಲಿ ಕ್ಯಾಥೊಲಿಕ್ ಚರ್ಚನ್ನು ಶುದ್ಧೀಕರಿಸಿ ಅದನ್ನು ಬಲಪಡಿಸಲು 'ಪ್ರತಿಸುಧಾರಣೆ' ಎಂಬ ಚಳವಳಿ ಪ್ರಾರಂಭವಾಯಿತು. ಈ ಮೂಲಕ ಪ್ರಾಟೆಸ್ಟಂಟ್ ಪಂಗಡದ ಪ್ರಸಾರವನ್ನು ನಿಯಂತ್ರಿಸುವುದು ಅದರ ಮತ್ತೊಂದು ಉದ್ದೇಶವಾಗಿತ್ತು.

ಲಿಲ್ಲಿ : 'ಪ್ರತಿಸುಧಾರಣೆ' ಎಂದರೇನು?

ಜಾನ್ : ತನ್ನ ಆಂತರಿಕ ಸುಧಾರಣೆಗಾಗಿ ಕ್ಯಾಥೊಲಿಕ್ ಚರ್ಚ್ ನಡೆಸಿದ ಎಲ್ಲ ಪ್ರಯತ್ನಗಳನ್ನು ಪ್ರತಿಸುಧಾರಣೆ ಎನ್ನುವರು.

ಲಿಲ್ಲಿ : ಪ್ರತಿಸುಧಾರಣಾ ಚಳವಳಿಯ ನಾಯಕನಾರು?

ಜಾನ್ : ಪ್ರತಿಸುಧಾರಣಾ ಚಳವಳಿಯ ನಾಯಕ ಇಗ್ನೇಶಿಯಸ್ ಲಯೋಲಾ. ಈತನು ಜೀಸಸ್ ಸಂಘ [1541] ಸ್ಥಾಪಿಸಿದ.

**ಇಗ್ನೇಶಿಯಸ್ ಲಯೋಲಾ:** ಲಯೋಲಾ ಸ್ಪೇನಿನ ಓರ್ವ ಸೇನಾನಿ. ಪ್ರಾಟೆಸ್ಟಂಟ್ ಚರ್ಚ್ ಜನಪ್ರಿಯವಾಗುವುದನ್ನು ಮತ್ತು ಕ್ಯಾಥೊಲಿಕ್ ಚರ್ಚಿನ ಜನಪ್ರಿಯತೆ ಕುಗ್ಗುವುದನ್ನು ಅರಿತಿದ್ದನು. ಪ್ರಾಮಾಣಿಕ ಹಾಗೂ ಉತ್ಸಾಹಶಾಲಿಯಾದ ಲಯೋಲಾ ಜನರ ನಂಬಿಕೆಯನ್ನು ಪುನರ್‌ಸ್ಥಾಪಿಸಲು ಶ್ರಮಿಸಿದನು. ಕ್ಯಾಥೊಲಿಕ್ ಉಪದೇಶ, ಪ್ರಸಾರ, ವಿದ್ಯಾಪ್ರಸಾರ ಮುಂತಾದವು 'ಜೀಸಸ್ ಸಂಘ'ದ ಅನುಯಾಯಿಗಳಾದ ಜೆಸ್ಯುಯಿಟರ ಕೆಲಸವೆಂದು ಸಾರಿದ.



ಇಗ್ನೇಶಿಯಸ್ ಲಯೋಲಾ

© KTBS NOT TO BE REPUBLISHED

ಜೀಸಸ್ ಸಂಘದ ಸದಸ್ಯರನ್ನು ಜೆಸ್ಯುಯಿಟರು ಎಂದು ಕರೆದರು. ಇವರು ಮತಪ್ರಚಾರದೊಂದಿಗೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ವಿಸ್ತರಣೆಯ ಕಡೆಗೆ ಗಮನ ಹರಿಸಿದರು. ಇವರ ದುಡಿಮೆಯ ಫಲವಾಗಿ ಕ್ಯಾಥೊಲಿಕ್ ಚರ್ಚ್ ಮರಳಿ ಜನರ ವಿಶ್ವಾಸಗಳಿಸಿತು.

ಪೀಟರ್ : ಧಾರ್ಮಿಕ ಸುಧಾರಣಾ ಚಳವಳಿಯ ಪರಿಣಾಮಗಳೇನು?

ಜಾನ್ : ಕ್ರೈಸ್ತಮತದ ಅನುಯಾಯಿಗಳು ಕ್ಯಾಥೊಲಿಕರು ಮತ್ತು ಪ್ರಾಟೆಸ್ಟಂಟರು ಎಂಬ ಎರಡು ಮುಖ್ಯ ಪಂಗಡಗಳಾಗಿ ವಿಭಜನೆಯಾದರು. ರೋಮನ್ ಕ್ಯಾಥೊಲಿಕ್ ಚರ್ಚಿನಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಕೊನೆಗೊಂಡವು. ಅಧಿಕಾರಕ್ಕಾಗಿ ಪೋಪ್ ಮತ್ತು ರಾಜರ ನಡುವಿನ ಸಂಘರ್ಷದಲ್ಲಿ ಕ್ರಮೇಣ ರಾಜರು ಪ್ರಬಲರಾದರು.

**ಚಟುವಟಿಕೆ:** ಒಂದು ಚರ್ಚಿಗೆ ಭೇಟಿ ನೀಡಿರಿ, ಅಲ್ಲಿನ ಚಟುವಟಿಕೆಗಳನ್ನು ಕುರಿತು ಪ್ರಬಂಧ ಬರೆಯಿರಿ.

## 2.3 ಭೌಗೋಳಿಕ ಅನ್ವೇಷಣೆಗಳು

ನಾಗರತ್ನಾ : ಭೌಗೋಳಿಕ ಅನ್ವೇಷಣೆಗಳು ಎಂದರೇನು?

ಗುರುಗಳು : 15ನೆಯ ಶತಮಾನದವರೆಗೆ ಯೂರೋಪಿಯನ್ನರಿಗೆ ವಿಶ್ವದ ಎಲ್ಲ ಪ್ರದೇಶಗಳ ಪರಿಚಯವಿರಲಿಲ್ಲ. 'ಭೂಮಿ ಚಪ್ಪಟೆಯಾಗಿದೆ' ಎಂಬ ನಂಬಿಕೆಯಿಂದ ವ್ಯಾಪಾರವೆಲ್ಲ ಯೂರೋಪಿನ ತೀರ ಪ್ರದೇಶದವರೆಗೆ ಮಾತ್ರವೇ ನಡೆಯುತ್ತಿತ್ತು. ಕ್ರಮೇಣ ಯುರೋಪಿಯನ್ನರು ತಮ್ಮ ಕುತೂಹಲ, ವ್ಯಾಪಾರಿ ಹಾಗೂ ಸಾಹಸಿ ಪ್ರವೃತ್ತಿಗಳಿಂದ ಹೊಸ ಭೂಭಾಗಗಳನ್ನು ಅನ್ವೇಷಣೆ ಮಾಡಿದರು. ಇದನ್ನು ಭೌಗೋಳಿಕ ಅನ್ವೇಷಣೆಗಳು ಎಂದು ಕರೆಯುವರು.

> ಚರ್ಚ್ ನಾಯಕರು ಭೂಮಿಯು ಚಪ್ಪಟೆಯಾಗಿದೆ, ಅದರ ಅಂಚಿನಲ್ಲಿ ಪ್ರಪಾತವಿದೆ ಎಂಬುದಾಗಿ ಏನೇನೋ ನಂಬಿದ್ದರು. ಹೀಗಾಗಿ ಸಮುದ್ರಯಾನ ಕೈಗೊಳ್ಳಲು ನಾವಿಕರು ಅಂಜುತ್ತಿದ್ದರು.

©KTBS NOT TO BE REPUBLISHED

ಸಂತೋಷ್ : ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳಾವುವು?

ಗುರುಗಳು : ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು ಈ ರೀತಿ ಇವೆ.

- **ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ:** ಸಾ.ಶ.1453ರಲ್ಲಿ ಟರ್ಕರು ಕಾನ್‌ಸ್ಟಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರದ ಮೂಲಕ ನಡೆಯುತ್ತಿದ್ದ ಯುರೋಪಿಯನ್ನರ ವ್ಯಾಪಾರಕ್ಕೆ ಅಡ್ಡಿಯುಂಟಾಯಿತು. ಆದುದರಿಂದ ಯುರೋಪಿಯನ್ನರು ಪೂರ್ವದ ಏಷ್ಯ ದೇಶಗಳಿಗೆ ಹೊಸ ಸಮುದ್ರ ಮಾರ್ಗ ಕಂಡುಹಿಡಿಯುವುದು ಅನಿವಾರ್ಯವಾಯಿತು.

- **ಮಾರ್ಕ್ ಪೋಲೊವಿನ ವರದಿ:** ಏಷ್ಯದ ದೇಶಗಳಿಗೆ (ಭಾರತ, ಚೀನ) ಭೇಟಿ ನೀಡಿದ ಮಾರ್ಕ್ ಪೋಲೊ ತನ್ನ ವರದಿಯಲ್ಲಿ ಏಷ್ಯದ ದೇಶಗಳು ಅಪಾರ ಸಂಪತ್ತಿನಿಂದ ಕೂಡಿವೆಯೆಂಬುದಾಗಿ ವಿವರಿಸಿದ್ದನು. ಅವನ ವರದಿಯು ಯುರೋಪಿನ ವರ್ತಕರಲ್ಲಿ ಆಸಕ್ತಿ ಕೆರಳಿಸಿತು.

• **ಏಷ್ಯದ ಪದಾರ್ಥಗಳಿಗೆ ಬೇಡಿಕೆ:** ಏಷ್ಯದ ದೇಶಗಳ ಸರಕುಗಳು ಮತ್ತು ಸಾಂಬಾರ ಪದಾರ್ಥಗಳಿಗೆ ಯುರೋಪಿನಲ್ಲಿ ಭಾರಿ ಬೇಡಿಕೆಯಿತ್ತು.

ಯುರೋಪಿನಲ್ಲಿ ಬೇಡಿಕೆಯಿದ್ದ ಭಾರತದ ವಸ್ತುಗಳೆಂದರೆ ಕೇಸರಿ, ಸಾಗುವಾನಿ, ಹತ್ತಿ ಬಟ್ಟೆ, ಹುಣಸೆಹಣ್ಣು, ಕರಿಮೆಣಸು, ಲವಂಗ, ದಾಲ್ಚಿನ್ನಿ, ಶ್ರೀಗಂಧ, ಕಸ್ತೂರಿ, ಏಲಕ್ಕಿ, ವಜ್ರ ಮತ್ತು ಜಾಯಪತ್ರೆ.

• **ವೈಜ್ಞಾನಿಕ ಆವಿಷ್ಕಾರ:** ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ನಕ್ಷತ್ರೋನ್ನತಿ ಮಾಪಕ (ಆಸ್ಟ್ರೋಲ್ಯಾಬ್), ನಕ್ಷೆಗಳು ಮತ್ತು ಕ್ಯಾರವೆಲ್ ಎಂಬ ಬೃಹತ್ ಹಾಯಿಹಡಗುಗಳು ಸಮುದ್ರಯಾನದಲ್ಲಿ ತೊಡಗಿದ ನಾವಿಕರಿಗೆ ವರವಾಗಿ ಪರಿಣಮಿಸಿದವು.



*ದಿಕ್ಸೂಚಿ*



*ನಕ್ಷತ್ರೋನ್ನತಿ ಮಾಪಕ*



*ಬೃಹತ್ ಹಾಯಿಹಡಗು*

NOT TO BE REPUBLISHED

**ಚಟುವಟಿಕೆ:** ನಾವಿಕರಿಗೆ ದಿಕ್ಸೂಚಿ ಮತ್ತು ನಕ್ಷತ್ರೋನ್ನತಿ ಮಾಪಕಗಳು ವರವಾಗಿ ಹೇಗೆ ಪರಿಣಮಿಸಿದವು? ತಿಳಿದುಕೊಳ್ಳಿರಿ.

• **ಮತೀಯ ಪ್ರೇರಣೆ :** ಕ್ರೈಸ್ತ ಮತಪ್ರಚಾರಕರು ಮತಪ್ರಚಾರಕ್ಕಾಗಿ ಏಷ್ಯ ಮತ್ತು ಆಫ್ರಿಕದತ್ತ ದೃಷ್ಟಿ ಹಾಯಿಸಿದರು.

ಜಹನಾರಾ : ಸಮುದ್ರಯಾನದಂತಹ ಸಾಹಸ ಕಾರ್ಯವನ್ನು ಮೊದಲು ಕೈಗೊಂಡವರು ಯಾರು?




*ಭೌಗೋಳಿಕ ಅನ್ವೇಷಣೆಗಳು*

NOT TO BE REPUBLISHED @KTBS

**ಗುರುಗಳು** : ಸಮುದ್ರಯಾನ ಕಾರ್ಯವನ್ನು ಮೊದಲು ಕೈಗೊಂಡವರು ಪೋರ್ಚುಗೀಸರು. ಭಾರತ ಮತ್ತು ಚೀನ ದೇಶಗಳಿಗೆ ಸಾಗರಮಾರ್ಗವೊಂದನ್ನು ಕಂಡು ಹಿಡಿಯುವುದು ಪೋರ್ಚುಗೀಸ್ ರಾಜಕುಮಾರ ಹೆನ್ರಿಯ ಜೀವನದ ಹೆಬ್ಬಯಕೆಯಾಗಿತ್ತು. ಅದಕ್ಕಾಗಿ ನೌಕಾಶಾಲೆಯೊಂದನ್ನು ತೆರೆದ. ಇದರಿಂದಾಗಿ ಆತನು 'ಹೆನ್ರಿ ದ ನ್ಯಾವಿಗೇಟರ್' ಎಂದೇ ಜನಪ್ರಿಯನಾಗಿದ್ದನು. ಆತನ ಪ್ರೋತ್ಸಾಹ ಅನ್ವೇಷಣೆಗಳಿಗೆ ಪ್ರೇರಣೆ ನೀಡಿತು.

ಹೆನ್ರಿಯು 'ಸ್ಕೂಲ್ ಆಫ್ ನಾವಿಗೇಶನ್' ಎಂಬ ಶಾಲೆಯ ಸ್ಥಾಪಕ. ಪ್ರತಿವರ್ಷ ಆಫ್ರಿಕದ ಪಶ್ಚಿಮ ಕರಾವಳಿ ತೀರದುದ್ದಕ್ಕೂ ಈ ಶಾಲೆಯ ವತಿಯಿಂದ ಸಮುದ್ರಯಾನವನ್ನು ಕೈಗೊಳ್ಳಲಾಗುತ್ತಿತ್ತು. 16ನೆಯ ಶತಮಾನದ ಆರಂಭದ ವೇಳೆಗೆ ನಾವಿಕರು ಮಾರುತಗಳು, ಸಮುದ್ರದ ಅಲೆಗಳು ಮತ್ತು ಏರಿಳಿತಗಳ ಬಗ್ಗೆ ಸಾಕಷ್ಟು ಮಾಹಿತಿ ಪಡೆದಿದ್ದರು. ಯೂರೋಪಿನ ಹಲವಾರು ಪ್ರಮುಖ ನಾವಿಕರು, ಖಗೋಳತಜ್ಞರು ಮತ್ತು ಭೂಗೋಳತಜ್ಞರು ಈ ಶಾಲೆಯ ಮಾಹಿತಿ ಸೃಷ್ಟಿಸುವ ಪ್ರಕ್ರಿಯೆಯ ಭಾಗವಾಗಿದ್ದರು.

**ರಮೇಶ್** : ನಾವಿಕರು ಯಾವ ಯಾವ ಭೂಭಾಗಗಳನ್ನು ಶೋಧ ಮಾಡಿದರು?

**ಗುರುಗಳು** : • ಬಾರ್ತಲೋಮಿಯೊ ಡಾಯಸ್ ಎಂಬ ಪೋರ್ಚುಗೀಸ್ ನಾವಿಕ ರಾಜಾಶ್ರಯದಲ್ಲಿ ಸಮುದ್ರಯಾನ ಮಾಡಿ ಆಫ್ರಿಕದ ದಕ್ಷಿಣದ ತುತ್ತ ತುದಿಯನ್ನು (ಕೇಪ್) ತಲುಪಿದ (1488). ಆ ಪ್ರದೇಶದಲ್ಲಿ ಅವನ ಹಡಗುಗಳು ಮಾರುತಗಳ ಹೊಡೆತಕ್ಕೆ ತುತ್ತಾದವು. ಆದುದರಿಂದ ಆ ಪ್ರದೇಶವನ್ನು 'ಕೇಫ್ ಆಫ್ ಸ್ಟಾರ್ಮ್' (ಬಿರುಗಾಳಿಯ ಭೂಶಿರ) ಎಂದು ಕರೆದನು. ಮುಂದಿನ ಯಾನಕ್ಕೆ ಭರವಸೆ ಮೂಡಿಸಿದ್ದರಿಂದ ರಾಜ 2ನೇ ಜಾನನು ಆಫ್ರಿಕದ ದಕ್ಷಿಣ ತುದಿಯನ್ನು 'ಬಿರುಗಾಳಿಯ ಭೂಶಿರ'ವಲ್ಲ ಅದು 'ಭರವಸೆಯ ಭೂಶಿರ' (ಕೇಫ್ ಆಫ್ ಗುಡ್ ಹೋಪ್) ಎಂದು ಕರೆದನು.

• **ವಾಸ್ಕೋಡಗಾಮ:** ಮತ್ತೋರ್ವ ಪೋರ್ಚುಗೀಸ್ ನಾವಿಕನಾದ ವಾಸ್ಕೋಡಗಾಮನು ಡಾಯಸನ ಮಾರ್ಗದಲ್ಲಿ ಹೊರಟು "ಗುಡ್‌ಹೋಪ್ ಭೂಶಿರ" ತಲುಪಿದ. ತರುವಾಯ ಆಫ್ರಿಕದ ಪೂರ್ವತೀರ ಮೆಲಿಂದ ದ್ವೀಪವನ್ನು ತಲುಪಿದನು. ಅಲ್ಲಿದ್ದ ಗುಜರಾತಿ ವ್ಯಾಪಾರಿಯ ಸಹಾಯದಿಂದ ಹಿಂದೂ ಮಹಾಸಾಗರ ಮತ್ತು ಅರಬ್ಬೀ ಸಮುದ್ರಗಳನ್ನು ದಾಟಿ, ಭಾರತದ ಪಶ್ಚಿಮ ತೀರದ ಕಲ್ಲಿಕೋಟೆಯನ್ನು ತಲುಪಿದ (1498). ಹೀಗೆ ಭಾರತಕ್ಕೆ ಹೊಸ ಜಲಮಾರ್ಗ ಅನ್ವೇಷಣೆಯಾಯಿತು. ವಾಸ್ಕೋಡಗಾಮನು ಭಾರತದಿಂದ ಹಿಂದಿರುಗುವಾಗ


ವಾಸ್ಕೋಡಗಾಮ

© KTBS NOT TO BE REPUBLISHED

ತನ್ನ ಸಮುದ್ರಯಾನದ ಒಟ್ಟು ವೆಚ್ಚದ ಅರವತ್ತು ಪಟ್ಟು ಮೌಲ್ಯದ ಸರಕುಗಳನ್ನು ಭಾರತದಿಂದ ಕೊಂಡೊಯ್ದನು.

ವಾಸ್ಕೋಡಗಾಮನು ನಿಜವಾಗಿ ಬಂದು ಇಳಿದಿದ್ದು ಕಲ್ಲಿಕೋಟೆಯಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ 'ಕಾಪ್ಪಾಡ್' ಎಂಬ ಸ್ಥಳಕ್ಕೆ. ಆಗ ಕಲ್ಲಿಕೋಟೆಯನ್ನು ಜಾಮೋರಿನ್ ದೊರೆಗಳು ಆಳುತ್ತಿದ್ದರು.


ಕ್ರಿಸ್ಟೋಫರ್ ಕೊಲಂಬಸ್

• ಸ್ಪೇನ್ ದೇಶದ ನಾವಿಕನಾಗಿದ್ದ **ಕ್ರಿಸ್ಟೋಫರ್ ಕೊಲಂಬಸ್** 'ಭೂಮಿ ದುಂಡಾಗಿದೆ' ಎಂಬ ದೃಢ ನಂಬಿಕೆಯೊಂದಿಗೆ ಪಶ್ಚಿಮ ಮಾರ್ಗವಾಗಿ ಸಮುದ್ರಯಾನ ಕೈಗೊಂಡ. ಸಮುದ್ರಯಾನ ಮಾಡಲು ಸ್ಪೇನ್ ದೊರೆ ಫರ್ಡಿನೆಂಡ್ ಮತ್ತು ರಾಣಿ ಇಸಬೆಲ್ಲರ ಸಹಾಯ ಪಡೆದನು. ಅಟ್ಲಾಂಟಿಕ್ ಸಾಗರವನ್ನು ದಾಟಿ ಬಹಮಸ್ ದ್ವೀಪ ತಲುಪಿದ. ಅದನ್ನೇ "ಇಂಡಿಯಾ" ಎಂದು ಭಾವಿಸಿ, ಅಲ್ಲಿಯ ಜನರನ್ನು "ರೆಡ್ ಇಂಡಿಯನ್ಸ್" ಎಂದು ಕರೆದನು. ಇದೇ ವೆಸ್ಟ್ ಇಂಡಿಸ್ ದ್ವೀಪ ಸಮೂಹವಾಗಿತ್ತು, ಆಶ್ಚರ್ಯವೆಂದರೆ ಅವನು ಸಾಯುವವರೆಗೂ ತಾನೊಂದು ಹೊಸ ಭೂಭಾಗವನ್ನು ಶೋಧಿಸಿದ್ದೇನೆಂದು ತಿಳಿದಿರಲಿಲ್ಲ.

© KTBS NOT TO BE REPUBLISHED

**ಕ್ರಿಸ್ಟೋಫರ್ ಕೊಲಂಬಸ್ :** ಈತನು ಅಟ್ಲಾಂಟಿಕ್ ಸಾಗರ ದಾಟಿ ಪಶ್ಚಿಮಾಭಿಮುಖವಾಗಿ ಭಾರತ ತಲುಪುವ ಗುರಿಯನ್ನಿಟ್ಟುಕೊಂಡಿದ್ದನು. ಮೂರು ಹಡಗುಗಳಲ್ಲಿ 88 ಜನ ನಾವಿಕರೊಡನೆ ಕೊಲಂಬಸ್ 1492 ಆಗಸ್ಟ್‌ನಲ್ಲಿ ಪಾಲೋಸ್ ಬಂದರಿನಿಂದ ಅಟ್ಲಾಂಟಿಕ್ ಸಾಗರದತ್ತ ಸಮುದ್ರಯಾನ ಆರಂಭಿಸಿದ. ಸುಮಾರು ಎರಡು ತಿಂಗಳ ಪ್ರಯಾಣ ಮಾಡಿದರೂ ಭೂಮಿ ಕಾಣಲಿಲ್ಲ, ಅವನ ಜೊತೆಗಿದ್ದ ನಾವಿಕರು ತಿರುಗಿ ಬಿದ್ದರು. ಇನ್ನೂ ಮೂರು ದಿನಗಳಲ್ಲಿ ಯಾರು ಮೊದಲು ಭೂಮಿಯನ್ನು ಕಾಣುವರೋ ಅವರಿಗೆ ಒಂದು ವರ್ಷ ಸಂಬಳದ ಜೊತೆಗೆ ವಿಶೇಷ ಬಹುಮಾನ ಕೊಡಿಸುವುದಾಗಿ ಹೇಳಿ, ಕೊಲಂಬಸ್ ಅವರನ್ನು ಹುರಿದುಂಬಿಸಿದನು. ಅದರಿಂದ ಸ್ಫೂರ್ತಿಗೊಂಡ ನಾವಿಕರು ಸಮುದ್ರಯಾನ ಮುಂದುವರಿಸಿ, ಕೊನೆಗೆ 1492 ಅಕ್ಟೋಬರ್ 12ರಂದು ಬೆಳಗಿನ ಸಮಯಕ್ಕೆ ಭೂಮಿಯನ್ನು ಕಂಡರು.

• **ದಕ್ಷಿಣ ಅಮೆರಿಕದ ಅನ್ವೇಷಣೆ:** ಕ್ಯಾಪ್ಟನ್ ಪೆಡ್ರೊ ಕೆಬ್ರಾಲ್ ಎಂಬಾತನ ನಾಯಕತ್ವದಲ್ಲಿ ಪೋರ್ಚುಗೀಸ್ ನೌಕಾಪಡೆಯೊಂದು ಭಾರತದತ್ತ ಹೊರಟಿತು. ಆದರೆ ಭಾರೀ ಗಾಳಿಯ ಹೊಡೆತಕ್ಕೆ ಸಿಕ್ಕ ನೌಕೆಗಳು ದಾರಿತಪ್ಪಿ ಪಶ್ಚಿಮದತ್ತ ಸಾಗಿ ದಕ್ಷಿಣ ಅಮೆರಿಕದ ಪೂರ್ವ ಕರಾವಳಿಯನ್ನು ತಲುಪಿದವು. ಹೀಗೆ ಕೆಬ್ರಾಲ್ ಆಕಸ್ಮಿಕವಾಗಿ ದಕ್ಷಿಣ ಅಮೆರಿಕದ ಈಗಿನ ಬ್ರೆಜಿಲ್ ಕಂಡುಹಿಡಿಯುವಂತಾಯಿತು.

ಇಟಲಿಯ ಅಮೆರಿಗೊ ವೆಸ್ಪುಸಿಯು ಕೊಲಂಬಸನ ಮಾರ್ಗವನ್ನೇ ಅನುಸರಿಸಿ ಹೊರಟು ದಕ್ಷಿಣ ಅಮೆರಿಕದ ಭೂಖಂಡವನ್ನು ತಲುಪಿದನು. ಕೊಲಂಬಸ್ ಕಂಡುಹಿಡಿದ ಭೂಭಾಗ ಭಾರತವಲ್ಲ ಅದೊಂದು 'ಹೊಸ ಜಗತ್ತು' ಎಂಬುದಾಗಿ ಜಗತ್ತಿಗೆ ಪರಿಚಯಿಸಿದನು. ಆದ್ದರಿಂದ ಈ ಹೊಸಜಗತ್ತಿಗೆ ವೆಸ್ಪುಸಿಯ ನೆನಪಾಗಿ 'ಅಮೆರಿಕ' ಎಂದು ಹೆಸರಿಸುವಂತೆ ಜರ್ಮನ್ ಭೂಗೋಳಶಾಸ್ತ್ರಜ್ಞ ಮಾರ್ಟಿನ್ ವಾಲ್ಡ್ ಸೀಮುಲ್ಲರ್ ಸಲಹೆ ಮಾಡಿದನು. ಅದೇ ಹೆಸರು ಮಾನ್ಯಗೊಂಡು ಅಂಗೀಕಾರವಾಯಿತು.

• **ಫರ್ಡಿನಾಂಡ್ ಮೆಗಲ್ಲನ್:** ಈತ ಓರ್ವ ಮಹಾನ್ ಪೋರ್ಚುಗೀಸ್ ಸಾಹಸೀ ನಾವಿಕ. ಪ್ರಪ್ರಥಮವಾಗಿ ಭೂ ಪರ್ಯಟನಾ ನೌಕಾಯಾನ ಕೈಗೊಂಡ ಶ್ರೇಯಸ್ಸು ಈತನದು. ಸ್ಪೇನಿನಿಂದ ಐದು ಹಾಯಿಹಡಗುಗಳಲ್ಲಿ 267 ಸಹಚರರೊಡನೆ ಹೊರಟ (1519) ಮೆಗಲ್ಲನ್, ದಕ್ಷಿಣ ಅಮೆರಿಕದ ದಕ್ಷಿಣ ತುದಿಯನ್ನು ಬಳಸಿ, ಶಾಂತ ಮಹಾಸಾಗರವನ್ನು ದಾಟಿ ಫಿಲಿಫೈನ್ಸ್ ತಲುಪಿದನು. ಆದರೆ ಅಲ್ಲಿ ಸ್ಥಳೀಯರೊಡನೆ ನಡೆದ ಕದನದಲ್ಲಿ ಮೆಗಲ್ಲನ್ ಮರಣಹೊಂದಿದನು. ಅವನ ಉಳಿದ ಸಹಚರರು 'ವಿಕ್ಟೋರಿಯಾ' ಎಂಬ ಹಡಗಿನಲ್ಲಿ ಸ್ವದೇಶಕ್ಕೆ ಮರಳಿದರು (1522). ಇದರಿಂದಾಗಿ 'ಭೂಮಿ ದುಂಡಾಗಿದೆ' ಎಂಬುದು ಸ್ಪಷ್ಟವಾಯಿತು.



*ಫರ್ಡಿನಾಂಡ್ ಮೆಗಲ್ಲನ್*

ಫರ್ಡಿನಾಂಡ್ ಮೆಗಲ್ಲನ್ 'ಪ್ರಪಂಚವು ದುಂಡಾಗಿದೆ' ಎಂದು ಭಾವಿಸಿದ್ದನು. ಇವನು ಪಶ್ಚಿಮಾಭಿಮುಖವಾಗಿ ಹೊರಟು ಪೂರ್ವ ದೇಶಗಳಿಗೆ ಮಾರ್ಗ ಕಂಡುಹಿಡಿಯಲು ಬಯಸಿದ. ಅಟ್ಲಾಂಟಿಕ್ ಸಾಗರದ ಮೂಲಕ ಪ್ರಯಾಣ ಮಾಡಿ ದಕ್ಷಿಣ ಅಮೆರಿಕದ ದಕ್ಷಿಣಕ್ಕಿರುವ ಕಿರಿದಾದ ಜಲಸಂಧಿಯನ್ನು ದಾಟಿ ಶಾಂತವಾದ ಸಾಗರವನ್ನು ಪ್ರವೇಶಿಸಿದ. ಮೆಗಲ್ಲನ್ ದಾಟಿಹೋದ ಜಲಸಂಧಿಯನ್ನು 'ಮೆಗಲ್ಲನ್ ಜಲಸಂಧಿ'ಯೆಂದೂ ಸಾಗರವನ್ನು ಪೆಸಿಫಿಕ್ (ಶಾಂತ) ಮಹಾಸಾಗರ ಎಂದೂ ಮುಂದೆ ಕರೆಯಲಾಯಿತು.

ಮೆಗಲ್ಲನ್ ಮತ್ತು ಅವನ ಸಂಗಡಿಗರಲ್ಲಿ ಕೆಲವರು ಫಿಲಿಪೈನ್ಸ್‌ನಲ್ಲಿ ಸ್ಥಳೀಯರೊಂದಿಗೆ ನಡೆದ ಹೋರಾಟದಲ್ಲಿ ಸಾವನ್ನಪ್ಪಿದರು. ಉಳಿದವರು 'ವಿಕ್ಟೋರಿಯಾ' ಎಂಬ ಹಡಗಿನಲ್ಲಿ 1522ರಲ್ಲಿ ಸ್ಪೇನ್ ತಲುಪಿದರು. ಭೂಪ್ರದಕ್ಷಿಣೆ ಮಾಡಿದ ಮೊದಲ ಹಡಗು 'ವಿಕ್ಟೋರಿಯಾ' ಎನ್ನಬಹುದು.

©KTBS NOT TO BE REPUBLISHED

ಮೈಕಲ್ : ಭೌಗೋಳಿಕ ಅನ್ವೇಷಣೆಯಿಂದಾದ ಪರಿಣಾಮಗಳೇನು?

ಗುರುಗಳು : ಭೌಗೋಳಿಕ ಅನ್ವೇಷಣೆಗಳು ಕೇವಲ ಯುರೋಪಿನ ನಾಗರಿಕತೆ–ಯ ಮೇಲೆ ಮಾತ್ರವಲ್ಲದೆ ಏಷ್ಯ, ಆಫ್ರಿಕ ಹಾಗೂ ಅಮೆರಿಕದ ಜನತೆ ಹಾಗೂ ಸಂಸ್ಕೃತಿಗಳ ಮೇಲೂ ಗಾಢ ಪ್ರಭಾವ ಬೀರಿದವು.

- **ವಾಣಿಜ್ಯದ ವಿಸ್ತರಣೆ:** ಹೊಸತಾಗಿ ಶೋಧಿಸಲಾದ ಭೂಪ್ರದೇಶಗಳನ್ನು ಯುರೋಪಿಯನ್ನರು ತಮ್ಮ ವಾಣಿಜ್ಯ ವಸಾಹತುಗಳನ್ನಾಗಿ ಪರಿವರ್ತಿಸಿಕೊಂಡರು. ಇದರಿಂದ ಜಾಗತಿಕ ವ್ಯಾಪಾರ ವ್ಯಾಪಕವಾಗಿ ವಿಸ್ತರಿಸಿತು. ಏಷ್ಯದ ಸಾಮಗ್ರಿಗಳು ಯೂರೋಪಿನಲ್ಲಿ ವಿಶಾಲ ಮಾರುಕಟ್ಟೆ ಗಳಿಸಿದವು. ಈ ವ್ಯಾಪಾರ ಚಟುವಟಿಕೆಗಳಿಂದ ಬರುತ್ತಿದ್ದ ಲಾಭವೆಲ್ಲವೂ ಐರೋಪ್ಯರದಾಗಿತ್ತು.

- **ಗುಲಾಮರ ವ್ಯಾಪಾರ:** ಯುರೋಪಿಯನ್ನರು ವೆಸ್ಟ್ ಇಂಡೀಸ್, ಮೆಕ್ಸಿಕೊ, ಪೆರು ಹಾಗೂ ಬ್ರೆಜಿಲ್ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು. ಕ್ರಮೇಣ ಗುಲಾಮರನ್ನು ಸರಕುಗಳಂತೆ ಮಾರಲಾಯಿತು. ಮುಂದೆ 'ಗುಲಾಮರ ವ್ಯಾಪಾರ'ದ ದಂಧೆ ಅಮಾನವೀಯ ಹಂತವನ್ನು ತಲುಪಿತು. ಗುಲಾಮರನ್ನು ಕಠಿಣವಾಗಿ ದುಡಿಸಿ ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿತ್ತು.

- **ಕ್ರಿಶ್ಚಿಯನ್ ಮಿಶನರಿಗಳು:** ಹೊಸ ಭೂಭಾಗಗಳ ಮೂಲನಿವಾಸಿಗಳನ್ನು ಕ್ರಿಶ್ಚಿಯನ್ನರಾಗಿ ಮತಾಂತರಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದರು. ವಸಾಹತುಶಾಹಿ ವಿಸ್ತರಣೆಯಲ್ಲಿ ಪರೋಕ್ಷವಾಗಿ ಕೈಜೋಡಿಸುವ ಕಾರ್ಯವನ್ನು ಕ್ರೈಸ್ತ ಮಿಶನರಿಗಳು ಮಾಡಿದರು.

- **ರಾಜಕೀಯ ಪರಿಣಾಮ:** ಐರೋಪ್ಯ ದೇಶಗಳೊಳಗೆ ವಸಾಹತುಗಳ ಸ್ವಾಧೀನಕ್ಕಾಗಿ ಮತ್ತು ಅಲ್ಲಿನ ಸಂಪತ್ತಿಗಾಗಿ ತೀವ್ರ ಪೈಪೋಟಿ ನಡೆಯಿತು. ಯುರೋಪಿನ ದೇಶಗಳು ಏಷ್ಯ, ಆಫ್ರಿಕ ಮತ್ತು ಅಮೆರಿಕ ಖಂಡಗಳಲ್ಲಿ ತಮ್ಮ ವಸಾಹತು ನೆಲೆಗಳನ್ನು ಸ್ಥಾಪಿಸಿಕೊಂಡವು.

> ವಸಾಹತು ಎಂದರೆ ಒಂದು ದೇಶ ಮತ್ತೊಂದು ದೇಶದ ಭೂಭಾಗದ ಮೇಲೆ ಹೊಂದಿರುವ ರಾಜಕೀಯ ಹಾಗೂ ಆರ್ಥಿಕ ನಿಯಂತ್ರಣವಾಗಿದೆ. ಉದಾ: ಸ್ವತಂತ್ರ ಪೂರ್ವದಲ್ಲಿ ಭಾರತ ಇಂಗ್ಲೆಂಡಿನ ವಸಾಹತುವಾಗಿತ್ತು.

@KTBS NOT TO BE REPUBLISHED

## ಮುಖ್ಯ ಇಸವಿಗಳು

1488 – ಬಾರ್ತಲೋಮಿಯೊ ಡಾಯಸ್ ಆಫ್ರಿಕದ ದಕ್ಷಿಣ ಭೂಶಿರ ತಲುಪಿದ್ದು.

1498 – ವಾಸ್ಕೋಡಗಾಮ ಕಲ್ಲಿಕೋಟೆ ತಲುಪಿದ್ದು.

1492 – ಕೊಲಂಬಸ್ ಅಮೆರಿಕ ತಲುಪಿದ್ದು.

1519–1522 – ಮೆಗಲ್ಲನ್ – ಭೂಪ್ರದಕ್ಷಿಣೆ.

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 ಪುನರುಜ್ಜೀವನ ಎಲ್ಲಿ ಆರಂಭವಾಯಿತು?
2 ಪುನರುಜ್ಜೀವನದ ಎರಡು ಲಕ್ಷಣಗಳು ಯಾವುವು?
3 ಮುದ್ರಣಯಂತ್ರವು ಪುನರುಜ್ಜೀವನಕ್ಕೆ ಹೇಗೆ ಪ್ರೇರಕವಾಯಿತು?
4 ಕಾನ್‌ಸ್ಟಂಟಿನೋಪಲಿನ ಇಂದಿನ ಹೆಸರೇನು?
5 ಪುನರುಜ್ಜೀವನ ಕಾಲದ ಮೂರು ಮಂದಿ ಪ್ರಸಿದ್ಧ ಸಾಹಿತಿಗಳು ಯಾರು?
6 'ಡೆಕಮೆರನ್' ಎಂಬ ಕೃತಿಯನ್ನು ಯಾರು ರಚಿಸಿದರು?
7 ವಿಲಿಯಮ್ ಷೇಕ್ಸ್‌ಪಿಯರ್ ಯಾರು?
8 ಸಂತ ಪೀಟರ ಚರ್ಚ್ ಎಲ್ಲಿದೆ?
9 ಪುನರುಜ್ಜೀವನ ಕಾಲದ ಪ್ರಖ್ಯಾತ ಚಿತ್ರಕಾರರು ಯಾರು?
10 ಪುನರುಜ್ಜೀವನ ಕಾಲದ ಇಬ್ಬರು ಖ್ಯಾತ ವಿಜ್ಞಾನಿಗಳು ಯಾರು?
11 'ಪಾಪಕ್ಷಮಾಪಣ ಪತ್ರ' ಎಂದರೇನು?
12 ಮಾರ್ಟಿನ್ ಲೂಥರ್ ಯಾರು?
13 ಪ್ರಾಟೆಸ್ಟಂಟ್ಸ್ ಎಂದರೆ ಯಾರು?
14 ಪ್ರತಿಸುಧಾರಣೆ ಎಂದರೇನು?
15 ಜೇಸಸ್ ಸಂಘವನ್ನು ಯಾರು ಸ್ಥಾಪಿಸಿದರು?

© KTBS NOT TO BE REPUBLISHED

16 ಮಾರ್ಕ್ ಪೋಲೊ ಯಾರು?

17 ಆಫ್ರಿಕದ ದಕ್ಷಿಣದ ತುದಿಯನ್ನು 'ಬಿರುಗಾಳಿಯ ಭೂಶಿರ' ಎಂದು ಕರೆದವರು ಯಾರು?

18 ಕೋಲಂಬಸನು ಅಮೆರಿಕದ ಮೂಲನಿವಾಸಿಗಳನ್ನು ಏನೆಂದು ಕರೆದನು?

19 ಭೂಪ್ರದಕ್ಷಿಣೆಯನ್ನು ಮಾಡಿದ ಮೊದಲ ಹಡಗು ಯಾವುದು?

20 'ಹೆನ್ರಿ ದ ನ್ಯಾವಿಗೇಟರ್' ಎಂದು ಯಾರನ್ನು ಕರೆಯಲಾಗುತ್ತಿತ್ತು?

## II ಚರ್ಚಿಸಿರಿ

1 ಪುನರುಜ್ಜೀವನ ಚಳವಳಿಯು ಕಲೆ, ಸಾಹಿತ್ಯ ಮತ್ತು ವಿಜ್ಞಾನ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳ ಬಗ್ಗೆ ಚರ್ಚಿಸಿ.

2 ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಮಾರ್ಟಿನ್ ಲೂಥರನ ಪಾತ್ರವೇನು?

3 ಭೌಗೋಳಿಕ ಅನ್ವೇಷಣೆಯ ಪರಿಣಾಮಗಳನ್ನು ಚರ್ಚಿಸಿ.



### ಚಟುವಟಿಕೆಗಳು

1 ಪುನರುಜ್ಜೀವನ ಕಾಲದ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ವರ್ಣಚಿತ್ರಗಳ ಭಾವಚಿತ್ರಗಳನ್ನು ಸಂಗ್ರಹಿಸಿ ವಿವರಣೆಯೊಂದಿಗೆ ಒಂದು ಆಲ್ಬಂ ತಯಾರಿಸಿರಿ.

2 ಈ ಕೆಳಗಿನ ಧಾರ್ಮಿಕ ನಾಯಕರನ್ನು ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸಿರಿ: ಜಾನ್ ವೈಕ್ಲಿಫ್, ಇಗ್ನೇಶಿಯಸ್ ಲಯೋಲಾ.

3 ಹೊಸ ಭೂಅನ್ವೇಷಣೆಗಳನ್ನು ಮಾಡಿದ ಪ್ರಮುಖ ನಾವಿಕರ ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸಿರಿ.

4 ಬಿ.ಜಿ.ಎಲ್. ಸ್ವಾಮಿ ಅವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಕೃತಿಯನ್ನು ಓದಿ ಯೂರೋಪಿಯನರಿಂದ ಭಾರತಕ್ಕೆ ಪರಿಚಯವಾದ ಹಣ್ಣು ಮತ್ತು ತರಕಾರಿಗಳ ಹೆಸರುಗಳನ್ನು ಪಟ್ಟಿ ಮಾಡಿರಿ.

©KTBS NOT TO BE REPUBLISHED

| ಅಧ್ಯಾಯ 3 | ಭಾರತಕ್ಕೆ ಐರೋಪ್ಯರ ಆಗಮನ |
|---|---|

G5J8M4

**ಪಾಠದ ಪರಿಚಯ**

ಯುರೋಪಿಯನ್ನರು ಭಾರತಕ್ಕೆ ಏಕೆ ಬಂದರು? ಅವರ ಆರಂಭಿಕ ಚಟುವಟಿಕೆಗಳೇನು? ಅವರಲ್ಲಿ ಇಂಗ್ಲಿಷರು ಮಾತ್ರವೇ ಇಲ್ಲಿ ನೆಲೆವೂರಲು ಹೇಗೆ ಸಾಧ್ಯವಾಯಿತು? ಅದರಿಂದಾದ ಪರಿಣಾಮಗಳೇನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಪಾಠದಲ್ಲಿ ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 ಭಾರತದಲ್ಲಿ ಯುರೋಪಿಯನ್ನರ ಆರಂಭಿಕ ಚಟುವಟಿಕೆಗಳನ್ನು ಅರಿಯುವುದು.
2 ಭಾರತದಲ್ಲಿ ಯುರೋಪಿಯನ್ನರ ನಡುವೆ ನಡೆದ ಸಂಘರ್ಷಗಳನ್ನು ಅರ್ಥೈಸಿ ಕೊಳ್ಳುವುದು.
3 ಕಟ್ಟಕಡೆಗೆ ಇಂಗ್ಲಿಷರು ಭದ್ರವಾಗಿ ತಳವೂರಲು ಕಾರಣವಾದ ಅಂಶಗಳನ್ನು ಪಟ್ಟಿಮಾಡುವುದು.
4 ಭಾರತದ ರೇಖಾನಕಾಶೆಯಲ್ಲಿ ಯುರೋಪಿಯನ್ ವ್ಯಾಪಾರಿಗಳ ನೆಲೆಗಳನ್ನು ಗುರುತಿಸುವುದು.

@KTBS NOT TO BE REPUBLISHED

ಕಪ್ಪು ಹಲಗೆಯ ಮೇಲೆ ಶಿಕ್ಷಕರು ದಪ್ಪಕ್ಷರದಲ್ಲಿ "ಭಾರತಕ್ಕೆ ಯುರೋಪಿಯನ್ನರ ಆಗಮನ" ಎಂಬ ತಲೆಬರಹ ಬರೆಯುವುದನ್ನು ಕಂಡ ತರಗತಿಯ ರಾಮು ಪ್ರಶ್ನೆ ಕೇಳಿದ.

ರಾಮು : ಯುರೋಪಿಯನ್ನರು ಅಂದರೆ ಯಾರು? ಅವರು ಭಾರತಕ್ಕೆ ಬರಲು ಕಾರಣವೇನು?

ಗುರುಗಳು : ಯುರೋಪ್ ಖಂಡದ ವಿವಿಧ ದೇಶಗಳ ಜನರನ್ನು ಯುರೋಪಿಯನ್ನರೆಂದು ಕರೆಯುವರು. ಉದಾ: ಇಂಗ್ಲಿಷರು, ಫ್ರೆಂಚರು, ಪೋರ್ಚುಗೀಸರು, ಡಚ್ಚರು, ಇಟಾಲಿಯನ್ನರು, ಜರ್ಮನರು, ಇತ್ಯಾದಿ. ಇವರಲ್ಲಿ ಕೆಲವರು ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದರು.

ರಹೀಮ್ : ಭಾರತಕ್ಕೆ ಬಂದಿದ್ದ ಯುರೋಪಿಯನ್ನರಲ್ಲಿ ಮೊದಲಿಗರು ಯಾರು?

ಗುರುಗಳು : ಭಾರತಕ್ಕೆ ಬಂದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು. ಕಲ್ಲಿಕೋಟೆಯ ದೊರೆ ಜಾಮೊರಿನ್ ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮನಿಗೆ ವ್ಯಾಪಾರಕ್ಕೆ ಅನುಮತಿ ನೀಡಿದನು.

ಅನಂತರ ಪೋರ್ಚುಗೀಸರು ಅಲ್ಬುಕರ್ಕ್ ಎಂಬವನನ್ನು ಭಾರತಕ್ಕೆ ಗವರ್ನರ್ ಆಗಿ ಕಳುಹಿಸಿದರು (1509). ಭಾರತದಲ್ಲಿ ಪೋರ್ಚುಗೀಸರ ಪ್ರಾಬಲ್ಯ ಸ್ಥಾಪನೆ ಮಾಡುವುದು ಇವನ ಗುರಿಯಾಗಿತ್ತು. ಈತನು ಸಂಪತ್ಭರಿತ ಗೋವಾ ಬಂದರನ್ನು ವಿಜಯಪುರ ಸುಲ್ತಾನನಿಂದ ಸ್ವಾಧೀನ ಪಡಿಸಿಕೊಂಡನು. ಇಲ್ಲಿನ ವಿವಿಧ ಧರ್ಮೀಯರನ್ನು ಪೀಡಿಸುತ್ತಿದ್ದುದು ಈತನ ನೀತಿಯ ದೋಷವಾಗಿತ್ತು. ಅಲ್ಬುಕರ್ಕನ ಬಳಿಕ ಬಂದ ಗವರ್ನರ್‌ಗಳು ದಿಯು, ದಮನ್, ಸಾಲ್ಸೆಟ್, ಬೆಸ್ಸೀನ್, ಚೌಲ್, ಮುಂಬೈ, ಸಾನ್‌ಥೋಮ್ ಮತ್ತು ಬಂಗಾಳದ ಹೂಗ್ಲಿ ಮುಂತಾದ ಕಡೆ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು.

ಸಂಗೀತಾ : ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣಗಳೇನು?

ಗುರುಗಳು : ಬಲಿಷ್ಠ ನೌಕಾಪಡೆಯನ್ನು ಹೊಂದಿದ್ದ ಡಚ್ಚರು ಮತ್ತು ಇಂಗ್ಲಿಷರು ಪೋರ್ಚುಗೀಸರ ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು. ಪೋರ್ಚುಗೀಸ್ ಸರ್ಕಾರದ ನೌಕರರು ಭ್ರಷ್ಟರಾಗಿ, ಸ್ವಾಮಿನಿಷ್ಠೆ ಕಳೆದುಕೊಂಡರು. ಕ್ರಮೇಣ ಅವರ ಸರ್ಕಾರ ಹೀನ ಸ್ಥಿತಿಗಿಳಿಯಿತು. ಮತಾಂಧತೆಯೇ ಪೋರ್ಚುಗೀಸರ ಅವನತಿಗೆ ಮುಖ್ಯ ಕಾರಣವಾಗಿತ್ತು. ಅವರು ಇಲ್ಲಿಯ ವಿವಿಧ ಧರ್ಮೀಯರನ್ನು ಬಲವಂತದಿಂದ ಮತಾಂತರಿಸಿದರು. ಇದಲ್ಲದೆ ವಿಜಯನಗರ ಸಾಮ್ರಾಜ್ಯದ ಅವನತಿಯಿಂದಾಗಿ ಅವರ ವ್ಯಾಪಾರ ಕುಂಠಿತವಾಯಿತು. ಇವು ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣವಾದ ಅಂಶಗಳು.

© KTBS NOT TO BE REPUBLISHED

ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಹಾಗೂ ಭಾರತ ತೊರೆದ ಕಟ್ಟಕಡೆಯ ಯುರೋಪಿಯನ್ನರು ಪೋರ್ಚುಗೀಸರೇ ಆಗಿದ್ದಾರೆ. ಕೊನೆಯವರೆಗೆ ಗೋವಾ, ದಿಯು ಮತ್ತು ದಮನ್ ಮಾತ್ರವೇ ಪೋರ್ಚುಗೀಸರ ವಶದಲ್ಲಿ ಉಳಿದವು. ಬ್ರಿಟಿಷ್ ಆಳ್ವಿಕೆ 1947ರಲ್ಲಿ ಕೊನೆಗೊಂಡರೂ ಪೋರ್ಚುಗೀಸರು ನಮ್ಮ ನೆಲದಿಂದ ಕದಲಲಿಲ್ಲ. ಗೋವೆಯ ವಿಮೋಚನೆಗಾಗಿ ಅಲ್ಲಿಯ ಭಾರತೀಯರು ಅಹಿಂಸಾತ್ಮಕ ಚಳವಳಿ ಹೂಡಿದರು. ಆದರೆ ಚಳವಳಿಗಾರರನ್ನು ಅಮಾನುಷವಾಗಿ ಹಿಂಸೆಗೊಳಪಡಿಸಲಾಯಿತು. ಕೊನೆಗೆ 1961ರಲ್ಲಿ ಭಾರತೀಯ ಸೇನಾಪಡೆಯು ಪೋರ್ಚುಗೀಸರನ್ನು ಸೋಲಿಸುವುದರೊಂದಿಗೆ ಗೋವಾ ವಿಮೋಚನೆಗೊಂಡಿತು.

ಆಶಾ : ಡಚ್ಚರು ಭಾರತದ ಯಾವ ಯಾವ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರು?

ಗುರುಗಳು : ಹಾಲೆಂಡ್ (ನೆದರ್‌ಲ್ಯಾಂಡ್) ದೇಶದವರಾದ ಡಚ್ಚರ ವ್ಯಾಪಾರ ಕೇಂದ್ರಗಳು ಭಾರತದ ಆಗ್ರಾ, ಮಚಲೀಪಟ್ಟಣ, ಸೂರತ್, ಕಾರೈಕಲ್, ನಾಗಪಟ್ಟಣಂ, ಕೊಚ್ಚಿ ಮೊದಲಾದ ಕಡೆಗಳಲ್ಲಿದ್ದವು. ಡಚ್ಚರು

ಇಂಗ್ಲಿಷರೊಡನೆ ಸಂಘರ್ಷಕ್ಕಿಳಿದರು. ಆದರೆ ಇಂಗ್ಲಿಷರು ಅವರನ್ನು ಸೋಲಿಸಿದರು. ಇದರೊಂದಿಗೆ ಭಾರತದಲ್ಲಿ ಡಚ್ಚರ ವ್ಯಾಪಾರಿ ಚಟುವಟಿಕೆಗಳು ಅಂತ್ಯಗೊಂಡವು.

ಮಮ್ತಾಜ್ : ಬ್ರಿಟಿಷರು ಭಾರತದ ಯಾವ ಯಾವ ಪ್ರದೇಶಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರು?




@KTBS NOT TO BE REPUBLISHED

*ಭಾರತದಲ್ಲಿ ಯೂರೋಪಿಯನ್ನರ ನೆಲೆಗಳು*

ಗುರುಗಳು : ಇಂಗ್ಲೆಂಡಿನ ವರ್ತಕರು ಪೂರ್ವ ದೇಶಗಳೊಡನೆ ವ್ಯಾಪಾರ ಸಂಪರ್ಕ ಹೊಂದಲು ಬಯಸಿ "ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ" ಸ್ಥಾಪಿಸಿದರು. ಎಲಿಜಬೆತ್ ರಾಣಿಯ ಅನುಮತಿ ಪಡೆದು (1600ರಲ್ಲಿ) ಭಾರತದೊಡನೆ ವ್ಯಾಪಾರ ಸಂಪರ್ಕ ಬೆಳೆಸಿದರು. ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಹಡಗುಗಳು ಸೂರತ್ ಬಂದರಿನಲ್ಲಿ ತಂಗುತ್ತಿದ್ದವು. ಮೊಗಲ್ ಚಕ್ರವರ್ತಿ ಜಹಾಂಗೀರನಿಂದ ಅವರು ಅನುಮತಿ ಪಡೆದು ಸೂರತ್, ಆಗ್ರಾ, ಅಹ್ಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆದರು. ಮುಂದೆ ಮದ್ರಾಸ್, ಕಲ್ಕತ್ತ ಮತ್ತು ಮುಂಬೈಗಳಲ್ಲಿಯೂ ತಮ್ಮ ವ್ಯಾಪಾರದ ಕೋಠಿ (ಮಳಿಗೆ)ಗಳನ್ನು ಸ್ಥಾಪಿಸಿದರು.

ಕಾಲಸರಿದಂತೆ ಕಂಪನಿಯ ಲಾಭವೂ ಗಣನೀಯವಾಗಿ ಹೆಚ್ಚುತ್ತಾ ಹೋಯಿತು. ದುರ್ಬಲನಾಗಿದ್ದ ಮೊಗಲ್ ಚಕ್ರವರ್ತಿಯಿಂದ ಬಂಗಾಳ ಪ್ರಾಂತ್ಯ (ಈಗಿನ ಬಂಗಾಳ, ಬಿಹಾರ ಮತ್ತು ಒರಿಸ್ಸ) ಮತ್ತು ಸೂರತ್‌ನಲ್ಲಿ ಸುಂಕರಹಿತ ವ್ಯಾಪಾರ ಮಾಡುವ ಪರವಾನಗಿಯಾದ 'ದಸ್ತಕ್'ಗಳನ್ನು ಪಡೆದರು. 'ದಸ್ತಕ್'ಗಳ ಸಹಾಯದಿಂದ ಇಂಗ್ಲಿಷರು ದೇಶೀಯ ವ್ಯಾಪಾರಿಗಳಿಗಿಂತ ಶಕ್ತಿವಂತರಾದರು. ಸುಂಕವಿಲ್ಲದೆ ಮುಕ್ತವ್ಯಾಪಾರ ನಡೆಸಲು ಬ್ರಿಟಿಷ್ ವರ್ತಕರಿಗೆ ನೀಡಲಾದ ವಿಶೇಷ ಪಾಸುಗಳೇ 'ದಸ್ತಕ್'ಗಳು.

ಬ್ರಿಟಿಷರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ತಮ್ಮ ವಸತಿ ಪ್ರದೇಶಗಳ ಸುತ್ತಲು ಕೋಟೆಗಳನ್ನು ಕಟ್ಟಿದರು. ಕೋಟೆಗಳ ರಕ್ಷಣೆಗಾಗಿ ಸೈನಿಕರನ್ನೂ ಮದ್ದುಗುಂಡುಗಳನ್ನೂ ಇಟ್ಟುಕೊಳ್ಳಲು ಆರಂಭಿಸಿದರು. ಬಹುಬೇಗ ಇಂಗ್ಲಿಷರ ಸೇನಾಬಲವು ಭಾರತೀಯ ರಾಜರುಗಳ ಸೇನಾಬಲವನ್ನು ಮೀರಿತು.

ಮೇರಿ : ಭಾರತಕ್ಕೆ ವ್ಯಾಪಾರಕ್ಕಾಗಿ ಕೊನೆಯಲ್ಲಿ ಬಂದವರಾರು? ಅವರು ಭಾರತದ ಯಾವ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರು?

ಗುರುಗಳು : ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಯುರೋಪಿಯನ್ನರಲ್ಲಿ ಫ್ರೆಂಚರೇ ಕೊನೆಯವರು. ಅವರು ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯನ್ನು (1664ರಲ್ಲಿ) ಸ್ಥಾಪಿಸಿ ಸೂರತ್, ಪಾಂಡಿಚೇರಿ, ಮಚಲೀಪಟ್ಟಣ, ಕಲ್ಲಿಕೋಟೆ, ಮಾಹೆ, ಕಾರೈಕಲ್ ಮತ್ತು ಚಂದ್ರನಗರಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದರು.

NOT TO BE REPUBLISHED @KTBS

ಅಲ್ಪಕಾಲದಲ್ಲೇ ಇಂಗ್ಲಿಷ್ ಮತ್ತು ಫ್ರೆಂಚರ ನಡುವೆ ರಾಜಕೀಯ ಸಂಘರ್ಷ ಏರ್ಪಟ್ಟಿತು. ಇದರಲ್ಲಿ ಯಾರ ಕೈಮೇಲಾಯಿತು? ಇದು ಭಾರತದ ಇತಿಹಾಸದ ಮೇಲೆ ಯಾವ ಪರಿಣಾಮ ಬೀರಿತು? ಇದನ್ನು ಮುಂದಿನ ಪಾಠದಲ್ಲಿ ಕಲಿಯೋಣ.

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 ಭಾರತಕ್ಕೆ ವ್ಯಾಪಾರಕ್ಕಾಗಿ ಸಮುದ್ರಮಾರ್ಗವಾಗಿ ಮೊದಲಿಗೆ ಬಂದಿದ್ದ ಯುರೋಪಿಯನ್ನರು ಯಾರು?

2 ಭಾರತದಲ್ಲಿದ್ದ ಪೋರ್ಚುಗೀಸರ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿರಿ.

3 ಭಾರತಕ್ಕೆ ಬಂದ ಇಂಗ್ಲಿಷ್ ವ್ಯಾಪಾರಿ ಸಂಸ್ಥೆ ಯಾವುದು?

4 'ದಸ್ತಕ್'ಗಳೆಂದರೇನು?



**ಚಟುವಟಿಕೆ**

ಭಾರತದ ರೇಖಾ ನಕಾಶೆಯನ್ನು ಬರೆದು ಯುರೋಪಿಯನ್ನರ ಆರಂಭಿಕ ನೆಲೆಗಳನ್ನು ಗುರುತಿಸಿರಿ.

@KTBS NOT TO BE REPUBLISHED

| ಅಧ್ಯಾಯ 4 | ಹದಿನೆಂಟನೆಯ ಶತಮಾನದ ಭಾರತ (1707–1757) |
|---|---|

V2L7R9

### ಪಾಠದ ಪರಿಚಯ

ಭಾರತದ ಚರಿತ್ರೆಯಲ್ಲಿ 18ನೆಯ ಶತಮಾನವು ಒಂದು ಸಂಕ್ರಮಣ ಕಾಲವಾಗಿತ್ತು. ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಭಾರತವು ಮಹತ್ವದ ಬದಲಾವಣೆಗಳಿಗೆ ಒಳಗಾಯಿತು. ರಾಜಕೀಯವಾಗಿ ಮೊಗಲರು ಪ್ರಾಬಲ್ಯಹೀನರಾಗುವುದರೊಂದಿಗೆ ಭಾರತದ ಸ್ಥಳೀಯ ರಾಜಕೀಯ ಶಕ್ತಿಗಳು ತಮ್ಮ ಪ್ರಾಬಲ್ಯವನ್ನು ಮರುಸ್ಥಾಪಿಸುವ, ವಿಸ್ತರಿಸುವ ಕಾರ್ಯಕ್ಕೆ ಮುಂದಾದರು. ಮರಾಠರು, ಹೈದರ್, ಟಿಪ್ಪು, ಸಿಖ್ ಮುಂತಾದವರು ತಮ್ಮ ರಾಜಕೀಯ ಪ್ರಾಬಲ್ಯವನ್ನು ಮೆರೆಯಲು ಮುಂದಾದರು. ಆದರೆ ಬ್ರಿಟಿಷರು ಎಲ್ಲ ದೇಶೀಯ ಶಕ್ತಿಗಳನ್ನು ಅವರೊಳಗಿದ್ದ ಸ್ವಾರ್ಥ ಲಾಲಸೆಯನ್ನು ಬಳಸಿಕೊಂಡೇ ಬಗ್ಗುಬಡಿದರು. ಆರ್ಥಿಕವಾಗಿ ಬ್ರಿಟಿಷರು ಖಾಯಂ ಜಮೀನ್ದಾರಿ, ಮಹಲ್‌ವಾರಿ, ರೈತವಾರಿ ಮುಂತಾದ ದೂರಗಾಮಿ, ನೇತ್ಯಾತ್ಮಕ ಪರಿಣಾಮಗಳನ್ನು ಬೀರಿದ ಯೋಜನೆಗಳನ್ನು ಜಾರಿಗೊಳಿಸಿ ಭಾರತವನ್ನು ಶೋಷಣೆ ಮಾಡಲು ತೊಡಗಿದರು. ಒಟ್ಟಾರೆಯಾಗಿ ಭಾರತವು ವಿವಿಧ ಸಂಘರ್ಷಗಳಿಗೆ ಒಳಗಾದ ಕಾಲ ಇದಾಗಿತ್ತು.

### ಸಾಮರ್ಥ್ಯಗಳು

1 ಭಾರತದಲ್ಲಿಯ ರಾಜಕೀಯ ಸ್ಥಿತ್ಯಂತರ ಕಾಲದ ವ್ಯವಸ್ಥೆಯನ್ನು ತಿಳಿಯುವುದು.

2 ಮೊಗಲರ ಅವನತಿ ಮತ್ತು ಮರಾಠರ ಪರಮಾಧಿಕಾರದ ಸ್ಥಾಪನೆಗೆ ಪೂರಕವಾದ ಅಂಶಗಳನ್ನು ಪಟ್ಟಿ ಮಾಡುವುದು.

3 ಕರ್ನಾಟಿಕ ಯುದ್ಧಗಳ ಹಿನ್ನೆಲೆ ಹಾಗೂ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ಭದ್ರ ಬುನಾದಿ ಹಾಕಿದ ಪ್ಲಾಸಿ ಕದನದ ಕಾರಣ, ಪರಿಣಾಮಗಳನ್ನು ಅರಿತುಕೊಳ್ಳುವುದು.

@KTBS NOT TO BE REPUBLISHED

ಮಕ್ಕಳೇ, ಭಾರತದ ಇತಿಹಾಸದಲ್ಲಿ 18ನೆಯ ಶತಮಾನವು ಮಹತ್ವದ ಬದಲಾವಣೆಗಳ ಕಾಲವಾಗಿತ್ತು. ಔರಂಗಜೇಬನ ತರುವಾಯ (1707) ಮೊಗಲ್ ಸಾಮ್ರಾಜ್ಯವು ತೀವ್ರಗತಿಯಲ್ಲಿ ಅವನತಿ ಹೊಂದಿತು. ಮೊಗಲರ ಅವನತಿಗೆ ಕಾರಣಗಳು ಈ ರೀತಿ ಇವೆ: ಔರಂಗಜೇಬನ ನಂತರ ಬಂದ ರಾಜರು ದುರ್ಬಲರಾಗಿದ್ದು ವಿಲಾಸೀ ಜೀವನ ನಡೆಸುತ್ತಿದ್ದರು. ಪರ್ಷಿಯದ ರಾಜ ನಾದಿರ್‌ಷಾ ಮೊಗಲರ ರಾಜ್ಯದ ಮೇಲೆ ಭಾರಿ ದಾಳಿ ಮಾಡಿ ಮೊಗಲರ ಅಳಿದುಳಿದ ಸಂಪತ್ತನ್ನು ಹೊತ್ತುಕೊಂಡು ತನ್ನ ದೇಶಕ್ಕೆ ತೆರಳಿದನು (1739). ಇದರಲ್ಲಿ ಪ್ರಖ್ಯಾತ ಮಯೂರ ಸಿಂಹಾಸನ ಮತ್ತು ಅತ್ಯಂತ ಬೆಲೆಬಾಳುವ ಕೊಹಿನೂರ್ ವಜ್ರವೂ ಸೇರಿದ್ದವು.

ಅದೇ ರೀತಿ ಅಹ್ಮದ್‌ಷಾ ಅಬ್ದಾಲಿಯ ದಾಳಿಯು ಕೂಡ ಭಾರಿ ಹೊಡೆತಕೊಟ್ಟಿತು. ಈ ಎಲ್ಲಾ ಘಟನೆಗಳಿಂದಾಗಿ ಮೊಗಲ್ ರಾಜ್ಯವು ಮತ್ತೆ ಚೇತರಿಸಿಕೊಳ್ಳಲಿಲ್ಲ.

**ಚಟುವಟಿಕೆ:** ಕೊಹಿನೂರ್ ವಜ್ರ ಮೊಗಲರಿಗೆ ಎಲ್ಲಿಂದ ಸಿಕ್ಕಿತು? ಮುಂದೆ ನಾದಿರ್‌ಷಾನಿಂದ ಅದು ಯಾರ ಕೈವಶವಾಯಿತು? ಅದು ಈಗ ಎಲ್ಲಿದೆ? ಶಿಕ್ಷಕರ ಮಾರ್ಗದರ್ಶನ ಪಡೆದು ವಿಷಯ ಸಂಗ್ರಹಿಸಿರಿ. ಕೊಹಿನೂರ್ ವಜ್ರದ ಚಿತ್ರವನ್ನು ಸಂಗ್ರಹಿಸಿರಿ.

## ಮರಾಠರ ಪ್ರಾಬಲ್ಯ

ಮರಾಠ ರಾಜ್ಯದ ಸ್ಥಾಪಕ ಶಿವಾಜಿ. ಮೊಗಲ್ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯಗಳು ರಾಜಕೀಯವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅವುಗಳಿಗೆ ಪರ್ಯಾಯವಾದ ಸ್ವತಂತ್ರ ರಾಜ್ಯ ಕಟ್ಟಲು ಶಿವಾಜಿ ಯಶಸ್ವಿಯಾದನು. ಅವನ ಯಶಸ್ವಿ ಆಡಳಿತ ನಿರ್ವಹಣೆಗೆ ನೆರವಾದವರು 'ಅಷ್ಟ ಪ್ರಧಾನ'ರೆಂಬ ಎಂಟು ಜನ ಮಂತ್ರಿಗಳು. ಇವರಲ್ಲಿ ಪೇಶ್ವೆ ಪ್ರಮುಖನಾದವನು.

ಇತಿಹಾಸಕಾರರು 18ನೇ ಶತಮಾನವನ್ನು 'ಮರಾಠರ ಪರಮಾಧಿಕಾರದ ಕಾಲ' ಎಂದು ಕರೆಯುತ್ತಾರೆ. ಈ ಕಾಲದಲ್ಲಿ ಮರಾಠರು ಪೇಶ್ವೆಯರ ನೇತೃತ್ವದಲ್ಲಿ ಭಾರತದ ಒಂದು ಬೃಹತ್ ರಾಜಕೀಯ ಹಾಗೂ ಮಿಲಿಟರಿ ಶಕ್ತಿಯಾಗಿ ಹೊರಹೊಮ್ಮಿದರು.

ಪೇಶ್ವೆಯೆಂದರೆ ಮರಾಠಾ ರಾಜನ ಪ್ರಧಾನಮಂತ್ರಿ. ರಾಜರು ದುರ್ಬಲರಾದುದರಿಂದ ಪೇಶ್ವೆಗಳೇ ಆಳ್ವಿಕೆ ನಡೆಸುತ್ತಿದ್ದರು. ಸುಮಾರು ನೂರು ವರ್ಷಗಳ ಕಾಲ (1713–1818) ಏಳು ಮಂದಿ ಪೇಶ್ವೆಯರು ದಖನ್ ಮತ್ತು ಉತ್ತರ ಭಾರತದ ಕೆಲವು ಪ್ರದೇಶಗಳನ್ನಾಳಿದರು.

ಮರಾಠ ಪೇಶ್ವೆಗಳಲ್ಲಿ ಮೂವರು ಪ್ರಮುಖರು. ಅವರೆಂದರೆ –

- **ಬಾಲಾಜಿ ವಿಶ್ವನಾಥ (1713–20):** ಈತನು ಮೊಗಲ ಚಕ್ರವರ್ತಿಯೊಡನೆ ದಿಲ್ಲಿ ಒಪ್ಪಂದವನ್ನು ಮಾಡಿಕೊಂಡನು. ಇದರ ಪರಿಣಾಮವಾಗಿ ದಖನ್ನಿನ ಆರು ಸುಬಾಗಳಿಂದ ತೆರಿಗೆಗಳನ್ನು ವಸೂಲಿ ಮಾಡುವ ಹಕ್ಕನ್ನು ಪಡೆದನು.

- **ಒಂದನೆಯ ಬಾಜೀರಾವ್ (1720–40):** ಬಾಜೀರಾವ್ ಅಧಿಕಾರಕ್ಕೆ ಬಂದಾಗ ಇಪ್ಪತ್ತರ ತರುಣ. ಈತನು ಬಲಿಷ್ಠನೂ ರಾಜತಂತ್ರ ನಿಪುಣನೂ ಆಗಿದ್ದನು. ಮೊಗಲ ಸಾಮ್ರಾಜ್ಯದ ರಾಜಕೀಯ ದುಸ್ಥಿತಿಯನ್ನು ಬಳಸಿಕೊಂಡು, ಭಾರತದಲ್ಲಿ ಬೃಹತ್ ಸಾಮ್ರಾಜ್ಯವನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡನು. ಈತನು ಪ್ರಾರಂಭದಲ್ಲಿ ಹೈದರಾಬಾದ್, ಆಮೇಲೆ ಮಾಳ್ವ, ಗುಜರಾತ್ ಮತ್ತು ಬುಂದೇಲಖಂಡಗಳನ್ನು ವಶಪಡಿಸಿಕೊಂಡನು.

© KTBS NOT TO BE REPUBLISHED

ಬಾಜೀರಾವ್‌ನ ಪ್ರಮುಖ ಸಾಧನೆಯೆಂದರೆ ಸೇನಾ ಸಮೇತನಾಗಿ ಉತ್ತರ ಭಾರತಕ್ಕೆ ಮುನ್ನಡೆದು ದಿಲ್ಲಿಯ ಮೇಲೆರಗಿದ್ದು. ಈತನು 'ಎರಡನೆಯ ಶಿವಾಜಿ' ಎಂಬ ಕೀರ್ತಿಗೆ ಪಾತ್ರನಾದ. 'ಹಿಂದೂ ಪಾದಪದಷಾಹಿ' ಹಿಂದುಗಳ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಅವರ ಆಡಳಿತವಿರಬೇಕೆಂಬ ವಾದ ತನ್ನ ಧ್ಯೇಯವೆಂದು ಈತನು ಹೇಳಿಕೊಂಡನು.

- **ಬಾಲಾಜಿ ಬಾಜೀರಾವ್ (1740–61):** ಈತನು ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ ಉತ್ತರ ಭಾರತದಲ್ಲಿಯೂ ಮರಾಠ ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿದನು. ಮರಾಠರ ಸೈನ್ಯವು ವಾಯವ್ಯದಲ್ಲಿ ಪಂಜಾಬಿನ ವರೆಗೂ ಯಶಸ್ವಿಯಾಗಿ ಮುನ್ನುಗ್ಗಿತು. ಪೂರ್ವದಲ್ಲಿ ಒಡಿಶಾ, ದಕ್ಷಿಣದಲ್ಲಿ ತಮಿಳುನಾಡಿನ ಕೆಲ ಭಾಗಗಳನ್ನು ಇವನು ಗೆದ್ದುಕೊಂಡನು. ಹೀಗೆ ಮರಾಠರು ಭಾರತದಲ್ಲಿ ಪ್ರಮುಖ ರಾಜಕೀಯ ಶಕ್ತಿಯಾಗಿ ಮೆರೆದರು.



*ಬಾಲಾಜಿ ಬಾಜೀರಾವ್*

ಉತ್ತರ ಭಾರತದಲ್ಲಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದ ಮರಾಠರು, ಆಫ್ಘನ್ ದಾಳಿಕೋರ ಅಹಮದ್‌ಷಾ ಅಬ್ದಾಲಿಯನ್ನು ಮುಖಾಮುಖಿಯಾದರು. 1761ರಲ್ಲಿ (ಜನವರಿ 14ರಂದು) ಅವರೊಳಗೆ ನಿರ್ಣಾಯಕ ಕದನ ನಡೆಯಿತು. ಇದೇ ಮೂರನೇ ಪಾಣಿಪತ್ ಕದನ. ಮರಾಠರು ಯುದ್ಧದಲ್ಲಿ ಸೋತುಹೋದರು. ಇದರ ಪರಿಣಾಮವಾಗಿ ಮರಾಠರ ಸೈನಿಕ ಶಕ್ತಿ ಕುಂದಿತು. ಮರಾಠರ ಅವನತಿಯು ಬ್ರಿಟಿಷ್ ವ್ಯಾಪಾರಿಗಳಿಗೆ ಭಾರತದಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಸಂದರ್ಭವನ್ನು ಸೃಷ್ಟಿಸಿತು.

## ಕರ್ನಾಟಿಕ್ ಯುದ್ಧಗಳು (1746–63)

ಮೊಗಲ್ ಸಾಮ್ರಾಜ್ಯದ ಒಂದು ಪ್ರಾಂತ್ಯವೇ 'ಕರ್ನಾಟಿಕ್'. ಕೋರಮಂಡಲ ತೀರ (ಈಗಿನ ತಮಿಳುನಾಡು ಹಾಗೂ ಆಂಧ್ರ ಪ್ರದೇಶದ ತೀರ ಪ್ರದೇಶ) ಮತ್ತು ಅದರ ಹಿನ್ನಾಡನ್ನು ಯುರೋಪಿಯನ್ನರು 'ಕರ್ನಾಟಿಕ್' (Carnatic) ಎಂದು ಕರೆಯುತ್ತಿದ್ದರು.

ಬ್ರಿಟಿಷ್ ಮತ್ತು ಫ್ರೆಂಚರ ನಡುವೆ ದಕ್ಷಿಣ ಭಾರತದ ವ್ಯಾಪಾರದ ಮೇಲಿನ ನಿಯಂತ್ರಣಕ್ಕಾಗಿ ಪೈಪೋಟಿ ನಡೆದು ಅಲ್ಪಕಾಲದಲ್ಲೇ ಅದು ಕದನದ ಹಾದಿಯನ್ನು ಹಿಡಿಯುವಂತೆ ಮಾಡಿತು. ಈ ಹಿನ್ನೆಲೆಯಲ್ಲಿ ನಡೆದ ಮೂರು ಕದನಗಳಿಗೆ ಕರ್ನಾಟಿಕ್ ಪ್ರದೇಶ ಮುಖ್ಯ ಭೂಮಿಕೆಯಾಯಿತು. ಆದ್ದರಿಂದ ಈ ಕದನಗಳನ್ನು "ಕರ್ನಾಟಿಕ್ ಕದನ"ಗಳೆಂದು ಚರಿತ್ರೆಯಲ್ಲಿ ಗುರುತಿಸುತ್ತಾರೆ.

© KTBS NOT TO BE REPUBLISHED

**ಯುದ್ಧಗಳ ಕಾರಣಗಳು:** ಆರ್ಕಾಟ್ (ತಮಿಳುನಾಡು) ಕರ್ನಾಟಿಕದ ರಾಜಧಾನಿಯಾಗಿತ್ತು. ಆರ್ಕಾಟಿನ ನವಾಬನು ಮರಣ ಹೊಂದಿದ ಬಳಿಕ ಆರ್ಕಾಟ್ ನವಾಬಗಿರಿಯ ಉತ್ತರಾಧಿಕಾರಕ್ಕಾಗಿ ಚಂದಾಸಾಹೇಬ್ ಮತ್ತು ಮಹಮ್ಮದ್ ಆಲಿ ಇವರ ನಡುವೆ ಕಲಹ ಉಂಟಾಯಿತು. ಚಂದಾಸಾಹೇಬ್ ಫ್ರೆಂಚರ ಸಹಾಯವನ್ನೂ, ಮಹಮ್ಮದ್ ಆಲಿಯು ಇಂಗ್ಲಿಷರ ಸಹಾಯವನ್ನು ಯಾಚಿಸಿದರು. ಇಂಗ್ಲಿಷರು ಮತ್ತು ಫ್ರೆಂಚರು ಕಲಹದಲ್ಲಿ ಮಧ್ಯಪ್ರವೇಶಿಸಿದರು. ಅವರ ದೂರಗಾಮಿ ರಾಜಕೀಯ ಹಿತಾಸಕ್ತಿಗಳೇ ಮಧ್ಯಪ್ರವೇಶಕ್ಕೆ ಕಾರಣವಾಗಿದ್ದವು.

ಚತುರನಾದ ರಾಬರ್ಟ್ ಕ್ಲೈವ್ ಇಂಗ್ಲಿಷ್ ಸೇನೆಯ ನಾಯಕನಾಗಿದ್ದನು. ಮಹತ್ವಾಕಾಂಕ್ಷೆಯ ಗವರ್ನರ್ ಡೂಪ್ಲೆ ಫ್ರೆಂಚ್ ಸೇನಾನಾಯಕ. ಅಂತಿಮವಾಗಿ ಮೂರನೇ ಕರ್ನಾಟಿಕ್ ಯುದ್ಧದಲ್ಲಿ ಇಂಗ್ಲಿಷರು ಜಯಶಾಲಿಗಳಾದರು. ಪರಿಣಾಮವಾಗಿ ಭಾರತದಲ್ಲಿ ಫ್ರೆಂಚರು ಮೂಲೆ ಗುಂಪಾದರು.

ಮೊದಲ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರು ಮೇಲುಗೈ ಸಾಧಿಸಿದರು. ಇದು 'ಎಕ್ಸ್-ಲಾ-ಚಾಪೆಲ' ಒಪ್ಪಂದದೊಂದಿಗೆ ಅಂತ್ಯಗೊಂಡಿತು.

ಎರಡನೇ ಕರ್ನಾಟಿಕ್ ಯುದ್ಧದ ಕೊನೆಯ ಹೊತ್ತಿಗೆ ಇಂಗ್ಲಿಷರು ಆರ್ಕಾಟಿನಲ್ಲಿಯೂ ಫ್ರೆಂಚರು ಹೈದರಾಬಾದಿನಲ್ಲಿಯೂ ತಮ್ಮ ಪ್ರಾಬಲ್ಯವನ್ನು ಕಾಯ್ದುಕೊಂಡರು.

@KTBS NOT TO BE REPUBLISHED

### ಫ್ರೆಂಚರ ಸೋಲಿಗೆ ಕಾರಣಗಳು



ಡ್ಯೂಪ್ಲೆ

- ಫ್ರೆಂಚರು ವ್ಯಾಪಾರವನ್ನು ನಿರ್ಲಕ್ಷಿಸಿ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ತೋರಿದರು. ಆದರೆ ಇಂಗ್ಲಿಷರು ವ್ಯಾಪಾರದ ಮೇಲೆ ಹೆಚ್ಚು ಗಮನ ಹರಿಸಿ ವ್ಯಾಪಾರದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ರಾಜಕೀಯ ಪ್ರವೇಶಿಸಿದರು.
- ಇಂಗ್ಲಿಷ್ ನೌಕಾಪಡೆ ಫ್ರೆಂಚ್ ನೌಕಾಪಡೆಗಿಂತ ಪ್ರಬಲವಾಗಿತ್ತು.
- ಇಂಗ್ಲಿಷ್ ಅಧಿಕಾರಿಗಳು ಪರಸ್ಪರ ಸಹಕರಿಸಿ ಕಂಪನಿಯ ಹಿತಾಸಕ್ತಿ ಬಗ್ಗೆ ಹೆಚ್ಚು ಗಮನ ಹರಿಸಿದರು. ಫ್ರೆಂಚ್ ಅಧಿಕಾರಿಗಳು ಪರಸ್ಪರ ಸಹಕಾರ ನೀಡದೆ ತಮ್ಮೊಳಗೆ ಜಗಳವಾಡುತ್ತಿದ್ದರು.
- ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ ಖಾಸಗಿಯದಾಗಿದ್ದರೆ, ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸರ್ಕಾರಿ ಸ್ವಾಮ್ಯದ್ದಾಗಿತ್ತು.

# ಬಂಗಾಳದಲ್ಲಿ ಇಂಗ್ಲಿಷರ ಆಡಳಿತದ ಆರಂಭ

ಕರ್ನಾಟಿಕ್ ಯುದ್ಧಗಳ ಮೂಲಕ ದಕ್ಷಿಣ ಭಾರತದಲ್ಲಿ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮಿದ ಇಂಗ್ಲಿಷರು ಬಂಗಾಳದಲ್ಲೂ ತಮ್ಮ ಆಡಳಿತ ಸ್ಥಾಪನೆ ಮಾಡಿದರು. ಬಂಗಾಳವು ಮೊಗಲ್ ಸಾಮ್ರಾಜ್ಯದ ಸಂಪತ್ಭರಿತ ಪ್ರಾಂತ್ಯವಾಗಿತ್ತು. ಅದರ ಪ್ರಾಂತ್ಯಾಧಿಕಾರಿಯಾಗಿದ್ದ ಅಲಿವರ್ದಿ ಖಾನ್, ಮೊಗಲ್ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿದ್ದಾಗ ಸ್ವತಂತ್ರನಾದನು. ಆತನ ನಂತರ ಸಿರಾಜ್ ಉದ್ದೌಲ ಬಂಗಾಳದ ನವಾಬನಾದನು.



ಸಿರಾಜ್ ಉದ್ದೌಲ

ನವಾಬ ಸಿರಾಜನು ಯುವಕನಾದ್ದರಿಂದ ಇಂಗ್ಲಿಷರು ಅವನನ್ನು ಕಡೆಗಣಿಸಿ ಅವನ ಅನುಮತಿ ಪಡೆಯದೆ ಕಲ್ಕತ್ತದಲ್ಲಿ ಪೋರ್ಟ್ ವಿಲಿಯಂ ಕೋಟೆಯನ್ನು ಬಲಪಡಿಸಿದರು. ಅಲ್ಲದೆ ವ್ಯಾಪಾರದ ರಿಯಾಯಿತಿಗಳನ್ನು ದುರುಪಯೋಗ ಮಾಡುತ್ತಿದ್ದರು. ಇಂಗ್ಲಿಷರು ತನ್ನ ಆದೇಶಗಳನ್ನು ಪಾಲಿಸದೆ, ತನ್ನ ವೈರಿಗಳೊಡನೆ ಸೇರಿ ಕುತಂತ್ರ ಮಾಡುತ್ತಿದ್ದಾರೆಂದು ನವಾಬನು ಭಾವಿಸಿದನು. ಅದರಿಂದ ಕೋಪಗೊಂಡು ಇಂಗ್ಲಿಷ್ ಕೋಠಿಗಳನ್ನು ಸ್ವಾಧೀನ ಪಡಿಸಿಕೊಂಡನು. ಇದೇ ಮುಂದೆ ಪ್ಲಾಸಿ ಕದನಕ್ಕೆ ಕಾರಣವಾಯಿತು.

**ಪ್ಲಾಸಿ ಕದನ (1757):** ನವಾಬ ಸಿರಾಜ್ ಉದ್ದೌಲನ ದಾಳಿಯ ವಾರ್ತೆ ಕೇಳಿದ ಮದ್ರಾಸಿನ ಕಂಪೆನಿಯ ಅಧಿಕಾರಿಗಳು ರಾಬರ್ಟ್ ಕ್ಲೈವನ ನೇತೃತ್ವದಲ್ಲಿ ಕಲ್ಕತ್ತಕ್ಕೆ ಸೈನ್ಯ ರವಾನಿಸಿದರು. ಬಂಗಾಳದ ಪರಿಸ್ಥಿತಿಯನ್ನರಿತ ಕ್ಲೈವ್, ನವಾಬನ ವಿರುದ್ಧ ಒಳಸಂಚು ನಡೆಸಿದನು. ಸಿರಾಜನ ಸೇನಾನಿ ಮೀರ್ ಜಾಫರನಿಗೆ ನವಾಬಗಿರಿಯ ಆಸೆಯನ್ನು ತೋರಿಸಿ ರಹಸ್ಯ ಒಪ್ಪಂದ ಮಾಡಿಕೊಂಡನು.



ರಾಬರ್ಟ್ ಕ್ಲೈವ್



ಮೀರ್ ಜಾಫರ್

NOT TO BE REPUBLISHED ©KTBS

ನವಾಬನ ಸೇನಾನಿ ಮೀರ್ ಜಾಫರ್ ನವಾಬನಾಗುವ ಆಸೆಯಿಂದ ಇಂಗ್ಲಿಷರೊಡನೆ ಒಪ್ಪಂದ ಮಾಡಿಕೊಂಡನು. ಅದರಂತೆ ನವಾಬನಾದ ಕೂಡಲೇ ಇಂಗ್ಲಿಷರಿಗೆ 175 ಲಕ್ಷ ರೂಪಾಯಿ ಕೊಡಬೇಕಾಗಿತ್ತು. ಈ ಕಪ್ಪು ವ್ಯವಹಾರದಲ್ಲಿ ಅಮೀನಚಂದ್ ಎಂಬ ವರ್ತಕ ಮಧ್ಯಸ್ಥಿಕೆ ವಹಿಸಿದನು.

ಬ್ರಿಟಿಷರು ಮತ್ತು ಸಿರಾಜ್ ಉದ್ದೌಲನ ಸೈನ್ಯದ ನಡುವೆ ಪ್ಲಾಸಿ ಎಂಬಲ್ಲಿ 1757ರಲ್ಲಿ ಯುದ್ಧವಾಯಿತು. ಯುದ್ಧದಲ್ಲಿ ಮೀರ್ ಜಾಫರನು ಬ್ರಿಟಿಷರಿಗೆ ನೆರವಾದನು. ಅಂತಿಮವಾಗಿ ಸಿರಾಜ್ ಉದ್ದೌಲ ಸೋತು ಕೊಲ್ಲಲ್ಪಟ್ಟನು. ಮೀರ್ ಜಾಫರನು ಮಾಡಿದ ದ್ರೋಹದಿಂದ ಬ್ರಿಟಿಷರಿಗೆ ಜಯ ಲಭಿಸಿತು.

**ಪರಿಣಾಮಗಳು:** ಬ್ರಿಟಿಷರ ಕೃಪೆಯಿಂದ ಮೀರ್ ಜಾಫರ್ ಬಂಗಾಳದ ನವಾಬನಾದನು. ಆದರೆ ಅವನು ಬ್ರಿಟಿಷರ ಕೈಗೊಂಬೆಯಾದ. ಕಂಪನಿಯು ಹೇರಳ ಹಣ ಮತ್ತು 'ಇಪ್ಪತ್ತನಾಲ್ಕು ಪರಗಣ' ಎಂಬ ಜಿಲ್ಲೆಯ ಜಮೀನ್ದಾರಿ ಹಕ್ಕನ್ನು ಪಡೆಯಿತು. ಇದು ಕಂಪನಿಯು ಭಾರತದಲ್ಲಿ ಕಬಳಿಸಿದ ಪ್ರಪ್ರಥಮ ಭೂಭಾಗವಾಗಿತ್ತು. ಪ್ಲಾಸಿ ಕದನವು ಮುಂದಿನ ಬಕ್ಸಾರ್ ಕದನಕ್ಕೂ ಕಾರಣವಾಯಿತು. ವ್ಯಾಪಾರಿಗಳಾಗಿ ಬಂದಿದ್ದ ಇಂಗ್ಲಿಷರು ಒಮ್ಮಿಂದೊಮ್ಮೆ ಆಡಳಿತ ನಡೆಸುವ ಅಧಿಕಾರ ಪಡೆದರು. ಪ್ಲಾಸಿ ವಿಜಯವು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿಯಾಯಿತು.

NOT TO BE REPUBLISHED ©KTBS

## ಮುಖ್ಯ ಇಸವಿಗಳು

1711–1761 – ಭಾರತದಲ್ಲಿ ಮರಾಠರ ಪರಮಾಧಿಕಾಲದ ಕಾಲ

1739 – ನಾದಿರ್‌ಷಾ ಮೊಗಲ ರಾಜ್ಯದ ಮೇಲೆ ದಾಳಿ ಮಾಡಿದ್ದು.

1757 – ಪ್ಲಾಸಿ ಕದನ

1761 – ಮೂರನೇ ಪಾಣಿಪತ್ ಕದನ

## ಅಭ್ಯಾಸಗಳು

**I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1 ಇತಿಹಾಸಕಾರರು ಯಾವ ಶತಮಾನವನ್ನು 'ಮರಾಠರ ಪರಮಾಧಿಕಾರದ ಕಾಲ' ಎಂದು ಕರೆಯುತ್ತಾರೆ?

2 ಮೂರನೇ ಪಾಣಿಪತ್ ಕದನ ಯಾರ ನಡುವೆ ನಡೆಯಿತು?

3 ಕರ್ನಾಟಿಕ್ ಯುದ್ಧಗಳಲ್ಲಿ ಅಂತಿಮವಾಗಿ ಗೆದ್ದವರು ಯಾರು?

4 ಪ್ಲಾಸಿ ಕದನವು ಯಾರ ನಡುವೆ ನಡೆಯಿತು?

**II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಪೇಶ್ವೆ ಒಂದನೆಯ ಬಾಜೀರಾವ್‌ನ ಸಾಧನೆಗಳನ್ನು ತಿಳಿಸಿರಿ.

2 ಪ್ಲಾಸಿ ಕದನದ ಕಾರಣಗಳು ಯಾವುವು?

3 ಪ್ಲಾಸಿ ಕದನ ಏಕೆ ಮಹತ್ವದ್ದಾಗಿದೆ?



**ಚಟುವಟಿಕೆ**

ರಾಬರ್ಟ್ ಕ್ಲೈವ್ ಮತ್ತು ಡ್ಯೂಪ್ಲೆ ಇವರನ್ನು ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸಿರಿ.

©KTBS NOT TO BE REPUBLISHED

| ಅಧ್ಯಾಯ 5 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ (1758–1856) |
|---|---|

P5V3P7

**ಪಾಠದ ಪರಿಚಯ**

ಭಾರತದಲ್ಲಿ 1758–1856ರ ಕಾಲಾವಧಿಯಲ್ಲಿ ಬ್ರಿಟಿಷರು ರಾಜಕೀಯ ಹಾಗೂ ಆರ್ಥಿಕ ಶಕ್ತಿಯಾಗಿ ಹೇಗೆ ಮೂಡಿ ಬಂದರು ಎಂಬುದೇ ಈ ಪಾಠದ ಮುಖ್ಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ನಿರ್ಣಾಯಕವಾದ ಬಕ್ಸಾರ್ ಕದನ, ದಿವಾನಿ ಹಕ್ಕಿನ ಪ್ರಾಪ್ತಿ, ಆಂಗ್ಲೋ–ಮೈಸೂರು, ಆಂಗ್ಲೋ–ಸಿಖ್ ಮತ್ತು ಆಂಗ್ಲೋ–ಮರಾಠ ಯುದ್ಧಗಳನ್ನು ನಿರೂಪಿಸಲಾಗಿದೆ, 'ಸಹಾಯಕ ಸೈನ್ಯ ಪದ್ಧತಿ' ಮತ್ತು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ಬ್ರಿಟಿಷರ ಕುಟಿಲ ನೀತಿಗಳನ್ನು ವಿವರಿಸಲಾಗಿದೆ. ಬ್ರಿಟಿಷರ ಧೋರಣೆಗಳಿಂದ ಬೇಸತ್ತ ಭಾರತೀಯರು 1857ರಲ್ಲಿ ಏಕೆ ಬಂಡಾಯವೆದ್ದರು ಎಂಬುದಕ್ಕೆ ಈ ಪಾಠ ಹಿನ್ನೆಲೆಯಾಗಿದೆ.

**ಸಾಮರ್ಥ್ಯಗಳು**

1 ದಿವಾನಿ ಹಕ್ಕಿನ ಪ್ರಾಪ್ತಿಯ ರಾಜಕೀಯ ಹಾಗೂ ಆರ್ಥಿಕ ಆಯಾಮಗಳನ್ನು ಅರಿಯುವುದು.

2 ಮೈಸೂರು, ಸಿಖ್ ಮತ್ತು ಮರಾಠ ಯುದ್ಧಗಳ ಅಂತಿಮ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

3 ವೆಲ್ಲೆಸ್ಲಿ ಮತ್ತು ಡಾಲ್‌ಹೌಸಿಯ ಎರಡು ಬಹು ಮುಖ್ಯ ಕುಟಿಲ ನೀತಿಯ ಒಳ ಉದ್ದೇಶವನ್ನು ಅರಿಯಲು ಸಮರ್ಥರಾಗುವುದು.

4 ಭಾರತದ ರೇಖಾ ನಕಾಶೆಯಲ್ಲಿ 1805 ಮತ್ತು 1856ರಲ್ಲಿ ಬ್ರಿಟಿಷರ ವಶವಿದ್ದ ಭೂಭಾಗಗಳನ್ನು ತುಲನೆ ಮಾಡುವರು ಮತ್ತು ಗುರುತಿಸುವುದು.

NOT TO BE REPUBLISHED ©KTBS

ಈಸ್ಟ್ ಇಂಡಿಯಾ ಕಂಪನಿ ರಾಬರ್ಟ್ ಕ್ಲೈವನನ್ನು ಬಂಗಾಳದ ಪ್ರಥಮ ಗವರ್ನರ್ ಆಗಿ ನೇಮಿಸಿತು (1758). ಭಾರತದಲ್ಲಿ ಬ್ರಿಟಿಷರ ಪರಮಾಧಿಕಾರಕ್ಕೆ ತಳಹದಿ ಹಾಕಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಎರಡು ವರ್ಷಗಳ ಬಳಿಕ ತನ್ನ ನಾಡಿಗೆ ಮರಳಿದ ಕ್ಲೈವನು ಭಾರತದಿಂದ ದೋಚಿಕೊಂಡು ಹೋದ ಸಂಪತ್ತಿನಿಂದಾಗಿ ಭಾರಿ ಶ್ರೀಮಂತನಾದನು.

## ಇಂಗ್ಲಿಷರ ದುರಾಡಳಿತ

ಕ್ಲೈವನ ನಿರ್ಗಮನದ ಅನಂತರ ಕಂಪನಿಯ ನೌಕರರು ಖಾಸಗಿ ವ್ಯಾಪಾರದಲ್ಲಿ ಇನ್ನಷ್ಟು ತೊಡಗಿಸಿಕೊಳ್ಳುತ್ತ ಭರ್ಜರಿ ಲಾಭ ಗಳಿಸಿದರು. ಅವರ ಆಸೆಬುರುಕತನಕ್ಕೆ ಕೊನೆಯಿರಲಿಲ್ಲ.

ಬ್ರಿಟಿಷ್ ಗವರ್ನರರೂ ಸೇರಿದಂತೆ ಕಂಪನಿಯ ನೌಕರರು ಲಂಚಕೋರರಾಗಿದ್ದರು. ದುರಾಡಳಿತದಿಂದ ಜನರು ಸೊರಗಿ ಹೋಗಿದ್ದರು. ಇಂಥ ಪರಿಸ್ಥಿತಿಯ ಕಾಲವನ್ನು ಬ್ರಿಟಿಷ್ ಇತಿಹಾಸಕಾರರೊಬ್ಬನು "ಬಹಿರಂಗ ಮತ್ತು ನಾಚಿಕೆಯಿಲ್ಲದ ಲೂಟಿಯ ಕಾಲ" ಎಂದು ಬಣ್ಣಿಸಿದ್ದಾನೆ. ಹೀಗಾಗಿ ಬಂಗಾಳದ ಶ್ರೀಮಂತಿಕೆ ಬಹುಬೇಗ ಇಳಿಯಲಾರಂಭಿಸಿತು.

ನವಾಬ ಮೀರ್ ಜಾಫರನಿಂದ ಇನ್ನು ಮುಂದೆ ಹಣ, ಸಂಪತ್ತು ಸಿಗಲಾರದೆಂದು ಇಂಗ್ಲಿಷರಿಗೆ ಬಹುಬೇಗ ಮನವರಿಕೆಯಾಯಿತು. ಆದ್ದರಿಂದ ಬ್ರಿಟಿಷರು ಅವನನ್ನು ಪದಚ್ಯುತಿಗೊಳಿಸಿ ಅವನ ಅಳಿಯ ಮೀರ್‌ಕಾಸಿಂನನ್ನು ನವಾಬನ ಹುದ್ದೆಗೇರಿಸಿದರು. ಇದಕ್ಕೆ ಪ್ರತಿಯಾಗಿ ಮೀರ್ ಕಾಸಿಂ ಮೂರು ಜಿಲ್ಲೆಗಳ ಜಮೀನ್ದಾರಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು.

## ಬಕ್ಸಾರ್ ಕದನ (1764) – ಕಾರಣಗಳು ಮತ್ತು ಫಲಿತಾಂಶಗಳು

ಮೀರ್ ಕಾಸಿಂ ಸ್ವತಂತ್ರ ಮನೋಭಾವದವನಾಗಿದ್ದನು. ಬ್ರಿಟಿಷರು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ದಸ್ತಕಗಳನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತಗೊಳಿಸಿದನು. ಇದರಿಂದ ಕುಪಿತಗೊಂಡ ಬ್ರಿಟಿಷರು ಆತನನ್ನು ನವಾಬಗಿರಿಯಿಂದ ಕಿತ್ತೊಗೆದರು. ಆತನು ಸೇಡು ತೀರಿಸಿಕೊಳ್ಳಲು ಔದ್‌ನ ನವಾಬ ಮತ್ತು ಮೊಗಲ್ ರಾಜನೊಂದಿಗೆ ಸೇರಿ ಒಂದು ಸೈನಿಕ ಮೈತ್ರಿಕೂಟವನ್ನು ಮಾಡಿಕೊಂಡನು. ಈ ಮೈತ್ರಿಕೂಟವನ್ನು ಬ್ರಿಟಿಷರು ಬಕ್ಸಾರ್ ಎಂಬಲ್ಲಿ ನಡೆದ ಕದನದಲ್ಲಿ ಪರಾಜಯಗೊಳಿಸಿದರು. ಕದನದ ಪರಿಣಾಮವಾಗಿ ಬ್ರಿಟಿಷರು ಇನ್ನಷ್ಟು ಪ್ರಬಲರಾದರು. ದುರ್ಬಲನಾಗಿದ್ದ ಮೊಗಲ್ ರಾಜನು ಬ್ರಿಟಿಷರ ಆಶ್ರಯ ಯಾಚಿಸಿದನು.

ಬ್ರಿಟಿಷ್ ವರ್ತಕರು ತೆರಿಗೆ ನೀಡದೆ ವ್ಯಾಪಾರ ಕೈಗೊಳ್ಳಲು ನೀಡಲಾದ ವಿಶೇಷ ಅನುಮತಿ ಪತ್ರವನ್ನು 'ದಸ್ತಕ್' ಎಂದು ಕರೆಯಲಾಗಿದೆ.

## ದಿವಾನಿ ಹಕ್ಕಿನ ಪ್ರಾಪ್ತಿ (1765)

ಕಂಪನಿಯ ವ್ಯವಹಾರಗಳನ್ನು ಸುವ್ಯವಸ್ಥೆಗೊಳಿಸಲು ಬ್ರಿಟಿಷ್ ಸರ್ಕಾರ ಕ್ಲೈವನನ್ನು ಮತ್ತೊಮ್ಮೆ ಭಾರತಕ್ಕೆ ಗವರ್ನರನನ್ನಾಗಿ ಕಳುಹಿಸಿತು. ಆತನು ಇಲ್ಲಿಗೆ ಬಂದೊಡನೆ ಕಂಪನಿಯ ಅಧಿಕಾರವನ್ನು ಕಾನೂನುಬದ್ಧಗೊಳಿಸಲು ಮುಂದಾಗಿ, ಮೊಗಲ್ ರಾಜ ಎರಡನೆ ಷಾಆಲಂನೊಡನೆ ಒಪ್ಪಂದವನ್ನು ಮಾಡಿಕೊಂಡನು (1765). ಒಪ್ಪಂದದಂತೆ ಕಂಪನಿಯು ಪ್ರತಿವರ್ಷ 26 ಲಕ್ಷ ರೂಪಾಯಿಯನ್ನು ಮೊಗಲ್ ರಾಜನಿಗೆ ನೀಡಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಪ್ರತಿಯಾಗಿ ಬ್ರಿಟಿಷರು ಬಂಗಾಳ (ಅಸ್ಸಾಂ ಸಹಿತ), ಬಿಹಾರ ಮತ್ತು ಒರಿಸ್ಸ ಪ್ರಾಂತ್ಯಗಳ 'ದಿವಾನಿ' ಹಕ್ಕನ್ನು ಪಡೆದರು. ದಿವಾನಿಯೆಂದರೆ ಭೂಕಂದಾಯವನ್ನು ಸಂಗ್ರಹಿಸುವ ಹಕ್ಕು.

© KTBS NOT TO BE REPUBLISHED

## ದಿವಾನಿಯ ಪರಿಣಾಮ

ಈಸ್ಟ್ ಇಂಡಿಯಾ ಕಂಪನಿಯು ದಿವಾನಿ ಹಕ್ಕಿನ ಮೂಲಕ ಬಂಗಾಳದಲ್ಲಿ ಅಧಿಕೃತ ಸಾರ್ವಭೌಮತ್ವವನ್ನು ಪಡೆದುಕೊಂಡಂತಾಯಿತು. ಅದು ತೆರಿಗೆಯನ್ನು ವಿಧಿಸುವ ಹಾಗೂ ಸಂಗ್ರಹಿಸುವ ವಿಚಾರದಲ್ಲಿ ಸ್ವಾತಂತ್ರ್ಯವನ್ನು ಹೊಂದಿತು. ಇದರಿಂದಾಗಿ ಬಂಗಾಳ ತೀವ್ರ ಆರ್ಥಿಕ ಶೋಷಣೆಗೆ ಒಳಗಾಯಿತು. ಕಂಪನಿಯು ಕಂದಾಯದ ರೂಪದಲ್ಲಿ ಕೋಟ್ಯಂತರ ರೂಪಾಯಿ ಸಂಗ್ರಹಿಸಿ, ತನ್ನ ಖಜಾನೆ ತುಂಬಿಸಿಕೊಂಡಿತು.

1767ರಲ್ಲಿ ರಾಬರ್ಟ್ ಕ್ಲೈವ್ ಇಂಗ್ಲೆಂಡಿಗೆ ಮರಳಿದನು. ಬಂಗಾಳದಲ್ಲಿ ದುರಾಡಳಿತ ನಡೆಯುತ್ತಲೆ ಇತ್ತು. ಇದೇ ವೇಳೆ ಭೀಕರ ಬರಗಾಲವೊಂದು ಕಾಲಿಟ್ಟಿತು. ಬಂಗಾಳದ ಸುಮಾರು ಮೂರನೇ ಒಂದು ಪಾಲು ಜನರು ಹಸಿವಿನಿಂದ ಅಸುನೀಗಿದರು! ಪರಿಸ್ಥಿತಿಯ ಲಾಭ ಪಡೆಯಲೆಂದೇ ಕಂಪನಿಯು ಮಾರುಕಟ್ಟೆಯಲ್ಲಿದ್ದ ಅಕ್ಕಿಯನ್ನೆಲ್ಲ ಖರೀದಿಸಿ, ಗರಿಷ್ಠ ಬೆಲೆಗೆ ಮಾರಿ, ಅಪಾರ ಲಾಭಗಳಿಸಿತು. ಇದು ಬ್ರಿಟಿಷರ ಆರ್ಥಿಕ ಶೋಷಣೆಯ ಮತ್ತೊಂದು ಮುಖವಾಗಿತ್ತು.




*ಬ್ರಿಟಿಷ್ ಅಧೀನ ಪ್ರದೇಶಗಳು 1805*

© KTBS NOT TO BE REPUBLISHED

## ರೆಗ್ಯುಲೇಟಿಂಗ್ ಆಕ್ಟ್ (1773)

ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಅನೈತಿಕ ಮಾರ್ಗದಿಂದ ಹಣವನ್ನು ಕೊಳ್ಳೆಹೊಡೆಯತೊಡಗಿದರು. ಈ ಹಿನ್ನೆಲೆಯಲ್ಲಿ ಇಂಗ್ಲೆಂಡಿನ ಸರಕಾರ ಕಂಪನಿಯ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸಿ, ಅದನ್ನು ಹತೋಟಿಯಲ್ಲಿಡಲು ನಿರ್ಧರಿಸಿತು. ಈ ನಿಟ್ಟಿನಲ್ಲಿ ಬ್ರಿಟಿಷ್ ಸಂಸತ್ತು 'ರೆಗ್ಯುಲೇಟಿಂಗ್ ಆಕ್ಟ್' ಎಂಬ ಕಾಯಿದೆಯನ್ನು ಜಾರಿಗೆ ತಂದಿತು. ಕಾಯಿದೆಯ ಪ್ರಕಾರ ವಾರನ್ ಹೇಸ್ಟಿಂಗ್ಸ್‌ನು ಪ್ರಥಮ ಗವರ್ನರ್ ಜನರಲ್ ಆಗಿ ನೇಮಿಸಲ್ಪಟ್ಟನು. ಅನಂತರ ಇಪ್ಪತ್ತಕ್ಕಿಂತಲೂ ಹೆಚ್ಚು ಮಂದಿ ಗವರ್ನರ್ ಜನರಲ್‌ಗಳು ಆಡಳಿತ ನಡೆಸಿದರು. ಈ ಅವಧಿಯಲ್ಲಿ ಬ್ರಿಟಿಷರು ಕಲ್ಕತ್ತವನ್ನು ತಮ್ಮ ಅಧಿಕಾರದ ಕೇಂದ್ರ ಸ್ಥಾನವನ್ನಾಗಿ ಪರಿವರ್ತಿಸಿಕೊಂಡು ಪ್ರಾಂತೀಯ ಸರಕಾರಗಳ ಕಾರ್ಯವೈಖರಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.

ರೆಗ್ಯುಲೇಟಿಂಗ್ ಕಾಯ್ದೆಯ ಲೋಪದೋಷಗಳನ್ನು ಸರಿಪಡಿಸಲು 1784ರಲ್ಲಿ ಬ್ರಿಟಿಷ್ ಸರಕಾರ ಪಿಟ್ಸ್ ಇಂಡಿಯ ಕಾಯ್ದೆಯನ್ನು ಜಾರಿಗೊಳಿಸಿತು.

© KTBS NOT TO BE REPUBLISHED

### • ಆಂಗ್ಲೋ–ಮೈಸೂರು ಯುದ್ಧಗಳು (1767–1799)

ಮಕ್ಕಳೇ, ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ವಿರುದ್ಧ ನಡೆಸಿದ ನಾಲ್ಕು ಯುದ್ಧಗಳನ್ನು ಕುರಿತು ನೀವು 6ನೇ ತರಗತಿಯಲ್ಲಿ ಕಲಿತಿದ್ದೀರಿ. ಈ ಯುದ್ಧಗಳ ಪರಿಣಾಮವಾಗಿ ಟಿಪ್ಪುವಿನ ಅಧೀನದಲ್ಲಿದ್ದ ಮೈಸೂರು ರಾಜ್ಯವನ್ನು ಬ್ರಿಟಿಷರು ವಶಪಡಿಸಿಕೊಂಡು ನಾಲ್ಕು ಭಾಗಗಳಾಗಿ ವಿಭಜನೆ ಮಾಡಿದರು. ಒಂದು ಭಾಗವನ್ನು ಬ್ರಿಟಿಷರು ಇಟ್ಟುಕೊಂಡರು. ಇನ್ನೊಂದು ಭಾಗವನ್ನು ನಿಜಾಮನಿಗೆ, ಮತ್ತೊಂದು ಭಾಗವನ್ನು ಮರಾಠರಿಗೆ, ಉಳಿದ ಭಾಗವನ್ನು ಮೈಸೂರು ಒಡೆಯರ್ ಮನೆತನಕ್ಕೆ ವಹಿಸಿಕೊಟ್ಟರು. ಇದರಿಂದ ದಕ್ಷಿಣ ಭಾರತದಲ್ಲಿ ಬ್ರಿಟಿಷರ ಶಕ್ತಿ ಕ್ರಮೇಣ ವೃದ್ಧಿಸಿತು.

### • ಆಂಗ್ಲೋ–ಮರಾಠ ಯುದ್ಧಗಳು (1775–1818)

ಮೂರನೇ ಪಾಣಿಪತ್ ಕದನದಲ್ಲಿ ಪರಾಜಯಗೊಂಡ ಮರಾಠರು ಮತ್ತೆ ಚೇತರಿಸಿಕೊಂಡರು. ಆದರೆ ಅಲ್ಪಕಾಲದಲ್ಲೇ ಅವರಲ್ಲಿ ಅಂತಃಕಲಹಗಳು ಉಂಟಾದವು. ಇದರ ಲಾಭ ಪಡೆಯಲು ಇಂಗ್ಲಿಷರು ಹಲವು ರೀತಿಯ ಯುಕ್ತಿಗಳನ್ನು ಬಳಸಿದರು. ಜೊತೆಗೆ ಮರಾಠರೊಂದಿಗೆ ಮೂರು ಬಾರಿ ಯುದ್ಧ ಮಾಡಿದರು. ಇವುಗಳನ್ನು ಆಂಗ್ಲೋ–ಮರಾಠ ಯುದ್ಧಗಳು ಎನ್ನುವರು. ಅಂತಿಮವಾಗಿ ಪೇಶ್ವೆ ಬ್ರಿಟಿಷರಿಗೆ ಶರಣಾದನು. ಈ ಯುದ್ಧಗಳಲ್ಲಿ ಮರಾಠರು ಸೋತು ಅವರ ಸಮಸ್ತ ಪ್ರದೇಶಗಳು ಇಂಗ್ಲಿಷರ ವಶವಾದವು. ಇಂಗ್ಲಿಷರು ಪೇಶ್ವೆಯ ಪಟ್ಟವನ್ನು ಕೂಡ ರದ್ದುಮಾಡಿದರು.



©KTBS NOT TO BE REPUBLISHED

*ಬ್ರಿಟಿಷ್ ಅಧೀನ ಪ್ರದೇಶಗಳು, 1856*

- **ಆಂಗ್ಲೋ-ಸಿಖ್ ಯುದ್ಧಗಳು**


*ರಣಜಿತ್ ಸಿಂಗ್*

18ನೇ ಶತಮಾನದ ಉತ್ತರಾರ್ಧದಲ್ಲಿ ಸಿಖ್ಖರಲ್ಲಿ ಅನೇಕ ಪಂಗಡಗಳಿದ್ದವು. ಇಂತಹ ಪಂಗಡವನ್ನು 'ಮಿಸಲ್' (misl) ಎನ್ನುವರು. ರಣಜಿತ್ ಸಿಂಗ್ ಎಂಬ ಪರಾಕ್ರಮಿ ಯುವಕನು ಮಿಸಲ್‌ವೊಂದರ ನಾಯಕನಾಗಿದ್ದನು. ಈತನು ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಲಾಹೋರಿನ (ಪಂಜಾಬ್) ರಾಜನಾದನು. ಸಿಖ್ಖರನ್ನು ಒಗ್ಗೂಡಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಸಮಾರು ನಾಲ್ಕು ದಶಕಗಳ ಕಾಲ ಪಂಜಾಬ್ ರಾಜ್ಯವನ್ನಾಳಿದ ಈತನು ಆಧುನಿಕ ಭಾರತದ ಓರ್ವ ಸ್ಮರಣೀಯ ಮಹಾರಾಜನಾಗಿದ್ದಾನೆ.

ರಣಜಿತ್ ಸಿಂಗನ ಮರಣಾನಂತರ (1839) ರಾಜ್ಯದಲ್ಲಿ ರಾಜಕೀಯ ಗೊಂದಲ ತಲೆದೋರಿತು. ಇಂತಹ ಸಂದರ್ಭವನ್ನೇ ಬ್ರಿಟಿಷರು ಕಾಯುತ್ತಿದ್ದರು. ಬ್ರಿಟಿಷ್ ಮತ್ತು ಸಿಖ್ಖರ ನಡುವೆ ನಾಲ್ಕು ಯುದ್ಧಗಳು ನಡೆದವು. ಕೊನೆಗೆ ಸಿಖ್ಖರು ಸೋಲುವಂತಾಯಿತು. ಪಂಜಾಬ್ ರಾಜ್ಯ ಬ್ರಿಟಿಷರ ವಶವಾಯಿತು (1849).

> ಅಫ್‌ಘನ್ ರಾಜನು ರಣಜಿತ್ ಸಿಂಗನ ರಾಜಕೀಯ ಆಶ್ರಯ ಪಡೆದಿದ್ದು ಈ ಸಂದರ್ಭದಲ್ಲಿ ಕೊಹಿನೂರ್ ವಜ್ರವನ್ನು ರಣಜಿತ್ ಸಿಂಗನಿಗೆ ಉಡುಗೊರೆಯಾಗಿ ನೀಡಿದ್ದನು.

## ಬ್ರಿಟಿಷರ ಕುಟಿಲ ನೀತಿಗಳು

- **ಸಹಾಯಕ ಸೈನ್ಯ ಪದ್ಧತಿ**


*ಲಾರ್ಡ್ ವೆಲ್ಲೆಸ್ಲಿ*

ಲಾರ್ಡ್ ವೆಲ್ಲೆಸ್ಲಿ (1799-1805) ಎಂಬ ಗವರ್ನರ್ ಜನರಲ್ ಬ್ರಿಟಿಷರ ಪರಮಾಧಿಕಾರವನ್ನು ಸ್ಥಾಪಿಸಲು ಉಪಾಯವೊಂದನ್ನು ಹೂಡಿದನು. ತಮ್ಮ ನೆರೆಯ ರಾಜರಿಂದ ಅಪಾಯ ಉಂಟಾಗದಂತೆ ಬ್ರಿಟಿಷರ ಸೇನಾ ಸಹಾಯ ಪಡೆಯಲು ಭಾರತದ ರಾಜರನ್ನು ಪ್ರೇರೇಪಿಸಿದನು. ಈ ನಿಟ್ಟಿನಲ್ಲಿ ಕೆಲವೊಮ್ಮೆ ಅವರನ್ನು ಬಲವಂತ ಕೂಡ ಮಾಡಿದನು. ಈ ಪದ್ಧತಿಯನ್ನು ಒಪ್ಪಿಕೊಂಡ ರಾಜರು ಇಂಗ್ಲಿಷ್ ಸೇನಾಪಡೆಯನ್ನು ತಮ್ಮ ರಾಜ್ಯದಲ್ಲಿಟ್ಟುಕೊಂಡು ಅದರ ಖರ್ಚು ವೆಚ್ಚವನ್ನು ನಗದು ರೂಪದಲ್ಲಿ ಬ್ರಿಟಿಷರಿಗೆ ನೀಡಬೇಕಿತ್ತು. ಇಲ್ಲವೆ, ರಾಜ್ಯದ ಭೂಭಾಗವೊಂದನ್ನು ಬ್ರಿಟಿಷರಿಗೆ ಹಸ್ತಾಂತರಿಸಬೇಕಿತ್ತು. ಬ್ರಿಟಿಷರು ಈ ನೀತಿಯನ್ನು

© KTBS NOT TO BE REPUBLISHED

'ಸಹಾಯಕ ಸೈನ್ಯ ಪದ್ಧತಿ' ಎಂದು ಕರೆದರು. ಇದನ್ನು ಒಪ್ಪಿದ ಭಾರತೀಯ ಸಂಸ್ಥಾನಗಳು ಬ್ರಿಟಿಷರ ಸೈನಿಕ ವೆಚ್ಚವನ್ನು ತಾವೇ ಭರಿಸಬೇಕಾಗಿತ್ತು.

### ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳು

- ಸೈನಿಕ ವೆಚ್ಚದ ಅಗಾಧ ಹೊರೆಯು ಭಾರತದ ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿತು.
- ಬ್ರಿಟಿಷರು ಭಾರಿ ಭೂಪ್ರದೇಶಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಈ ಪದ್ಧತಿಯನ್ನು ಒಪ್ಪಿಕೊಂಡ ರಾಜರು ಪರೋಕ್ಷವಾಗಿ ಬ್ರಿಟಿಷರ ಅಧೀನರಾದರು.
- ಈ ನೀತಿಗೆ ಒಳಪಟ್ಟ ರಾಜ್ಯಗಳು ತಮ್ಮ ಪರಮಾಧಿಕಾರವನ್ನೇ ಕಳೆದುಕೊಂಡವು.

### • ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ'ಯು ಲಾರ್ಡ್ ಡಾಲ್‌ಹೌಸಿ (1848–1856) ಎಂಬ ಗವರ್ನರ್ ಜನರಲ್ ಜಾರಿಗೆ ತಂದ ಒಂದು ವಿಲಕ್ಷಣ ನೀತಿಯಾಗಿತ್ತು. ಯಾವುದೇ ಭಾರತದ ರಾಜನಿಗೆ ಮಕ್ಕಳಿಲ್ಲದಿದ್ದರೆ ದತ್ತುಪುತ್ರನಿಗೆ ಪಟ್ಟವೇರುವ ಹಕ್ಕಿಲ್ಲವೆಂದು ಇವನು ಘೋಷಿಸಿದನು. ಇದರಂತೆ ಪುತ್ರ ಸಂತಾನವಿಲ್ಲದೆ ತೀರಿಕೊಂಡ ಅರಸರ ರಾಜ್ಯಗಳು ಬ್ರಿಟಿಷರ ವಶವಾದವು. ಈ ಕ್ರಮವು ಭಾರತದಲ್ಲಿ ಪ್ರಾಚೀನ ಕಾಲದಿಂದ ಆಚರಣೆಯಲ್ಲಿದ್ದ ದತ್ತು ಸ್ವೀಕಾರ ರೂಢಿಗೆ ವಿರುದ್ಧವಾಗಿತ್ತು. ಈ ಕುಟಿಲ ನೀತಿಯ ಪರಿಣಾಮವಾಗಿ ಔಧ್, ಸತಾರಾ, ನಾಗಪುರ ಮತ್ತು ಝಾನ್ಸಿ ಮುಂತಾದ ಹನ್ನೊಂದು ರಾಜ್ಯಗಳು ನೇರವಾಗಿ ಬ್ರಿಟಿಷರ ವಶವಾದುವು. ಒಟ್ಟಿನಲ್ಲಿ 1856ರಲ್ಲಿ ಡಾಲ್‌ಹೌಸಿಯು ತನ್ನ ದೇಶಕ್ಕೆ ಮರಳುವಾಗ ಭಾರತದ ಮೂರನೇ ಎರಡರಷ್ಟು ಭೂಪ್ರದೇಶವು ಬ್ರಿಟಿಷ್ ಆಳ್ವಿಕೆಗೊಳಪಟ್ಟಿತು.


*ಲಾರ್ಡ್ ಡಾಲ್‌ಹೌಸಿ*

ಭಾರತದಲ್ಲಿ ಬ್ರಿಟಿಷರ ವಿಜಯವು ಅವರ ರಾಜಕೀಯ ವಾಸ್ತವಪ್ರಜ್ಞೆ ಮತ್ತು ಸೇನಾಬಲದ ವಿಜಯವಾಗಿತ್ತು. ಇದಕ್ಕೆ ಸ್ಥಳೀಯ ಒಳಜಗಳಗಳು ಹಾಗೂ ಒಗ್ಗಟ್ಟಿನ ಕೊರತೆ ಪೂರಕವಾದವು. ಜನಹಿತಾಸಕ್ತಿಯು ತಮ್ಮ ಜವಾಬ್ದಾರಿ ಎಂದು ಬ್ರಿಟಿಷರು

NOT TO BE REPUBLISHED ©KTBS

ಎಂದೂ ಭಾವಿಸದಂತಿರಲಿಲ್ಲ. ಸಂಪತ್ತಿನ ಗಳಿಕೆ ಮತ್ತು ಅಧಿಕಾರ ಚಲಾವಣೆಗಳೇ ಅವರ ಗುರಿಯಾಗಿತ್ತು. ಇದರಿಂದ ರೋಸಿಹೋದ ಜನರು 1857ರಲ್ಲಿ ವ್ಯಾಪಕವಾಗಿ ದಂಗೆಯೆದ್ದರು. ಇದನ್ನು ಕೆಲವು ಲೇಖಕರು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದಿದ್ದಾರೆ.

### ಮುಖ್ಯ ಇಸವಿಗಳು

| | | |
|---|---|---|
| 1764 | – | ಬಕ್ಸಾರ್ ಕದನ |
| 1765 | – | ದಿವಾನಿ ಹಕ್ಕಿನ ಪ್ರಾಪ್ತಿ |
| 1799–1805 | – | ವೆಲ್ಲೆಸ್ಲಿಯ ಆಡಳಿತ – ಸಹಾಯಕ ಸೈನ್ಯ ಪದ್ಧತಿ |
| 1848 | – | ಡಾಲ್‌ಹೌಸಿಯ ಆಡಳಿತ – ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ |

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 ಬಕ್ಸಾರ್ ಕದನ ಯಾರ ನಡುವೆ ನಡೆಯಿತು?

2 ದಿವಾನಿ ಹಕ್ಕು ಎಂದರೇನು?

3 ರಣಜಿತ್ ಸಿಂಗ್ ಯಾರು?

4 ಸಹಾಯಕ ಸೈನ್ಯ ಪದ್ಧತಿಯನ್ನು ಯಾರು ಜಾರಿಗೆ ತಂದರು?

### II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1 ದಿವಾನಿ ಹಕ್ಕನ್ನು ಇಂಗ್ಲಿಷರು ಹೇಗೆ ಪಡೆದರು? ಅದರ ಪರಿಣಾಮವೇನಾಯಿತು?

2 ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳು ಯಾವುವು?

3 ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯು ಏಕೆ ನ್ಯಾಯಬದ್ಧವಾಗಿರಲಿಲ್ಲ?

© KTBS NOT TO BE REPUBLISHED

| ಅಧ್ಯಾಯ 6 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು |
|---|---|

Y6Z3W6

**ಪಾಠದ ಪರಿಚಯ**

1600ರಿಂದ 1757ರ ತನಕ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಕೇವಲ ಒಂದು ವ್ಯಾಪಾರಿ ಕಂಪನಿಯಾಗಿತ್ತು. ವ್ಯಾಪಾರಿ ಹಿತಾಸಕ್ತಿಯನ್ನು ಹೊತ್ತು ಬಂದ ಬ್ರಿಟಿಷರು ಕ್ರಮೇಣ ರಾಜಕೀಯ ಆಸಕ್ತಿಯನ್ನು ಬೆಳೆಸಿಕೊಂಡರು. ಆರಂಭದಲ್ಲಿ ಭಾರತದ ವಿವಿಧ ರಾಜಕೀಯ ಶಕ್ತಿಗಳಿಗೆ ಮನವಿಗಳನ್ನು ಸಲ್ಲಿಸುತ್ತ ತಮ್ಮ ವ್ಯಾಪಾರಿ ಹಿತಾಸಕ್ತಿಯನ್ನು ಬೆಳೆಸಿಕೊಂಡರು. ಕ್ರಮೇಣ ಅವರು ಮನವಿ ಸೂತ್ರದ ಬದಲಿಗೆ ಯುದ್ಧ ಸೂತ್ರವನ್ನು ಅಳವಡಿಸಿದರು. ಇದರಿಂದ ರಾಜಕೀಯವಾಗಿ ಬಲಾಢ್ಯರಾದರು. ಯುದ್ಧಗಳಿಂದ ಪಡೆದ ಭಾರತವನ್ನು ಬೌದ್ಧಿಕವಾಗಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳುವ ದೂರಗಾಮಿ ಉಪಾಯಗಳನ್ನು ರೂಪಿಸಿದರು. ಅವರ ದೂರಗಾಮಿ ಕನಸನ್ನು ಈಡೇರಿಸಿಕೊಳ್ಳಲು ಆಡಳಿತದ ಸುಧಾರಣೆಗಳನ್ನು ಒಂದು ಸಾಧನಾಮಾರ್ಗವಾಗಿ ಬಳಸಿಕೊಂಡರು. ರಾಜಕೀಯ, ಅರ್ಥವ್ಯವಸ್ಥೆ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದರು. ತಮ್ಮ ಬಹುಮುಖಿ ಹಿತಾಸಕ್ತಿಯೇ ಅವರ ಲೆಕ್ಕಾಚಾರವಾಗಿತ್ತು. ಆದರೆ ಜಾರಿಗೆ ಬಂದ ಕಾನೂನುಗಳನ್ನು 'ಸುಧಾರಣೆ' ಎಂದು ಕರೆದರು. ಆರಂಭದಲ್ಲಿ ಭಾರತೀಯರು ಹಾಗೆಯೇ ನಂಬತೊಡಗಿದರು. ಅವರು ಜಾರಿಗೊಳಿಸಿದ ಸುಧಾರಣೆಗಳಿಂದ ಭಾರತೀಯ ಸಮಾಜದ ಮೇಲೆ ಒಳ್ಳೆಯ ಪರಿಣಾಮಗಳಾಗಿದ್ದರೆ ಅದು ಆಕಸ್ಮಿಕ ಎಂದು ನಾವು ಭಾವಿಸಬಹುದು. ಈ ಪಾಠದಲ್ಲಿ 'ಸುಧಾರಣೆ'ಗಳಿಗೆ ಸಂಬಂಧಿಸಿದಂತೆ ಆರು ಕ್ಷೇತ್ರಗಳನ್ನು ಆರಿಸಿ ವಿವೇಚನೆ ನಡೆಸಲಾಗಿದೆ. ಆಡಳಿತ, ನ್ಯಾಯಾಂಗ, ಕಂದಾಯ, ಇಂಗ್ಲಿಷ್ ಶಿಕ್ಷಣ, ವ್ಯಾಪಾರ ಮತ್ತು ವಾಣಿಜ್ಯ ಮತ್ತು ಸಾಮಾಜಿಕ ಸುಧಾರಣೆಗಳು ಇವೇ ಆ ಆರು ಕ್ಷೇತ್ರಗಳು.

**ಸಾಮರ್ಥ್ಯಗಳು**

1 ಬ್ರಿಟಿಷ್ ಗವರ್ನರ್ ಜನರಲ್ ಮತ್ತು ವೈಸರಾಯ್‌ಗಳು ಜಾರಿಗೆ ತಂದ ವಿವಿಧ ಸುಧಾರಣೆಗಳನ್ನು ಅರಿತುಕೊಳ್ಳುವುದು.

2 ನಾಗರಿಕ ಸೇವೆ, ಸೇನಾಪಡೆ, ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿಯ ಸುಧಾರಣೆಗಳನ್ನು ತಿಳಿದುಕೊಳ್ಳುವುದು.

3 ಕಂದಾಯ ವ್ಯವಸ್ಥೆಯಲ್ಲಿ ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿಯ ಗುಣಾವಗುಣಗಳನ್ನು ಗುರುತಿಸುವುದು.

4 ಭಾರತಕ್ಕೆ ಪ್ರವೇಶ ಮಾಡಿದ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಕುರಿತು ಮಾಹಿತಿ ಪಡೆಯುವುದು.

5 ವ್ಯಾಪಾರ ಮತ್ತು ಕೈಗಾರಿಕೆಗಳಿಂದಾದ ಪ್ರಭಾವಗಳನ್ನು ಪಟ್ಟಿಮಾಡುವುದು.

6 ಸಮಾಜದಲ್ಲಿಯ ಅಮಾನವೀಯ ಪದ್ಧತಿಗಳನ್ನು ಹೋಗಲಾಡಿಸಲು ಜಾರಿಗೆ ತಂದ ಶಾಸನಗಳ ಬಗ್ಗೆ ತಿಳಿದುಕೊಳ್ಳುವುದು.

© KTBS NOT TO BE REPUBLISHED

## 6.1 ಆಡಳಿತ

ಭಾರತದಲ್ಲಿ ಬ್ರಿಟಿಷ್ ಆಡಳಿತದ ಆಧಾರ ಸ್ತಂಭಗಳೆಂದರೆ ನಾಗರಿಕ ಸೇವೆ, ಸೇನಾಪಡೆ ಮತ್ತು ಪೊಲೀಸ್ ವ್ಯವಸ್ಥೆ. ಇವುಗಳನ್ನೀಗ ಒಂದೊಂದಾಗಿ ಪರಿಶೀಲಿಸೋಣ.

### 1 ನಾಗರಿಕ ಸೇವೆ (Civil Service)

ಈಸ್ಟ್ ಇಂಡಿಯಾ ಕಂಪನಿಯು ತನ್ನ ಕಾರ್ಯಭಾರ ನಿರ್ವಹಿಸಲು ತನ್ನದೇ ಆದ ನೌಕರ ವರ್ಗವನ್ನು ಹೊಂದಿತ್ತು. ನೌಕರರು ಸಂಬಳವಲ್ಲದೆ ಖಾಸಗಿ ವ್ಯಾಪಾರದಲ್ಲಿ ತೊಡಗುವ ಮೂಲಕ ಹೇರಳವಾಗಿ ಲಾಭಗಳಿಸುತ್ತಿದ್ದರು. ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ವಿಸ್ತಾರವಾಗುತ್ತಿದ್ದಂತೆ ನೌಕರರಿಗೆ ವ್ಯಾಪಾರವಲ್ಲದೆ ಆಡಳಿತ ಕಾರ್ಯಗಳನ್ನು ನಿರ್ವಹಿಸಲು ಅವಕಾಶ ದೊರಕಿತು.

ಕಾರ್ನವಾಲೀಸನು ಆಡಳಿತದ ವಿವಿಧ ಶಾಖೆಗಳಲ್ಲಿ ಸಾರ್ವಜನಿಕ ಸೇವೆಯನ್ನು ವ್ಯವಸ್ಥಿತಗೊಳಿಸಿ ಅದನ್ನು ನಾಗರಿಕ ಸೇವೆಯನ್ನಾಗಿ ಪರಿವರ್ತಿಸಿದನು.

ಕಾರ್ನವಾಲೀಸನು ನೌಕರರಲ್ಲಿಯ ಲಂಚಗುಳಿತನ ಮತ್ತು ಭ್ರಷ್ಟಾಚಾರಕ್ಕೆ ಅವರು ಪಡೆಯುವ ಕಡಿಮೆ ವೇತನವೇ ಕಾರಣವೆಂದು ತಿಳಿದಿದ್ದ. ಆದುದರಿಂದ ನೌಕರರ ವೇತನವನ್ನು ಹೆಚ್ಚಿಸಿ ಕಾಣಿಕೆ ಸ್ವೀಕರಿಸುವುದನ್ನು ನಿರ್ಬಂಧಿಸಿದ. ಅಲ್ಲದೆ ಸೇವಾ ಜೇಷ್ಠತೆಯ ಆಧಾರದಲ್ಲಿ ಬಡ್ತಿ ನೀಡುವುದನ್ನು ಜಾರಿಗೆ ತಂದ.

@KTBS NOT TO BE REPUBLISHED

ಲಾರ್ಡ್ ವೆಲ್ಲೆಸ್ಲಿಯು ಅಧಿಕಾರಿಗಳಿಗೆ ಶಿಕ್ಷಣ ಮತ್ತು ತರಬೇತಿ ಒದಗಿಸಲು ಕಲ್ಕತ್ತದಲ್ಲಿ ಕಾಲೇಜನ್ನು ತೆರೆದನು. ಮೊದಲು ಕಂಪನಿಯ ಅಧಿಕಾರಿಗಳನ್ನು ಕಂಪನಿ ಡೈರೆಕ್ಟರುಗಳೇ ನೇಮಕ ಮಾಡುತ್ತಿದ್ದರು. ಅನಂತರ ಸರ್ಕಾರವು ನಾಗರಿಕ ಸೇವಾ ಅಧಿಕಾರಿಗಳನ್ನು ಐ.ಸಿ.ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ ಮಾಡಲಾರಂಭಿಸಿತು. ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳು ಇಂಗ್ಲೆಂಡಿನಲ್ಲಿ ಮಾತ್ರವೇ ನಡೆಯುತ್ತಿದ್ದವು.

ಐ.ಸಿ.ಎಸ್. (ಇಂಡಿಯನ್ ಸಿವಿಲ್ ಸರ್ವೀಸ್) ಅಂದರೆ ಭಾರತೀಯ ನಾಗರಿಕ ಸೇವೆ. ಇದು ಇವತ್ತಿನ ಐ.ಎ.ಎಸ್. (ಇಂಡಿಯನ್ ಆಡ್ಮಿನಿಸ್ಟ್ರೇಟಿವ್ ಸರ್ವಿಸ್) ಇದಕ್ಕೆ ಸಮಾನವಾದುದಾಗಿತ್ತು.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏಕಕಾಲದಲ್ಲಿಯೇ ಇಂಗ್ಲೆಂಡ್ ಮತ್ತು ಭಾರತದಲ್ಲಿ ನಡೆಸಬೇಕು ಮತ್ತು ಭಾರತೀಯರನ್ನು ಅಧಿಕ ಸಂಖ್ಯೆಯಲ್ಲಿ ನಾಗರಿಕ ಸೇವೆಯಲ್ಲಿ ನೇಮಿಸಬೇಕೆಂದು ಕಾಂಗ್ರೆಸ್ ಪಕ್ಷವು ಒತ್ತಾಯಿಸುತ್ತ ಬಂದಿತ್ತು. ಕಾಲಕ್ರಮೇಣ ಈ ಬೇಡಿಕೆಯನ್ನು ಈಡೇರಿಸಲಾಯಿತು.

ರವೀಂದ್ರನಾಥ ಟಾಗೋರರ ಸೋದರ ಸತ್ಯೇಂದ್ರನಾಥ ಟಾಗೋರರು ಐ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದ (1863) ಮೊಟ್ಟಮೊದಲ ಭಾರತೀಯರು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯು ಅಷ್ಟೊಂದು ದೀರ್ಘಕಾಲ ನಡೆಯಲು ನಾಗರಿಕ ಸೇವಾವರ್ಗ ಮಹತ್ವದ ಪಾತ್ರ ವಹಿಸಿತ್ತು. ವಾಸ್ತವವಾಗಿ, ಆಳ್ವಿಕೆಯನ್ನು ಕಾರ್ಯರೂಪದಲ್ಲಿ ನಡೆಸುತ್ತಿದ್ದುದು ಇದೇ ವರ್ಗ. ಇದೊಂದು ಪ್ರಬಲ ವರ್ಗವಾಗಿದ್ದು, ಸರ್ಕಾರದ ಧೋರಣೆಗಳ ಮೇಲೂ ಸಾಕಷ್ಟು ಪ್ರಭಾವ ಬೀರುತ್ತಿತ್ತು. ಇದೇ ವರ್ಗವು ಭಾರತೀಯರನ್ನು ತಾತ್ಸಾರದಿಂದ ನೋಡುತ್ತಿತ್ತು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಪುಟಿದೆದ್ದ ಪ್ರಗತಿಶೀಲ ಚಿಂತನೆಗಳನ್ನು ಈ ವರ್ಗ ವಿರೋಧಿಸಿತು.

ಇಂದು ಕೇಂದ್ರ ಮತ್ತು ರಾಜ್ಯಗಳ ಲೋಕಸೇವಾ ಆಯೋಗಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೌಕರರ ಆಯ್ಕೆ ಮಾಡುತ್ತಿವೆ.

## 2 ಸೈನ್ಯಾಡಳಿತ

ಸೇನಾಪಡೆಯು ಬ್ರಿಟಿಷ್ ಆಡಳಿತದ ಎರಡನೆಯ ಆಧಾರ ಸ್ತಂಭದಂತಿತ್ತು. ಸೇನಾಪಡೆಯ ಕರ್ತವ್ಯಗಳೆಂದರೆ ಭಾರತೀಯ ರಾಜ್ಯಗಳನ್ನು ಆಕ್ರಮಿಸುವುದು; ಆಂತರಿಕ ದಂಗೆಗಳನ್ನು ನಿಗ್ರಹಿಸುವುದು; ಮತ್ತು ಬ್ರಿಟಿಷ್ ಸಾಮ್ರಾಜ್ಯವನ್ನು ಏಷ್ಯ ಮತ್ತು ಆಫ್ರಿಕಗಳಲ್ಲಿ ವಿಸ್ತರಣೆ ಮಾಡುವುದಾಗಿತ್ತು.

ಸೇನಾಪಡೆಯಲ್ಲಿ ಬಹುಮಂದಿ ಭಾರತೀಯರಿದ್ದರು. 1857ರಲ್ಲಿ ಸೇನಾಪಡೆಯ 3,11,400 ಮಂದಿಯಲ್ಲಿ 2,65,900 ಮಂದಿ ಭಾರತೀಯರಿದ್ದರು. ಭಾರತೀಯ ಸೈನಿಕರ ಸ್ಥಿತಿಗತಿ ಹೀನಾಯವಾಗಿತ್ತು. ಅವರನ್ನು ಏಜಂಟರ ಮೂಲಕ, ಮುಖ್ಯವಾಗಿ ಉತ್ತರ ಪ್ರದೇಶ ಮತ್ತು ಬಿಹಾರದಿಂದ, ನೇಮಕಾತಿ ಮಾಡಲಾಗುತ್ತಿತ್ತು. ಭಾರತೀಯ ಸೈನಿಕರು ಐರೋಪ್ಯ ಅಧಿಕಾರಿಗಳ ಕೆಳಗೆ ಕೆಲಸ ಮಾಡಬೇಕಾಗಿತ್ತು. ಬ್ರಿಟಿಷ್ ನೌಕರರು ಎಂದೂ ಭಾರತೀಯರ ಕೈಕೆಳಗೆ ಕೆಲಸ ಮಾಡಲು ಸಿದ್ಧರಿರಲಿಲ್ಲ. ಒಬ್ಬ ಭಾರತೀಯ ಯೋಧ ಪಡೆಯಲು ಸಾಧ್ಯವಾಗುತ್ತಿದ್ದ ಅತ್ಯುನ್ನತ ಪದವಿಯೆಂದರೆ ಸುಬೇದಾರ್ ಹುದ್ದೆ ಮಾತ್ರವಾಗಿತ್ತು.

ಸೇನಾಪಡೆಯ ಎಲ್ಲಾ ಅಧಿಕಾರಿಗಳು ಬ್ರಿಟಿಷ್ ಪ್ರಜೆಗಳೇ ಆಗಿದ್ದರು. ಸೈನಿಕರಿಗೆ ತರಬೇತಿಯನ್ನು ನೀಡಲು ಡೆಹರಾಡೂನ್‌ನಲ್ಲಿ ಇಂಡಿಯನ್ ಮಿಲಿಟರಿ ಅಕಾಡೆಮಿಯನ್ನು ತೆರೆಯಲಾಗಿತ್ತು.

## 3 ಪೊಲೀಸ್ ವ್ಯವಸ್ಥೆ

ಬ್ರಿಟಿಷ್ ಆಡಳಿತದ ಮೂರನೆಯ ಆಧಾರ ಸ್ತಂಭವೇ ಪೊಲೀಸ್ ವ್ಯವಸ್ಥೆ. ಕಾರ್ನ್‌ವಾಲೀಸನು ಪೊಲೀಸ್ ಪಡೆಯನ್ನು ಕಾನೂನು ಮತ್ತು ಶಿಸ್ತಿನ ಪಾಲನೆಗಾಗಿ

@KTBS NOT TO BE REPUBLISHED

ಸ್ಥಾಪಿಸಿದ್ದನು. ಈ ನಿಟ್ಟಿನಲ್ಲಿ ಬ್ರಿಟಿಷ್ ಅಧೀನವಿದ್ದ ಎಲ್ಲಾ ಭೂಪ್ರದೇಶಗಳನ್ನು ಹಲವಾರು ವೃತ್ತಗಳನ್ನಾಗಿ ವಿಂಗಡಣೆಮಾಡಿ, ಪ್ರತಿ ವೃತ್ತದಲ್ಲಿ ಪೊಲೀಸ್ ಠಾಣೆಯೊಂದನ್ನು ಸ್ಥಾಪನೆ ಮಾಡಲಾಯಿತು.

ಬ್ರಿಟಿಷರು ಪೊಲೀಸ್ ಪಡೆಯನ್ನು ಭಾರತೀಯರನ್ನು ನಿಗ್ರಹಿಸುವುದಕ್ಕಾಗಿ ಬಳಸಿಕೊಂಡರು. ಬ್ರಿಟಿಷರಿಗೆ ತಮ್ಮ ವಿಧೇಯತೆಯನ್ನು ಪ್ರದರ್ಶಿಸುವುದಕ್ಕಾಗಿ ಭಾರತೀಯ ಪೊಲೀಸರು ತಮ್ಮವರನ್ನು ಹೊಡೆದು ಬಡಿದು ಚಿತ್ರಹಿಂಸೆ ನೀಡುತ್ತಿದ್ದರು. 1861ರ ನಂತರ ಪೊಲೀಸ್ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳನ್ನು ಬ್ರಿಟಿಷ್ ಸರಕಾರ ತಂದಿತು. ಇದಕ್ಕೆ 1857ರ ಮಹಾದಂಗೆ ಪ್ರಮುಖ ಕಾರಣವಾಗಿತ್ತು.

## 6.2 ನ್ಯಾಯಾಂಗ ವ್ಯವಸ್ಥೆ

ಬ್ರಿಟಿಷರು ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತರುವ ಮೊದಲು ನ್ಯಾಯವೆಂಬುದು ಹಳ್ಳಿಯ ಪಂಚಾಯಿತಿಗಳಲ್ಲಿ ತೀರ್ಮಾನವಾಗುವ ವಿಷಯವಾಗಿತ್ತು. ನ್ಯಾಯ ತೀರ್ಮಾನದಲ್ಲಿ ಊರಿನ ಪ್ರಮುಖರು (ಪಟೇಲ, ಶಾನುಭೋಗ ಮುಂತಾದವರು) ಭಾಗವಹಿಸುತ್ತಿದ್ದರು. ಈ ವ್ಯವಸ್ಥೆಯನ್ನು ಬದಲಿಸಿ ಬ್ರಿಟಿಷರು ಐರೋಪ್ಯ ಮಾದರಿಯ ನ್ಯಾಯಾಡಳಿತ ವ್ಯವಸ್ಥೆಯನ್ನು ರೂಪಿಸಿದರು. ನ್ಯಾಯಾಡಳಿತವನ್ನು ನಡೆಸಲು ಪ್ರತಿ ಜಿಲ್ಲೆಯಲ್ಲಿ ನ್ಯಾಯಾಲಯಗಳನ್ನು ತೆರೆಯಲಾಯಿತು. ಕಲ್ಕತ್ತ, ಮದ್ರಾಸ್ ಮತ್ತು ಮುಂಬೈಗಳಲ್ಲಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು 1774ರಲ್ಲಿ ವಾರೆನ್ ಹೇಸ್ಟಿಂಗ್ಸನು ಕಲ್ಕತ್ತದಲ್ಲಿ ಪ್ರಪ್ರಥಮ ಸುಪ್ರೀಂ ಕೋರ್ಟನ್ನು ಸ್ಥಾಪಿಸಿದನು.

ಮೆಕಾಲೆ ಆಯೋಗವು ಭಾರತೀಯ ದಂಡಸಂಹಿತೆಯ ಕರಡನ್ನು ಸಿದ್ಧಪಡಿಸಿತು. ಅದನ್ನು ಅನುಸರಿಸಿ ಸಿವಿಲ್ ಪ್ರೊಸೀಜರ್ ಸಂಹಿತೆ ಮತ್ತು ಕ್ರಿಮಿನಲ್ ಸಂಹಿತೆಗಳನ್ನು ಜಾರಿಗೆ ತರಲಾಯಿತು. ಸಿವಿಲ್ ಕೋರ್ಟಗಳನ್ನು 'ದಿವಾನಿ ಅದಾಲತ್' ಮತ್ತು ಕ್ರಿಮಿನಲ್ ಕೋರ್ಟಗಳನ್ನು 'ಫೌಜಿ ಅದಾಲತ್' ಎಂದು ಕರೆಯುತ್ತಿದ್ದರು.

**ಚಟುವಟಿಕೆ:** ಸಿವಿಲ್ ಪ್ರೊಸೀಜರ್ ಸಂಹಿತೆ ಮತ್ತು ಕ್ರಿಮಿನಲ್ ಸಂಹಿತೆ ಇವು ಏನು ಎಂಬುದನ್ನು ತಿಳಿದುಕೊಳ್ಳಿರಿ.

ಬ್ರಿಟಿಷರು ಜಾರಿಗೆ ತಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಯುರೋಪಿಯನ್ನರು ಮತ್ತು ಭಾರತೀಯರ ನಡುವೆ ಬೇಧಭಾವವಿತ್ತು. ಬ್ರಿಟಿಷರ ನ್ಯಾಯದಾನ ವ್ಯವಸ್ಥೆಯಲ್ಲಿ ಸಹ ವರ್ಣ ತಾರತಮ್ಯವಿತ್ತು. ಬ್ರಿಟಿಷರು ನ್ಯಾಯ ವ್ಯವಸ್ಥೆಯಲ್ಲಿಯೂ ಮೇಲುಗೈ ಹೊಂದಿದ್ದರು. ಕೆಳದರ್ಜೆಯ ಕೋರ್ಟುಗಳಲ್ಲಿ ಮುನ್ಸಿಫ್ (Munsifs) ಮತ್ತು ಅಮಿನ್ (Amins) ಎಂಬ ಭಾರತೀಯ ನ್ಯಾಯಾಧೀಶರು ಇರುತ್ತಿದ್ದರು. ಈ ಸ್ಥಾನಗಳೇ ಭಾರತೀಯರಿಗೆ ಸಿಗುತ್ತಿದ್ದ ಅತ್ಯುನ್ನತ ಸ್ಥಾನಗಳಾಗಿದ್ದವು.

© KTBS NOT TO BE REPUBLISHED

## 6.3 ಭೂಕಂದಾಯ ನೀತಿ

ಒಂದು ನಿಗದಿತ ಪ್ರಮಾಣದ ಆದಾಯವು ಸರ್ಕಾರದ ಖಜಾನೆಗೆ ಬರುವಂತೆ ಮಾಡುವುದಕ್ಕಾಗಿ ಬ್ರಿಟಿಷರು ಭೂಕಂದಾಯ ನೀತಿಗಳನ್ನು ಜಾರಿಗೆ ತಂದರು. ಅಲ್ಲದೆ. ಭಾರತದಲ್ಲಿ ಯುದ್ಧಗಳ ವೆಚ್ಚವನ್ನು ತುಂಬುವುದಕ್ಕಾಗಿ, ಕೈತುಂಬ ಸಂಬಳ ಪಡೆಯುತ್ತಿದ್ದ ಸಾವಿರಾರು ಜನ ಬ್ರಿಟಿಷ್ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇತರ ಉದ್ದೇಶಗಳಿಗಾಗಿ ಕಂಪನಿಗೆ ಅಗಾಧ ಹಣಕಾಸಿನ ಅವಶ್ಯಕತೆಯಿತ್ತು. ಅದಕ್ಕಾಗಿ ಕಂಪನಿಯು ಭಾರತದ ರೈತರಿಂದ ದುಬಾರಿಯಾದ ಭೂಕಂದಾಯವನ್ನು ವಸೂಲು ಮಾಡಿತು.

ತನ್ನ ಅಧಿಕಾರಾವಧಿಯಲ್ಲಿ ವಾರನ್ ಹೇಸ್ಟಿಂಗ್ಸ್ ಕಂದಾಯ ವಸೂಲಿಗಾಗಿ ಹರಾಜು ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದನು. ಹರಾಜಿನ ವೇಳೆ ಜಮೀನ್ದಾರರು ಪರಸ್ಪರ ಪೈಪೋಟಿಯಿಂದ ಹೆಚ್ಚು ಮೊತ್ತದ ಕಂದಾಯ ಕೊಡಲು ಒಪ್ಪಿದರೂ ನಂತರ ವಸೂಲಿಯಲ್ಲಿ ವಿಫಲರಾಗುತ್ತಿದ್ದರು. ಹೀಗೆ ಕಂದಾಯದ ಪ್ರಮಾಣವು ಏರುಪೇರಾಗುತ್ತಿತ್ತು. ತಮ್ಮ ಸಮಸ್ಯೆಗೆ ಪರಿಹಾರವಾಗಿ ಬ್ರಿಟಿಷರು ಇನ್ನಿತರ ಮೂರು ರೀತಿಯ ಕಂದಾಯ ಪದ್ಧತಿಗಳನ್ನು ಆಚರಣೆಗೆ ತಂದರು.

### (i) ಖಾಯಂ ಜಮೀನ್ದಾರಿ ಪದ್ಧತಿ (1793)

ಗವರ್ನರ್ ಜನರಲ್ ಕಾರ್ನ್‌ವಾಲೀಸನು ಬಂಗಾಳ, ಬಿಹಾರ, ಒರಿಸ್ಸಗಳಲ್ಲಿ ಭೂಕಂದಾಯವನ್ನು ಖಾಯಂ ನೆಲೆಯಲ್ಲಿ ನಿಗದಿಪಡಿಸಲು ನಿರ್ಧರಿಸಿದನು. ಕಂದಾಯ ಸಂಗ್ರಹಕ್ಕೆ ಸಂಬಂಧಿಸಿದಂತೆ, ಕಾರ್ನ್‌ವಾಲೀಸನು ಜಮೀನ್ದಾರರೊಡನೆ ಮಾಡಿಕೊಂಡ ಒಪ್ಪಂದವನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು. ಖಾಯಂ ಜಮೀನ್ದಾರಿ ಪದ್ಧತಿಯಡಿಯಲ್ಲಿ ಜಮೀನ್ದಾರರು ಬ್ರಿಟಿಷ್ ಸರ್ಕಾರದ ಏಜಂಟರಂತೆ ಕಾರ್ಯ ಮಾಡಿದರು. ಕಂಪನಿಯ ಗೇಣಿಯ ಪಾಲು ಖಾಯಂ ಆಗಿ ನಿಗದಿಯಾಗಿತ್ತು. ಆದುದರಿಂದ ಸರ್ಕಾರಕ್ಕೆ ನಿರ್ದಿಷ್ಟ ಪ್ರಮಾಣದ ಆದಾಯ ಬರುವಂತಾಯಿತು. ಕಂದಾಯ ವಸೂಲಿಗಾಗಿ ಸರ್ಕಾರ ಮಾಡುವ ವೆಚ್ಚ ಕಡಿಮೆಯಾಯಿತು. ಭೂಮಾಲೀಕರಾದ ಪ್ರಬಲ ಜಮೀನ್ದಾರರು ಅನೇಕ ಕಠಿಣ ಸಂದರ್ಭಗಳಲ್ಲಿ ಸರ್ಕಾರಕ್ಕೆ ಬೆಂಬಲ ನೀಡಿದರು. ತಮ್ಮನ್ನು ಬೆಂಬಲಿಸಲು ಮತ್ತು ಸಮರ್ಥಿಸಲು ಇಂತಹ ಅನೇಕ ಹೊಸ ವರ್ಗಗಳನ್ನು ಬ್ರಿಟಿಷರು ಸೃಷ್ಟಿ ಮಾಡಿದರು.

**ರೈತರ ಮೇಲೆ ಪರಿಣಾಮಗಳು:** ದುಬಾರಿಯಾದ ಕಂದಾಯ ಸಂಗ್ರಹಿಸುವ ಮೂಲಕ ಜಮೀನ್ದಾರರು ಕೃಷಿಕರ ಮೇಲೆ ದಬ್ಬಾಳಿಕೆ ನಡೆಸಿದರು. ಭೂಮಾಲಿಕರು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಯಾವುದೇ ಆಸಕ್ತಿವಹಿಸಲಿಲ್ಲ. ಬೆಳೆನಾಶವಾಗಿದ್ದರೂ ರೈತರು ಗೇಣಿಯನ್ನು ಪಾವತಿಸಬೇಕಿತ್ತು. ಒಟ್ಟಿನಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯಿಂದ ಕೃಷಿರಂಗ

© KTBS
NOT TO BE REPUBLISHED

ಕುಸಿಯಿತು. ತಮ್ಮ ಕೈಗಾರಿಕೆಗಳಿಗೆ ಬೇಕಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರನ್ನು ಒತ್ತಾಯಿಸುವ ಮೂಲಕ ರೈತರನ್ನು ಮತ್ತಷ್ಟು ಬಡವರನ್ನಾಗಿಸಿದ್ದರು. ಈ ಕಾರಣದಿಂದ ಜೀತಪದ್ಧತಿಯು ತೀವ್ರವಾಗಿ ಬೆಳೆಯಿತು.

### (ii) ರೈತವಾರಿ ಪದ್ಧತಿ (1820)

ರೈತವಾರಿ ಪದ್ಧತಿ ಎಂದರೆ ಮಧ್ಯವರ್ತಿಗಳ ಸಹಾಯವಿಲ್ಲದೆ ರೈತನೇ ನೇರವಾಗಿ ಸರ್ಕಾರಕ್ಕೆ ಕಂದಾಯ ಸಂದಾಯ ಮಾಡುವ ಪದ್ಧತಿಯಾಗಿದೆ. ಸರ್ಕಾರ ಮತ್ತು ಸಾಗುವಳಿದಾರನ ನಡುವಿನ ನೇರ ಸಂಬಂಧವೇ ರೈತವಾರಿ ಪದ್ಧತಿಯ ಮುಖ್ಯ ಲಕ್ಷಣವಾಗಿದೆ. ಈ ಪದ್ಧತಿಯನ್ನು ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ಜಾರಿಗೆ ತರಲಾಯಿತು. ಪರಿಣಾಮದಲ್ಲಿ ಈ ಪದ್ಧತಿಯು ಖಾಯಂ ಜಮೀನ್ದಾರಿ ಪದ್ಧತಿಗಿಂತ ಭಿನ್ನವಾಗಿರಲಿಲ್ಲ.

ರೈತವಾರಿ ಪದ್ಧತಿಯಡಿ ಭೂಮಿಯನ್ನು ಅಳತೆಮಾಡಿ, ಭೂಮಿಯ ಫಲವತ್ತತೆ, ನೀರಾವರಿ ಅನುಕೂಲತೆಗಳನ್ನು ಗಮನಿಸಿ ಕಂದಾಯವನ್ನು ನಿಗದಿ ಮಾಡಲಾಯಿತು. ಉತ್ಪನ್ನದ ನಿಗದಿತ ಭಾಗವನ್ನು (50 ಶೇಕಡ) ಕಂದಾಯವಾಗಿ ಪರಿವರ್ತಿಸಲಾಯಿತು. ಕಾಲಕಾಲಕ್ಕೆ ಕಂದಾಯವನ್ನು ನಿರ್ಣಯಿಸಲಾಗುತ್ತಿತ್ತು. ನಿಗದಿಪಡಿಸಿದ ಭೂಕಂದಾಯವು ವಿಪರೀತ ಹೆಚ್ಚಾಗಿರುತ್ತಿತ್ತು. ಕ್ಷಾಮ ಅಥವಾ ಪ್ರವಾಹದಿಂದ ಬೆಳೆ ಪೂರ್ಣವಾಗಿ ಹಾನಿಗೀಡಾದರೂ ರೈತರು ಕಂದಾಯವನ್ನು ತಪ್ಪದೆ ಪಾವತಿಸಬೇಕಾಗಿತ್ತು. ಈ ಪದ್ಧತಿಯನ್ನು ಮದ್ರಾಸ್ ಪ್ರಾಂತ್ಯದಾದ್ಯಂತ ಸರ್ ಥಾಮಸ್ ಮನ್ರೋ ಅವರು 1820ರಲ್ಲಿ ಜಾರಿಗೆ ತಂದರು.

©KTBS NOT TO BE REPUBLISHED

### (iii) ಮಹಲ್ವಾರಿ ಪದ್ಧತಿ

ಮಹಲ್ ಎಂದರೆ ಗ್ರಾಮ ಅಥವಾ ಎಸ್ಟೇಟ್ ಎಂದರ್ಥ. ಮಹಲ್‌ಗೆ ಭೂಕಂದಾಯವನ್ನು ನಿಗದಿಪಡಿಸಲಾಗುತ್ತಿತ್ತು. ಸ್ಥಳೀಯ ಜಮೀನ್ದಾರನು ಎಲ್ಲ ರೈತರ ಭೂಕಂದಾಯಕ್ಕೆ ಹೊಣೆಗಾರನಾಗಿರುತ್ತಿದ್ದ. 19ನೇ ಶತಮಾನದಲ್ಲಿ ಜಾರಿಗೆ ಬಂದ ಈ ಪದ್ಧತಿಯು ಉತ್ತರ ಪ್ರದೇಶ, ಮಧ್ಯ ಪ್ರದೇಶದ ಕೆಲವು ಭಾಗಗಳು ಮತ್ತು ಪಂಜಾಬಿನಲ್ಲಿ ಚಾಲ್ತಿಯಲ್ಲಿತ್ತು.

### ಭೂಕಂದಾಯ ಪದ್ಧತಿಗಳ ಒಟ್ಟು ಪರಿಣಾಮಗಳು

• ಜಮೀನನ್ನು ಮಾರಾಟದ ವಸ್ತುವನ್ನಾಗಿ ಬ್ರಿಟಿಷರು ಪರಿವರ್ತಿಸಿದರು. • ಜಮೀನಿನ ಹರಾಜು ಮತ್ತು ಮಾರಾಟ ಪ್ರಕರಣಗಳು ಹೆಚ್ಚಿದವು. • ಭೂಕಂದಾಯವನ್ನು ನಿಗದಿತ ರೂಪದಲ್ಲಿ ನೀಡುತ್ತಿದ್ದ ಕಾರಣ ಹಣದ ಮಹತ್ವ ಹೆಚ್ಚಾಯಿತು. • ಆದಾಯವನ್ನು

ಹೆಚ್ಚಿಸಿಕೊಳ್ಳುವ ಸಲುವಾಗಿ ಹಲವಾರು ಜಮೀನ್ದಾರರು ಆಹಾರ ಧಾನ್ಯಗಳಿಗೆ ಬದಲಾಗಿ ಹತ್ತಿ, ಸೆಣಬು, ನೆಲಗಡಲೆ, ಕಬ್ಬಿನಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರನ್ನು ಒತ್ತಾಯಿಸಿದರು. ವಾಣಿಜ್ಯ ಬೆಳೆಗಳು ರಫ್ತಿಗೆ ಯೋಗ್ಯವಾಗಿದ್ದು ಆಮೂಲಕ ಬ್ರಿಟಿಷರಿಗೆ ಲಾಭದಾಯಕವೆನಿಸಿತು. ಇದರ ಫಲವಾಗಿ ಆಹಾರ ವಸ್ತುಗಳ ಕೊರತೆ ತಲೆದೋರಿತು.

• ಜಮೀನ್ದಾರಿ ಪದ್ಧತಿಯಲ್ಲೇ ಅನೇಕ ಹೊಸ ರೈತ ವರ್ಗಗಳು ಹುಟ್ಟಿಕೊಂಡವು.

## 6.4 ಇಂಗ್ಲಿಷ್ ಶಿಕ್ಷಣ

ಶಿಕ್ಷಣವು ಪ್ರತಿ ವ್ಯಕ್ತಿಯನ್ನು ಸ್ವತಂತ್ರವನ್ನಾಗಿಸುವ ಸಾಧನ. ಶಿಕ್ಷಣದ ಮೂಲಕ ದೊರೆಯುವ ಅರಿವಿನಿಂದ ಬದುಕನ್ನು ಸುಮಧುರವಾಗಿ ರೂಪಿಸಿಕೊಳ್ಳಲು ಸಾಧ್ಯವಾಗಿಸುತ್ತದೆ. ಇಂಗ್ಲಿಷ್ ಸರಕಾರ, ಕ್ರೈಸ್ತ ಮಿಶನರಿಗಳು ಹಾಗೂ ಅನೇಕ ಭಾರತೀಯರು ಇಂಗ್ಲಿಷ್ ಶಿಕ್ಷಣದ ಪ್ರಸರಣದಲ್ಲಿ ಭಾಗಿಯಾದರು. ಇಂಗ್ಲಿಷ್ ಸರಕಾರ ಮತ್ತು ಕ್ರೈಸ್ತ ಮಿಶನರಿಗಳು ಆಡಳಿತ ನಿರ್ವಹಣೆ ಮತ್ತು ತಮ್ಮ ಧರ್ಮಪ್ರಸಾರಕ್ಕೆ ಇಂಗ್ಲಿಷ್ ಶಿಕ್ಷಣವನ್ನು ಜಾರಿಗೆ ತಂದರು. ಅವರು ಇಂಗ್ಲಿಷ್ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿದ್ದರಿಂದ ಭಾರತೀಯರು ಅದರ ಲಾಭವನ್ನು ಪಡೆದರು. ಎಲ್ಲ ವರ್ಗದವರಿಗೂ ಶಿಕ್ಷಣ ದೊರೆಯುವಂತಾಯಿತು.

1813ರ ಚಾರ್ಟರ್ ಕಾಯ್ದೆಯಲ್ಲಿ ಭಾರತೀಯರ ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿಡಲಾಯಿತು. ಆದರೆ ಈ ಹಣದಲ್ಲಿ ಸರ್ಕಾರವು 1823ರ ತನಕ ಒಂದು ರೂಪಾಯಿಯನ್ನು ಕೂಡ ಶಿಕ್ಷಣಕ್ಕಾಗಿ ಖರ್ಚು ಮಾಡಿರಲಿಲ್ಲ. ಭಾರತೀಯ ಚಿಂತಕರು ಮತ್ತು ವಿದೇಶಿ ಕ್ರೈಸ್ತ ಮತಪ್ರಚಾರಕರು ಆಧುನಿಕ ಶಿಕ್ಷಣ ನೀಡಿಕೆಯ ಪರವಾಗಿ ಚಳವಳಿ ನಡೆಸಿದರು. ಈ ನಿಟ್ಟಿನಲ್ಲಿ ಕಂಪನಿಯ ಲೆಕ್ಕಾಚಾರ ಭಿನ್ನವಾಗಿತ್ತು. ತನ್ನ ಆಡಳಿತದಲ್ಲಿ ಕೆಳ ಹಂತದ ಸರ್ಕಾರಿ ನೌಕರರಾಗಿ ಕೆಲಸಮಾಡಲು ಅದಕ್ಕೆ ಇಂಗ್ಲಿಷ್ ಬಲ್ಲ ಭಾರತೀಯರು ಕಡಿಮೆ ವೇತನದಲ್ಲಿ ಬೇಕಾಗಿದ್ದರು. ತಮಗೆ ನಿಷ್ಠರಾಗಿರುವ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿಸುವುದು ಅವರ ಉದ್ದೇಶವಾಗಿತ್ತು. ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದವರು ಲಾರ್ಡ್ ಮೆಕಾಲೆ ಮತ್ತು ಚಾರ್ಲ್ಸ್‌ವುಡ್.

### ಶಿಕ್ಷಣ ಮಾಧ್ಯಮದ ಬಗೆಗಿನ ವಿವಾದ

ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಆಂಗ್ಲ ವಿದ್ವಾಂಸರು ಭಾರತೀಯ ಭಾಷೆಗಳ ಮೂಲಕ ಭಾರತೀಯ ವಿಷಯಗಳನ್ನು ಕಲಿಸಬೇಕೆಂದು ವಾದಿಸಿದರು. ಇನ್ನು ಕೆಲವರು ಪಾಶ್ಚಾತ್ಯ ವಿಜ್ಞಾನ ಮತ್ತು ಸಾಹಿತ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ನೀಡಬೇಕೆಂದು ವಾದಿಸಿದರು. ವಿವಾದವು ಅಂತಿಮವಾಗಿ ಇತ್ಯರ್ಥಗೊಂಡು (1835ರಲ್ಲಿ), ಗವರ್ನರ್ ಜನರಲ್ ವಿಲಿಯಂ ಬೆಂಟಿಂಕನು ಪಾಶ್ಚಾತ್ಯ ವಿಜ್ಞಾನ ಮತ್ತು ಇಂಗ್ಲಿಷ್ ಮಾಧ್ಯಮದ ಪರವಾಗಿ ಶಿಕ್ಷಣ ನೀತಿಯನ್ನು ಘೋಷಿಸಿದನು.

© KTBS NOT TO BE REPUBLISHED

ಕೆಲವು ಐರೋಪ್ಯ ವಿದ್ವಾಂಸರು ಪ್ರಾಚೀನ ಭಾರತದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪಶ್ಚಿಮದ ಜಗತ್ತಿಗೆ ಪರಿಚಯಿಸಿದರು. 1784ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶನಾಗಿ ಬಂದ ಸರ್ ವಿಲಿಯಂ ಜೋನ್ಸ್‌ನು ಕಲ್ಕತ್ತದಲ್ಲಿ 'ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಸ್ಥಾಪಿಸಿದನು. ಸಂಸ್ಕೃತ ಭಾಷೆಯ ಹಿರಿಮೆಯನ್ನು ಸಾರಿದನು. ಸರ್ ಚಾರ್ಲ್ಸ್ ವಿಲ್ಕಿನ್ಸ್ 1785ರಲ್ಲಿ ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿದನು. ಮಾಕ್ಸ್ ಮುಲ್ಲರ್ ಋಗ್ವೇದ ಮತ್ತು ಇತರ ಕೃತಿಗಳನ್ನು ಭಾಷಾಂತರಿಸಿದನು.

ಬೆಂಟಿಂಕನ ಘೋಷಣೆಗೆ ಆತನ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದ ಮೆಕಾಲೆಯ ಟಿಪ್ಪಣಿ ಆಧಾರವಾಗಿತ್ತು. ಮೆಕಾಲೆ ಓರ್ವ ಕಟ್ಟಾ ಆಂಗ್ಲವಾದಿಯಾಗಿದ್ದ. ಭಾರತೀಯ ಜ್ಞಾನವು ಕೀಳುಮಟ್ಟದ್ದೆಂದು ಆತನ ವಾದ. ಸಂಸ್ಕೃತ ವ್ಯಾಕರಣವನ್ನು ಆತ ಕಟುವಾಗಿ ಅಪಹಾಸ್ಯ ಮಾಡಿದನು. ಭಾರತೀಯರನ್ನು ಅವರ ಸಾಂಸ್ಕೃತಿಕ ಬೇರುಗಳಿಂದ ದೂರಮಾಡುವುದು ಅವನ ಅಂತಿಮ ಗುರಿಯಾಗಿತ್ತು. "ಒಂದು ಒಳ್ಳೆಯ ಐರೋಪ್ಯ ಗ್ರಂಥಾಲಯದ ಒಂದು ಕಪಾಟಿನ ಒಂದು ಸಾಲಿನ ಪುಸ್ತಕಗಳು ಇಡೀ ಪೂರ್ವದ ಜ್ಞಾನ ಭಂಡಾರಕ್ಕೆ ಸರಿಸಾಟಿಯಲ್ಲ" ಎನ್ನುವ ಅವನ ಮಾತುಗಳು ಅವನಲ್ಲಿನ ಪೂರ್ವಾಗ್ರಹವನ್ನು ತೋರಿಸುತ್ತದೆ.

1854ರಲ್ಲಿ ಬ್ರಿಟಿಷರು ಭಾರತಕ್ಕೆ ಹೊಸ ಶಿಕ್ಷಣ ನೀತಿಯನ್ನು ರೂಪಿಸಿದರು. ಇದು ಚಾರ್ಲ್ಸ್ ವುಡ್ ವರದಿಯನ್ನು ಆಧರಿಸಿತ್ತು. ಅಲ್ಪಕಾಲದಲ್ಲೇ ಕಲ್ಕತ್ತ, ಮುಂಬೈ ಮತ್ತು ಮದ್ರಾಸುಗಳಲ್ಲಿ ವಿಶ್ವವಿದ್ಯಾಲಯಗಳನ್ನು (1857) ಸ್ಥಾಪನೆ ಮಾಡಲಾಯಿತು. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯ ಹೀಗೆ ಹಂತಹಂತವಾಗಿ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂತು. ಶಿಕ್ಷಣ ಕ್ಷೇತ್ರದ ಮೇಲ್ವಿಚಾರಣೆಗಾಗಿ ಶಿಕ್ಷಣ ಇಲಾಖೆಗಳನ್ನು ಪ್ರಾಂತಗಳಲ್ಲಿ ರಚಿಸಲಾಯಿತು. 1844ರಲ್ಲಿ ಇಂಗ್ಲಿಷ್ ಭಾಷೆಯು ಆಡಳಿತದ ಅಧಿಕೃತ ಭಾಷೆಯಾಯಿತು.

©KTBS NOT TO BE REPUBLISHED



*ಬಾಂಬೆ ವಿಶ್ವವಿದ್ಯಾಲಯ*



ಮದ್ರಾಸ್ ವಿಶ್ವವಿದ್ಯಾಲಯ

### ಪಾಶ್ಚಾತ್ಯ ಶಿಕ್ಷಣದ ಪರಿಣಾಮ

ಹೊಸ ಶಿಕ್ಷಣ ಕ್ರಮದಿಂದ ವಿವಿಧ ಭಾಷಿಕ ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಪರಸ್ಪರ ಸಂವಾದಿಸಲು ಸಾಧ್ಯವಾಯಿತು. ಇದು ರಾಷ್ಟ್ರೀಯತೆಯ ಭಾವನೆಯನ್ನು ಜನರಲ್ಲಿ ಬೆಳೆಸಲು ಸಹಕಾರಿಯಾಯಿತು. ಯುರೋಪಿನ ಬೌದ್ಧಿಕ ಚಿಂತನೆಗಳು ಕ್ರಮೇಣ ಭಾರತೀಯ ಸಮಾಜವನ್ನು ಪ್ರವೇಶಿಸಿ ದೂರಗಾಮಿ ಪರಿಣಾಮಗಳನ್ನುಂಟು ಮಾಡಿದವು. ಭಾರತೀಯ ಸಾಹಿತ್ಯದ ಮೇಲೂ ಗಂಭೀರ ಪರಿಣಾಮವನ್ನುಂಟು ಮಾಡಿ ಹೊಸ ಸಾಹಿತ್ಯಕ ಚಳವಳಿಗಳಿಗೆ ಈ ಶಿಕ್ಷಣ ಪದ್ಧತಿ ಕಾರಣವಾಯಿತು.

## 6.5 ವ್ಯಾಪಾರ ಮತ್ತು ವಾಣಿಜ್ಯ

18 ಮತ್ತು 19ನೇ ಶತಮಾನದಲ್ಲಾದ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಭಾರತದ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ಗಂಭೀರ ಪರಿಣಾಮಗಳನ್ನುಂಟು ಮಾಡಿತು. 1600ರಿಂದ 1757ರ ತನಕ ಕಂಪನಿಯು ಕೇವಲ ಒಂದು ವ್ಯಾಪಾರಿ ಕಂಪನಿಯಾಗಿತ್ತು. ಪ್ಲಾಸಿ ಕದನದ (1757) ಬಳಿಕ ಅದು ಭಾರತದ ವ್ಯಾಪಾರ ಮತ್ತು ಉತ್ಪಾದನೆಯ ಮೇಲೆ ಏಕಸ್ವಾಮ್ಯವನ್ನು ಸಾಧಿಸುವುದಕ್ಕೆ ಬಂಗಾಳದಲ್ಲಿನ ತನ್ನ ರಾಜಕೀಯ ಅಧಿಕಾರವನ್ನು ಚೆನ್ನಾಗಿ ಬಳಸಿಕೊಂಡಿತು. ಅದೇ ವೇಳೆ ಕಚ್ಚಾಹತ್ತಿಯ ಮಾರಾಟದ ಮೇಲೂ ಅದು ಏಕಸ್ವಾಮ್ಯ ಸ್ಥಾಪಿಸಿತು. ಇದರ ಪರಿಣಾಮವಾಗಿ ನೇಕಾರರು ಕಚ್ಚಾವಸ್ತುವನ್ನು ದುಬಾರಿ ಬೆಲೆಗೆ ಕೊಳ್ಳುವಂತಾಯಿತು. ಒಟ್ಟಿನಲ್ಲಿ ಬ್ರಿಟಿಷ್ ವಾಣಿಜ್ಯ ನೀತಿಯ ಗುರಿ ಬ್ರಿಟಿಷ್ ಕೈಗಾರಿಕೆಯ ಅವಶ್ಯಕತೆಯನ್ನು ಪೂರೈಸುವುದಲ್ಲದೆ ಬೇರೇನೂ ಆಗಿರಲಿಲ್ಲ. ಭಾರತವು ಬ್ರಿಟನ್ನಿನ ಯಂತ್ರನಿರ್ಮಿತ ಸರಕುಗಳ ಆಮದುದಾರ ಮತ್ತು ಬ್ರಿಟನ್ನಿಗೆ ಬೇಕಾದ

NOT TO BE REPUBLISHED ©KTBS

ಕಚ್ಚಾವಸ್ತುಗಳ ರಫ್ತುದಾರ ಆಗಬೇಕೆಂಬುದಷ್ಟೇ ಅದರ ಮುಖ್ಯ ಗುರಿಯಾಗಿತ್ತು. ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಿಸುವ ಮೂಲಕ ಭಾರತದ ಗುಡಿ ಕೈಗಾರಿಕೆಗಳನ್ನು ಅವನತಿಯತ್ತ ದೂಡಿತು.

ಬ್ರಿಟಿಷ್ ಆಳ್ವಿಕೆಯ ವೇಳೆ ಭಾರತವು ಬಡ ರಾಷ್ಟ್ರವಾಗಿ ಮಾರ್ಪಾಡುಗೊಳ್ಳಲು ಮುಖ್ಯ ಕಾರಣವೆಂದರೆ ದೇಶದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋದದ್ದು. ಇಂಗ್ಲೆಂಡಿಗೆ ಹಣ ರವಾನೆಯು ದಾದಾಭಾಯಿ ನವರೋಜಿಯವರು ಹೇಳುವಂತೆ ಸಂಪತ್ತಿನ ಸೋರಿಕೆಗೆ (drain of wealth) ಮುಖ್ಯ ಕಾರಣವಾಗಿತ್ತು. ಭಾರತದಲ್ಲಿನ ಬ್ರಿಟಿಷ್ ನಾಗರಿಕರು ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿ ಗಳಿಸಿದ ಲಾಭವು ಸಂಪತ್ತಿನ ಸೋರಿಕೆಗೆ ಇನ್ನೊಂದು ಪ್ರಮುಖ ಮೂಲವಾಗಿತ್ತು.

ಸಂಪತ್ತಿನ ಸೋರಿಕೆಯ ಮುಖ್ಯ ಪರಿಣಾಮವಾಗಿ ಭಾರತ ಬಡ ರಾಷ್ಟ್ರವಾಯಿತಲ್ಲದೆ ದೇಶದಲ್ಲಿ ಬಂಡವಾಳದ ಕೊರತೆ ಉಂಟಾಯಿತು. ಇದರಿಂದ ಇಲ್ಲಿನ ಕೈಗಾರಿಕಾ ಅಭಿವೃದ್ಧಿಗೆ ಅಡ್ಡಿಯಾಯಿತು. 'ಅರ್ಥಶಾಸ್ತ್ರದ ಪಿತಾಮಹ' ಆಡಂ ಸ್ಮಿತ್ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷರನ್ನು 'ಸುಲಿಗೆಕೋರರು' ಎಂದು ಬಣ್ಣಿಸಿದ್ದಾನೆ.

© KTBS NOT TO BE REPUBLISHED

## ಅಭ್ಯಾಸಗಳು

**I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ**

1 ಐ.ಸಿ.ಎಸ್. ಅಧಿಕಾರಿಗಳೆಂದರೆ ಯಾರು?

2 ಬ್ರಿಟಿಷ್ ಸೇನಾ ಪಡೆಯ ಯಾವುದಾದರೂ ಒಂದು ಕರ್ತವ್ಯವನ್ನು ಹೇಳಿರಿ.

3 ಬ್ರಿಟಿಷರು ಪೊಲೀಸ್ ಪಡೆಯನ್ನು ಏತಕ್ಕಾಗಿ ಬಳಸಿಕೊಂಡರು?

4 ರೈತವಾರಿ ಪದ್ಧತಿ ಎಂದರೇನು?

5 1857ರಲ್ಲಿ ಸ್ಥಾಪನೆಗೊಂಡ ಭಾರತೀಯ ವಿಶ್ವವಿದ್ಯಾಲಯಗಳು ಯಾವುವು?

**II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ**

1 ಖಾಯಂ ಜಮೀನ್ದಾರಿ ಪದ್ಧತಿಯು ರೈತರ ಮೇಲೆ ಬೀರಿದ ಪರಿಣಾಮಗಳೇನು?

2 ಪಾಶ್ಚಾತ್ಯ ಶಿಕ್ಷಣದ ಪರಿಣಾಮಗಳನ್ನು ತಿಳಿಸಿರಿ.

**III ಚರ್ಚಿಸಿ**

ಬ್ರಿಟಿಷ್ ಅವಧಿಯಲ್ಲಿನ ಕಂದಾಯ ಪದ್ಧತಿ ಮತ್ತು ಪ್ರಚಲಿತ ಕಂದಾಯ ಪದ್ಧತಿ.

# ಅಧ್ಯಾಯ 7

# ಮೈಸೂರು ಮತ್ತು ಇತರ ಸಂಸ್ಥಾನಗಳು

W1U2L9

## ಪಾಠದ ಪರಿಚಯ

ಈ ಪಾಠದಲ್ಲಿ ಮೈಸೂರಿನ ಒಡೆಯರ ರಾಜಮನೆತನವನ್ನು ಪರಿಚಯಿಸಿ, ಪ್ರಾರಂಭದ ಪ್ರಸಿದ್ಧ ಅರಸ ಚಿಕ್ಕದೇವರಾಜನ ಜನಮುಖಿ ಸುಧಾರಣೆಗಳನ್ನು ಹೇಳಲಾಗಿದೆ. ಅನಂತರ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಮಧ್ಯಂತರ ಆಳ್ವಿಕೆ, ಮೈಸೂರು ಯುದ್ಧಗಳು ಮತ್ತು ಅವರ ಸಾಧನೆಗಳನ್ನು ನಿರೂಪಿಸಲಾಗಿದೆ.

ವಿಜಯನಗರದ ಪತನಾನಂತರ ಕೆಲವೇ ದಶಕಗಳಲ್ಲಿ ಕರ್ನಾಟಕವು ಮುಖ್ಯವಾಗಿ ಮೂರು ಆಡಳಿತಗಳಿಗೆ ಒಳಗಾಯಿತು. ಅವೆಂದರೆ ವಿಜಯಪುರ, ಕೆಳದಿ ಮತ್ತು ಮೈಸೂರು. ವಿಜಯಪುರ ರಾಜ್ಯ ಕೊನೆಗೊಂಡ ಬಳಿಕ ಕರ್ನಾಟಕದ ಬಹುಭಾಗದಲ್ಲಿ ಮೊಗಲ್ ಮತ್ತು ಮರಾಠರ ಆಡಳಿತ ನಡೆಯಿತು. ಇವರ ಮೇಲಾಟದ ನಡುವೆಯೂ ತಮ್ಮ ರಾಜ್ಯಗಳನ್ನು ಸ್ವತಂತ್ರವಾಗಿ ಉಳಿಸಿಕೊಂಡ ಕೆಳದಿ ಮತ್ತು ಮೈಸೂರು ರಾಜ್ಯಗಳು ವಿಜಯನಗರದ ಪರಂಪರೆಯನ್ನು ತಮ್ಮ ಪ್ರದೇಶದಲ್ಲಿ ಮುಂದುವರಿಸಿಕೊಂಡು ಬಂದವು. ಇವಲ್ಲದೆ ಚಿತ್ರದುರ್ಗ, ಯಲಹಂಕ (ಬೆಂಗಳೂರು) ಮುಂತಾದ ಹಲವು ಪಾಳೆಯಪಟ್ಟುಗಳು ಬೆಳೆದವು. ಈ ಪಾಠದಲ್ಲಿ ಕೆಳದಿ ಮತ್ತು ಚಿತ್ರದುರ್ಗದ ನಾಯಕರು ಹಾಗೂ ಯಲಹಂಕ ನಾಡಪ್ರಭುಗಳ ಸಾಧನೆಗಳನ್ನು ವಿವರಿಸಲಾಗಿದೆ.

ಕರ್ನಾಟಕವನ್ನಾಳಿದ ರಾಜ್ಯ ಸಾಮ್ರಾಜ್ಯಗಳ ಶ್ರೀಮಂತ ಇತಿಹಾಸದ ತಿಳಿವಳಿಕೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಕರ್ನಾಟಕದ ಚಿಕ್ಕ ಪುಟ್ಟ ಪ್ರದೇಶಗಳ ಇತಿಹಾಸದ ಅರಿವು. ಏಕೆಂದರೆ ಪ್ರಾದೇಶಿಕ ಇತಿಹಾಸವು ಸತ್ವಪೂರ್ಣವಾಗಿದೆಯಲ್ಲದೆ, ಅದು ಕರ್ನಾಟಕದ ಒಟ್ಟು ಇತಿಹಾಸದ ಅರ್ಥೈಸುವಿಕೆಗೆ ಪೂರಕವಾಗಿದೆ. ಈ ದೃಷ್ಟಿಯಿಂದ ಕೊಡಗು, ಕಿತ್ತೂರು, ತುಳುನಾಡು ಮತ್ತು ಹೈದರಾಬಾದ್–ಕರ್ನಾಟಕದ ಚರಿತ್ರೆಯ ಮುಖಗಳನ್ನು ಈ ಪಾಠದಲ್ಲಿ ನಿರೂಪಿಸಲಾಗಿದೆ.

© KTBS NOT TO BE REPUBLISHED

## ಸಾಮರ್ಥ್ಯಗಳು

1 ಚಿಕ್ಕದೇವರಾಜನ ಜನಮುಖಿ ಯೋಜನೆಗಳನ್ನು ಮೆಚ್ಚುವುದು.

2 ಬ್ರಿಟಿಷರ ವಿರುದ್ಧ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ನಡೆಸಿದ ಹೋರಾಟಗಳ ಕಾರಣ ಮತ್ತು ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

3 ಹೈದರ್ ಮತ್ತು ಟಿಪ್ಪು ಅವರ ಸಾಧನೆಗಳನ್ನು ತಿಳಿಯುವುದು.

4 ಭೂಪಟದಲ್ಲಿ ಮೈಸೂರು ರಾಜ್ಯದ ಚಾರಿತ್ರಿಕ ಸ್ಥಳಗಳನ್ನು ಗುರುತಿಸುವುದು.

5 ಹಿರಿಯ ವೆಂಕಟಪ್ಪ ನಾಯಕ ಮತ್ತು ಶಿವಪ್ಪ ನಾಯಕನ ಸಾಧನೆಗಳನ್ನು ಅರ್ಥೈಸಿಕೊಳ್ಳುವುದು.

6 ರಾಣಿ ಚೆನ್ನಮ್ಮಾಜಿಯ ವೀರಗಾಥೆಯನ್ನು ಪ್ರಶಂಸಿಸುವುದು.

7 ಕೆಳದಿಯ ನಾಯಕರ ಪರಧರ್ಮಸಹಿಷ್ಣುತೆಯನ್ನು ಮೆಚ್ಚುವುದು.

8 ಚಿತ್ರದುರ್ಗದ ಐದನೆಯ ಮದಕರಿ ನಾಯಕನ ಶೌರ್ಯ ಮತ್ತು ಸಾಧನೆಗಳನ್ನು ಮೆಚ್ಚುವುದು.

9 ಯಲಹಂಕ ನಾಡಪ್ರಭುಗಳಾದ ಒಂದನೆಯ ಕೆಂಪೇಗೌಡ ಮತ್ತು ಎರಡನೆಯ ಕೆಂಪೇಗೌಡ ಇವರ ಸಾಧನೆಗಳನ್ನು ತಿಳಿದುಕೊಳ್ಳುವುದು.

10 ಕೊಡಗಿನ ಚರಿತ್ರೆಯ ಹೆಗ್ಗುರುತುಗಳನ್ನು ಪರಿಚಯಿಸಿಕೊಳ್ಳುವುದು.

11 ಬ್ರಿಟಿಷರ ವಿರುದ್ಧ ಕಿತ್ತೂರಿನ ರಾಣಿ ಚೆನ್ನಮ್ಮ ಮತ್ತು ಅವಳ ಅನುಯಾಯಿ ಸಂಗೊಳ್ಳಿ ರಾಯಣ್ಣ ನಡೆಸಿದ ದಿಟ್ಟ ಹೋರಾಟವನ್ನು ಮೆಚ್ಚುವುದು.

12 ತುಳುನಾಡಿನ ಇತಿಹಾಸ, ಸಂಸ್ಕೃತಿ ಹಾಗೂ ಕೊಡುಗೆಗಳನ್ನು ಅರ್ಥಮಾಡಿಕೊಳ್ಳುವುದು.

13 ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬ್ರಿಟಿಷ್ ಆಳರಸರು, ನಿಜಾಮ ಮತ್ತು ಸ್ಥಳೀಯ ಜಮೀನ್ದಾರರ ವಿರುದ್ಧ ನಡೆದ ಹೋರಾಟಗಳನ್ನು ಅರ್ಥಮಾಡಿಕೊಳ್ಳುವುದು.

© KTBS NOT TO BE REPUBLISHED

## 7.1 ಮೈಸೂರಿನ ಒಡೆಯರು

ಮೈಸೂರು ನಗರ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಹರಡಿದೆ. ಬೆಟ್ಟದ ಮೇಲಿನ ಚಾಮುಂಡೇಶ್ವರಿ ದೇವಿ ಮೈಸೂರು ಒಡೆಯರ ಮನೆತನದ ಅಧಿದೇವತೆ. ಒಡೆಯರ ವಂಶದ ಅರಸರು ವಿಜಯನಗರದ ಪರಂಪರೆಯನ್ನು ಮುಂದುವರಿಸಿಕೊಂಡು, ಸಮಾಜ-ಸಂಸ್ಕೃತಿಗೆ ಅಪಾರ ಸೇವೆ ಸಲ್ಲಿಸಿದರು. ಸುದೀರ್ಘ ಕಾಲ ಆಳ್ವಿಕೆ ನಡೆಸಿ ಜನರ ಪ್ರೀತಿ, ಗೌರವಗಳಿಗೆ ಪಾತ್ರರಾದರು.

ಒಡೆಯರ ರಾಜಧಾನಿ ಮೈಸೂರು. ರಾಜ್ಯದ ಲಾಂಛನ ಗಂಡಭೇರುಂಡ. ಮೈಸೂರಿನ ನವರಾತ್ರಿ ಉತ್ಸವ (ದಸರಾ) ಒಂದು ಸಂಭ್ರಮದ ಸಮಾರಂಭ. ಅಲ್ಲಿನ ಅರಮನೆ ಭಾರತದ ಭವ್ಯ ಅರಮನೆಗಳಲ್ಲೊಂದು. ಅರಮನೆ ಮತ್ತು ಸಿಂಹಾಸನದ ಚಿತ್ರಗಳನ್ನು ನೋಡಿ.

ಮೈಸೂರು ಅರಮನೆಯನ್ನು ಹೊಸದಾಗಿ 1912ರಲ್ಲಿ ಕಟ್ಟಲಾಯಿತು. ಇದರ ಮೊದಲಿದ್ದ ಕಟ್ಟಿಗೆಯ (ಮರದ) ಅರಮನೆ ಅಗ್ನಿಗೆ ಆಹುತಿಯಾಗಿ ಭಸ್ಮಗೊಂಡಿತು. ಹೊಸ ಅರಮನೆಯ ನಿರ್ಮಾಣಕಾರ್ಯಕ್ಕೆ ದೇಶವಿದೇಶಗಳಿಂದ ಕುಶಲಕರ್ಮಿಗಳು ಬಂದಿದ್ದರು. ಅರಮನೆಯ ಸಭಾಂಗಣವನ್ನು (ದರ್ಬಾರ್ ಹಾಲ್) ಪ್ರಸಿದ್ಧ ಚಿತ್ರಕಲಾಕಾರ ರಾಜಾ ರವಿವರ್ಮ ಶೃಂಗರಿಸಿದನು.



1894ರ ಮೊದಲಿನ ಹೊಸ ಅರಮನೆ



1912ರಲ್ಲಿ ಕಟ್ಟಲಾದ ಹೊಸ ಅರಮನೆ

© KTBS NOT TO BE REPUBLISHED



ಈಗಿರುವ ಮೈಸೂರು ರಾಜರ ಅರಮನೆ



**ಸಿಂಹಾಸನ**

## ಚಿಕ್ಕದೇವರಾಜ ಒಡೆಯರ್

ಚಿಕ್ಕದೇವರಾಜನು ಒಡೆಯರ ವಂಶದ ಪ್ರಾರಂಭದ ಪ್ರಸಿದ್ಧ ಅರಸ. ಶೂರನಾಗಿದ್ದ ಇವನು ರಾಜ್ಯವನ್ನು ವಿಸ್ತರಿಸಿದ.

### ಜನಮುಖಿ ಸಾಧನೆಗಳು

ಚಿಕ್ಕದೇವರಾಜನ ಜನಮುಖಿ ಸಾಧನೆಗಳು ಅನೇಕ. ರಾಜಧಾನಿಯಲ್ಲಿ ಹದಿನೆಂಟು ಶಾಖೆಗಳುಳ್ಳ ಮುಖ್ಯ ಆಡಳಿತ ಕಚೇರಿಯನ್ನು ಸ್ಥಾಪಿಸಿದ. ಇದೇ 'ಅಠಾರಾ ಕಚೇರಿ'. ಜನರು ಮೋಸ ಹೋಗದಂತೆ ಅಳತೆ ಮತ್ತು ತೂಕಗಳನ್ನು ಕುರಿತು ನಿಯಮಗಳನ್ನು ರೂಪಿಸಿದ. ಆಡಳಿತದಲ್ಲಿ ಲಂಚಗುಳಿತನವನ್ನು ತಡೆಯಲು ಕ್ರಮಗಳನ್ನು ಕೈಗೊಂಡ.



**ಅಠಾರಾ ಕಚೇರಿ, ಮೈಸೂರು**

©KTBS NOT TO BE REPUBLISHED

ಚಿಕ್ಕದೇವರಾಜನು ಮೊಗಲರಿಗೆ ಮೂರು ಲಕ್ಷ ವರಹಗಳನ್ನು ತೆತ್ತು ಬೆಂಗಳೂರನ್ನು ಗುತ್ತಿಗೆಗೆ ಪಡೆದಿದ್ದನು.

ಶ್ರೀರಂಗಪಟ್ಟಣದ ಬಳಿ ಪಶ್ಚಿಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರು ಒದಗಿಸಿದ. ಆಡಳಿತದಲ್ಲಿ ಮಿತವ್ಯಯ ಸಾಧಿಸಿ ಭಾರಿ ನಿಧಿಯನ್ನು ಕೂಡಿಟ್ಟು, 'ನವಕೋಟಿ ನಾರಾಯಣ' ಎಂಬ ಬಿರುದನ್ನು ಪಡೆದ. ಸರ್ಕಾರದ ಕಾಗದಪತ್ರಗಳ ವಿತರಣೆಗೆ 'ಅಂಚೆ' ವ್ಯವಸ್ಥೆಯನ್ನು ಸ್ಥಾಪಿಸಿದ.

ಚಿಕ್ಕದೇವರಾಜನ ಕಾಲದಲ್ಲಿ ಮೈಸೂರು ಸಂಪದ್ಭರಿತ ರಾಜ್ಯವಾಗಿತ್ತಲ್ಲದೆ ಅವನು ದಕ್ಷಿಣ ಭಾರತದ ಪ್ರಸಿದ್ಧ ಅರಸನೆನಿಸಿಕೊಂಡನು.

ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಸಿಂಗರಾರ್ಯನು ಕನ್ನಡದ ಮೊತ್ತಮೊದಲನೆಯ ನಾಟಕ 'ಮಿತ್ರವಿಂದಾ ಗೋವಿಂದ' ರಚಿಸಿದನು. 'ಹದಿಬದೆಯ ಧರ್ಮ' ಎಂಬ ಕೃತಿಯು ಸಂಚಿ ಹೊನ್ನಮ್ಮಳ ಕಾವ್ಯ. ಇವಳು ತಾಂಬೂಲದ ಸಂಚಿಯನ್ನು ರಾಜನ ಬಳಿ ಒಯ್ಯುವ ಊಳಿಗದಲ್ಲಿದ್ದು 'ಸಂಚಿ ಹೊನ್ನಮ್ಮ' ಎಂದೇ ಇವಳ ರೂಢಿಯ ಹೆಸರಾಯಿತು.

ಚಿಕ್ಕದೇವರಾಜನ ಮರಣಾನಂತರ ದುರ್ಬಲ ಅರಸರು ಆಳಿದರು. ಇದರಿಂದಾಗಿ ದಳವಾಯಿಗಳೆಂಬ ಅಧಿಕಾರಿಗಳು ಆಡಳಿತವನ್ನು ರಾಜನ ಹೆಸರಿನಲ್ಲಿ ನಡೆಸಿದರು.

## ಹೈದರ್ ಅಲಿ

ಹೈದರ್ ಅಲಿಯು ದಳವಾಯಿ ನಂಜರಾಜನ ಸೇನೆಯಲ್ಲಿ ಸಮರ್ಥ ಸೇನಾನಿಯಾಗಿದ್ದ. ಶೂರನೂ ಸಾಹಸಿಯೂ ಆಗಿದ್ದ. ಯುದ್ಧಗಳಲ್ಲಿ ಜಯಗಳಿಸಿ ಹಂತಹಂತವಾಗಿ ತನ್ನ ಸೇನಾಬಲ ಮತ್ತು ಧನಬಲವನ್ನು ಬೆಳೆಸಿಕೊಂಡ. ಶೀಘ್ರವೇ ಬೆಂಗಳೂರಿನಲ್ಲಿ ಮರಾಠರನ್ನು ಸೋಲಿಸುವ ಅವಕಾಶ ಪಡೆದು ಅವನು ರಾಜನಿಂದ ಅಪೂರ್ವ ಗೌರವಕ್ಕೆ ಪಾತ್ರನಾದ. ಮೈಸೂರು ರಾಜ್ಯವನ್ನು ಸಂದಿಗ್ಧ ರಾಜಕೀಯದಿಂದ ಪಾರು ಮಾಡಿದ. ರಾಜಧಾನಿಯಲ್ಲಿ ಸೈನಿಕರ ಬಂಡಾಯ ಕಾಣಿಸಿಕೊಂಡಾಗ ದಳವಾಯಿ ನಂಜರಾಜನನ್ನು ನಿವೃತ್ತಿಗೊಳಿಸಿ ರಾಜ್ಯಾಧಿಕಾರವನ್ನು ಕೈಗೆತ್ತಿಕೊಂಡ. ಹೀಗೆ ಮೈಸೂರು ಆಸ್ಥಾನದಲ್ಲಿ ಶಕ್ತಿಶಾಲಿ ವ್ಯಕ್ತಿಯಾಗಿ ಮೂಡಿಬಂದ. ರಾಜ್ಯದ 'ಕಾರ್ಯಕರ್ತ' ತಾನೆಂದು ಕರೆದುಕೊಂಡು ಎರಡನೆಯ ಕೃಷ್ಣರಾಜ ಒಡೆಯರನ್ನು ಬದಿಗೊತ್ತಿದನು.



ಹೈದರ್ ಅಲಿ

ಅಧಿಕಾರ ವಹಿಸಿಕೊಂಡ ಒಡನೆಯೇ ಹೈದರ್ ರಾಜ್ಯ ವಿಸ್ತರಣೆಯಲ್ಲಿ ತೊಡಗಿದನು. ಕೆಳದಿ ರಾಜರನ್ನು ಸೋಲಿಸಿದನು. ಅಲ್ಲಿನ ಅಪಾರ ಧನಕನಕಾದಿಗಳನ್ನು ವಶಪಡಿಸಿಕೊಂಡು ತನ್ನ ಧನಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡನು.

©KTBS NOT TO BE REPUBLISHED

**ಬ್ರಿಟಿಷರೊಂದಿಗೆ ಹೋರಾಟ:** ವ್ಯಾಪಾರಿಗಳಾಗಿ ಭಾರತಕ್ಕೆ ಬಂದಿದ್ದ ಬ್ರಿಟಿಷರು ಕ್ರಮೇಣ ರಾಜಕೀಯ ಶಕ್ತಿಯಾಗಿ ಎದ್ದುನಿಂತರು. ಹೈದರ್ ದಕ್ಷಿಣ ಭಾರತದಲ್ಲಿ ರಾಜ್ಯ ವಿಸ್ತರಣೆ ಮಾಡುವುದನ್ನು ಅವರು ಸಹಿಸದಾದರು. ಹೀಗಾಗಿ ಹೈದರ್ ಮತ್ತು ಬ್ರಿಟಿಷರ ನಡುವೆ ಸಂಘರ್ಷ ಅನಿವಾರ್ಯವಾಯಿತು.

ಹೈದರ್ ಮತ್ತು ಅವನ ಮಗನಾದ ಟಿಪ್ಪು ಸುಲ್ತಾನ್ ಬ್ರಿಟಿಷರೊಡನೆ ಮಾಡಿದ ನಾಲ್ಕು ಯುದ್ಧಗಳನ್ನು 'ಮೈಸೂರು ಯುದ್ಧಗಳು' ಅಥವಾ 'ಆಂಗ್ಲೋ-ಮೈಸೂರು ಯುದ್ಧಗಳು' ಎನ್ನುವರು.

**ಮೊದಲನೆಯ ಮೈಸೂರು ಯುದ್ಧ**ದಲ್ಲಿ ಬ್ರಿಟಿಷರು ಅಪಾರ ಹಾನಿಗೊಳಗಾದರು. ವಿಜಯಗಳಿಸಿದ ಹೈದರನ ಘನತೆ ಹೆಚ್ಚಿತು.

ಇದೇ ವೇಳೆ ಮರಾಠರು ಕೂಡ ದಕ್ಷಿಣ ಭಾರತದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿದ್ದರು. ಮರಾಠರು ಮೈಸೂರನ್ನು ಆಕ್ರಮಣ ಮಾಡಿದ ಸಂದರ್ಭದಲ್ಲಿ ಬ್ರಿಟಿಷರು ಹೈದರನ ಸಹಾಯಕ್ಕೆ ಬರತಕ್ಕದ್ದು ಎಂಬುದಾಗಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಮರಾಠರು ಮೈಸೂರನ್ನು ಆಕ್ರಮಣ ಮಾಡಿದಾಗ ಬ್ರಿಟಿಷರು ಒಪ್ಪಂದವನ್ನು ಮುರಿದು ತಟಸ್ಥರಾದರು. ಇದರಿಂದ ಹೈದರ್ ಸಿಡಿಮಿಡಿಗೊಂಡು ಬ್ರಿಟಿಷರನ್ನು ಯುದ್ಧಕ್ಕೆಳೆದ. ಈ ಯುದ್ಧವೇ ಎರಡನೆಯ ಮೈಸೂರು ಯುದ್ಧ. ಯುದ್ಧ ನಡೆಯುತ್ತಿದ್ದಂತೆ ಹೈದರ್ ಮರಣವನ್ನಪ್ಪಿದ. ಯುದ್ಧವನ್ನು ಟಿಪ್ಪು ಸುಲ್ತಾನ್ ಮುಂದುವರಿಸಿದ.

@KTBS NOT TO BE REPUBLISHED

**ಹೈದರ್ ಅಲಿಯ ಸಾಧನೆ:** ಹೈದರನಿಗೆ ಓದುಬರಹ ಬರುತ್ತಿರಲಿಲ್ಲವಾದರೂ ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ಅವನು ಮೈಸೂರು ರಾಜ್ಯದ ವಿಸ್ತಾರವನ್ನು ಇಮ್ಮಡಿಗೊಳಿಸಿದ. ಶೂರ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದ ಹೈದರ್ ಅಲಿಗೆ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ. ಬೆಂಗಳೂರಿನ ಸುಂದರ ಉದ್ಯಾನವನ ಲಾಲ್‌ಬಾಗ್ ಅವನಿಂದಲೇ ಆರಂಭ ಆದುದು.

## ಟಿಪ್ಪು ಸುಲ್ತಾನ್

ತನ್ನ ತಂದೆಯ ಕಾಲದ ಯುದ್ಧಗಳಲ್ಲಿ ಪಾಲ್ಗೊಂಡು ವಿಜಯವನ್ನು ಗಳಿಸಿದ ಟಿಪ್ಪು ಸುಲ್ತಾನ್ ಧೀರ ತರುಣನಾಗಿದ್ದ. ತನ್ನನ್ನು ಸುಲ್ತಾನನೆಂದು ಘೋಷಿಸಿ ತನ್ನ ರಾಜ್ಯ 'ದೈವದತ್ತ'ವೆಂದು ಪ್ರಕಟಿಸಿಕೊಂಡ.

ತಂದೆಯ ಮರಣಾನಂತರ ಆಗ ನಡೆಯುತ್ತಿದ್ದ ಯುದ್ಧವನ್ನು ಟಿಪ್ಪು ಮುಂದುವರಿಸಿದ. ಆತನ ಸಹಾಯಕ್ಕೆ ಯಾರೂ ಬರಲಿಲ್ಲ. ಟಿಪ್ಪು ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಲಾರದೆ



ಟಿಪ್ಪು ಸುಲ್ತಾನ್

**ಮಂಗಳೂರಿನಲ್ಲಿ ಒಪ್ಪಂದ** ಮಾಡಿಕೊಂಡ. ಮಂಗಳೂರು ಒಪ್ಪಂದ ಉಭಯ ಪಕ್ಷದವರಿಗೂ ಹಿತಕರವಾಗಿದ್ದಿತು. ಇಬ್ಬರೂ ಗೆದ್ದಿದ್ದ ಪ್ರದೇಶಗಳನ್ನು ಬಿಟ್ಟುಕೊಟ್ಟು ಯುದ್ಧಖೈದಿಗಳನ್ನು ಹಿಂತಿರುಗಿಸಿದರು.

ಅಲ್ಪಕಾಲದಲ್ಲೇ ಟಿಪ್ಪು ಮತ್ತು ಬ್ರಿಟಿಷ್ ನಡುವೆ ಇನ್ನೆರಡು ಯುದ್ಧಗಳು ನಡೆದುವು. ಟಿಪ್ಪು ಮತ್ತು ಬ್ರಿಟಿಷರ ನಡುವಣ ಪರಸ್ಪರ ದ್ವೇಷ ಮತ್ತು ಅಪನಂಬಿಕೆಯೇ ಈ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

**ಮೂರನೆಯ ಮೈಸೂರು ಯುದ್ಧ**ದಲ್ಲಿ ಬ್ರಿಟಿಷರು ಆಕ್ರಮಣ ಮಾಡುತ್ತಾ ರಾಜಧಾನಿಯಾದ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದರು. ಬೇರೆ ಮಾರ್ಗ ತೋಚದೆ ಟಿಪ್ಪು ಬ್ರಿಟಿಷರೊಡನೆ ಶಾಂತಿ ಒಪ್ಪಂದ ಮಾಡಿಕೊಂಡನು. ಶಾಂತಿ ಒಪ್ಪಂದದಂತೆ ಅವನು ಅರ್ಧರಾಜ್ಯವನ್ನು ಬ್ರಿಟಿಷರಿಗೆ ಒಪ್ಪಿಸಿದನು. ಅಪಾರ ಪರಿಹಾರ ಧನವನ್ನು ಅವರಿಗೆ ನೀಡಬೇಕಾಯಿತು. ತನ್ನಿಬ್ಬರು ಮಕ್ಕಳನ್ನು ಕೂಡ ಬ್ರಿಟಿಷರಿಗೆ ಒತ್ತೆಯಾಳಾಗಿ ಕೊಡಬೇಕಾಯಿತು.

ಯುದ್ಧದ ಪರಿಣಾಮವಾಗಿ ಟಿಪ್ಪು ಅವಮಾನಗೊಂಡನು. ಬ್ರಿಟಿಷರನ್ನು ಭಾರತದಿಂದ ಹೊರದಬ್ಬಲು ದೃಢಸಂಕಲ್ಪ ಮಾಡಿದನು. ಇದು **ನಾಲ್ಕನೆಯ ಮೈಸೂರು ಯುದ್ಧ**ಕ್ಕೆ ನಾಂದಿಯಾಯಿತು. ಯುದ್ಧದಲ್ಲಿ ಶ್ರೀರಂಗಪಟ್ಟಣವು ಮುತ್ತಿಗೆಗೊಳಗಾಯಿತು.

ಟಿಪ್ಪು ವೀರಾವೇಶದಿಂದ ಹೋರಾಡಿ ಅಸುನೀಗಿದ. ಟಿಪ್ಪುವು 'ಮೈಸೂರಿನ ಹುಲಿ'ಯೆಂದು ಪ್ರಸಿದ್ಧನಾಗಿದ್ದಾನೆ.

ಟಿಪ್ಪು ಸುಲ್ತಾನನ ಮರಣಾನಂತರ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು, ಬ್ರಿಟಿಷರು ಒಡೆಯರ ರಾಜವಂಶದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಹಸ್ತಾಂತರಿಸಿದರು. ಆದರೆ ಮೈಸೂರು ಬ್ರಿಟಿಷರ ಆಶ್ರಿತ ರಾಜ್ಯವಾಯಿತು.

@KTBS
NOT TO BE REPUBLISHED


ಭೂಪಟ 10
ಟಿಪ್ಪು ಸುಲ್ತಾನನ ಕಾಲದ ಮೈಸೂರು (ಸಾ.ಶ. 1789)
---- ಕೆಳದಿ ರಾಜ್ಯ
ಕಿತ್ತೂರು
ನರಗುಂದ
ಕರ್ನೂಲು
ಗಜೇಂದ್ರಗಡ
ಧಾರವಾಡ
ಬಳ್ಳಾರಿ
ಗುತ್ತಿ
ಕಾರವಾರ
ಅಂಕೋಲಾ
ಸೋದೆ
ಬಿಳಗಿ
ಕೆಳದಿ
ಇಕ್ಕೇರಿ
ಕಡಪ
ಚಿತ್ರದುರ್ಗ
ಬಿದನೂರು
ಸಿರಾ
ಗುರ್‍ರಮಕೊಂಡ
ಚಿಕ್ಕನಾಯಕನಹಳ್ಳಿ
ಮದರಾಸು
ಬೆಂಗಳೂರು
ಮಂಗಳೂರು
ಮಡಿಕೇರಿ
ಶ್ರೀರಂಗಪಟ್ಟಣ
ಬೇಕಲ
ಮೈಸೂರು
ಮಳವಳ್ಳಿ
ಪಾಂಡಿಚೇರಿ
ತಲ್ಲಿಚೇರಿ
ಮಾಹೆ
ಈರೋಡು
ಅರಬ್ಬೀ ಸಮುದ್ರ
ಶ್ರೀರಂಗ
ಬಂಗಾಳ ಕೊಲ್ಲಿ
ಉ
SKETCH MAP NOT TO SCALE
NOT TO BE REPUBLISHED
© KTBS

★ ★ ★

# 7.2 ಕೆಳದಿ, ಚಿತ್ರದುರ್ಗ ಮತ್ತು ಯಲಹಂಕ

## ಕೆಳದಿಯ ನಾಯಕರು

ನಾಯಕರು: ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಅನೇಕ ಚಿಕ್ಕಪುಟ್ಟ ಅರಸರಿದ್ದರು. ಇವರೇ ನಾಯಕರು ಅಥವಾ ಪಾಳೆಯಗಾರರು. ಪಾಳೆಯಗಾರರ ವಶವಿದ್ದ ಸೀಮೆಯನ್ನು ಪಾಳೆಯಪಟ್ಟು ಎನ್ನುತ್ತಿದ್ದರು. ನಾಯಕರಲ್ಲಿ ಕೆಳದಿ ಮತ್ತು ಚಿತ್ರದುರ್ಗದ ನಾಯಕರು ಪ್ರಸಿದ್ಧರು.

ವಿಜಯನಗರದ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೆಳದಿ ರಾಜ್ಯವು ಸ್ಥಾಪನೆಗೊಂಡು ಮುಂದೆ ಅದು ಸ್ವತಂತ್ರಗೊಂಡಿತು. ಕೆಳದಿಯ ನಾಯಕರು ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳನ್ನು ಆಳುತ್ತಿದ್ದರು.

ಕೆಳದಿ ಸಂಸ್ಥಾನವು ವಿಶಾಲ ಹಾಗೂ ಸಂಪದ್ಭರಿತವಾಗಿತ್ತು. ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು (ಕೇರಳ), ಕೊಡಗು, ಹಾಸನ, ತುಮಕೂರು, ಚಿತ್ರದುರ್ಗ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಭಾಗಗಳನ್ನು ಒಳಗೊಂಡು ಕೆಳದಿ ರಾಜ್ಯವಿತ್ತು.

**ಹಿರಿಯ ವೆಂಕಟಪ್ಪ ನಾಯಕ:** ವೆಂಕಟಪ್ಪ ನಾಯಕನು ಕೆಳದಿ ಅರಸರಲ್ಲೇ ಅತ್ಯಂತ ಪ್ರಖ್ಯಾತನಾಗಿದ್ದನು, ಇವನ ಕಾಲದಲ್ಲಿ ಕೆಳದಿ ರಾಜ್ಯವು ಪೂರ್ಣ ಸ್ವತಂತ್ರವಾಯಿತು. ಈತನು ಕರಾವಳಿಯಲ್ಲಿ ಚಂದ್ರಗಿರಿ ನದಿಯವರೆಗೆ ವಿಜಯಯಾತ್ರೆ ಮಾಡಿದನು. ಉಳ್ಳಾಲದ ರಾಣಿ ಅಬ್ಬಕ್ಕಳ ನೆರವಿನಿಂದ ಪೋರ್ಚುಗೀಸರನ್ನು ಮಂಗಳೂರಿನಲ್ಲಿ ಈತನು ಸೋಲಿಸಿದನು. ವಿಜಯಪುರದ ಆದಿಲ್‌ಷಾಹಿ ಸೇನೆಯನ್ನು ಸೋಲಿಸಿ ಹಾನಗಲ್‌ನಲ್ಲಿ ವಿಜಯಸ್ತಂಭ ಸ್ಥಾಪಿಸಿದನು. ಸಕಲ ಮತಗಳಿಗೆ ಈತನು ಪ್ರೋತ್ಸಾಹ ನೀಡಿದನು.

## ಶಿವಪ್ಪ ನಾಯಕ

ಶಿವಪ್ಪ ನಾಯಕ ಕೆಳದಿಯ ಪ್ರಸಿದ್ಧ ಅರಸನಾಗಿದ್ದನು. ಇವನು ಕರಾವಳಿಯ ಪೋರ್ಚುಗೀಸರ ಕೋಟೆಗಳನ್ನು ವಶಪಡಿಸಿಕೊಂಡು 'ಪಡುಗಡಲೊಡೆಯ' ಎನಿಸಿದನು. ರಾಜ್ಯದ ರಕ್ಷಣೆಗಾಗಿ ಬೇಕಲ ಮತ್ತು ಚಂದ್ರಗಿರಿ (ಕೇರಳ) ಹಾಗೂ ಮಂಗಳೂರು ಮುಂತಾದೆಡೆಗಳಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಸಿದನು. ಧರ್ಮ ಶ್ರದ್ಧೆಯುಳ್ಳವನಾದ ಶಿವಪ್ಪ ನಾಯಕನು ವಾಜಪೇಯ ಮುಂತಾದ ವೈದಿಕ ಯಜ್ಞಗಳನ್ನು ಮಾಡಿಸಿದನು.


ಶಿವಪ್ಪ ನಾಯಕ

ವ್ಯಾಪಾರದ ಅಭಿವೃದ್ಧಿಗಾಗಿ ಗೋವೆಯ ವ್ಯಾಪಾರಿ ವರ್ಗದವರಿಗೆ ತನ್ನ ರಾಜ್ಯದಲ್ಲಿ ಬಂದು ನೆಲೆಸಲು ಪ್ರೋತ್ಸಾಹ ನೀಡಿದನು. ಗೋವೆಯ ಕ್ರೈಸ್ತರು ಕೃಷಿಯಲ್ಲಿ ನಿಪುಣರಾದುದರಿಂದ ಅವರಿಗೂ ತನ್ನ ರಾಜ್ಯಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ, ಭೂಮಿ ಕಾಣಿಕೆಗಳನ್ನು ಕೊಟ್ಟನು. ಅವನು ತನ್ನ ರಾಜ್ಯದಲ್ಲಿ ಪಾದ್ರಿಗಳು ಮಾತ್ರ ಸ್ಥಳೀಯರೇ ಇರಬೇಕೆಂದು ಕಟ್ಟಳೆ ಮಾಡಿದ್ದನು.

©KTBS NOT TO BE REPUBLISHED



**ಶಿವಪ್ಪ ನಾಯಕನ ಅರಮನೆ, ಶಿವಮೊಗ್ಗ**

**ಶಿವಪ್ಪನಾಯಕನ ಸಿಸ್ತು:** ಶಿವಪ್ಪ ನಾಯಕನು ಅಳವಡಿಸಿದ ಕಂದಾಯ ವ್ಯವಸ್ಥೆಯನ್ನು 'ಸಿಸ್ತು' ಎಂದು ಕರೆಯಲಾಗಿದೆ. ಈ ಕಂದಾಯ ಪದ್ಧತಿಯಂತೆ ಭೂಕಂದಾಯವನ್ನು ನಿಗದಿಪಡಿಸಲು ಭೂಮಿಯನ್ನು ವರ್ಗೀಕರಿಸಲಾಗುತ್ತಿತ್ತು. ಮಣ್ಣಿನ ಗುಣ, ನೀರಾವರಿ ಸವಲತ್ತು ಇತ್ಯಾದಿ ಅಂಶಗಳು ವರ್ಗೀಕರಣದ ಮೂಲವಾಗಿದ್ದವು. ಹೊಲದ ಇಳುವರಿಯ ಮೂರನೆಯ ಒಂದಂಶವನ್ನು ಕಂದಾಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಇಂಥ ಕ್ರಮಬದ್ಧ ಕಂದಾಯ ಪದ್ಧತಿಯನ್ನು 'ಶಿವಪ್ಪ ನಾಯಕನ ಸಿಸ್ತು' ಎನ್ನುವರು. ಸಿಸ್ತು ಮಲೆನಾಡಿನ ಸಮೃದ್ಧಿಗೆ ಕಾರಣವಾಯಿತು.

© KTBS NOT TO BE REPUBLISHED



**ಅಘೋರೇಶ್ವರ ದೇವಾಲಯ, ಕೆಳದಿ**

**ರಾಣಿ ಚೆನ್ನಮ್ಮಾಜಿ:** ಶಿವಪ್ಪ ನಾಯಕನ ಅನಂತರ ಅವನ ಸೊಸೆ ರಾಣಿ ಚೆನ್ನಮ್ಮಾಜಿ ರಾಜ್ಯವಾಳಿದಳು. ಅವಳು ಮೊಗಲರ ಸೈನ್ಯವನ್ನು ಹಿಮ್ಮೆಟ್ಟಿಸಿ ಶಿವಾಜಿಯ ಮಗ ಛತ್ರಪತಿ ರಾಜಾರಾಮನಿಗೆ ರಕ್ಷಣೆ ನೀಡಿದಳು. ಕನ್ನಡ ನಾಡಿನ ಶೌರ್ಯ, ತ್ಯಾಗಕ್ಕೆ ಸಂಕೇತವಾಗಿದ್ದ ಚೆನ್ನಮ್ಮ ಮೈಸೂರಿನ ಸೈನ್ಯದೊಂದಿಗೂ ಸೆಣಸಾಡಿದಳು. ಕೆಳದಿ ಅರಸರು ದೇವಸ್ಥಾನಗಳು, ಅಗ್ರಹಾರಗಳು ಮತ್ತು ವೀರಶೈವ ಮಠಗಳನ್ನು ಸ್ಥಾಪಿಸಿದರು. ಕೆಳದಿಯ ಅಘೋರೇಶ್ವರ ದೇವಾಲಯ ಶಿಲ್ಪಕಲೆಗೆ ಪ್ರಸಿದ್ಧವಾಗಿದೆ. ಮಠಗಳು ದಾಸೋಹ ಹಾಗೂ ಶಿಕ್ಷಣದ ಕೇಂದ್ರಗಳಾಗಿದ್ದವು. ಸಕಲ ಧರ್ಮಗಳಿಗೆ ಅಪಾರ ದತ್ತಿದಾನ ನೀಡಿದರು. ಚನ್ನಮ್ಮಾಜಿಯು ಮಂಗಳೂರಿನಲ್ಲಿ ಕ್ರೈಸ್ತ ದೇವಾಲಯಕ್ಕೆ ನಿವೇಶನವಿತ್ತಳು.

ಮೈಸೂರಿನ ಜೊತೆ ಸತತ ಸ್ಪರ್ಧೆ ಹಾಗೂ ಆಂತರಿಕ ಯುದ್ಧಗಳಿಂದಾಗಿ ಕೆಳದಿ ರಾಜ್ಯ ದುರ್ಬಲವಾಯಿತು. ಮುಂದೆ ಹೈದರನು ಅದನ್ನು ವಶಪಡಿಸಿಕೊಂಡನು.

## ಚಿತ್ರದುರ್ಗದ ನಾಯಕರು

ಮೈಸೂರು ಮತ್ತು ಕೆಳದಿ ಅರಸರುಗಳ ನಂತರ ಚಿತ್ರದುರ್ಗದ ನಾಯಕರಿಗೆ ಕರ್ನಾಟಕದ ಇತಿಹಾಸದಲ್ಲಿ ಒಂದು ಗಣ್ಯ ಸ್ಥಾನವಿದೆ. ಇವರು 16ರಿಂದ 18ನೇ ಶತಮಾನಗಳವರೆಗೆ ಪಾಳೆಯಗಾರರಾಗಿ ಆಳ್ವಿಕೆ ನಡೆಸಿದರು.

ಮದಕರಿ ನಾಯಕ: ಈತನು ಚಿತ್ರದುರ್ಗದ ನಾಯಕರಲ್ಲಿ ಅತ್ಯಂತ ಪ್ರಬಲ ಹಾಗೂ ಪ್ರಸಿದ್ಧನಾದವನು. ಕೇವಲ ಹನ್ನೆರಡು ವರ್ಷದವನಾಗಿದ್ದಾಗಲೇ ಸಿಂಹಾಸನವನ್ನೇರಿದನು. ಮದಕರಿಯು ಹೈದರ್ ಅಲಿಗೆ ಹಲವಾರು ಯುದ್ಧಗಳಲ್ಲಿ ಸಹಾಯಮಾಡಿದನು. ಆದರೆ ಮದಕರಿಯ ಸಾಹಸವನ್ನು ಮನಗಂಡ ಹೈದರ್ ಅಲಿ ಒಳಗೊಳಗೇ ಮತ್ಸರಪಟ್ಟನು. ಈತನನ್ನು ಹತ್ತಿಕ್ಕಲು ಚಿತ್ರದುರ್ಗದ ಕೋಟೆಗೆ ಮುತ್ತಿಗೆ ಹಾಕಿದನು. ಏಳು ಸುತ್ತಿನ ಭಾರಿ ಗಾತ್ರದ ಅಭೇದ್ಯ ಕೋಟೆಯನ್ನು ವಶಪಡಿಸಿಕೊಳ್ಳಲು ಹೈದರನಿಗೆ ಅಸಾಧ್ಯವಾಗಿತ್ತು. ಆದುದರಿಂದ ಆತನ ಸೈನಿಕರು ಕೋಟೆಯ ರಹಸ್ಯದಾರಿಯನ್ನು ಪತ್ತೆಮಾಡಿ, ಕಾವಲುಗಾರನಿಲ್ಲದ ವೇಳೆ ಕಳ್ಳಗಿಂಡಿಯಿಂದ ಅದನ್ನು ಪ್ರವೇಶಿಸಲು ಯತ್ನಿಸಿದರು. ಆ ವೇಳೆಗೆ ಕಾವಲುಗಾರನ ಹೆಂಡತಿ ಓಬವ್ವ ತನ್ನ ಓನಕೆಯಿಂದ ಅನೇಕ ಶತ್ರುಗಳನ್ನು ಕೊಂದು ಹಾಕಿದಳು. ಇಂದಿಗೂ ಚಿತ್ರದುರ್ಗದ ಕೋಟೆಯ ಪಶ್ಚಿಮದಲ್ಲಿ ವೀರವನಿತೆ 'ಓಬವ್ವನ ಕಿಂಡಿ' ಇದೆ.


**ಒನಕೆ ಓಬವ್ವ**


**ಚಿತ್ರದುರ್ಗದ ಕೋಟೆ**

© KTBS NOT TO BE REPUBLISHED

ಸೋಲನ್ನೊಪ್ಪದ ಹೈದರನು ಚಿತ್ರದುರ್ಗಕ್ಕೆ ಮತ್ತೊಮ್ಮೆ ಮುತ್ತಿಗೆಹಾಕಿದನು. ಭೀಕರ ಯುದ್ಧವೊಂದು ನಡೆದು ಮದಕರಿಗೆ ಸೋಲಾಯಿತು. ಮದಕರಿಯನ್ನು ಬಂಧಿಸಿ ಅನಂತರ ಕೊಲ್ಲಲಾಯಿತು. ಮದಕರಿ ಗತಿಸುವುದರೊಂದಿಗೆ ಚಿತ್ರದುರ್ಗದ ನಾಯಕರ ವಂಶ ಅಳಿಯಿತು.

ಚಿತ್ರದುರ್ಗವು ಒಂದು ಆಕರ್ಷಕವಾದ ಗಿರಿದುರ್ಗವಾಗಿದ್ದು ಏಳು ಸುತ್ತಿನ ಕೋಟೆಯನ್ನು ಹೊಂದಿದೆ. ಇದರ ಒಳಗಿನ ನಿವೇಶನದಲ್ಲಿ ಹಲವು ದೇವಾಲಯಗಳೂ ಕೆರೆಗಳೂ ಇವೆ. ಚಿತ್ರದುರ್ಗದ ನಾಯಕರು ಹಲವಾರು ದೇವಾಲಯಗಳನ್ನು ಕಟ್ಟಿಸಿದರು. ಭರಮಸಾಗರ ಮತ್ತು ಭೀಮಸಮುದ್ರ ಜಲಾಶಯಗಳು ಇವರ ಕೊಡುಗೆಗಳಾಗಿವೆ. ತಮ್ಮ ಶೌರ್ಯ, ಸಾಹಸಗಳಿಗೆ ಚಿತ್ರದುರ್ಗದ ನಾಯಕರು ಖ್ಯಾತರಾಗಿದ್ದಾರೆ. ಈ ಮನೆತನದ ಬಗ್ಗೆ ಸಮೃದ್ಧವಾದ ಜನಪದ ಸಾಹಿತ್ಯವಿದೆ.

## ಯಲಹಂಕ ನಾಡಪ್ರಭುಗಳು

ಕೆಂಪೇಗೌಡ ಮನೆತನದವರೆಂದು ಪ್ರಸಿದ್ಧವಾಗಿರುವ ಯಲಹಂಕ ನಾಡಪ್ರಭುಗಳು ಆಧುನಿಕ ಬೆಂಗಳೂರಿನ ನಿರ್ಮಾಪಕರು. ಇವರು ವಿಜಯನಗರದ ಪಾಳೆಯಗಾರರಾಗಿದ್ದರು. ಮುಂದೆ 16–18ನೇ ಶತಮಾನಗಳ ಕಾಲಾವಧಿಯಲ್ಲಿ ಬೆಂಗಳೂರು ಜಿಲ್ಲೆಯ ಬಹುತೇಕ ಭಾಗಗಳ ಮೇಲೆ ಇವರು ಆಳ್ವಿಕೆ ನಡೆಸಿದರು. ಪ್ರಾರಂಭದಲ್ಲಿ ಬೆಂಗಳೂರು, ಅನಂತರ ಮಾಗಡಿ ಇವರ ರಾಜಧಾನಿಯಾಗಿತ್ತು.


ಒಂದನೆಯ ಕೆಂಪೇಗೌಡ

**ಒಂದನೆಯ ಕೆಂಪೇಗೌಡ:** ಒಂದನೆಯ ಕೆಂಪೇಗೌಡನು ಬೆಂಗಳೂರು ನಗರದ ಸ್ಥಾಪಕನೆಂದು ಹೆಸರುವಾಸಿಯಾಗಿದ್ದಾನೆ. ಇವನು ಬೆಂಗಳೂರಿನಲ್ಲಿ ಕೋಟೆಯೊಂದನ್ನು ಕಟ್ಟಿ ಅಲ್ಲಿಂದ ಆಳ್ವಿಕೆ ನಡೆಸಿದ. ಬೆಂಗಳೂರಿನ ಬಸವನಗುಡಿಯ ಬಸವನ ದೇವಾಲಯ, ಹಲಸೂರಿನ ಸೋಮೇಶ್ವರ ದೇವಾಲಯಗಳ ರಚನೆ ಹಾಗೂ ಗವಿಗಂಗಾಧರೇಶ್ವರ ದೇವಾಲಯದ ವಿಸ್ತರಣೆ ಈತನ ಸಾಧನೆಯಾಗಿದೆ. ಬೆಂಗಳೂರಿನಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ.

ಒಂದನೆಯ ಕೆಂಪೇಗೌಡನು ನಿರ್ಮಿಸಿದ ನಾಲ್ಕು ಕೆರೆಗಳೆಂದರೆ ಕೆಂಪಾಂಬುಧಿ, ಧರ್ಮಾಂಬುಧಿ, ಹಲಸೂರು ಹಾಗೂ ಸಂಪಂಗಿ.

ಒಂದನೆಯ ಕೆಂಪೇಗೌಡನು ಅನೇಕ ಛತ್ರ ಮತ್ತು ಅಗ್ರಹಾರಗಳನ್ನು ಕಟ್ಟಿಸಿದನು. ಧರ್ಮಪ್ರಭುವಾಗಿ ಆಳಿದ ಇವನಿಗೆ 'ಪ್ರಜಾವತ್ಸಲ' ಎಂಬ ಬಿರುದಿತ್ತು.

NOT TO BE REPUBLISHED
© KTBS

**ಎರಡನೆಯ ಕೆಂಪೇಗೌಡ**ನು ಒಂದನೆಯ ಕೆಂಪೇಗೌಡನ ಮಗ. ಕೆಂಪೇಗೌಡ ಮನೆತನದವರು ಮಾಗಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತವನ್ನು ನಿರ್ವಹಿಸಿದರು. ಹೀಗಾಗಿ ಈ ಸಂತತಿಯ ದೊರೆಗಳನ್ನು ಮಾಗಡಿ ಕೆಂಪೇಗೌಡರೆಂದು ಕರೆಯುವ ವಾಡಿಕೆಯಿದೆ. ಎರಡನೇ ಕೆಂಪೇಗೌಡನು ಬೆಂಗಳೂರು ನಗರದ ಎಲ್ಲೆಕಟ್ಟುಗಳನ್ನು ಗುರುತಿಸಿ ನಾಲ್ಕು ಗೋಪುರಗಳನ್ನು ಕಟ್ಟಿಸಿದನು. ಇವನ ಕಾಲದಲ್ಲಿ ಬೆಂಗಳೂರು ನೇಯ್ಗೆಯ ದೊಡ್ಡ ಕೇಂದ್ರವಾಗಿ ಬೆಳೆಯಿತು. ತನ್ನ ತಂದೆಯಂತೆ ಇವನು ಕೂಡ ಹೊಸ ಹಳ್ಳಿಗಳು, ದೇವಾಲಯಗಳು ಮತ್ತು ಕೆರೆಗಳ ನಿರ್ಮಾಣ ಮಾಡಿ ಹೆಸರುಗಳಿಸಿದನು. ಮುಂದೆ, ಯಲಹಂಕ ನಾಡಪ್ರಭುಗಳ ಸಂಸ್ಥಾನ ಮೈಸೂರು ಸಂಸ್ಥಾನದೊಂದಿಗೆ ಸೇರ್ಪಡೆಯಾಯಿತು.



*ಗಡಿಗೋಪುರ, ಬೆಂಗಳೂರು*

## 7.3 ಕೊಡಗು, ಕಿತ್ತೂರು, ತುಳುನಾಡು ಮತ್ತು ಹೈದರಾಬಾದ್–ಕರ್ನಾಟಕ

### ಕೊಡಗು

ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿರುವ ಜಿಲ್ಲೆಯೇ ಕೊಡಗು. ಇಲ್ಲಿನ ಹೆಚ್ಚಿನ ಜನರು ಆಡುವ ಭಾಷೆಗಳೆಂದರೆ ಕೊಡವ ಮತ್ತು ಅರೆಭಾಸೆ (ಅರೆಭಾಷೆ).



**ತಲಕಾವೇರಿ**

ಕರ್ನಾಟಕದ ಜನರ ಜೀವನದಿ ಕಾವೇರಿ. ತಲಕಾವೇರಿಯು ಕಾವೇರಿ ನದಿಯ ಉಗಮ ಸ್ಥಾನ. ತಲಕಾವೇರಿಯನ್ನು ಲಕ್ಷಾಂತರ ಜನರು ಆರಾಧಿಸುತ್ತಾರೆ. ಕೊಡಗು ಅರಣ್ಯ ಸಂಪತ್ತಿನಿಂದ ಕೂಡಿದ್ದು, ನಾಗರಹೊಳೆ ಎಂಬ ರಾಷ್ಟ್ರೀಯ ಉದ್ಯಾನವನ ಇಲ್ಲಿದೆ.

© KTBS NOT TO BE REPUBLISHED

**ಹಾಲೇರಿ ಅರಸುಮನೆತನ:** ಕೊಡಗನ್ನು ಆಳಿದ ಪ್ರಮುಖ ರಾಜವಂಶವೆಂದರೆ ಹಾಲೇರಿ ಅರಸುಮನೆತನ. 17ನೇ ಶತಮಾನದ ಆರಂಭದಲ್ಲಿ ಇದನ್ನು ವೀರರಾಜನು ಸ್ಥಾಪಿಸಿದನು. ಮುಂದೆ, ಮುದ್ದುರಾಜನು ಮುದ್ದುರಾಜಕೇರಿಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಮುದ್ದುರಾಜಕೇರಿಯೇ ಮಡಿಕೇರಿಯಾಗಿದೆ.



**ಮಡಿಕೇರಿಯ ಕೋಟೆ**

ಕೊಡಗನ್ನು 18ನೇ ಶತಮಾನದ ಉತ್ತರಾರ್ಧದಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಆಳಿದರು. ಆ ಸಂದರ್ಭದಲ್ಲಿ ಕೊಡಗಿನ ರಾಜನಾಗಿದ್ದ **ವೀರರಾಜನು** ಟಿಪ್ಪುವಿನ ಬಂಧಿಯಾಗಿದ್ದ. ಅವನ ಕೈಯಿಂದ ತಪ್ಪಿಸಿಕೊಂಡ ವೀರರಾಜನು ಬ್ರಿಟಿಷರ ಸಹಾಯದಿಂದ ಕೊಡಗನ್ನು ವಶಪಡಿಸಿಕೊಂಡನು. ಟಿಪ್ಪುವಿನ ಮರಣಾನಂತರ ಬ್ರಿಟಿಷರು ಮತ್ತು ಕೊಡಗಿನ ಅರಸರು ಸ್ನೇಹದಿಂದಿದ್ದರು.

NOT TO BE REPUBLISHED

**ಕೊಡಗು ಮತ್ತು ಬ್ರಿಟಿಷರು:** ಕೆಲಕಾಲದ ಬಳಿಕ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡರು. (1834). ಕೊಡಗಿನ ಕೊನೆಯ ಅರಸ ಚಿಕ್ಕವೀರರಾಜೇಂದ್ರನನ್ನು ಅವರು ಗಡಿಪಾರು ಮಾಡಿ ಕೊಡಗನ್ನು ತಾವೇ ನೇರವಾಗಿ ಆಳತೊಡಗಿದರು. ಕೊಡಗನ್ನು ವಿಭಜಿಸಿ, ಕೊಡಗಿನ ಭಾಗವಾಗಿದ್ದ ಅಮರಸುಳ್ಯವನ್ನು ಕೆನರಾ ಜಿಲ್ಲೆಗೆ ಸೇರಿಸಿದರು.

**ಅಮರಸುಳ್ಯ ಹೋರಾಟ:** ಕೆನರಾ ಜಿಲ್ಲೆಯಲ್ಲಿ ರೈತರ ಮೇಲೆ ಕಂದಾಯ ಹೆಚ್ಚಾಗಿದ್ದುದರಿಂದ ಅಲ್ಲಿನ ರೈತರು ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ಮಾಡಿದರು. ಅವರು ಬ್ರಿಟಿಷರನ್ನು ಕೊಡಗಿನಿಂದ ಓಡಿಸಲು ಸಂಕಲ್ಪಮಾಡಿದರು. ಈ ಹೋರಾಟವನ್ನು 1837ರ ಅಮರಸುಳ್ಯ ಹೋರಾಟವೆನ್ನುತ್ತಾರೆ. ಹೋರಾಟಗಾರರು ಸುಳ್ಯ, ಪುತ್ತೂರು, ಕಾಸರಗೋಡು ಹಾಗೂ

ಮಂಗಳೂರನ್ನು ಹದಿಮೂರು ದಿನಗಳ ಕಾಲ ತಮ್ಮ ವಶಕ್ಕೆ ತೆಗೆದುಕೊಂಡರು. ಆದರೆ ಬ್ರಿಟಿಷರು ಈ ಹೋರಾಟವನ್ನು ಬಗ್ಗುಬಡಿದರು. ಅನೇಕ ಹೋರಾಟಗಾರರನ್ನು ಅವರು ಗಲ್ಲು ಶಿಕ್ಷೆಗೆ ಒಳಪಡಿಸಿದರು. ಹೋರಾಟದ ಪ್ರಮುಖ ನಾಯಕರೆಂದರೆ ಪುಟ್ಟಬಸಪ್ಪ, ಕಲ್ಯಾಣಸ್ವಾಮಿ ಮತ್ತು ಗುಡ್ಡೆಮನೆ ಅಪ್ಪಯ್ಯಗೌಡ.



ಗುಡ್ಡೆಮನೆ ಅಪ್ಪಯ್ಯ ಗೌಡರ ಕಂಚಿನ ಪುತ್ಥಳಿ, ಮಡಿಕೇರಿ

ಕೊಡಗಿನಲ್ಲಿ ಸ್ವಾತಂತ್ರ್ಯ ಹೋರಾಟ: ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಸ್ವಾತಂತ್ರ್ಯ ಪ್ರೇಮಿಗಳು ಸಕ್ರಿಯವಾಗಿ ಭಾಗವಹಿಸಿದರು. ಸ್ವಾತಂತ್ರ್ಯಾನಂತರ ಕೊಡಗು ಕೆಲಕಾಲ ಪ್ರತ್ಯೇಕ ರಾಜ್ಯವಾಗಿ ಉಳಿಯಿತು. 1956ರಲ್ಲಿ ಕೊಡಗು ಕರ್ನಾಟಕದೊಂದಿಗೆ ವಿಲೀನವಾಯಿತು.

**ಕೊಡಗಿನ ಇಬ್ಬರು ಕಣ್ಮಣಿಗಳು:** ಕೊಡಗಿನ ಹೆಸರನ್ನು ಜಗತ್ತಿಗೆ ಪರಿಚಯ ಮಾಡಿದವರಲ್ಲಿ **ಫೀಲ್ಡ್ ಮಾರ್ಷಲ್ ಕೆ. ಎಮ್. ಕಾರ್ಯಪ್ಪ** ಅವರು ಪ್ರಮುಖರು. ಬ್ರಿಟಿಷರ ಕಾಲದಲ್ಲಿ ಅವರು ಪ್ರಥಮ ಭಾರತೀಯ ಜನರಲ್ ಆಗಿದ್ದವರು. ಸ್ವತಂತ್ರ ಭಾರತದ ಭೂಸೇನೆ, ನೌಕಾದಳ ಮತ್ತು ವಾಯುಪಡೆಗಳಿಗೆ ಮೊದಲ ಅಧಿಪತಿಯಾಗಿದ್ದವರು. ತಮ್ಮ ಆಡಳಿತ, ಸಾಹಸ, ಶೌರ್ಯಕ್ಕೆ ಹೆಸರಾದ ಕಾರ್ಯಪ್ಪನವರಿಗೆ **ಫೀಲ್ಡ್ ಮಾರ್ಷಲ್** ಎಂಬ ಅತ್ಯುನ್ನತ ಪದವಿಯನ್ನು ನೀಡಲಾಯಿತು.



ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ



ಜನರಲ್ ಕೆ.ಎಸ್. ತಿಮ್ಮಯ್ಯ

© KTBS NOT TO BE REPUBLISHED

ಇನ್ನೊಬ್ಬ ಮಹಾನ್ ದೇಶಭಕ್ತ ಕೊಡಗಿನವರಾದ ಜನರಲ್ **ಕೆ. ಎಸ್. ತಿಮ್ಮಯ್ಯ.** ಅವರು ಭಾರತ ಮತ್ತು ಪಾಕಿಸ್ತಾನ ಯುದ್ಧದಲ್ಲಿ ಭಾರತದ ವಿಜಯಕ್ಕೆ ಕಾರಣರಾದರು. ಈ ಇಬ್ಬರು ವೀರರು ಕೊಡಗಿನ ಕಣ್ಮಣಿಗಳೆಂದು ಹೆಸರುವಾಸಿಯಾಗಿದ್ದಾರೆ. ಸೈನ್ಯಶಕ್ತಿಯೊಂದಿಗೆ ಗುರುತಿಸಿಕೊಂಡ ಕೊಡಗು ಕ್ರೀಡೆ, ಸಾಹಸ, ಜನಪದ ಮತ್ತು ಪ್ರಕೃತಿ ಸೌಂದರ್ಯಕ್ಕೂ ಹೆಸರಾಗಿದೆ.

## ಕಿತ್ತೂರು

ಬೆಳಗಾವಿ ಜಿಲ್ಲೆಯ ಕಿತ್ತೂರು ಸುಮಾರು ಎರಡು ಶತಮಾನಗಳ ಹಿಂದೆ ಪ್ರಭಾವಶಾಲಿ ರಾಜ್ಯವಾಗಿತ್ತು. ವ್ಯಾಪಾರ, ವ್ಯವಸಾಯಗಳಿಗೆ ಪ್ರಸಿದ್ಧವಾಗಿತ್ತು.


ವೀರವನಿತೆ ಕಿತ್ತೂರ ಚೆನ್ನಮ್ಮನ ಕಂಚಿನ ಪುತ್ಥಳಿ

**ರಾಣಿ ಚೆನ್ನಮ್ಮ:** ವೀರವನಿತೆ ಕಿತ್ತೂರಿನ ರಾಣಿ ಚೆನ್ನಮ್ಮ ರಾಜ ಮಲ್ಲಸರ್ಜ ದೇಸಾಯಿಯ ಕಿರಿಯ ಪತ್ನಿ. ಮಲ್ಲಸರ್ಜನೂ ಅವನ ಉತ್ತರಾಧಿಕಾರಿಯಾಗಿದ್ದ ಮಗನೂ ತೀರಿಕೊಂಡರು. ಚೆನ್ನಮ್ಮ ಶಿವಲಿಂಗ ಸರ್ಜನನ್ನು ದತ್ತು ತೆಗೆದುಕೊಂಡು ರಾಜ್ಯವಾಳಲು ಪ್ರಾರಂಭಿಸಿದಳು. ಧಾರವಾಡದ ಕಲೆಕ್ಟರ್ ಥ್ಯಾಕರೆ ದತ್ತುಸ್ವೀಕಾರ ಕ್ರಮಬದ್ಧವಲ್ಲ ಎಂದು ಕುಂಟುನೆಪ ತೆಗೆದನು. ಕಿತ್ತೂರಿನ ಆಡಳಿತವನ್ನು ಬ್ರಿಟಿಷ್ ಸರ್ಕಾರವೇ ವಹಿಸಬೇಕೆಂದು ಅವನು ಶಿಫಾರಸು ಮಾಡಿದ. ಈ ವಿಚಾರವನ್ನು ತಿಳಿದ ಚೆನ್ನಮ್ಮ ಸಿಟ್ಟಿನಿಂದ ಕಿಡಿಕಿಡಿಯಾದಳು. ಬ್ರಿಟಿಷರ ದಮನ ನೀತಿಯನ್ನು ಪ್ರತಿಭಟಿಸಿ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿರ್ಧರಿಸಿದಳು. ಥ್ಯಾಕರೆಯು 500 ಮಂದಿ ಸೈನಿಕರೊಂದಿಗೆ ಕಿತ್ತೂರಿಗೆ ದಾಳಿಯಿಟ್ಟನು. ಘೋರವಾದ ಯುದ್ಧ ನಡೆಯಿತು.

©KTBS NOT TO BE REPUBLISHED

ಚೆನ್ನಮ್ಮ ತನ್ನ ಸೈನ್ಯದೊಂದಿಗೆ ಬ್ರಿಟಿಷರ ವಿರುದ್ಧ ಪರಾಕ್ರಮದಿಂದ ಹೋರಾಡಿದಳು. ಬ್ರಿಟಿಷ್ ಸೈನ್ಯ ದಿಕ್ಕಾಪಾಲಾಯಿತು. ಥ್ಯಾಕರೆ ಗುಂಡಿನೇಟಿಗೆ ಅಸುನೀಗಿದನು.

ಮತ್ತೆ ಬ್ರಿಟಿಷ್ ಸೈನ್ಯ ಕಿತ್ತೂರನ್ನು ಮುತ್ತಿತು. ಕಿತ್ತೂರಿನ ಸೈನ್ಯ ಚಿಕ್ಕದಾಗಿದ್ದು 6,000 ಸೈನಿಕರಿದ್ದರು. ಬ್ರಿಟಿಷರದು ಬಹು ದೊಡ್ಡ ಸೈನ್ಯ. ಮೂರು ದಿನಗಳ ಯುದ್ಧವಾಯಿತು. ಚೆನ್ನಮ್ಮನ ಕಡೆಯವರೇ ಕೆಲವರು ಅವಳಿಗೆ ಮೋಸ ಮಾಡಿದರು. ಕಿತ್ತೂರಿನ ಸೈನ್ಯ ಸೋತು ಚೆನ್ನಮ್ಮ ಸೆರೆಯಾದಳು. ಅವಳನ್ನು ಬ್ರಿಟಿಷರು ಬೈಲಹೊಂಗಲದಲ್ಲಿ ಸೆರೆಯಲ್ಲಿಟ್ಟರು. ಐದು ವರ್ಷಗಳ ಕಾಲ ಸೆರೆಯಲ್ಲಿದ್ದ ರಾಣಿಯು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಧೀರರಿಗೆ ಸಂದೇಶಗಳನ್ನು ಕಳುಹಿಸುತ್ತ ಹುರಿದುಂಬಿಸುತ್ತಿದ್ದಳು.

ಬ್ರಿಟಿಷ್‌ಸತ್ತೆಯನ್ನು (ಪ್ರಭುತ್ವ) ವಿರೋಧಿಸಿದ ಪ್ರಥಮ ಭಾರತೀಯ ನಾರಿ ಎನ್ನುವ ಕೀರ್ತಿ ಚೆನ್ನಮ್ಮನಿಗೆ ಸಲ್ಲುತ್ತದೆ. ಆಕೆ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕೆಯಾಗಿ ಕಂಗೊಳಿಸುತ್ತಿದ್ದಾಳೆ. ಆಕೆಯ ನೆನಪಿನಲ್ಲಿ ಲಾವಣಿಗಳನ್ನು ಈಗಲೂ ಹಾಡುತ್ತಾರೆ.

**ಸಂಗೊಳ್ಳಿ ರಾಯಣ್ಣ:** ಸಂಗೊಳ್ಳಿ ರಾಯಣ್ಣ ಚನ್ನಮ್ಮನ ನಿಷ್ಠ ಬಂಟ. ಜನಸಾಮಾನ್ಯರ ಮಧ್ಯೆ ಮೂಡಿಬಂದ ಸ್ವಾತಂತ್ರ್ಯ ವೀರ. ಚೆನ್ನಮ್ಮನ ಬಂಧನವಾದ ಮೇಲೆ ಕಿತ್ತೂರಿನ ನಾಯಕತ್ವವಹಿಸಿ ಸೈನ್ಯವನ್ನು ಸಂಘಟಿಸಿದ. ಬ್ರಿಟಿಷರ ಕಚೇರಿಗಳನ್ನು ಸುಟ್ಟು, ಖಜಾನೆಗಳನ್ನು ಲೂಟಿ ಮಾಡಿದ. ಗೆರಿಲ್ಲ ಯುದ್ಧದಲ್ಲಿ ನಿಷ್ಣಾತನಾಗಿದ್ದ ರಾಯಣ್ಣನು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದನು. ನೇರ ಯುದ್ಧದಲ್ಲಿ ಅವನನ್ನು ಸೋಲಿಸಲು ಸಾಧ್ಯವಾಗದೆ ಬ್ರಿಟಿಷರು ಕುಟಿಲೋಪಾಯ ಮಾಡಿದರು.



ಸಂಗೊಳ್ಳಿ ರಾಯಣ್ಣ

ಹಣದಾಸೆಗೆ ಬಲಿಬಿದ್ದ ದೇಶದ್ರೋಹಿಗಳು ರಾಯಣ್ಣನನ್ನು ಮೋಸದಿಂದ ಸೆರೆಹಿಡಿದುಕೊಟ್ಟರು. ಅವನನ್ನೂ ಅವನ ಆರು ಮಂದಿ ಸಂಗಡಿಗರನ್ನೂ ಗಲ್ಲಿಗೇರಿಸಲಾಯಿತು. ಅಂತ್ಯದರ್ಶನ ಪಡೆಯಲು ಬಂದಿದ್ದ ತಾಯಿ ಕೆಂಚವ್ವನಿಗೆ ರಾಯಣ್ಣ ಅಡ್ಡಬಿದ್ದು ಹರಕೆ ಪಡೆದು, ನಗುನಗುತ್ತಲೇ ಗಲ್ಲುಕಂಬ ಏರಿದ. ಆತನ ಸಂಗಡಿಗರೆಲ್ಲರನ್ನು ನಂದಗಡದಲ್ಲಿ ಸಮಾಧಿ ಮಾಡಲಾಯಿತು. ರಾಯಣ್ಣನ ಅನುಯಾಯಿಗಳು ಬಂಡಾಯವನ್ನು ಮುಂದುವರಿಸಿದರು.

ರಾಯಣ್ಣನ ಸಮಾಧಿಯ ಮೇಲೆ ಆಲದ ಸಸಿಯೊಂದನ್ನು ಅವನ ಅನುಯಾಯಿ ಬಿಚ್ಚುಗತ್ತಿ ಚೆನ್ನಬಸಪ್ಪ ನೆಟ್ಟ. ಎಷ್ಟೋ ವರ್ಷಗಳ ಕಾಲ ಚೆನ್ನಬಸಪ್ಪ ಬೈರಾಗಿಯಾಗಿ ಅಲ್ಲಿಯೇ ಇದ್ದನಂತೆ. ಆ ಆಲದ ಮರ ಈಗಲೂ ಇದೆ. ರಾಯಣ್ಣನ ನಂತರ ಅನೇಕ ಕೆಚ್ಚೆದೆಯ ಯುವಕರು ಕಿತ್ತೂರಿನ ಬಂಡಾಯವನ್ನು ಮುಂದುವರಿಸಿ ಕಿತ್ತೂರ ಜನತೆಯ ಸ್ವಾತಂತ್ರ್ಯ ಪ್ರೇಮವನ್ನು ತೋರಿಸಿಕೊಟ್ಟರು.

## ತುಳುನಾಡು

ಪ್ರಾಚೀನ ಕಾಲದಲ್ಲಿ ಕರ್ನಾಟಕ ಕರಾವಳಿಯ ಒಂದು ಭಾಗವನ್ನು (ಹೆಚ್ಚು ಕಡಿಮೆ ಈಗಿನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು) ತುಳುನಾಡು ಎಂದು ಕರೆಯಲಾಗುತ್ತಿತ್ತು. ಪುರಾಣ ಸಾಹಿತ್ಯದಲ್ಲಿ ಈ ಪ್ರದೇಶವು ಪರಶುರಾಮ ಕ್ಷೇತ್ರವೆನಿಸಿದೆ. ಇಲ್ಲಿನ ಬಹುತೇಕ ಜನರ ಭಾಷೆ ತುಳು. ಕೊಂಕಣಿ ಮತ್ತು ಬ್ಯಾರಿ ಭಾಷೆಗಳನ್ನಾಡುವ ಸಾಕಷ್ಟು ಜನರು ಕೂಡ ತುಳುನಾಡಿನಲ್ಲಿದ್ದಾರೆ.

ಇತಿಹಾಸ ಕಾಲದಲ್ಲಿ ತುಳುನಾಡನ್ನು ಕದಂಬ, ಆಳುಪ, ಹೊಯ್ಸಳ, ವಿಜಯನಗರ ಮುಂತಾದ ಅರಸುಮನೆತನಗಳು ಆಳಿಕೊಂಡು ಬಂದವು. ತುಳುನಾಡಿನಲ್ಲಿ ಆಳುಪ ವಂಶದ ಅರಸರು ಸುದೀರ್ಘ ಕಾಲ ಆಳಿದರು. ಉದ್ಯಾವರ (ಉದಯಪುರ), ಮಂಗಳೂರು (ಮಂಗಳಪುರ), ಬಾರಕೂರು ಮುಂತಾದವು ತುಳು ರಾಜ್ಯದ ರಾಜಧಾನಿಗಳಾಗಿದ್ದವು.

ಚೌಟ ಅರಸು ಮನೆತನದ **ಉಲ್ಲಾಳದ ಅಬ್ಬಕ್ಕ ರಾಣಿಯು** (16ನೇ ಶತಮಾನ) ಪೋರ್ಚುಗೀಸರ ವಿರುದ್ಧ ಹೋರಾಟ ನಡೆಸಿ ಅವರನ್ನು ಸೋಲಿಸಿದ್ದಳು.

**ಮತಧರ್ಮ:** ತುಳುನಾಡಿನ ಅರಸರಲ್ಲಿ ಬಹುತೇಕ ಮಂದಿ ಜೈನರು. ಇಲ್ಲಿ ಬೌದ್ಧ, ಜೈನ, ವೀರಶೈವ, ನಾಥ, ಇಸ್ಲಾಂ, ಕ್ರೈಸ್ತ ಹೀಗೆ ಅನೇಕ ಮತೀಯರು ನೆಲೆಸಿದ್ದಾರೆ. ನಾಗಾರಾಧನೆ ಮತ್ತು ಭೂತಾರಾಧನೆ ತುಳುನಾಡಿನ ಎರಡು ಆರಾಧನಾ ಪಂಥಗಳು.

© KTBS NOT TO BE REPUBLISHED

ನಾಗಮಂಡಲ ಒಂದು ವಿಸ್ತಾರವಾದ ನಾಗಾರಾಧನೆಯಾಗಿದೆ ಮತ್ತು ನಾಗ ಮತ್ತು ಭೂತವನ್ನು ಕೋಲ ಮತ್ತು ನೇಮ ಎಂದು ಆರಾಧಿಸಲಾಗುತ್ತದೆ.

- ದ್ವೈತಮತ ಸ್ಥಾಪಕ ಮಧ್ವಾಚಾರ್ಯರು ತುಳುನಾಡಿನವರು. ಮಂಗಳೂರಿನ ಕದ್ರಿಯಲ್ಲಿರುವ ಮಂಜುನಾಥನ ದೇವಸ್ಥಾನವು ತುಳುನಾಡಿನ ಪ್ರಾಚೀನ ದೇವಸ್ಥಾನವಾಗಿದೆ.
- ತುಳುನಾಡಿನಲ್ಲಿ ಕ್ರೈಸ್ತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಕೊಡುಗೆ ನೀಡಿದರು. ಮಂಗಳೂರಿನಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದವರು ಇವರೇ. ಫರ್ಡಿನಾಂಡ್ ಕಿಟೆಲ್ ಅವರು ರಚಿಸಿದ ಕನ್ನಡ ನಿಘಂಟು ಬಾಸೆಲ್ ಮಿಷನ್ ಮುದ್ರಣಾಲಯದಲ್ಲಿ ಅಚ್ಚಾಯಿತು.
- ತುಳು ನಿಘಂಟನ್ನು ರಚಿಸಿದವರು ಜರ್ಮನಿಯಿಂದ ಬಂದ ಮೆನ್ನರ್. ಪ್ರಾರಂಭದಲ್ಲಿ ತುಳುನಾಡಿನಲ್ಲಿ ಕ್ರೈಸ್ತ ರಿಲಿಜನ್ ಪ್ರಚಾರವನ್ನು ವಿದೇಶಿ ಪಾದ್ರಿಗಳು ಮಾಡಿದರು. ಮುಂದೆ ಈ ಕಾರ್ಯವನ್ನು ದೇಶೀಯರು ಮುಂದುವರಿಸಿದರು. ಅನೇಕ ಸುಂದರ ಚರ್ಚ್‌ಗಳು ಇಲ್ಲಿವೆ.
- ಪ್ರಾಚೀನ ಕಾಲದಿಂದಲೂ ಅರಬ್‌ದೇಶದೊಂದಿಗೆ ತುಳುನಾಡು ವ್ಯಾಪಾರ ಸಂಬಂಧವನ್ನು ಇರಿಸಿಕೊಂಡಿತ್ತು. ಇದರ ಫಲವಾಗಿ ಇಲ್ಲಿ ಇಸ್ಲಾಮ್ ರಿಲಿಜನ್ ಪ್ರಚಾರಕ್ಕೆ ಬಂದಿತು. ಮುಸಲ್ಮಾನರು ಪ್ರಾರ್ಥನೆ ಮಾಡಲು ಅಲ್ಲಲ್ಲಿ ಆಕರ್ಷಕ ಮಸೀದಿಗಳನ್ನು ನಿರ್ಮಿಸಿಕೊಂಡರು.

**ವಾಸ್ತು, ಶಿಲ್ಪ :** ಕದ್ರಿ ಮಂಜುನಾಥ ದೇವಸ್ಥಾನದಲ್ಲಿ ಸುಂದರವಾದ **ಅವಲೋಕಿತೇಶ್ವರನ** ಬೃಹದಾಕಾರದ ಕಂಚುಶಿಲ್ಪವಿದೆ. ಇದು ಒಂದು ಸಹಸ್ರ ವರ್ಷಗಳಷ್ಟು ಹಳೆಯದು. ಮೂಡಬಿದಿರೆಯ ಸಾವಿರಕಂಬದ ಬಸದಿ ಮತ್ತು ಕಾರ್ಕಳ, ವೇಣೂರು ಹಾಗೂ ಧರ್ಮಸ್ಥಳಗಳಲ್ಲಿರುವ ಗೊಮ್ಮಟಮೂರ್ತಿ ಜೈನ ಸಂಸ್ಕೃತಿಯ ಸಂಕೇತಗಳು. ಇಲ್ಲಿ ಪ್ರಸಿದ್ಧ ದೈವಗಳಾದ ಕೋಟಿ ಚೆನ್ನಯರ ಗರೋಡಿಗಳು ಕಾಣಿಸುತ್ತವೆ.



**ಅವಲೋಕಿತೇಶ್ವರ, ಮಂಗಳೂರು**

© KTBS NOT TO BE REPUBLISHED



**ಸಾವಿರಕಂಬದ ಬಸದಿ, ಮೂಡಬಿದಿರೆ**

**ಜನಪದ:** ಕಂಬುಳ(ಕಂಬಳ), ಕೋಳಿಅಂಕ ಚೆನ್ನೆ ಮುಂತಾದವು ತುಳುನಾಡಿನ ಕೆಲವು ಜಾನಪದ ಆಟಗಳು. ಯಕ್ಷಗಾನ ಮತ್ತು ತಾಳಮದ್ದಳೆ ಇಲ್ಲಿನ ಪ್ರಸಿದ್ಧ ಪ್ರಾಚೀನ ಕಲೆಗಳು.

**ಬ್ರಿಟಿಷ್ ಆಡಳಿತ:** 19ನೇ ಶತಮಾನದ ಪ್ರಾರಂಭದಿಂದ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಬ್ರಿಟಿಷರು ಆಡಳಿತ ನಡೆಸಿದರು. ಆಗ ಕರಾವಳಿ ಪ್ರದೇಶವನ್ನು 'ಕೆನರಾ' ಜಿಲ್ಲೆ ಎನ್ನುತ್ತಿದ್ದರು. ಮುಂದೆ ಕೆನರಾ ಜಿಲ್ಲೆಯನ್ನು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಅವೆಂದರೆ ಉತ್ತರ ಭಾಗದ 'ಉತ್ತರ ಕನ್ನಡ' (ನಾರ್ತ್ ಕೆನರಾ), ದಕ್ಷಿಣ ಭಾಗದ 'ದಕ್ಷಿಣ ಕನ್ನಡ' (ಸೌತ್ ಕೆನರಾ) ಜಿಲ್ಲೆಗಳು.

© KTBS NOT TO BE REPUBLISHED

**ಸ್ವಾತಂತ್ರ್ಯ ಸಂಗ್ರಾಮ:** ತುಳುನಾಡಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಕಾರ್ನಾಡು ಸದಾಶಿವರಾವ್ ಮತ್ತು ಅತ್ತಾವರ ಯಲ್ಲಪ್ಪ ಅಗ್ರಗಣ್ಯರು.

- 'ದೇಶಭಕ್ತ'ರೆಂದು ಕರೆಸಿಕೊಂಡ ಕಾರ್ನಾಡು ಸದಾಶಿವರಾವ್ ಮಾಡಿರುವ ಹರಿಜನ ಸೇವೆ ಮರೆಯಲಾಗದ್ದು. ದಲಿತ ವರ್ಗದ ಹಲವು ಮಕ್ಕಳಿಗೆ ತಮ್ಮ ಮನೆಯಲ್ಲಿ ಅವರು ಊಟ ಹಾಕುತ್ತಿದ್ದರು. ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ಉಜ್ವಲತಾರೆ ಅವರಾಗಿದ್ದಾರೆ.

- ಅತ್ತಾವರ ಯಲ್ಲಪ್ಪ ನೇತಾಜಿ ಸುಭಾಶ್‌ಚಂದ್ರ ಬೋಸರು ಸ್ಥಾಪಿಸಿದ 'ಆಜಾದ್ ಹಿಂದ್ ಸರ್ಕಾರ'ದ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದರು. ನೇತಾಜಿಯುವರ ಆಜಾದ್ ಹಿಂದ್ ಫೌಜಿನಲ್ಲಿ ಹದಿನೈದು ವರ್ಷಗಳ ಕಾಲ ಅವರು ಸೇನಾಧಿಕಾರಿಯಾಗಿದ್ದರು.



**ಯಕ್ಷಗಾನ ವೇಷಧಾರಿ**

- ಅಸ್ಪೃಶ್ಯತೆಯ ವಿರುದ್ಧ ಚಳವಳಿ, ದಲಿತ ಹೆಣ್ಣು ಮಕ್ಕಳಿಗಾಗಿ ಶಿಕ್ಷಣ ಮುಂತಾದ ದಲಿತೋದ್ಧಾರ ಕಾರ್ಯಗಳನ್ನು ಮಾಡಿದವರಲ್ಲಿ ಕುದ್ಮುಲ್ ರಂಗರಾವ್ ಮುಂಚೂಣಿಯಲ್ಲಿದ್ದರು. ಮಹಾತ್ಮಾ ಗಾಂಧೀಜಿ ಮಂಗಳೂರಿಗೆ ಬಂದಾಗ ಅವರ ಕಾರ್ಯಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು.



ಕಾರ್ನಾಡು ಸದಾಶಿವರಾವ್



ಅತ್ತಾವರ ಯಲ್ಲಪ್ಪ



ಕುದ್ಮುಲ್ ರಂಗರಾವ್

**ಬ್ಯಾಂಕಿಂಗ್ ಕ್ಷೇತ್ರ**ದಲ್ಲಿ ತುಳುನಾಡು ದಾಖಲೆ ಸ್ಥಾಪಿಸಿದೆ. ಕೆನರಾ, ಕಾರ್ಪೊರೇಶನ್, ಸಿಂಡಿಕೇಟ್, ಕರ್ನಾಟಕ ಮತ್ತು ವಿಜಯಾ ಬ್ಯಾಂಕುಗಳು ಸ್ವಾತಂತ್ರ್ಯಪೂರ್ವದಲ್ಲಿ ಇಲ್ಲಿ ಸ್ಥಾಪನೆಗೊಂಡವು. ದೇಶದ ಉದ್ದಗಲದಲ್ಲಿ ಹಬ್ಬಿಕೊಂಡಿರುವ ಈ ಪ್ರಸಿದ್ಧ ಬ್ಯಾಂಕುಗಳ ಸಾವಿರಾರು ಶಾಖೆಗಳು ಭಾರತದ ಅರ್ಥವ್ಯವಸ್ಥೆಗೆ ವಿಶೇಷ ಕೊಡುಗೆ ನೀಡಿವೆ. ಲಕ್ಷಾಂತರ ಮಂದಿಗೆ ಅವು ಉದ್ಯೋಗ ಅವಕಾಶ ಕಲ್ಪಿಸಿವೆ.

1956ರಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕರ್ನಾಟಕದೊಂದಿಗೆ ಸೇರ್ಪಡೆಗೊಂಡವು. (ಇದಕ್ಕೆ ಮುನ್ನ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು ಆಧಿಪತ್ಯಕ್ಕೆ ಸೇರಿತ್ತು). ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಂಗಡಿಸಿ ಉಡುಪಿ ಜಿಲ್ಲೆಯಾಯಿತು (1997).

## ಹೈದರಾಬಾದ್–ಕರ್ನಾಟಕ

### ಬೇಡನಾಯಕರ ದಂಗೆಗಳು

ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಹೈದರಾಬಾದ್–ಕರ್ನಾಟಕ (ಇದನ್ನು ಕಲ್ಯಾಣ–ಕರ್ನಾಟಕ ಎಂದು ಈಗ ಕರೆಯಲಾಗುತ್ತದೆ) ಬೇಡನಾಯಕ ಪಾಳೆಯಗಾರರ ಪ್ರಾಬಲ್ಯವಿತ್ತು. ಹೋರಾಟಗಾರರಾಗಿದ್ದ ಅವರು 1800ರ ಅನಂತರ ಬ್ರಿಟಿಷರ ವಿರುದ್ಧ ನಡೆಸಿದ ದಂಗೆಗಳಾದರೋ ಎಣಿಕೆಯಿಲ್ಲದ್ದು.

**ಕಾರಣಗಳು:** ಸ್ಥಳೀಯ ಜಮೀನ್ದಾರರ ಶೋಷಣೆ ಮತ್ತು ಬ್ರಿಟಿಷರು ಜಾರಿಗೆ ತಂದಿದ್ದ ಶಸ್ತ್ರಾಸ್ತ್ರ ಕಾಯ್ದೆ, ಅರಣ್ಯ ಕಾಯ್ದೆ ಹಾಗೂ ಅವರ ದಬ್ಬಾಳಿಕೆಗಳಿಂದ ಬೇಸತ್ತ ಸ್ಥಳೀಯ ಪಾಳೆಯಗಾರರು ಮತ್ತು ಜನಸಾಮಾನ್ಯರು ಪ್ರತಿಭಟನೆಗೆ ಇಳಿದರು. 1800ರ ಅನಂತರ ನಡೆದ ಇಪ್ಪತ್ತೈದಕ್ಕೂ ಹೆಚ್ಚು ದಂಗೆಗಳಲ್ಲಿ ಬೇಡರೇ ಹೆಚ್ಚಾಗಿ ಭಾಗವಹಿಸುವುದನ್ನು ನಾವು ಕಾಣುತ್ತೇವೆ. ದಂಗೆಗಳ ಉದ್ದೇಶ ಬ್ರಿಟಿಷರನ್ನು ಹೊರದೂಡುವುದಾಗಿತ್ತು.

NOT TO BE REPUBLISHED ©KTBS

## ಹಲಗಲಿ ಬೇಡನಾಯಕರ ದಂಗೆ

ಹಲಗಲಿ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಒಂದು ಗ್ರಾಮ. ಈ ಗ್ರಾಮ ಇಂದಿಗೂ ಪೈಲವಾನರಿಗೆ ಪ್ರಸಿದ್ಧ. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಗ್ರಾಮ ಹೆಸರಾಯಿತು. ಅಲ್ಲಿಯ ಹೆಚ್ಚಿನ ಜನರು ಬೇಡನಾಯಕರು. ಬೇಟೆಗಾಗಿ ಮತ್ತು ಆತ್ಮರಕ್ಷಣೆಗಾಗಿ ಅವರಲ್ಲಿ ಆಯುಧಗಳ ಸಂಗ್ರಹವಿತ್ತು.

1857ರಲ್ಲಿ ಬ್ರಿಟಿಷರು ಜಾರಿಗೆ ತಂದ ಶಸ್ತ್ರಾಸ್ತ್ರ ಕಾಯ್ದೆಯಂತೆ ಭಾರತೀಯರು ಸರ್ಕಾರದ ಅಪ್ಪಣೆ ಪಡೆದುಕೊಂಡೇ ಆಯುಧಗಳನ್ನು ಇರಿಸಿಕೊಳ್ಳಬಹುದಾಗಿತ್ತು. ಸ್ವಭಾವತಃ ಶೂರರೂ ಸ್ವಾಭಿಮಾನಿಗಳೂ ಆದ ಬೇಡನಾಯಕರಿಗೆ ಇದು ನುಂಗಲಾರದ ತುತ್ತಾಯಿತು. ಈ ಕಾರಣದಿಂದಾಗಿ ಘರ್ಷಣೆ ನಡೆದು ಬ್ರಿಟಿಷರು ಬೇಡನಾಯಕರ ಮೇಲೆ ದಾಳಿ ನಡೆಸಿದರು. **ಜಡಗ, ಬಾಲ, ರಾಮಿ** ಮುಂತಾದ ದಂಗೆಯ ನಾಯಕರು ಕೆಚ್ಚೆದೆಯಿಂದ ಹೋರಾಟ ನಡೆಸಿದರು. ದಾಳಿಯಲ್ಲಿ ಅನೇಕ ವೀರರು ಮರಣಹೊಂದಿದರು. 290 ಜನರನ್ನು ಸೆರೆಹಿಡಿದು ಅವರಲ್ಲಿ 19 ಮಂದಿಯನ್ನು ಗಲ್ಲಿಗೇರಿಸಲಾಯಿತು. ಹಲಗಲಿ ಬೇಡನಾಯಕರ ವೀರಗಾಥೆ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಅಮರವಾಗಿದೆ.

**ರಾಮಿ:** ಹಲಗಲಿ ದಂಗೆಯಲ್ಲಿ ಮೂರು ಜನ ಬ್ರಿಟಿಷ್ ಸೈನಿಕರನ್ನು ಗುಂಡಿಕ್ಕಿ ಕೊಂದ ರಾಮಿ ಬೇಡರ ವೀರಮಹಿಳೆ. ಈ ದಂಗೆಯಲ್ಲಿ ರಾಮಿ ವೀರಮರಣ ಹೊಂದುತ್ತಾಳೆ.

ಹಲಗಲಿಯ ಬೇಡನಾಯಕರ ಕುರಿತು ಬರೆದಿರುವ ಲಾವಣಿಯ ಪ್ರಾರಂಭ ಹೀಗಿದೆ:

ಹಲಗಲಿಯ ಬೇಡರು ಹುಲಿಗಿಂತ ಶೂರರು
ಚಲಿಸದೆ ನಿಂತು ಹೋರಾಡಿ ಮಡಿದವರು
ಕುಲಹಿರಿಮೆ ಮೆರೆಸಿ ಹೋಗ್ಯಾರ ॥

## ಸಿಂಧೂರ ಲಕ್ಷ್ಮಣ

ಸಿಂಧೂರ ಲಕ್ಷ್ಮಣ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಓರ್ವ ಮಹಾವೀರ.

ಸಾಂಗ್ಲಿ ಜಿಲ್ಲೆ ಜತ್ ತಾಲೂಕಿನ ಸಿಂಧೂರ ಗ್ರಾಮದಲ್ಲಿ ಬೇಡರ ಸಾಬು ಮತ್ತು ನರಸವ್ವ ಎಂಬ ದಂಪತಿಗಳಿಗೆ ಲಕ್ಷ್ಮಣ ಜನಿಸಿದ. ಈತನ ಸಮಾಧಿ ಚೀಳಗಿಯಲ್ಲಿದೆ.

ಸಿಂಧೂರ ಗ್ರಾಮವು ಇನಾಂದರರ (ಗೌಡರ) ಆಳ್ವಿಕೆಯಿಂದ ತತ್ತರಿಸಿತ್ತು. ಆದರೆ ಲಕ್ಷ್ಮಣ ಅವರ ವಿರುದ್ಧ ಬಂಡೆದ್ದ. ಲಕ್ಷ್ಮಣ ಕ್ರಮೇಣ ಬ್ರಿಟಿಷರಿಗೂ ವಿರೋಧಿಯಾದ.

ಲಕ್ಷ್ಮಣ ಬ್ರಿಟಿಷರ ಖಜಾನೆಗಳನ್ನು ಮತ್ತು ಶ್ರೀಮಂತರನ್ನು ದೋಚಿ ಹಣವನ್ನು ಬಡವರಿಗೆ ಹಂಚುತ್ತಿದ್ದ. ಸಮಾಜಮುಖಿಯಾಗಿ ಶೋಷಿತರ ಸೇವೆ ಮಾಡುತ್ತಿದ್ದ. ಊರ ಚಾವಡಿಯ ಮುಂದೆ ಲಕ್ಷ್ಮಣನನ್ನು ಕರೆಯಿಸಿ ಕಳ್ಳತನದ ಬಗ್ಗೆ ವಿಚಾರಣೆ ನಡೆಸಿದಾಗ ಅವನಿಗೆ ಅವಮಾನ ಆಯಿತು. ಅಲ್ಲಿಂದ ಆತ ಪರಾರಿಯಾದ. ಪೊಲೀಸ್ ಅಧಿಕಾರಿಯನ್ನು ಅವನು ಕೊಂದಿದ್ದರಿಂದ ಅವನನ್ನು ಹಿಡಿಯಲು ಬ್ರಿಟಿಷರು ಶತಪ್ರಯತ್ನ ಮಾಡಿದರು. ಮುಂದೆ ಅವನನ್ನು ಗುಂಡಿಕ್ಕಿ

© KTBS NOT TO BE REPUBLISHED

ಕೊಲ್ಲಲಾಯಿತು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಕಾರಿ ಸಿಂಧೂರ ಲಕ್ಷ್ಮಣ ಇತಿಹಾಸದ ಪುಟಗಳಲ್ಲಿ ಚಿರಸ್ಮರಣೆಯಾಗಿದ್ದಾನೆ.

### ಸುರಪುರದ ನಾಯಕರು


ಸುರಪುರದ ರಾಜಾ ವೆಂಕಟಪ್ಪನಾಯಕ

ಯಾದಗಿರಿ ಜಿಲ್ಲೆಯ ಸುರಪುರವು ಕೃಷ್ಣಾ ಹಾಗೂ ಭೀಮಾ ನದಿಗಳ ಮಧ್ಯದಲ್ಲಿದೆ. ಸಾ.ಶ 1636 ರಿಂದ 1858 ರ ವರೆಗೆ ಹನ್ನೆರಡು ಜನ ನಾಯಕ ಅರಸರು ಆಳ್ವಿಕೆ ಮಾಡಿದ್ದಾರೆ. ಗಡ್ಡಿಪಿಡ್ಡನಾಯಕನು ಈ ಮನೆತನದ ಸ್ಥಾಪಕ. ಇವರ ಪೂರ್ವಜರು ವಿಜಯನಗರದ ಸೈನ್ಯದಲ್ಲಿದ್ದವರು. ವಿಜಯನಗರದ ಅವನತಿಯಾದ ಮೇಲೆ ಬೇರೆ ಬೇರೆ ಕಡೆ ಚದುರಿದ ಗುಂಪುಗಳಲ್ಲಿ ಇವರೂ ಒಬ್ಬರು. ಅನಂತರ ಬಿಜಾಪುರದ ಆದಿಲ್‌ಷಾಹಿಗಳಿಂದ ಸರದೇಶಗತಿಯನ್ನು ಪಡೆದು ವಾಗಿನಗೇರಿಯಲ್ಲಿ ಆಡಳಿತ ಪ್ರಾರಂಭಿಸಿದರು. ಪೀತಾಂಬರಿ ಬಹರಿಪಿಡ್ಡನಾಯಕ (ಸಾ.ಶ. 1687–1726)ನು ಸಾ.ಶ. 1707ರಲ್ಲಿ ಸುರಪುರವನ್ನು ನಿರ್ಮಿಸುವ ಮೂಲಕ ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

ನಂತರ ಬ್ರಿಟಿಷರು ಮತ್ತು ಹೈದರಾಬಾದ್‌ನ ನಿಜಾಮನ ಒಪ್ಪಂದದಂತೆ ಈ ಸಂಸ್ಥಾನವು ಅವರ ಅಧೀನಕ್ಕೆ ಬಂದಿತು. ರಾಜಾ ಕೃಷ್ಣಪ್ಪ ನಾಯಕನ ನಂತರ ಆತನ ಮಗನಾದ ರಾಜಾ ನಾಲ್ವಡಿ ವೆಂಕಟಪ್ಪ ನಾಯಕನು (ಸಾ.ಶ. 1843–1858) ಅಧಿಕಾರಕ್ಕೆ ಬಂದನು. ಅದೇ ವೇಳೆಯಲ್ಲಿ ಉತ್ತರ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಸಾ.ಶ 1857) ದ ಕಾವು ಸುರಪುರವನ್ನು ತಟ್ಟಿತು. ನಾಲ್ವಡಿ ವೆಂಕಟಪ್ಪ ನಾಯಕನು ದಕ್ಷಿಣ ಭಾರತದ ರಾಜರನ್ನೆಲ್ಲಾ ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಮರ ಸಾರಲು ಹವಣಿಕೆಯಲ್ಲಿದ್ದನು. ಅರಬ್, ರೋಹಿಲ್ಲರನ್ನು ಸೈನ್ಯದಲ್ಲಿ ಸೇರಿಸಿಕೊಂಡನು ಅಲ್ಲದೇ ಸೈನ್ಯವನ್ನು ತರಬೇತಿಗೊಳಿಸಲು ಪ್ರಾರಂಭಿಸಿದನು. ಇದೆಲ್ಲದರ ಮಾಹಿತಿಯನ್ನು ಪಡೆದ ಬ್ರಿಟಿಷ್ ಅಧಿಕಾರಿ ಥಾರ್ನ್‌ಹಿಲ್‌ನು 24ನೆಯ ಡಿಸೆಂಬರ್ 1857ರಂದು ಕ್ಯಾಪ್ಟನ್ ಕ್ಯಾಂಬಲ್‌ನಿಗೆ ಪತ್ರ ಬರೆದು ಕ್ಷಿಪ್ರ ಕಾರ್ಯಾಚರಣೆಯನ್ನು ಕೈಗೊಳ್ಳಲು ಆದೇಶಿಸಿದನು.

ಬ್ರಿಟಿಷರ ಬಣವು 1858ರಲ್ಲಿ ಸುರಪುರದ ಮೇಲೆ ನುಗ್ಗಿತು. ಎರಡೂ ಬಣಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ರೊಚ್ಚಿಗೆದ್ದ ಸುರಪುರ ಸೈನ್ಯವು ಸ್ಟೂಆರ್ಟ್‌ನ ಮೂಳೆ ಮುರಿಯಿತು. ನ್ಯೂಬೆರಿ ನೆಲಕ್ಕುರುಳಿದ. ಇತ್ತ, ನಾಲ್ವಡಿ ವೆಂಕಟಪ್ಪ ನಾಯಕ ವಿಶೇಷ ಅರಬ್, ರೋಹಿಲ್‌ರ ಸೈನ್ಯವನ್ನು ತರಲು ಹೈದರಾಬಾದ್‌ಗೆ ಪ್ರಯಾಣ ಬೆಳೆಸಿದನು. ಅತ್ತ, ಬ್ರಿಟಿಷ್ ಪಡೆಯು ಸುರಪುರದೊಳಗೆ ನುಗ್ಗಿತು. ಸುರಪುರವು ಪತನವಾಯಿತು. ಹೈದರಾಬಾದ್‌ನಲ್ಲಿ ಸುತ್ತಾಡುತ್ತಿದ್ದ ನಾಲ್ವಡಿ ವೆಂಕಟಪ್ಪ ನಾಯಕನನ್ನು ನೋಡಿದ ವನಪರ್ತಿ ರಾಜನಿಂದ ಸುದ್ದಿಯನ್ನು ತಿಳಿದ ಹೈದರಾಬಾದ್ ನಿಜಾಮನ ಪ್ರಧಾನಮಂತ್ರಿ ಸಾಲಾರಜಂಗನು, ಬ್ರಿಟಿಷರಿಂದ ತನಗೇನಾದರು ಲಾಭ ಸಿಗಬಹುದೆಂದು ತಿಳಿದು ಆತನನ್ನು ಬ್ರಿಟಿಷರಿಗೆ ಒಪ್ಪಿಸಿದನು. ಬ್ರಿಟಿಷರು ನಾಲ್ವಡಿ ವೆಂಕಟಪ್ಪ

NOT TO BE REPUBLISHED ©KTBS

ನಾಯಕನನ್ನು ಸಿಕಂದರಾಬಾದ್‌ನಲ್ಲಿ ಬಂಧಿಸಿಟ್ಟರು. ನಂತರ ವಿಚಾರಣೆಗೊಳಪಡಿಸಿದರು. ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಿದಂತೆ ನಾಟಕವಾಡಿದರು.

ಬ್ರಿಟಿಷ್ ಮೆಡೋಸ್ ಟೇಲರ್‌ನ ಕೋರಿಕೆಯಂತೆ ಉನ್ನತ ಅಧಿಕಾರ ಹೊಂದಿದ ಗೌರ್ನರ್ ಜನರಲ್ ರಾಜನ ಮರಣ ದಂಡನೆಯನ್ನು ಕೈಬಿಟ್ಟು 4 ವರ್ಷ ಗಡಿಪಾರು ಶಿಕ್ಷೆಯನ್ನು ವಿಧಿಸಿದರು. ರಾಜನನ್ನು ಮದ್ರಾಸ್ ಸಮೀಪ ಚಂಗಲ್‌ಪೇಟೆ ದುರ್ಗದಲ್ಲಿಡಲು ಹೋಗುತ್ತಿದ್ದಾಗ ದಾರಿಯಲ್ಲಿ ವಿಶ್ರಾಂತಿಗೆಂದು ತಂಗಿದ್ದಾಗ ನಾಲ್ವಡಿ ವೆಂಕಟಪ್ಪ ನಾಯಕನನ್ನು ಬ್ರಿಟಿಷರು ಮೋಸದಿಂದ ಗುಂಡಿಟ್ಟು ಕೊಂದರು. ಆತ್ಮಹತ್ಯೆ ಮಾಡಿಕೊಂಡನೆಂದು ಸುಳ್ಳು ಸುದ್ದಿ ಹಬ್ಬಿಸಿದರು.

ನಂತರ ಸುರಪುರವನ್ನು ಬ್ರಿಟಿಷರು ಹೈದರಾಬಾದ್ ನಿಜಾಮನಿಗೆ ಕಾಣಿಕೆಯಾಗಿ ನೀಡಿದರು. ಮುಂದಿನ ಸಂಸ್ಥಾನಿಕರು ನಿಜಾಮನ ಅಧೀನದಲ್ಲಿಯೇ ಕಾಲಕಳೆದರು. ಕೊನೆಗೆ 1948 ಸೆಪ್ಟೆಂಬರ್ 17ರಂದು ಹೈದರಾಬಾದ್ ನಿಜಾಮ ಸಂಸ್ಥಾನವು ಭಾರತದ ಒಕ್ಕೂಟವನ್ನು ಸೇರಿದ ಮೇಲೆ ಸುರಪುರವೂ ಭಾರತದ ಒಕ್ಕೂಟವನ್ನು ಸೇರಿತು.

ಸುರಪುರ ನಾಯಕರ ರಾಜಕೀಯ ಚರಿತ್ರೆಯಂತೆಯೇ ಅವರ ಸಾಂಸ್ಕೃತಿಕ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರು ಅನೇಕ ಜನಪರ ಕಾರ್ಯಗಳನ್ನು ಕೈಗೊಂಡು ಇಂದಿಗೂ ಜನಮಾನಸದಲ್ಲಿದ್ದಾರೆ. ಕೆರೆ, ಬಾವಿ, ದೇವಾಲಯ, ಅರಮನೆ, ಕೋಟೆ–ಕೊತ್ತಲುಗಳನ್ನು ಕಟ್ಟಿಸಿದ್ದಾರೆ. ಅನೇಕರಿಗೆ ಜಹಗೀರುಗಳನ್ನು ನೀಡಿದ್ದಾರೆ. ಅಲ್ಲದೆ ಇವರ ಕುಲದೇವರಾದ ತಿರುಪತಿ ವೆಂಕಟರಮಣ ಮತ್ತು ಗೋಪಾಲಸ್ವಾಮಿಯ ನಿತ್ಯ ಪೂಜೆಗಾಗಿ ಹಾಗೂ ಉತ್ಸವಗಳಿಗಾಗಿ ಜಹಗೀರು, ಇನಾಮು ಭೂಮಿಯನ್ನು ನೀಡಿದ್ದಾರೆ. ಇವರ ಆಸ್ಥಾನದಲ್ಲಿ ಅನೇಕ ಕಲಾಕಾರರು, ಗಾಯಕರು, ಚಿತ್ರಕಾರರು, ಶಿಲ್ಪಿಗಳು, ಸಾಹಿತಿಗಳು ಆಶ್ರಯಿತರಾಗಿದ್ದರು. ಅನೇಕ ಮೌಲ್ಯಯುತ ಸಾಹಿತ್ಯ ಕೃತಿಗಳು ಹೊರಬಂದಿವೆ. ಸರ್ವಧರ್ಮ ಸಹಿಷ್ಣುಗಳಾಗಿದ್ದರು.

ಚಿತ್ರಕಲೆಯಲ್ಲಿ ಸುರಪುರ ನಾಯಕ ಅರಸು ಮನೆತನಕ್ಕೆ ಅಗ್ರಸ್ಥಾನವಿತ್ತು. ಅಲ್ಲಿಯ ಚಿತ್ರಗಳ ತಂತ್ರ ಮತ್ತು ವಿನ್ಯಾಸ ಉನ್ನತ ಸ್ಥಾನ ಪಡೆದಿವೆ. ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳು, ವಿಜಯನಗರ ಶೈಲಿಯ ಚಿತ್ರಗಳು, ಬಿಜಾಪುರದ ಆದಿಲ್‌ಶಾಹಿ ಮನೆತನದವರಿಂದ ಮೂಡಿ ಬಂದ ಕಲಾಕೃತಿಗಳಿಗಿಂತ ಸುರಪುರ ನಾಯಕ ಅರಸರ ಕಲಾಕೃತಿಗಳು ತಮ್ಮದೇ ಆದ ವಿಶಿಷ್ಟತೆಯನ್ನು ಪಡೆದಿವೆ.

ಲಂಡನ್ನಿನ ಕಲಾ ಸಂಗ್ರಹಾಲಯ, ಇಂಗ್ಲೆಂಡಿನ ವಿವಿಧ ನಗರಗಳಲ್ಲಿ, ದೆಹಲಿ, ಮುಂಬೈ, ಹೈದರಾಬಾದ್‌ನ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಸಾಲಾರಜಂಗ ವಸ್ತುಸಂಗ್ರಹಾಲಯದಲ್ಲಿ ಇಂತಹ ಕಲಾಕೃತಿಗಳನ್ನು ನೋಡಬಹುದು.

## ಹೈದರಾಬಾದ್–ಕರ್ನಾಟಕ ವಿಮೋಚನಾ ಹೋರಾಟ

ಹೈದರಾಬಾದ್–ಕರ್ನಾಟಕ ವಿಮೋಚನಾ ಹೋರಾಟವು ದಮನಕಾರಿ ಆಳರಸನೋರ್ವನ ವಿರುದ್ಧ ಜನ ಒಂದಾಗಿ ಬಂಡಾಯವೆದ್ದ ಉಜ್ವಲ ಇತಿಹಾಸಕ್ಕೆ ನಿದರ್ಶನವಾಗಿದೆ. ಹಾಗೆಯೇ ಮಹಾನ್ ತ್ಯಾಗ, ಬಲಿದಾನಗಳಿಗೆ ಅಚ್ಚಳಿಯದ ಸಾಕ್ಷಿಯಾಗಿದೆ.

© KTBS NOT TO BE REPUBLISHED

ನಮ್ಮ ದೇಶದಲ್ಲಿ ಮೊದಲು 562 ಚಿಕ್ಕಪುಟ್ಟ ರಾಜ್ಯಗಳು (ಸಂಸ್ಥಾನಗಳು) ಬ್ರಿಟಿಷರ ಅಧೀನದಲ್ಲಿದ್ದುವು. ಈ ರಾಜ್ಯಗಳಲ್ಲಿ ಹೈದರಾಬಾದ್ ಪ್ರಮುಖವಾಗಿತ್ತು.

**ಹೋರಾಟದ ಹಿನ್ನೆಲೆ:** ಹೈದರಾಬಾದ್ ಸಂಸ್ಥಾನದಲ್ಲಿ ಹಿಂದುಗಳ ಸ್ಥಿತಿ ಅತ್ಯಂತ ದಾರುಣವಾಗಿತ್ತು. ಸಾರ್ವಜನಿಕವಾಗಿ ಅವರು ಧಾರ್ಮಿಕ ಆಚರಣೆಗಳನ್ನು ನಡೆಸುವಂತಿರಲಿಲ್ಲ.

ಸಂಸ್ಥಾನದಲ್ಲಿ ಶಿಕ್ಷಣವನ್ನು ಕಡೆಗಣಿಸಲಾಗಿತ್ತು. ಇಲ್ಲಿ ಎಲ್ಲವೂ ಉರ್ದುಮಯವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ದೊಡ್ಡ ಹೊಡೆತ ಬಿತ್ತು.

ನಿಜಾಮನು **'ಕಾಲಾಗಪ್ತಿ'** ಎಂಬ 53 ಕರಾಳ ನಿಯಮಗಳನ್ನು ಜಾರಿಗೆ ತಂದು ಜನರ ಮೂಲಭೂತ ಸ್ವಾತಂತ್ರ್ಯವನ್ನು ಹತ್ತಿಕ್ಕಿದನು.

**ಹೋರಾಟದ ಗತಿ:** ಹೋರಾಟದ ಜನಪ್ರಿಯ ನಾಯಕರೆಂದರೆ ಸ್ವಾಮಿ ರಮಾನಂದ ತೀರ್ಥರು. ಅವರು ಹೈದರಾಬಾದ್ ಸಂಸ್ಥಾನದ ಎಲ್ಲೆಡೆ ಸಂಚಾರ ಮಾಡಿ ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಯನ್ನು ಸಂಘಟಿಸಿದರು. ಹೋರಾಟದ ಇನ್ನೊಬ್ಬ ಪ್ರಸಿದ್ಧ ನಾಯಕರು ಹರ್ಡೇಕರ್ ಮಂಜಪ್ಪ. ಇವರು 'ಕರ್ನಾಟಕದ ಗಾಂಧಿ' ಎಂದೇ ಪ್ರಸಿದ್ಧರು. ಅವರು ಪಾನ ವಿರೋಧ, ಅಸ್ಪೃಶ್ಯತೆಯ ನಿವಾರಣೆ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸಿದರು.



**ಸ್ವಾಮಿ ರಮಾನಂದ ತೀರ್ಥ**



**ಹರ್ಡೇಕರ್ ಮಂಜಪ್ಪ**

@KTBS NOT TO BE REPUBLISHED

**ವಂದೇ ಮಾತರಂ ಚಳವಳಿ:** ಈ ನಡುವೆ ವಂದೇ ಮಾತರಂ ಹಾಡುವುದನ್ನು ಸರ್ಕಾರ ನಿಷೇಧಿಸಿತು. ಇದರ ವಿರುದ್ಧ ನಡೆದ ಹೋರಾಟದ ಧೀರ ನಾಯಕರು ರಾಮಚಂದ್ರ ರಾವ್. ಇವರು 'ವಂದೇ ಮಾತರಂ ರಾಮಚಂದ್ರರಾವ್' ಎಂದೇ ಪ್ರಸಿದ್ಧರು. 'ವಂದೇ ಮಾತರಂ' ಹಾಡಿದ ನೂರಾರು ಜನರನ್ನು ಬಂಧಿಸಲಾಯಿತು.

ಹೋರಾಟದಲ್ಲಿ ಆರ್ಯ ಸಮಾಜದ ಪಾತ್ರವು ಪ್ರಮುಖವಾಗಿತ್ತು. ಮುಸ್ಲಿಂ ಮೂಲಭೂತವಾದಿಗಳು ಇತ್ತೇಹಾದ್-ಉಲ್-ಮುಸಲ್‌ಮೀನ್ ಎಂಬ ಸಂಘವನ್ನು ಕಟ್ಟಿದರು. ಅದರ ಮುಖಂಡ ಕಾಸಿಂರಜವಿ. ಸಂಘವು ಹಿಂಸಾತ್ಮಕ ಮಾರ್ಗ ಹಿಡಿಯಿತು.

ಕಾಂಗ್ರೆಸ್ ಸಂಸ್ಥೆಗೆ ಸಂಸ್ಥಾನದಲ್ಲಿ ನಿಷೇಧವಿತ್ತು. ಅದು ಹೈದರಾಬಾದ್ ಸ್ವತಂತ್ರ ಭಾರತದ ಒಕ್ಕೂಟವನ್ನು ಸೇರಬೇಕೆಂದು ನಿಜಾಮನನ್ನು ಒತ್ತಾಯಿಸಿತು. 1947 ಆಗಸ್ಟ್ 15ರಂದು ಸ್ವತಂತ್ರ ಭಾರತದ ಧ್ವಜವನ್ನು ಹೈದರಾಬಾದಿನಲ್ಲಿ ಹಾರಿಸಿಯೇ ತೀರಬೇಕೆಂದು ಜನರು ದೃಢ ಸಂಕಲ್ಪಗೈದರು. ನಿಜಾಮನ ಸರ್ಕಾರ ಜನರ ಮೇಲೆ ಇನ್ನಷ್ಟು ಪ್ರತಿಬಂಧ ಹೇರಿತು.

ಇದೇ ವೇಳೆ **ರಜಾಕಾರರು** ಸಂಸ್ಥಾನದಲ್ಲಿ ವ್ಯಾಪಕ ಕೊಲೆಸುಲಿಗೆಗಳನ್ನು ಮಾಡಲಾರಂಭಿಸಿದರು. ಅವರಿಗೆ ನಿಜಾಮನ ಬೆಂಬಲವಿತ್ತು. ಇದೇ ವೇಳೆ ಎಲ್ಲೆಲ್ಲೂ ಒಂದೇ ಸಮನೆ ವಂದೇ ಮಾತರಂ ಕೇಳಿ ಬರುತ್ತಿತ್ತು.

**ಶರಣಗೌಡ ಇನಾಂದಾರ್:** ಹೈದರಾಬಾದ್ ವಿಮೋಚನಾ ಸಂಗ್ರಾಮದಲ್ಲಿ ಭೂಗತ ಕಾರ್ಯಾಚರಣೆಯನ್ನು ಸಂಘಟಿಸಿದವರು ತರುಣ ನಾಯಕ ಶರಣಗೌಡ ಇನಾಂದಾರ್. ಅವರು ಸಂಘಟಿಸಿದ ಯುವತಂಡಗಳು ರಜಾಕಾರರ ಮೇಲೆ ಸಿಡಿಲಿನಂತೆ ಬಂದು ಎರಗಿದವು. ಪರಿಣಾಮವಾಗಿ ಅನೇಕ ಗ್ರಾಮಗಳು ರಜಾಕಾರರ ದೌರ್ಜನ್ಯದಿಂದ ಮುಕ್ತವಾದವು. ಮುಕ್ತರಾದ ಜನ ಅಭಿಮಾನದಿಂದ ಶರಣಗೌಡ ಇನಾಂದಾರರನ್ನು 'ಸರದಾರ'ರೆಂದು ಕರೆದರು.


ಶರಣಗೌಡ ಇನಾಂದಾರ್

ರಜಾಕಾರರ ಅತಿಯಾದ ಹಾವಳಿಯಿಂದ ಲಕ್ಷೋಪಲಕ್ಷ ಜನ ಹೈದರಾಬಾದ್ ಸಂಸ್ಥಾನವನ್ನು ತ್ಯಜಿಸಿ ನೆರೆಯ ಸ್ವತಂತ್ರ ಭಾರತಕ್ಕೆ ವಲಸೆ ಹೋದರು. ಸಾವಿರಾರು ತರುಣರು ಹೈದರಾಬಾದಿನ ಗಡಿಯುದ್ದಕ್ಕೂ ಶಿಬಿರಗಳನ್ನು ಸ್ಥಾಪಿಸಿ ರಜಾಕಾರ ಪುಂಡರ ವಿರುದ್ಧ ಸಶಕ್ತ ಹೋರಾಟ ನಡೆಸಿದರು.

©KTBS NOT TO BE REPUBLISHED

1947ರಲ್ಲಿ ದೇಶ ಸ್ವತಂತ್ರಗೊಂಡರೂ ಹೈದರಾಬಾದ್ ಸಂಸ್ಥಾನ ಇನ್ನೂ ಭಾರತದೊಂದಿಗೆ ವಿಲೀನವಾಗಿರಲಿಲ್ಲ. ಈ ಮಧ್ಯೆ ರಜಾಕಾರರ ಹಿಂಸಾಚಾರ ನಿರಂತರವಾಗಿ ನಡೆಯುತ್ತಿತ್ತು. ಕೊನೆಗೆ ಹೈದರಾಬಾದ್ ಸಮಸ್ಯೆಯನ್ನು ಇತ್ಯರ್ಥ ಮಾಡಲು ಗೃಹಮಂತ್ರಿ ಸರದಾರ್ ವಲ್ಲಭಭಾಯಿ ಪಟೇಲರಿಗೆ ಅಧಿಕಾರವನ್ನು ಸರ್ಕಾರ ನೀಡಿತು. ಅವರ ಆದೇಶದಂತೆ **1948ರ ಸಪ್ಟೆಂಬರ್ 17**ರಂದು ಭಾರತೀಯ ಸೇನೆ ಹೈದರಾಬಾದ್ ಪ್ರವೇಶಿಸಿತು. ಅನ್ಯಮಾರ್ಗವಿಲ್ಲದೆ ನಿಜಾಮನು ಶರಣಾಗತನಾದನು. ನಂತರ ಹೈದರಾಬಾದ್ ಸಂಸ್ಥಾನ ಭಾರತದೊಂದಿಗೆ ವಿಲೀನಗೊಂಡಿತು.


ಸರ್ದಾರ್ ವಲ್ಲಭಭಾಯಿ ಪಟೇಲ್

1951ರಲ್ಲಿ ಹೈದರಾಬಾದ್ ಪ್ರಾಂತದಲ್ಲಿ ಚುನಾವಣೆಗಳು ನಡೆದು ಜನತೆ ತಮ್ಮ ಪ್ರತಿನಿಧಿಗಳನ್ನು ಮೊದಲ ಬಾರಿಗೆ ಆರಿಸಿ ಕಳುಹಿಸಿದರು. ಅಗ್ರಗಣ್ಯ ಜನನಾಯಕರಾಗಿದ್ದ ಸ್ವಾಮಿ ರಮಾನಂದ ತೀರ್ಥರು ಕಲಬುರಗಿ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು.

## ಕಾಲಗಣನೆ (ಸಾ.ಶ.)

| | | |
|---|---|---|
| ಚಿಕ್ಕದೇವರಾಜ ಒಡೆಯರ್ | – | 1673–1704 |
| ಬೆಂಗಳೂರನ್ನು ಗುತ್ತಿಗೆಗೆ ಪಡೆದದ್ದು | – | 1689 |
| ದಳವಾಯಿಗಳ ಆಡಳಿತ | – | 1704–1761 |
| ಹೈದರ್ ಅಲಿ | – | 1761–1782 |
| ಒಂದನೆಯ ಮೈಸೂರು ಯುದ್ಧ | – | 1767–1769 |
| ಎರಡನೆಯ ಮೈಸೂರು ಯುದ್ಧ | – | 1780–1784 |
| ಟಿಪ್ಪು ಸುಲ್ತಾನ್ | – | 1782–1799 |
| ಮೂರನೆಯ ಮೈಸೂರು ಯುದ್ಧ | – | 1790–1792 |
| ನಾಲ್ಕನೆಯ ಮೈಸೂರು ಯುದ್ಧ | – | 1799 |
| ಕೆಳದಿ ರಾಜ್ಯದ ಆಳ್ವಿಕೆಯ ಕಾಲ | – | 1499–1763 |
| ಹಿರಿಯ ವೆಂಕಟಪ್ಪ ನಾಯಕ | – | 1586–1629 |
| ಶಿವಪ್ಪ ನಾಯಕ | – | 1645–60 |
| ರಾಣಿ ಚೆನ್ನಮ್ಮಾಜಿ | – | 1672–97 |
| ಹೈದರ್ ಅಲಿ ಕೆಳದಿಯನ್ನು ಪರಾಭವಗೊಳಿಸಿದ್ದು | – | 1763 |
| ಒಂದನೆಯ ಕೆಂಪೇಗೌಡ | – | 1510–1570 |
| ಎರಡನೆಯ ಕೆಂಪೇಗೌಡ | – | 1585–1633 |
| ಮದಕರಿ ನಾಯಕ | – | 1754–1779 |
| ಕಿತ್ತೂರ ಚೆನ್ನಮ್ಮ | – | 1824 |
| ಸಂಗೊಳ್ಳಿ ರಾಯಣ್ಣ | – | 1829 |
| ಆಳುಪರ ಆಳ್ವಿಕೆಯ ಕಾಲ | – | 7–14ನೇ ಶತಮಾನ |
| ಬ್ರಿಟಿಷರ ಆಡಳಿತ | – | 1801–1947 |
| ಹಲಗಲಿ ಗ್ರಾಮದ ಬೇಡನಾಯಕರ ಮೇಲೆ ಬ್ರಿಟಿಷರ ದಾಳಿ. ರಾಮಿಯ ದಾಳಿ. | – | 1857 |
| ಸುರಪುರ ನಾಯಕರ ಆಳ್ವಿಕೆಯ ಕಾಲ | – | 1636–1858 |
| ಪೀತಾಂಬರಿ ಬಹರಿಪಿಡ್ಡನಾಯಕ | – | 1687–1726 |
| ನಾಲ್ವಡಿ ವೆಂಕಟಪ್ಪ ನಾಯಕ | – | 1843–1858 |
| ಸುರಪುರ ಪತನ | – | ಫೆಬ್ರವರಿ 9, 1858 |

@KTBS NOT TO BE REPUBLISHED

ಸುರಪುರ ಸಂಸ್ಥಾನ ಭಾರತದ ಒಕ್ಕೂಟ ಸೇರಿದುದು – ಸೆಪ್ಟೆಂಬರ್ 17, 1948.

ಸಿಂಧೂರ ಲಕ್ಷ್ಮಣನನ್ನು ಬ್ರಿಟಿಷರು ಗುಂಡಿಕ್ಕಿ ಕೊಂದದ್ದು – 1922 ಜುಲೈ 22

ಹೈದರಾಬಾದ್ ನಿಜಾಮನ ಶರಣಾಗತಿ ಮತ್ತು ಹೈದರಾಬಾದ್ ಸಂಸ್ಥಾನವು ಭಾರತ ಒಕ್ಕೂಟದೊಂದಿಗೆ ವಿಲೀನವಾದುದು. – 1948 ಸಪ್ಟೆಂಬರ್ 17

## ಹೊಸ ಪದಗಳು

1. ಗಂಡಭೇರುಂಡ – ಎರಡು ತಲೆಗಳಿರುವ ಒಂದು ಕಾಲ್ಪನಿಕ ಪಕ್ಷಿ.
2. ಮಾಂಡಳಿಕ – ಒಂದು ಪ್ರಾಂತವನ್ನು ಆಳುವವನು.
3. ವರಹ – ವರಾಹಮುದ್ರೆಯಿಂದ ಕೂಡಿದ ಒಂದು ಚಿನ್ನದ ನಾಣ್ಯ.
4. ಸೀಮೆ – ರಾಜ್ಯ
5. ಗರೋಡಿ – ಆರಾಧನಾ ಕೇಂದ್ರ

## ನಿಮಗೆ ತಿಳಿದಿರಲಿ

1. ನಳದಮಯಂತಿಯರ ನಡುವೆ ಪತ್ರ ವ್ಯವಹಾರಕ್ಕೆ ನೆರವಾದ ಹಂಸದ ಉದಾಹರಣೆಯಿಂದ ಅಂಚೆ (=ಹಂಸ) ಶಬ್ದವನ್ನು ಚಿಕ್ಕದೇವರಾಜನು ರೂಢಿಸಿದನು.
2. ಎರಡನೆಯ ಕೆಂಪೇಗೌಡನು ಕಟ್ಟಿಸಿದ ಕಾವಲು ಗೋಪುರಗಳು ಇಲ್ಲಿವೆ: ಉತ್ತರದಲ್ಲಿ– ಮೇಖ್ರಿವೃತ್ತ; ದಕ್ಷಿಣದಲ್ಲಿ–ಲಾಲ್‌ಬಾಗ್; ಪೂರ್ವದಲ್ಲಿ–ಹಲಸೂರು; ಮತ್ತು ಪಶ್ಚಿಮದಲ್ಲಿ– ಗವಿಗಂಗಾಧರೇಶ್ವರ.

NOT TO BE REPUBLISHED © KTBS

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಮೈಸೂರು ಒಡೆಯರ ರಾಜಧಾನಿ ಯಾವುದಾಗಿತ್ತು?

2 ಮೈಸೂರು ರಾಜ್ಯದಲ್ಲಿ 'ಅಂಚೆ' ವ್ಯವಸ್ಥೆಯನ್ನು ಜಾರಿಗೆ ತಂದ ಅರಸನು ಯಾರು?

3 ಚಿಕ್ಕದೇವರಾಜ ಒಡೆಯರ ಜನಮುಖಿ ಸಾಧನೆಗಳು ಯಾವುವು?

4 ಹೈದರ್ ಅಲಿಯ ಸಾಧನೆಗಳು ಯಾವುವು?

5 ದರಿಯಾ ದೌಲತ್ ಎಲ್ಲಿದೆ?

6 ಮೂರನೆಯ ಮೈಸೂರು ಯುದ್ಧದ ಪರಿಣಾಮವೇನು?

7 ಟಿಪ್ಪುವಿನ ಮರಣಾನಂತರ ಮೈಸೂರಿನ ಸಿಂಹಾಸನ ಯಾರಿಗೆ ಸೇರಿತು?

8 ಟಿಪ್ಪು ಸುಲ್ತಾನನ ಸಾಧನೆಗಳು ಯಾವುವು?

9 ಹಿರಿಯ ವೆಂಕಟಪ್ಪ ನಾಯಕನ ಸಾಧನೆಗಳು ಯಾವುವು?

10 ಕೆಳದಿಯ ಇತಿಹಾಸದಲ್ಲಿ ಪಡುಗಡಲೊಡೆಯ ಎಂಬುದಾಗಿ ಯಾರನ್ನು ಕರೆಯಲಾಗುತ್ತದೆ?

11 ಗೋವೆಯ ಕ್ರೈಸ್ತರನ್ನು ಶಿವಪ್ಪ ನಾಯಕನು ಹೇಗೆ ಪ್ರೋತ್ಸಾಹಿಸಿದನು?

12 'ಸಿಸ್ತು' ಎಂದರೇನು?

13 ರಾಣಿ ಚೆನ್ನಮ್ಮಾಜಿ ಯಾರು?

14 ಕೆಳದಿಯ ನಾಯಕರು ಮಾಡಿರುವ ಮುಖ್ಯ ಸಾಧನೆಗಳನ್ನು ಕುರಿತು ಬರೆಯಿರಿ.

15 ಮದಕರಿ ನಾಯಕನನ್ನು ಕುರಿತು ಟಿಪ್ಪಣಿ ಬರೆಯಿರಿ.

16 ಒನಕೆ ಓಬವ್ವನನ್ನು ನಾವು ಇಂದಿಗೂ ಏಕೆ ನೆನೆಯುತ್ತೇವೆ?

17 ಒಂದನೆಯ ಕೆಂಪೇಗೌಡನ ಎರಡು ಮುಖ್ಯ ಸಾಧನೆಗಳು ಯಾವುವು?

18 ಎರಡನೆಯ ಕೆಂಪೇಗೌಡನ ಕುರಿತು ಟಿಪ್ಪಣಿ ಬರೆಯಿರಿ.

19 ಕಾವೇರಿ ನದಿಯ ಉಗಮಸ್ಥಾನವನ್ನು ಏನೆಂದು ಕರೆಯುತ್ತಾರೆ?

20 ಕೊಡಗನ್ನು ಆಳಿದ ಮುಖ್ಯವಾದ ಅರಸುಮನೆತನ ಯಾವುದು?

21 ಅಮರಸುಳ್ಯ ಹೋರಾಟ ಏಕೆ ನಡೆಯಿತು?

22 ಕಿತ್ತೂರ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದಳು?

23 ಸಂಗೊಳ್ಳಿ ರಾಯಣ್ಣ ಯಾರು? ಅವನ ಅಂತ್ಯ ಹೇಗಾಯಿತು?

24 ತುಳುನಾಡಿನಲ್ಲಿ ಸುದೀರ್ಘಕಾಲ ಆಳ್ವಿಕೆ ನಡೆಸಿದ ರಾಜಮನೆತನ ಯಾವುದು?

25 ಉಲ್ಲಾಳದ ರಾಣಿ ಯಾರು?

26 ಫರ್ಡಿನಾಂಡ್ ಕಿಟೆಲ್ ಯಾರು?

27 ಸಾವಿರಕಂಬದ ಬಸದಿ ಎಲ್ಲಿದೆ?

28 ತುಳುನಾಡಿನ ಪ್ರಸಿದ್ಧ ಪ್ರಾಚೀನ ಕಲೆಗಳು ಯಾವುವು?

29 ಕಾರ್ನಾಡು ಸದಾಶಿವರಾವ್ ಅವರನ್ನು ನಾವೇಕೆ ನೆನಪಿಸಿಕೊಳ್ಳುತ್ತೇವೆ?

30 ಕುದ್ಮುಲ್ ರಂಗರಾವ್ ಅವರು ದಲಿತೋದ್ಧಾರಕ್ಕಾಗಿ ಯಾವ ಕಾರ್ಯಗಳನ್ನು ಕೈಗೊಂಡರು?

31 ತುಳುನಾಡಿನಲ್ಲಿ ಸ್ಥಾಪನೆಯಾದ ಭಾರತದ ಪ್ರಮುಖ ಬ್ಯಾಂಕುಗಳು ಯಾವುವು?

32 ಬೇಡನಾಯಕರು ದಂಗೆ ಏಳಲು ಕಾರಣಗಳು ಯಾವುವು?

33 ಹಲಗಲಿಯ ಬೇಡನಾಯಕರು ಯಾವ ಕಾಯ್ದೆಯನ್ನು ವಿರೋಧಿಸಿದರು?

34 ರಾಮಿ ಯಾರು?

35 ಸಿಂಧೂರ ಲಕ್ಷ್ಮಣ ಯಾರು?

36 ಸುರಪುರ ಸಂಸ್ಥಾನದ ಸ್ಥಾಪಕ ಯಾರು?

NOT TO BE REPUBLISHED ©KTBS

37 ಸುರಪುರ ರಾಜಧಾನಿಯನ್ನು ನಿರ್ಮಿಸಿದ ಅರಸನ ಹೆಸರೇನು?

38 ನಾಲ್ವಡಿ ವೆಂಕಟಪ್ಪ ನಾಯಕನ ಸಾಧನೆಯ ಕುರಿತು ಟಿಪ್ಪಣಿ ಬರೆಯಿರಿ.

39 ಸುರಪುರ ನಾಯಕರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿರಿ.

40 'ಕಾಲಾಗಪ್ತಿ' ಎಂದರೇನು?

41 ಸ್ವಾಮಿ ರಮಾನಂದರು ಯಾರು?

42 'ಕರ್ನಾಟಕದ ಗಾಂಧಿ' ಎಂದು ಯಾರನ್ನು ಕರೆಯುತ್ತಾರೆ?

43 'ವಂದೇ ಮಾತರಂ' ಹೋರಾಟದ ಧೀರ ನಾಯಕರು ಯಾರು?

44 ಹೈದರಾಬಾದ್ ವಿಮೋಚನಾ ಹೋರಾಟದಲ್ಲಿ ಶರಣಗೌಡ ಇನಾಂದಾರ್ ಅವರ ಪಾತ್ರವೇನು?

## ಚಟುವಟಿಕೆಗಳು

1. ಭೂಪಟದಲ್ಲಿ ಮೈಸೂರು ರಾಜ್ಯದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.
2. ಟಿಪ್ಪು ಸುಲ್ತಾನ್ ಭಾರತದಲ್ಲಿ ಪರಕೀಯರ ಆಳ್ವಿಕೆಯನ್ನು ಕೊನೆಗೊಳಿಸಲು ಪ್ರಯತ್ನಿಸಿದನು. ಆದರೆ ಯಶಸ್ಸನ್ನು ಕಾಣಲಿಲ್ಲ ಏಕೆ? ಚರ್ಚಿಸಿ ಉತ್ತರ ಬರೆಯಿರಿ.
3. ಬೆಂಗಳೂರಿನ ನಾಡಪ್ರಭುಗಳು ಬೆಂಗಳೂರು ಹಾಗೂ ಸುತ್ತಮುತ್ತ ಅನೇಕ ಕೆರೆಗಳನ್ನು ನಿರ್ಮಿಸಿದರು. ಇಂದು ಹೆಚ್ಚಿನ ಕೆರೆಗಳು ಮಾಯವಾಗಿವೆ. ಇದರ ಪರಿಣಾಮವೇನೆಂಬ ವಿಚಾರ ಚರ್ಚಿಸಿ. ಸರ್ಕಾರಕ್ಕೆ ಕಳುಹಿಸಲು ಒಂದು ವರದಿ ತಯಾರಿಸಿ.
4. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರ ಜೀವನದ ಕುರಿತು ಮಾಹಿತಿ ಸಂಗ್ರಹಿಸಿ.
5. ಕಿತ್ತೂರ ಚೆನ್ನಮ್ಮನ ಕುರಿತಾದ ಲಾವಣಿಗಳನ್ನು ಸಂಗ್ರಹಿಸಿ.
6. ಕುದ್ಮುಲ್ ರಂಗರಾವ್ ಮತ್ತು ಕಾರ್ನಾಡು ಸದಾಶಿವರಾಯರ ಜೀವನ ಚರಿತ್ರೆಯನ್ನು ಓದಿ.
7. ಭಾರತದ ಆರ್ಥಿಕ ಪ್ರಗತಿಯಲ್ಲಿ ಕರ್ನಾಟಕ ಕರಾವಳಿಯ ಜಿಲ್ಲೆಗಳ ಪಾತ್ರದ ಕುರಿತು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿ ವರದಿ ತಯಾರಿಸಿ.
8. ಬೇಡನಾಯಕರ ದಂಗೆಗಳಿಗೆ ಸಂಬಂಧಿಸಿದ ಲಾವಣಿ ಮತ್ತು ಹಾಡುಗಳನ್ನು ಸಂಗ್ರಹಿಸಿ.
9. ಭಾರತದ ಏಕೀಕರಣದಲ್ಲಿ ಸರದಾರ್ ಪಟೇಲರ ಪಾತ್ರ ಎಂಬ ವಿಷಯದಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿ ವರದಿ ತಯಾರಿಸಿ.

© KTBS NOT TO BE REPUBLISHED

| ಅಧ್ಯಾಯ 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ |
|---|---|

G7V1Y4

### ಪಾಠದ ಪರಿಚಯ

ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಆಳ್ವಾರರು, ದಾಸರು ಮತ್ತು ಉತ್ತರ ಭಾರತದಲ್ಲಿ ಸಂತರು, ಸೂಫಿಗಳು ಭಕ್ತಿ ಪಂಥದ ಮೂಲಕ ಸಮಾಜವನ್ನು ಜಾಗೃತಿಗೊಳಿಸಿದರು. ಈ ಪಾಠದಲ್ಲಿ ಭಕ್ತಿ ಪಂಥದ ಆಶಯ, ಅರ್ಥ ಮತ್ತು ಲಕ್ಷಣಗಳನ್ನು ಹೇಳಲಾಗಿದೆ. ದಕ್ಷಿಣ ಭಾರತದಲ್ಲಿನ ಆಂಡಾಳ್, ಅಕ್ಕಮಹಾದೇವಿ, ಕನಕದಾಸರು, ಪುರಂದರದಾಸರು, ಶಿಶುನಾಳ ಶರೀಫರನ್ನು ಪರಿಚಯಿಸಲಾಗಿದೆ. ಅದರಂತೆ ಉತ್ತರ ಭಾರತದಲ್ಲಿನ ಕಬೀರದಾಸ, ಗುರುನಾನಕ್, ತುಳಸೀದಾಸ, ಮೀರಾಬಾಯಿ, ಶ್ರೀಚೈತನ್ಯ ಹಾಗೂ ಸೂಫಿ ಸಂತರನ್ನು ಪರಿಚಯಿಸಲಾಗಿದೆ. ಜೊತೆಗೆ ಭಕ್ತಿಪಂಥವು ವಿಭಿನ್ನ ಧರ್ಮೀಯರ ನಡುವೆ ಸಾಧಿಸಿದ ಸಾಮರಸ್ಯವನ್ನು ಹಾಗೂ ಸ್ಥಳೀಯ ಭಾಷೆಗಳ ಸಂಪನ್ನತೆಗೆ ನೀಡಿದ ಕೊಡುಗೆಗಳನ್ನು ವಿವರಿಸಲಾಗಿದೆ.

### ಸಾಮರ್ಥ್ಯಗಳು

1] ಭಕ್ತಿ ಪಂಥದ ಬೋಧನೆಗಳು ಸಾಮಾಜಿಕ ಸಾಮರಸ್ಯಕ್ಕೆ ನೀಡಿದ ಕೊಡುಗೆಗಳನ್ನು ಅರ್ಥೈಸಿಕೊಳ್ಳುವುದು.

2] ದಾಸರ ಮತ್ತು ಸಂತರ ಬೋಧನೆಗಳನ್ನು ಅರಿತು ಮೈಗೂಡಿಸಿಕೊಳ್ಳುವುದು.

3] ಸೂಫಿಗಳು ಬೋಧಿಸಿದ ವಿಶಿಷ್ಟವಾದ ತತ್ವಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.

NOT TO BE REPUBLISHED @KTBS

ಭಾರತವು ವೈವಿಧ್ಯಮಯವಾದ ಸಾಮಾಜಿಕ ಆಚರಣೆಗಳನ್ನು ಹೊಂದಿರುವ ದೇಶವಾಗಿದ್ದು ಮಧ್ಯಯುಗದ ಜನತೆ ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಗಳನ್ನು ಬಯಸಿದ ಕಾರಣ ಆ ಸಂದರ್ಭದಲ್ಲಿ ಉದಯಿಸಿದ ಕೆಲವು ಭಕ್ತಿ ಪಂಥ ಮತ್ತು ಸೂಫಿ ಪರಂಪರೆಯ ಸಂತರು ಸುಧಾರಣೆಗೆ ಮುಂದಾದರು.

ಅವರು ವಿಶ್ವ ಸಹೋದರತೆಗೆ ಮಹತ್ವ ನೀಡಿ, ಮೋಕ್ಷ ಸಾಧನೆಗೆ ಭಕ್ತಿಯು ಉತ್ತಮ ಮಾರ್ಗವೆಂದು ಸಾರಿದರು. ಈ ಸಂಪ್ರದಾಯವನ್ನು ಭಕ್ತಿ ಪಂಥ ಎನ್ನುವರು.

> ಭಕ್ತಿ ಎಂಬ ಸಂಸ್ಕೃತ ಪದವು ಭುಜ್ ಎಂಬ ಮೂಲದಿಂದ ಬಂದಿದೆ. ಭುಜ್ ಎಂದರೆ ಸ್ವೀಕರಿಸು ಎಂದು ಅರ್ಥವಾಗುತ್ತದೆ.

### ಭಕ್ತಿ ಪಂಥದ ಸಾರ

1) ಭಕ್ತಿ ಪಂಥವು ಮೇಲು ಕೀಳು ಎಂಬ ಭೇದಭಾವವನ್ನು ಖಂಡಿಸಿತು. ಸಮಾನತೆಯನ್ನು ಸಾರಿತು.

2) ಭಕ್ತಿಪಂಥದ ಸಂತರು ಕಂದಾಚಾರವನ್ನು ವಿರೋಧಿಸಿ ಅದನ್ನು ಖಂಡಿಸಿದರು.

3) ಇವರು ಜನರ ಹೃದಯವನ್ನು ಬೆಸೆಯುವ ಕಾರ್ಯ ಮಾಡಿದರು.

4) ಸೂಫಿ ಸಂತರು ಧರ್ಮವೆಂದರೆ ಪ್ರೇಮ ಹಾಗೂ ಮಾನವ ಸೇವೆ ಎಂದು ಸಾರಿದರು. ದೇವರು ಒಬ್ಬನೇ ಎಂದು, ಹಲವಾರು ದೇವರುಗಳು ಇಲ್ಲ ಎಂದು ಸಾರಿದರು.

## ದಕ್ಷಿಣ ಭಾರತದ ಭಕ್ತಿ ಪರಂಪರೆ

### ಆಂಡಾಳ್


ಆಂಡಾಳ್

ತಮಿಳುನಾಡಿನ ವಿಷ್ಣುಭಕ್ತರಾದ 12 ಮಂದಿ ಆಳ್ವಾರಲ್ಲಿ 'ಆಂಡಾಳ್' ಕೂಡಾ ಒಬ್ಬರು. ಇವರು ವಿಷ್ಣುಚಿತ್ತರ ಸಾಕುಮಗಳು. ವಿಷ್ಣುಚಿತ್ತರೂ ಒಬ್ಬ ಆಳ್ವಾರ್. ಇವರನ್ನು ಪೆರಿಯಾಳ್ವಾರ್ ಎಂಬ ಹೆಸರಿನಿಂದ ಕರೆಯುತ್ತಾರೆ. ಆಂಡಾಳ್‌ರ ಮೂಲ ಹೆಸರು ಗೋದಾದೇವಿ. ಇವರು ಕೃಷ್ಣನ ಭಕ್ತರು. ಶ್ರೀವಿಲ್ಲಿಪುತ್ತೂರಿನಲ್ಲಿರುವ ಕೃಷ್ಣದೇವಸ್ಥಾನಕ್ಕೆ ಇವರ ತಂದೆ ಹೂಮಾಲೆ ಮಾಡಿ ದೇವರಿಗೆ ಮುಡಿಸುತ್ತಿದ್ದರು. ಆಂಡಾಳ್‌ರವರು ಕೃಷ್ಣನನ್ನೇ ಪ್ರೇಮಿಸಿ, ಆತನೇ ತನ್ನ ಗಂಡನೆಂದು ಹೇಳುತ್ತಿದ್ದರು. ಇವರು 'ತಿರುಪ್ಪಾವೈ' ಎಂಬ ಗ್ರಂಥ ರಚಿಸಿ ದೇವರಿಗೆ ಸಮರ್ಪಿಸಿದರು. ತಮಿಳುನಾಡಿನಲ್ಲಿ ಈ 'ತಿರುಪ್ಪಾವೈ' ವ್ರತಾಚರಣೆಗೆ ತುಂಬಾ ಪ್ರಸಿದ್ಧಿ ಹೊಂದಿದೆ.

ಆಳ್ವಾರರ ಪ್ರಕಾರ ವಿಷ್ಣುಭಕ್ತರಾದವರೆಲ್ಲರೂ ಸಮಾನರು, ಅವರ ಹುಟ್ಟನ್ನು ಯಾರೂ ಕೇಳಬಾರದು. ಜಾತಿ ಭಾವನೆ ಘೋರಪಾಪವೆಂದು ಇವರು ಭಾವಿಸಿದ್ದರು.

### ಅಕ್ಕಮಹಾದೇವಿ


ಅಕ್ಕಮಹಾದೇವಿ

12ನೇ ಶತಮಾನದಲ್ಲಿ ವಚನ ಚಳವಳಿಯಲ್ಲಿ ಭಾಗವಹಿಸಿದ ದಿಟ್ಟ ಮಹಿಳೆ ಅಕ್ಕಮಹಾದೇವಿ. ಕನ್ನಡ ವಚನ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ ಅಕ್ಕಮಹಾದೇವಿ ಜನಿಸಿದರು. ಇವರ ತಂದೆ ನಿರ್ಮಲಶೆಟ್ಟಿ. ತಾಯಿ ಸುಮತಿ. ಬಾಲ್ಯದಿಂದಲೇ ಶಿವಭಕ್ತಿಯಲ್ಲಿ ಮುಳುಗಿರುತ್ತಿದ್ದರು. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಸಾರಿ ಹೇಳುತ್ತಿದ್ದರು. ಇವರ ತಂದೆ-ತಾಯಿಯರು ಬಲವಂತವಾಗಿ ರಾಜನಾದ ಕೌಶಿಕನೊಂದಿಗೆ ಮದುವೆ ಮಾಡುತ್ತಾರೆ. ತನ್ನ ಗುರು, ಲಿಂಗ, ಜಂಗಮ ಸೇವೆಗೆ ಅಡ್ಡಿಯಾದ್ದರಿಂದ ಅಕ್ಕಮಹಾದೇವಿ ಅರಮನೆ ತ್ಯಜಿಸುತ್ತಾರೆ. ತೊಟ್ಟ ವಸ್ತ್ರಗಳನ್ನು ಬಿಟ್ಟು ಹೊರ ಬರುತ್ತಾರೆ. ನಂತರ ಕಲ್ಯಾಣಕ್ಕೆ ತೆರಳಿ ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಕೆಲವು ಕಾಲ ತಂಗುತ್ತಾರೆ. ಅಲ್ಲಿ 'ಚನ್ನಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸುತ್ತಾರೆ. ಎಲ್ಲ ಶಿವಶರಣರಿಗೂ ಅಕ್ಕಮಹಾದೇವಿಯ ಬಗೆಗೆ ಅಪಾರ ಗೌರವವಿತ್ತು. ಕೊನೆಯ ದಿನಗಳಲ್ಲಿ ಕಲ್ಯಾಣದಿಂದ ಶ್ರೀಶೈಲಕ್ಕೆ ತೆರಳುತ್ತಾರೆ. ಅಂತಿಮವಾಗಿ ಅಲ್ಲಿನ ಕದಳೀ ವನದಲ್ಲಿ ಶಿವೈಕ್ಯರಾಗುತ್ತಾರೆ.

@KTBS NOT TO BE REPUBLISHED

### ಪುರಂದರದಾಸರು (ಸಾ.ಶ. 1480–1564)



ಪುರಂದರದಾಸರು

ಇವರು ಕನ್ನಡ ದಾಸ ಸಾಹಿತ್ಯದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಾರೆ. ಪುರಂದರ ದಾಸರು ಪುರಂದರಗಡದಲ್ಲಿ ಜನಿಸಿದರು. ಇವರ ಮೂಲ ಹೆಸರು ಶ್ರೀನಿವಾಸ ನಾಯಕ. ತಂದೆ ವರದಪ್ಪ ನಾಯಕರು ಮತ್ತು ತಾಯಿ ಲೀಲಾವತಿ. ಇವರ ಪತ್ನಿ ಲಕ್ಷ್ಮೀಬಾಯಿ ಧರ್ಮನಿಷ್ಠ ಸ್ತ್ರೀಯಾಗಿದ್ದಳು.

ಜಿಪುಣನೂ, ನಾಸ್ತಿಕನೂ ಆದ ಶ್ರೀನಿವಾಸ ನಾಯಕ ಭಗವಂತನ ಪರೀಕ್ಷೆಯಲ್ಲಿ ಸೋತು ತನ್ನೆಲ್ಲ ಸಂಪತ್ತನ್ನು ತ್ಯಾಗ ಮಾಡಿ ಪರಮಾತ್ಮನ ನಾಮ ಸ್ಮರಣೆಯಲ್ಲಿ ತೊಡಗಿದರು. ಇವರು ಕೀರ್ತನೆಗಳನ್ನು ಹಾಡುತ್ತ ಅನೇಕ ಊರುಗಳನ್ನು ಸುತ್ತಿ ಕೃಷ್ಣದೇವರಾಯನ ಆಸ್ಥಾನವನ್ನು ಸೇರಿದರು. ಅಲ್ಲಿ ವ್ಯಾಸರಾಯರು ಇವರಿಗೆ ದೀಕ್ಷೆಯನ್ನು ಕೊಟ್ಟು "ಪುರಂದರ" ಎಂದು ನಾಮಕರಣ ಮಾಡಿದರು. ಹೀಗೆ ಪುರಂದರದಾಸರಾದರು. ಪುರಂದರದಾಸರ ಪದಗಳಲ್ಲಿ ಮಾನವೀಯ ಮೌಲ್ಯಗಳು ಅಡಗಿವೆ. ಇವರು ತಮ್ಮ ಕೀರ್ತನೆಗಳಲ್ಲಿ ಮಡಿವಂತಿಕೆಯನ್ನು ಖಂಡಿಸಿದ್ದಾರೆ. ಇವುಗಳಲ್ಲಿ ತತ್ವ, ನೀತಿ ಮತ್ತು ಸಂಗೀತದ ಸಂಗಮವನ್ನು ಕಾಣುತ್ತೇವೆ. ಇವರನ್ನು "ಕರ್ನಾಟಕ ಸಂಗೀತ ಪಿತಾಮಹ" ಎಂದು ಕರೆಯುತ್ತಾರೆ. 'ಪುರಂದರ ವಿಠ್ಠಲ' ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. "ದಾಸರೆಂದರೆ ಪುರಂದರ ದಾಸರಯ್ಯಾ" ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಹೊಗಳಿಸಿಕೊಂಡಿದ್ದಾರೆ.

NOT TO BE REPUBLISHED @KTBS

### ಕನಕದಾಸರು (ಸುಮಾರು ಸಾ.ಶ. 1508 – 1606)



ಕನಕದಾಸರು

ದಾಸ ಸಾಹಿತ್ಯದ ಒಬ್ಬ ಪ್ರಮುಖ ಕೀರ್ತನಕಾರರಾಗಿದ್ದ ಕನಕದಾಸರು ಸುಮಾರು ಸಾ.ಶ. 1508ರಲ್ಲಿ ಹಾವೇರಿ ಜಿಲ್ಲೆಯ ಬಂಕಾಪುರ ತಾಲೂಕಿನ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ಮೂಲ ಹೆಸರು ತಿಮ್ಮಪ್ಪ. ಬೀರಪ್ಪ ಮತ್ತು ಬಚ್ಚಮ್ಮ ಇವರ ತಂದೆ–ತಾಯಿಗಳು. ಇವರು ಕಲಿಯೂ ಹೌದು, ಕವಿಯೂ ಹೌದು. ಬಾಡಗ್ರಾಮದ ಸುತ್ತಲಿನ 78 ಗ್ರಾಮಗಳಿಗೆ ನಾಡಗೌಡ ಹಾಗೂ ಢಣಾಯಕರಾಗಿದ್ದರು. ಕೊಪ್ಪರಿಗೆ ತುಂಬಿದ ಕನಕ ದೊರೆಯಲಾಗಿ ಕನಕನಾಯಕ ಆದರೆಂದು ಪ್ರತೀತಿ. ಕೌಟುಂಬಿಕ ಜೀವನದಲ್ಲಿ ವೈರಾಗ್ಯ ಉದಯಿಸಿ, ವ್ಯಾಸರಾಯರ ಶಿಷ್ಯರಾದರು. ಮುಂದೆ ಕನಕದಾಸರೆಂದೆನಿಸಿದರು. ಇವರು ಅನೇಕ ಕೀರ್ತನೆಗಳನ್ನೂ ರಚಿಸಿದ್ದಾರೆ. 'ಆದಿಕೇಶವ' ಇವರ ಅಂಕಿತನಾಮವಾಗಿದೆ. ಕಾಗಿನೆಲೆಯ ಆದಿಕೇಶವ ಇವರ ಇಷ್ಟದೈವ. ಇವರು ತಮ್ಮ ಹಾಡುಗಳಲ್ಲಿ ಸಮಾಜದ ಮೂಢನಂಬಿಕೆಗಳನ್ನು ಖಂಡಿಸಿ ಭಗವಂತನನ್ನು ಸೇರುವ ಸರಳ ಮಾರ್ಗವನ್ನು ಬೋಧಿಸಿದ್ದಾರೆ. ಇವರು ತಮ್ಮ ಕೀರ್ತನೆಯಲ್ಲಿ ಜಾತಿ ಪದ್ಧತಿಯನ್ನು ವಿಡಂಬನೆ ಮಾಡಿದ್ದಾರೆ.

**ಕನಕನ ಕಿಂಡಿ :** ಉಡುಪಿಯ ದೇವಾಲಯದ ಒಳಗೆ ಕನಕದಾಸರಿಗೆ ಪ್ರವೇಶವನ್ನು ಅಲ್ಲಿನ ಪುರೋಹಿತರು ನಿರಾಕರಿಸುತ್ತಾರೆ. ಆಗ ಕನಕದಾಸರ ಭಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಪಶ್ಚಿಮಾಭಿಮುಖನಾಗಿ ತಿರುಗಿ ಕಿಂಡಿಯ ಮೂಲಕ ದರ್ಶನ ಕೊಟ್ಟನೆಂದು ಐತಿಹ್ಯವಿದೆ.
ಕನಕದಾಸರು ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತೆ ಎಂಬ ಷಟ್ಪದಿ ಕಾವ್ಯಗಳನ್ನೂ ಮೋಹನ ತರಂಗಿಣಿ ಎಂಬ ಸಾಂಗತ್ಯ ಕೃತಿಯನ್ನೂ ರಚಿಸಿದ್ದಾರೆ.

### ಶಿಶುನಾಳ ಶರೀಫ


ಶಿಶುನಾಳ ಶರೀಫರು

ಶಿಶುನಾಳ ಶರೀಫರು ಕನ್ನಡದ ಮೊದಲ ಮುಸ್ಲಿಂ ಅನುಭಾವಿ ಕವಿ. ಇವರನ್ನು 'ಕರ್ನಾಟಕದ ಕಬೀರ' ಎಂದು ಕರೆಯುತ್ತಾರೆ. ಶಿಶುನಾಳ ಎಂಬ ಗ್ರಾಮದಲ್ಲಿ 1819ರಲ್ಲಿ ಜನಿಸಿದರು. ಇವರ ತಂದೆ ಇಮಾಮ್ ಸಾಹೇಬ, ತಾಯಿ ಹಜ್ಜಮಾ. ಶರೀಫರು ಬಾಲಕನಿರುವಾಗಲೇ ಹಿಂದೂ–ಮುಸ್ಲಿಂ ಎರಡೂ ಧರ್ಮಗಳ ಬಗ್ಗೆ ಅರಿತುಕೊಂಡಿದ್ದರು. ನಂತರ ಮುಲ್ಕಿ ಪರೀಕ್ಷೆ ಪಾಸು ಮಾಡಿ ಶರೀಫರು ಕೆಲವು ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಗುರು ಗೋವಿಂದ ಭಟ್ಟರಿಂದ ದೀಕ್ಷೆ ತೆಗೆದುಕೊಂಡು ಅನೇಕ ತತ್ವಪದಗಳನ್ನು ರಚಿಸಿದರು. ಇವರ ಪದಗಳಲ್ಲಿ ರಿವಾಯತ್(ಮೊಹರಂ ಪದ) ಇವೆ. ಅವುಗಳಲ್ಲಿ ಕಾಳಗ ಪದ, ಧಾರ್ಮಿಕ ನೀತಿಪದ, ಅಲಾವಿಪದ, ಸವಾಲ್ ಜವಾಬ್ ಪದಗಳು ಇವೆ. ಶಿಶುನಾಳದಲ್ಲಿ ಇವರ ಸಮಾಧಿ ಇದೆ. ಹಿಂದೂ–ಮುಸ್ಲಿಮರಿಬ್ಬರೂ ಇವರನ್ನು ಆರಾಧಿಸುತ್ತಾರೆ. ಜಾತಿ ಮತ್ತು ಧರ್ಮಗಳ ಗಡಿಮೀರಿ ಇವರು ಮಾನವೀಯ ಮೌಲ್ಯಗಳನ್ನು ಬಿತ್ತಿದರು.

## ಉತ್ತರ ಭಾರತದ ಭಕ್ತಿ ಪರಂಪರೆ

### ಕಬೀರದಾಸ್ (ಸಾ.ಶ. 1398–1518)


ಕಬೀರದಾಸ್

ಭಕ್ತಿಪಂಥದ ಪ್ರಸಿದ್ಧ ಸಂತರಾದ ಕಬೀರ್ ರಾಮಾನಂದರ ಶಿಷ್ಯರು. ಇವರು ಹಿಂದೂ–ಮುಸ್ಲಿಂ ಧರ್ಮಗಳ ನಡುವೆ ಸಾಮರಸ್ಯವನ್ನು ತರಲು ಪ್ರಯತ್ನಿಸಿದರು. ಇವರು ವಾರಣಾಸಿಯಲ್ಲಿನ ನೇಕಾರ ಮುಸ್ಲಿಂ ದಂಪತಿಗಳಾದ ನೀರು ಮತ್ತು ನಿಮಾ ರ ಸಾಕು ಮಗ. ಜಾತಿ ಪದ್ಧತಿ, ಆಡಂಬರದ ಜೀವನ, ಜಾತಿ ಶ್ರೇಷ್ಠತೆ, ಧಾರ್ಮಿಕ ಅಸಮಾನತೆ ಇವುಗಳನ್ನು ಖಂಡಿಸಿದರು. ಅಲ್ಲಾ ಮತ್ತು ರಾಮ ಎಂಬುದು ಒಂದೇ ದೇವರ ಎರಡು ಹೆಸರುಗಳು. ಹಿಂದೂ ಮತ್ತು ಮುಸ್ಲಿಮರು ಒಂದು ಮಣ್ಣಿನಿಂದ ತಯಾರಿಸಿದ ಮಡಿಕೆಗಳು ಎಂದು ಬಣ್ಣಿಸಿದರು.

© KTBS NOT TO BE REPUBLISHED

ಕಬೀರರು ತಾನು ರಾಮ ಮತ್ತು ಅಲ್ಲಾಹನ ಮಗನೆಂದು ಸಾರಿದರು. ದೇಹ ದಂಡನೆ, ಉಪವಾಸ, ತೀರ್ಥಯಾತ್ರೆ, ಪವಿತ್ರ ಸ್ಥಾನದಿಂದ ದೇವರನ್ನು ಕಾಣಲು ಸಾಧ್ಯವಿಲ್ಲ. ಆದರೆ ಪವಿತ್ರವಾದ ಭಕ್ತಿಮಾರ್ಗದಿಂದ ಮಾತ್ರ ದೇವರನ್ನು ಕಾಣಲು ಸಾಧ್ಯ ಎಂದು ಹೇಳಿದರು. ಕಬೀರರು ತಮ್ಮ ತತ್ವಗಳನ್ನು ಜನರಿಗೆ, ಅರ್ಥವಾಗುವಂತೆ 'ದೋಹ' (ಎರಡು ಸಾಲಿನ ಪದ್ಯ) ಗಳೆಂಬ ಸಣ್ಣ ಕಾವ್ಯಗಳಲ್ಲಿ ಬೋಧಿಸಿದರು. ಇವರ ಅನುಯಾಯಿಗಳನ್ನು ಕಬೀರ್ ಪಂಥಿಗಳೆಂದು ಕರೆಯುತ್ತಾರೆ.

### ಗುರುನಾನಕರು (ಸಾ.ಶ.1469 – 1539)



ಗುರುನಾನಕರು

ಗುರುನಾನಕರು ಸಿಖ್ ಧರ್ಮದ ಸಂಸ್ಥಾಪಕರು. ಇವರು ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬಿನ **ತಲವಾಂಡಿ** ಗ್ರಾಮದಲ್ಲಿ 1469ರಲ್ಲಿ ಜನಿಸಿದರು. ಮೆಹ್ತಕೌಲ ಮತ್ತು ತೃಪ್ತಾ ಇವರ ತಂದೆ-ತಾಯಿಗಳು. ಅವರು ಹಿಂದೂ-ಮುಸ್ಲಿಂ ಮತಗಳ ಸಮಾನ ಅಂಶಗಳನ್ನು ಒತ್ತಿ ಹೇಳಿದರು. "ಗ್ರಂಥ ಸಾಹಿಬ್" ಎಂಬ ಸಿಖ್ಖರ ಪವಿತ್ರ ಗ್ರಂಥದಲ್ಲಿ ಅವರ ಜಪಜಿಗಳು ಎಂದು ಕರೆಯಲಾಗುವ ಹಾಡುಗಳಿವೆ. ದೇವರ ನಾಮವನ್ನು ಜಪಿಸುವುದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಸಿಖ್ ಪಂಥ ಮಹತ್ವ ನೀಡಿದೆ. ಸ್ತ್ರೀ-ಪುರುಷರ ಸಮಾನತೆಯನ್ನು ಅದು ಒತ್ತಿ ಹೇಳಿದೆ. ಗುರುನಾನಕರು ದೇವರ ಅಸ್ತಿತ್ವದಲ್ಲಿ ಅಚಲ ನಂಬಿಕೆಯನ್ನು ಹೊಂದಿದ್ದರು. ವಿಶ್ವಕ್ಕೆ ದೇವರು ಒಬ್ಬನೆ, ಅವನು ಸತ್ಯ ನಿತ್ಯನೆಂದು ಸಾರಿದರು. ಜೀವನದಲ್ಲಿ ಮೋಸ, ವಂಚನೆ, ಕಳ್ಳತನ, ಹಿಂಸೆ ಮಾಡಬಾರದು, ಗುರುವಿನಿಂದ ಭಕ್ತಿಯನ್ನು, ಭಕ್ತಿಯಿಂದ ಮುಕ್ತಿಯನ್ನು ಪಡೆಯಬಹುದು ಎಂದು ಹೇಳಿದರು. ಸಾಮಾಜಿಕ ಅನಿಷ್ಟಗಳಾದ ಮೂರ್ತಿಪೂಜೆ, ಜಾತಿಪದ್ಧತಿ, ಸತಿಪದ್ಧತಿ, ಮುಂತಾದವುಗಳನ್ನು ವಿರೋಧಿಸಿದರು. ತಮ್ಮ ದೇಶ ಸಂಚಾರದಲ್ಲಿ ನಾನಕರು ಕರ್ನಾಟಕಕ್ಕೂ ಬಂದಿದ್ದರು. ಅವರು ಬೀದರಿನಲ್ಲಿ ತಂಗಿದ್ದ ಸ್ಥಳವನ್ನು "ನಾನಕ್ ಝರಾ" (ಸಿಹಿ ನೀರಿನ ಬುಗ್ಗೆ) ಎಂದು ಕರೆಯುತ್ತಾರೆ.

© KTBS NOT TO BE REPUBLISHED

### ತುಳಸೀದಾಸರು (ಸಾ.ಶ. 1532 – 1623)

ಉತ್ತರ ಭಾರತದ ಭಕ್ತಿ ಮಾರ್ಗದ ಪ್ರತಿಪಾದಕರಲ್ಲಿ ತುಳಸೀದಾಸರು ಅಗ್ರಗಣ್ಯರಾಗಿದ್ದಾರೆ. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು ಹಿಂದೀ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರವಾಗಿದೆ. ಇವರು "ರಾಮಚರಿತ ಮಾನಸ" ಎಂಬ ಗ್ರಂಥವನ್ನು ಬರೆದರು. ಇದು ಹಿಂದೀ ಸಾಹಿತ್ಯದ ಶ್ರೇಷ್ಠ ಕೃತಿಯಾಗಿದೆ. ಉತ್ತರದಲ್ಲಿ ಇದು 'ತುಳಸೀ ರಾಮಾಯಣ' ಎಂದು ಜನಪ್ರಿಯವಾಗಿದೆ. ರಾಮಭಕ್ತರಾದ ಇವರು ದೈವಭಕ್ತಿ, ಪರಿಶುದ್ಧ ಜೀವನ, ಪ್ರೀತಿ, ಪ್ರೇಮ, ಸಹನೆ, ಔದಾರ್ಯಗಳನ್ನು ಜನಮನದಲ್ಲಿ ಬಿತ್ತಿದರು.



ತುಳಸೀದಾಸರು

## ಮೀರಾಬಾಯಿ ( ಸಾ.ಶ. 1498 – 1569)



ಮೀರಾಬಾಯಿ

"ಕಲಿಯುಗದ ರಾಧ" ಎಂದು ಕರೆಯಲಾಗುವ ಸಂತ ಮೀರಾಬಾಯಿ ಭಾರತದ ಮಹಾನ್ ಕೀರ್ತನಕಾರ್ತಿ ಆಗಿದ್ದರು. ಇವರು ರಾಜಸ್ಥಾನದಲ್ಲಿ ರಜಪೂತ ರಾಜಮನೆತನದಲ್ಲಿ ಜನಿಸಿದರು. ಮೀರಾಬಾಯಿ ಅವರು ರಾಜಾರತನಸಿಂಗನ ಮಗಳು. ಮೇವಾಡದ ರಾಜಕುಮಾರನೊಂದಿಗೆ ಇವರ ವಿವಾಹವಾಯಿತು. ಬಾಲ್ಯದಿಂದಲೂ ಆಧ್ಯಾತ್ಮದ ಕಡೆಗೆ ಒಲವು ಇದ್ದುದರಿಂದ ತನ್ನೆಲ್ಲ ಸಮಯವನ್ನು ಭಗವಂತನ ಪೂಜೆ, ಧ್ಯಾನ ಮತ್ತು ಕೀರ್ತನೆಯಲ್ಲಿ ಕಳೆಯುತ್ತಿದ್ದರು. ಇವರ ಕೃಷ್ಣನ ಆರಾಧನೆಯನ್ನು ಅತ್ತೆ ಕಟುವಾಗಿ ವಿರೋಧಿಸಿದಳು. ಇದನ್ನು ಸಹಿಸಲಾಗದೆ ಮೀರಾಬಾಯಿ ಅರಮನೆ ಬಿಟ್ಟು ಶ್ರೀ ಕೃಷ್ಣನ ಕ್ಷೇತ್ರವಾದ ಬೃಂದಾವನಕ್ಕೆ ಹೋದರು. ಅವರು ರಚಿಸಿದ ಕೀರ್ತನೆಗಳಲ್ಲಿ ಭಕ್ತಿ, ಪ್ರೇಮ ತುಂಬಿ ತುಳುಕಿದೆ. **ಗಿರಿಧರ ಗೋಪಾಲ** ಇವರ ಆರಾಧ್ಯದೈವ. ತನ್ನ ನೂರಾರು ಭಜನೆಗಳಿಂದ ಮೀರಾಬಾಯಿ ಅವರು ಇಂದಿಗೂ ಜನಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

## ಚೈತನ್ಯರು (ಸಾ.ಶ. 1485–1533)



ಚೈತನ್ಯರು

ಚೈತನ್ಯರು ಪಶ್ಚಿಮ ಬಂಗಾಳದ ನವದ್ವೀಪ (ನಾಡಿಯಾ) ದಲ್ಲಿ ಸಾ.ಶ.1485ರಲ್ಲಿ ಜನಿಸಿದರು. ಜಗನ್ನಾಥ ಮಿಶ್ರಾ ಮತ್ತು ಶಚಿದೇವಿ ಇವರ ತಂದೆ–ತಾಯಿಗಳು. **ವಿಶ್ವಂಭರ** ಎಂಬುದು ಚೈತನ್ಯರ ಮೊದಲ ಹೆಸರು. ಈಶ್ವರಿಪುರಿ ಇವರ ಗುರುಗಳಾಗಿದ್ದರು. ಚೈತನ್ಯರು ತಮ್ಮ 25ನೇ ವರ್ಷದಲ್ಲಿ ಸಂಸಾರವನ್ನು ತ್ಯಜಿಸಿ ಸನ್ಯಾಸವನ್ನು ಸ್ವೀಕರಿಸಿದರು. ಇವರು ಜಾತಿಭೇದವನ್ನು ಅಲ್ಲಗಳೆದರು. ಮುಕ್ತಿಗೆ ಭಕ್ತಿಯೊಂದೇ ದಾರಿಯೆಂದರು. ವಿಶ್ವಭ್ರಾತೃತ್ವ ದೇವರ ಪ್ರೀತಿಗಳಿಸುವ ಪ್ರಥಮ ಹೆಜ್ಜೆ ಎಂದು ಬೋಧಿಸಿದರು. ಚೈತನ್ಯರು ಭಾರತದ ಎಲ್ಲಾ ಕಡೆ ತೀರ್ಥಯಾತ್ರೆ ಕೈಗೊಂಡು ಪ್ರೇಮದ ಸಂದೇಶ ಸಾರಿದರು. ಆದ್ದ–ರಿಂದ ಪ್ರೇಮ, ಸಹೋದರಭಾವ ಮತ್ತು ದಾನಶೀಲತೆ ಇವು ಅವರ ಬೋಧನೆಯ ತಿರುಳು ಆಗಿತ್ತು. ಇಂದಿನ ಹರೇಕೃಷ್ಣ ಪಂಥ ಇವರಿಂದ ಪ್ರಭಾವಿತವಾಗಿದೆ. ಚೈತನ್ಯರನ್ನು ಶ್ರೀಕೃಷ್ಣನ ಅವತಾರವೆಂದು ಪರಿಗಣಿಸುವ ಬಂಗಾಳದ ಜನತೆ ಅವರನ್ನು "ಚೈತನ್ಯ ಮಹಾಪ್ರಭು" ಎಂದು ಕರೆದಿದ್ದಾರೆ.

©KTBS NOT TO BE REPUBLISHED

### ಭಕ್ತಿಪಂಥದ ಪರಿಣಾಮಗಳು

- ಭಕ್ತಿಸಂತರು ಹಿಂದೂ–ಮುಸ್ಲಿಂ ಸಾಮರಸ್ಯ ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.
- ಭಕ್ತಿ ಸಂತರು ಜನರಾಡುವ ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದರು. ಇದರಿಂದಾಗಿ ಭಾರತೀಯ ದೇಶಿ ಭಾಷೆಗಳು ಶ್ರೀಮಂತಗೊಂಡವು.

## ಸೂಫಿ ಪರಂಪರೆ

ಹಿಂದೂಗಳಲ್ಲಿ ಕಬೀರರು, ಕನಕದಾಸರು, ಚೈತನ್ಯರು ಮುಂತಾದವರು ಧರ್ಮ ಜಾಗೃತಿಯನ್ನು ಉಂಟು ಮಾಡಿದಂತೆ, ಮುಸ್ಲಿಮರಲ್ಲಿ ಸೂಫಿ ಸಂತರು ಧರ್ಮ ಜಾಗೃತಿಯನ್ನು ಉಂಟು ಮಾಡಿದರು. ಹಿಂದೂ-ಮುಸ್ಲಿಮರ ಏಕತೆಗಾಗಿ ಶ್ರಮಿಸಿದರು. ಸೂಫಿ ಪಂಥವು ಅರೇಬಿಯಾದಲ್ಲಿ ಉದಯಿಸಿ ಭಾರತವನ್ನು ಪ್ರವೇಶಿಸಿತು.

ಸೂಫಿ ಎಂಬ ಪದವು 'ಸಾಫ್' ಎಂಬ ಪದದಿಂದ ಬಂದಿದೆ. ಸಾಫ್ ಎಂದರೆ ಶುದ್ಧಿ ಅಥವಾ ಶುಚಿ ಎಂದು ಅರ್ಥ ಬರುತ್ತದೆ. ಸೂಫಿ ಸಂತರು ಮುಸ್ಲಿಂ ಅನುಭಾವಿಗಳಾಗಿದ್ದು ಸಾದಾ ಉಣ್ಣೆಯ ಅಂಗಿಯನ್ನು ತೊಡುತ್ತಾರೆ.

## ಸೂಫಿ ಪಂಥದ ಸಾರ

1) ದೇವರು ಒಬ್ಬನೇ, ಆತನು ಸರ್ವಶಕ್ತನಾಗಿದ್ದಾನೆ. ನಾವೆಲ್ಲರೂ ಆತನ ಮಕ್ಕಳು ಎಂದು ಪ್ರತಿಪಾದಿಸಿತು.
2) ಉತ್ತಮ ಕಾಯಕ (ಕೆಲಸ)ಕ್ಕೆ ಮಹತ್ವ ನೀಡಿತು.
3) ಎಲ್ಲಾ ಮಾನವರು ಸಮಾನರು ಎಂದು ಸಾರಿತು.
4) ಜಾತಿಪದ್ಧತಿಯನ್ನು ವಿರೋಧಿಸಿತು.

ಕಾಲಕ್ರಮೇಣ ಯೋಗ, ವೇದಾಂತ ಮತ್ತು ಬೌದ್ಧ ಮತದ ಚಿಂತನೆಗಳಿಂದ ಸೂಫಿಗಳು ಪ್ರಭಾವಿತರಾದರು. ಧರ್ಮವೆಂದರೆ ಪ್ರೇಮ, ಮಾನವನ ಸೇವೆ ಎಂಬುದೇ ಸೂಫಿಗಳ ಮೂಲ ತತ್ವವಾಗಿದೆ.

## ನಿಜಾಮುದ್ದೀನ್ ಔಲಿಯ



ಇವರು ಭಾರತದ ಪ್ರಮುಖ ಸೂಫಿ ಸಂತರು. ಇವರು ದಿಲ್ಲಿಯಲ್ಲಿ ನೆಲೆಸಿ ಬಡತನದ ಜೀವನ ನಡೆಸಿದರು. ಹುಲ್ಲು ಮಾಡಿನ ಮಸೀದಿ ಇವರ ಚಟುವಟಿಕೆಯ ಕೇಂದ್ರವಾಗಿತ್ತು. ದಿಲ್ಲಿಯ ಸುಲ್ತಾನ ದಾನವಾಗಿ ನೀಡಿದ್ದ ಗ್ರಾಮವೊಂದನ್ನು ಇವರು ತಿರಸ್ಕರಿಸಿದರು. ತಮ್ಮನ್ನು ಕಾಣಲು ಬರುತ್ತಿದ್ದ ಭಕ್ತರಿಗೆ ಸದ್ಗುಣ (ಒಳ್ಳೆಯ ಗುಣ) ಕರುಣೆಯ ಸಂದೇಶ ನೀಡುತ್ತಿದ್ದರು.

@KTBS NOT TO BE REPUBLISHED

## ಖ್ವಾಜಾ ಬಂದೇನವಾಜ್

ಬಂದೇನವಾಜ್‌ರು ಪ್ರಸಿದ್ಧ ಚಿಸ್ತಿ ಸೂಫಿ ಸಂತರು. ಇವರು ದೆಹಲಿಯ ನಾಸಿರುದ್ದೀನನ ಶಿಷ್ಯರು. ಬಂದೇನವಾಜ್ ಎಂದರೆ 'ಮೊರೆಹೊಕ್ಕವರನ್ನು ಪೊರೆಯುವವರು' ಎಂದು ಅರ್ಥ. ಇವರಿಗೆ ಗೇಸುದರಾಜ್ ಎಂದು ಇನ್ನೊಂದು ಹೆಸರು. ಗೇಸುದರಾಜ್ ಎಂದರೆ 'ಉದ್ದ ಕೂದಲಿನವನು' ಎಂದರ್ಥ. ಇವರ ಮೂಲ ಹೆಸರು ಸೈಯದ್ ಮಹಮದ್ ಹುಸೈನಿ. ಇವರಿಗೆ ಸಂಸ್ಕೃತ, ಅರಬೀ, ಪಾರಸಿ, ದಖನಿ (ಉರ್ದು) ಹೀಗೆ ಅನೇಕ ಭಾಷೆಗಳು ಬರುತ್ತಿದ್ದವು. ಇವರು ಕಲಬುರಗಿಗೆ ಬಂದು ನೆಲೆಸಿದರು. ದೊರೆ ಫಿರೋಜ್ ಷಾ ಇವರಿಗೆ ತುಂಬಾ ಗೌರವ ನೀಡುತ್ತಿದ್ದನು. ಇವರು ದಖನಿ ಭಾಷೆಯಲ್ಲಿ ಸಾಹಿತ್ಯ ರಚಿಸಿದ್ದಾರೆ. ಈಗಲೂ ಕಲಬುರಗಿಯ ಇವರ ದರ್ಗಾದಲ್ಲಿನ ಸಾಹಿತ್ಯ ಭಂಡಾರದಲ್ಲಿ ನೋಡಬಹುದು. ಕಲಬುರಗಿಯಲ್ಲಿ ಪ್ರತಿವರ್ಷ ಇವರ ಉರುಸು ನಡೆಯುತ್ತದೆ.

## ಚಿಸ್ತಿ ಪಂಥ

ಸೂಫಿ ಪಂಥದಲ್ಲಿ ಚಿಸ್ತಿ ಪಂಗಡ ಪ್ರಮುಖವಾದುದು. ಇದರ ಸ್ಥಾಪಕ ಮುಯಿನಿದ್ದೀನ್ ಚಿಸ್ತಿ. ಇವರು ಅಜ್ಮೀರಕ್ಕೆ ಬಂದು ನೆಲೆಸಿದರು. ದೈವಭಕ್ತಿ, ಗುರುಸೇವೆ, ಸನ್ಮಾರ್ಗದಲ್ಲಿ ನಡೆಯುವುದು ಚಿಸ್ತಿ ಅನುಯಾಯಿಗಳ ಲಕ್ಷಣವಾಗಿತ್ತು. ಚಿಸ್ತಿಗಳಿಗೆ ಹಿಂದೂ-ಮುಸ್ಲಿಂ ಸಾಮರಸ್ಯದ ಬಗ್ಗೆ ಕಾಳಜಿಯಿತ್ತು. ಇವರು ಜನ ಬಳಕೆಯ ದಖನ್(ಉರ್ದು) ಭಾಷೆಯಲ್ಲಿ ಕೃತಿ ಬರೆದರು. ಫತೇಪುರ ಸಿಕ್ರಿ ಎಂಬಲ್ಲಿನ ಸಲೀಮ್ ಚಿಸ್ತಿ ಪ್ರಸಿದ್ಧರಾಗಿದ್ದರು.

@KTBS NOT TO BE REPUBLISHED



ಸಲೀಮ್ ಚಿಸ್ತಿಯಾ ಗೋರಿ, ಆಗ್ರಾ

| | | |
|---|---|---|
| ಲಾಹೋರ (ಈಗಿನ ಪಾಕಿಸ್ತಾನ) | : | ಶೇಖ್ ಇಸ್ಮಾಯಿಲ್ |
| ಅಜ್ಮೀರ | : | ಖ್ವಾಜಾ ಮೊಯಿನುದ್ದೀನ್ ಚಿಸ್ತಿ |
| ದೆಹಲಿ | : | ನಿಜಾಮುದ್ದೀನ್ ಔಲಿಯಾ |
| ಅರ್ಕಾಟ್ | : | ಟಿಪ್ಪು ಮಸ್ತಾರ ಔಲಿಯಾ |
| ಕಲಬುರಗಿ | : | ಖ್ವಾಜಾ ಬಂದೇನವಾಜ. |

**ಕಾಲಗಣನೆ (ಸಾ.ಶ)**

| | |
|---|---|
| ನಿಜಾಮುದ್ದಿನ್ ಔಲಿಯ | 1238 ರಿಂದ 1325 |
| ಕಬೀರದಾಸರು | 1440 ರಿಂದ 1518 |
| ಗುರುನಾನಕ್ | 1469 ರಿಂದ 1539 |
| ಪುರಂದರದಾಸರು | 1480 ರಿಂದ 1564 |
| ಚೈತನ್ಯರು | 1485 ರಿಂದ 1533 |
| ಮೀರಾಬಾಯಿ | 1498 ರಿಂದ 1569 |
| ಕನಕದಾಸರು | 1508 ರಿಂದ 1606 |
| ತುಳಸೀದಾಸರು | 1532 ರಿಂದ 1623 |

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಅಕ್ಕಮಹಾದೇವಿಯವರ ವಚನದ ಅಂಕಿತನಾಮ__________
2. ಪುರಂದರದಾಸರು__________ ಆಸ್ಥಾನದಲ್ಲಿ ಇದ್ದರು.
3. 'ಆದಿಕೇಶವ' ಎಂಬುದು__________ ಅಂಕಿತನಾಮ.
4. ಕರ್ನಾಟಕದ ಕಬೀರ ಎಂದು__________ ಅವರನ್ನು ಕರೆಯುತ್ತಾರೆ.
5. ಚೈತನ್ಯರ ಮೊದಲ ಹೆಸರು__________
6. ಸೂಫಿ ಸಂತ ಖ್ವಾಜ ಬಂದೇನವಾಜರಿಗಿದ್ದ ಇನ್ನೊಂದು ಹೆಸರು_______

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಆಂಡಾಳ್‌ರ ಮೂಲ ಹೆಸರೇನು?
2. ಅಕ್ಕಮಹಾದೇವಿ ಎಲ್ಲಿ ಜನಿಸಿದರು?
3. ಕರ್ನಾಟಕ ಸಂಗೀತದ ಪಿತಾಮಹ ಯಾರು?
4. ಕನಕದಾಸರ ತಂದೆ-ತಾಯಿಗಳನ್ನು ಹೆಸರಿಸಿರಿ.
5. ಕನ್ನಡದ ಮೊದಲ ಮುಸ್ಲಿಂ ಕವಿ ಯಾರು?
6. ಸಿಖ್ಖರ ಪವಿತ್ರ ಗ್ರಂಥ ಯಾವುದು?
7. ಕಲಿಯುಗದ ರಾಧಾ ಎಂದು ಯಾರನ್ನು ಕರೆಯುತ್ತಿದ್ದರು?

NOT TO BE REPUBLISHED © KTBS

8. ಸೂಫಿ ಪದದ ಅರ್ಥವೇನು?
9. ಭಾರತದ ಸೂಫಿ ಸಂತರು ಯಾರ್‍ಯಾರು?
10. ಚಿಸ್ತಿ ಪಂಗಡದ ಸ್ಥಾಪಕ ಯಾರು?

## III ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕಬೀರ್‌ದಾಸರು ನೀಡಿದ ಸಂದೇಶಗಳನ್ನು ತಿಳಿಸಿ.
2. ಗುರುನಾನಕರ ಬೋಧನೆಗಳೇನು?
3. ಭಕ್ತಿ ಪಂಥದ ಪರಿಣಾಮಗಳು ಯಾವುವು?
4. ಸೂಫಿ ಪಂಥದ ಸಾರವನ್ನು ಸಂಗ್ರಹಿಸಿ ಬರೆಯಿರಿ.

## IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| 1. ಗುರುನಾನಕ್ | ಅ) ಸೂಫಿಸಂತ |
| 2. ಚೈತನ್ಯ | ಆ) ಸಿಖ್‌ಧರ್ಮ |
| 3. ನಿಜಾಮುದ್ದಿನ್ ಔಲಿಯ | ಇ) ಕಲಿಯುಗದ ರಾಧ |
| 4. ಮೀರಾಬಾಯಿ | ಈ) ಹರೇಕೃಷ್ಣ ಪಂಥ |

## ಚರ್ಚಿಸಿ

ಭಕ್ತಿಸಂತರ ಬೋಧನೆಗಳ ಪ್ರಸ್ತುತತೆ ಕುರಿತು ಚರ್ಚಿಸಿ.

## ಚಟುವಟಿಕೆಗಳು

1 ಭಕ್ತಿಸಂತರ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಶ್ರೀಚೈತನ್ಯ, ಗುರುನಾನಕ್, ಮೀರಾಬಾಯಿ, ತುಲಸೀದಾಸ್, ಕಬೀರ್, ಸೂರ್‌ದಾಸ್ ಮತ್ತು ಸೂಫಿಸಂತರ ಜೀವನ ಚರಿತ್ರೆಯನ್ನು ಓದಿ.

3 ಮೀರಾ ಭಜನೆಗಳನ್ನು ಆಲಿಸಿ.

4 ಸೂಫಿ ಪಂಥದ ವಿಚಾರವಾಗಿ ಇನ್ನಷ್ಟು ವಿವರಗಳನ್ನು ಸಂಗ್ರಹಿಸಿ, ಭಾರತದ ಬಹುಧರ್ಮೀಯ ಸಮಾಜದ ಮೇಲೆ ಅವರ ಪ್ರಭಾವ ಹಾಗೂ ಇಂದಿನ ಸನ್ನಿವೇಶದಲ್ಲಿ ಅವರ ಪ್ರಸ್ತುತತೆಯ ವಿಚಾರದ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

★ ★ ★

@KTBS NOT TO BE REPUBLISHED

# ಪೌರನೀತಿ

## ಅಧ್ಯಾಯ 9

## ಕೇಂದ್ರ ಸರ್ಕಾರ

U8L1V7

**ಪಾಠದ ಪರಿಚಯ**

ಈ ಪಾಠದಲ್ಲಿ ಕೇಂದ್ರ ಸರ್ಕಾರದ ಶಾಸಕಾಂಗ ಮತ್ತು ಕಾರ್ಯಾಂಗಗಳ ರಚನೆ ಮತ್ತು ವ್ಯಾಪ್ತಿಯನ್ನು ಪರಿಚಯಿಸಲಾಗಿದೆ. ಅಲ್ಲದೆ, ಸಂಸತ್ ಸದಸ್ಯರ ಅರ್ಹತೆಗಳು ಮತ್ತು ಕಾರ್ಯಗಳು; ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳು; ಮತ್ತು ಮಂತ್ರಿಮಂಡಲದ ರಚನೆ ಹಾಗೂ ಕಾರ್ಯಗಳ ಬಗೆಗೆ ಪ್ರಸ್ತುತಪಡಿಸಲಾಗಿದೆ.

**ಸಾಮರ್ಥ್ಯಗಳು**

1 ಕೇಂದ್ರ ಸರ್ಕಾರದ ರಚನೆ ಮತ್ತು ಕಾರ್ಯಗಳ ಬಗ್ಗೆ ತಿಳಿಯುವುದು.

2 ಶಾಸಕಾಂಗ ಮತ್ತು ಕಾರ್ಯಾಂಗಗಳ ರಚನೆ ಮತ್ತು ಅವುಗಳ ಅಧಿಕಾರದ ಬಗ್ಗೆ ವಿಮರ್ಶಿಸುವುದು.

3 ಲೋಕಸಭೆ ಮತ್ತು ರಾಜ್ಯಸಭೆಗಳ ರಚನೆ ಮತ್ತು ಕಾರ್ಯವಿಧಾನಗಳ ಬಗ್ಗೆ ಅರಿಯುವುದು.

4 ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳ ಬಗ್ಗೆ ತಿಳಿಯುವುದು.

©KTBS NOT TO BE REPUBLISHED

**ಭಾರತದ ಒಕ್ಕೂಟ:** ಭಾರತವು 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿರುವ ಒಕ್ಕೂಟವಾಗಿದೆ. ಒಕ್ಕೂಟದ ಸರ್ಕಾರವನ್ನು ಕೇಂದ್ರ ಸರ್ಕಾರ ಎನ್ನುವರು. ಸರ್ಕಾರಕ್ಕೆ ಮೂರು ಅಂಗಗಳಿವೆ:

**ಶಾಸಕಾಂಗ :** ಶಾಸನ ಅಥವಾ ಕಾನೂನು ಮಾಡುವುದು ಇದರ ಪ್ರಮುಖ ಕಾರ್ಯವಾಗಿದೆ. ಜೊತೆಗೆ ಇದು ಕಾರ್ಯಾಂಗದ ಮೇಲೆ ಹತೋಟಿ ಇಟ್ಟುಕೊಳ್ಳುವ ಕೆಲಸವನ್ನು ಮಾಡುತ್ತದೆ.

**ಕಾರ್ಯಾಂಗ :** ಇದು ಶಾಸನಗಳನ್ನು ಆಡಳಿತದ ಮುಖಾಂತರ ಕಾರ್ಯರೂಪಕ್ಕೆ ತರುತ್ತದೆ.

**ನ್ಯಾಯಾಂಗ :** ನ್ಯಾಯಾಂಗವು ನ್ಯಾಯನಿರ್ಣಯ ನೀಡುತ್ತದೆ.

ನ್ಯಾಯಾಂಗವು ಸಂವಿಧಾನ ಹಾಗೂ ಕಾನೂನುಗಳ ಬಗ್ಗೆ ಸ್ಪಷ್ಟನೆ ಹಾಗೂ ನಿರ್ಣಯಗಳನ್ನು ನೀಡುತ್ತದೆ. ವ್ಯಾಜ್ಯಗಳನ್ನು ಪರಿಹರಿಸುತ್ತದೆ. (ಉದಾ: ವ್ಯಕ್ತಿ–ವ್ಯಕ್ತಿಗಳ ನಡುವೆ, ವ್ಯಕ್ತಿ–ಸರ್ಕಾರದ ನಡುವೆ, ಸರ್ಕಾರ–ಸರ್ಕಾರದ ನಡುವೆ ಇತ್ಯಾದಿ.)

ಈ ಅಂಗಗಳ ರಚನೆ ಹೇಗಾಗುತ್ತದೆ? ಅವುಗಳ ಅಧಿಕಾರ ಹಾಗೂ ಕಾರ್ಯಗಳು ಯಾವುವು? ಎಂಬುದನ್ನು ಈಗ ತಿಳಿಯೋಣ.

## ಕೇಂದ್ರ ಶಾಸಕಾಂಗ

ಕೇಂದ್ರ ಶಾಸಕಾಂಗವನ್ನು 'ಸಂಸತ್ತು' ಅಥವಾ 'ಪಾರ್ಲಿಮೆಂಟ್' ಎನ್ನುತ್ತೇವೆ. ಭಾರತದ ಸಂಸತ್ತು ರಾಷ್ಟ್ರಪತಿ ಮತ್ತು ಎರಡು ಸದನಗಳನ್ನು ಒಳಗೊಂಡಿದೆ. ಎರಡು ಸದನಗಳೆಂದರೆ 'ಲೋಕಸಭೆ' ಮತ್ತು 'ರಾಜ್ಯಸಭೆ'. ಸಂಸತ್ತು ತನ್ನ ಸಭೆಯನ್ನು ಹೊಸದಿಲ್ಲಿಯಲ್ಲಿರುವ 'ಪಾರ್ಲಿಮೆಂಟ್ ಭವನ'ದಲ್ಲಿ ನಡೆಸುತ್ತದೆ. ಇಲ್ಲಿ ಸಂಸತ್ತಿನ ಸದಸ್ಯರು ಚರ್ಚೆ ನಡೆಸಿ ಇಡಿ ದೇಶಕ್ಕೆ ಅನ್ವಯವಾಗುವ ಶಾಸನಗಳನ್ನು ರೂಪಿಸುತ್ತಾರೆ.

**ಲೋಕಸಭೆ:** ಲೋಕಸಭೆಯನ್ನು ಸಂಸತ್ತಿನ 'ಕೆಳಮನೆ' ಎನ್ನುವರು. ಲೋಕಸಭೆಯ ಸದಸ್ಯರನ್ನು 18 ವರ್ಷಕ್ಕೆ ಮೇಲ್ಪಟ್ಟ ಪ್ರಜೆಗಳು ನೇರವಾಗಿ ಚುನಾಯಿಸುತ್ತಾರೆ. ಸದಸ್ಯರ ಗರಿಷ್ಠ ಸಂಖ್ಯೆ 552.

**ಲೋಕಸಭಾ ಸದಸ್ಯರು:** ಲೋಕಸಭಾ ಸದಸ್ಯರ ಅಧಿಕಾರಾವಧಿ ಐದು ವರ್ಷ. ಲೋಕಸಭೆಯ ಸದಸ್ಯರು ಬಯಸಿದಷ್ಟು ಸಲ ಚುನಾವಣೆಗಳಲ್ಲಿ ಸ್ಪರ್ಧಿಸಬಹುದು. ಐದು ವರ್ಷಗಳ ಅವಧಿ ಮುಗಿದ ನಂತರ ಲೋಕಸಭೆ ವಿಸರ್ಜನೆಯಾಗುತ್ತದೆ.

**ಲೋಕಸಭಾ ಸದಸ್ಯರ ಅರ್ಹತೆಗಳು:** (1) ಲೋಕಸಭಾ ಸದಸ್ಯರಾಗುವವರು ಭಾರತದ ಪ್ರಜೆಯಾಗಿರಬೇಕು. (2) ಅವರಿಗೆ ಕನಿಷ್ಠ 25 ವರ್ಷ ವಯಸ್ಸಾಗಿರಬೇಕು. (3) ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು. (4) ಅವರು ದಿವಾಳಿಯಾಗಿರಬಾರದು; ಅಂದರೆ ಆರ್ಥಿಕವಾಗಿ ಎಲ್ಲವನ್ನು ಕಳೆದುಕೊಂಡವರು ಆಗಿರಬಾರದು.

**ಲೋಕಸಭಾಧ್ಯಕ್ಷರು:** ಲೋಕಸಭೆಯ ಸದಸ್ಯರು ತಮ್ಮೊಳಗೆ ಒಬ್ಬರನ್ನು ಲೋಕಸಭೆಯ ಅಧ್ಯಕ್ಷರನ್ನಾಗಿ (ಸ್ಪೀಕರ್) ಆಯ್ಕೆ ಮಾಡಿಕೊಳ್ಳುವರು. ಲೋಕಸಭಾಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು ಇಂತಿವೆ: ಸದನದಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ತೀರ್ಮಾನಿಸುವುದು; ಸದನದಲ್ಲಿ ಶಿಸ್ತು, ಶಾಂತಿ ಹಾಗೂ ಸಂಯಮ ಕಾಪಾಡುವುದು; ಮತ್ತು ಸರಿಯಾದ ರೀತಿಯಲ್ಲಿ ಚರ್ಚೆ ನಡೆಸುವುದು ಹಾಗೂ ನಿರ್ಣಯ ಕೈಗೊಳ್ಳುವುದು.

**ರಾಜ್ಯಸಭೆ:** ರಾಜ್ಯಸಭೆಯು ಸಂಸತ್ತಿನ 'ಮೇಲ್ಮನೆ'ಯಾಗಿದೆ. ರಾಜ್ಯಸಭೆಯ ಸದಸ್ಯರ ಗರಿಷ್ಠ ಸಂಖ್ಯೆ 250. ಇವರು ಪ್ರಜೆಗಳಿಂದ ನೇರವಾಗಿ ಆಯ್ಕೆಗೊಳ್ಳುವುದಿಲ್ಲ. ಅವರಲ್ಲಿ 238 ಸದಸ್ಯರನ್ನು ಎಲ್ಲಾ ರಾಜ್ಯಗಳ ವಿಧಾನಸಭಾ ಸದಸ್ಯರು ಆಯ್ಕೆ ಮಾಡುವರು. ಉಳಿದ 12 ಸದಸ್ಯರನ್ನು ರಾಷ್ಟ್ರಪತಿಯವರು ನಾಮಕರಣ ಮಾಡುವರು.

© KTBS NOT TO BE REPUBLISHED

**ರಾಜ್ಯಸಭಾ ಸದಸ್ಯರು:** ರಾಜ್ಯಸಭೆಯ ಸದಸ್ಯರಾಗುವವರಿಗೆ ಕನಿಷ್ಠ 30 ವರ್ಷ ವಯಸ್ಸಾಗಿರಬೇಕು. ರಾಜ್ಯಸಭಾ ಸದಸ್ಯರ ಅಧಿಕಾರಾವಧಿ ಆರು ವರ್ಷ. ಭಾರತದ ಉಪರಾಷ್ಟ್ರಪತಿಯವರೇ ರಾಜ್ಯಸಭೆಯ ಸಭಾಧ್ಯಕ್ಷರು.

**ಸಂಸತ್ ಸದಸ್ಯರ ಹಕ್ಕುಗಳು:** ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರನ್ನು ಎಂ.ಪಿ. (ಮೆಂಬರ್ ಆಫ್ ಪಾರ್ಲಿಮೆಂಟ್) ಎಂದು ಕರೆಯುವರು. ಇವರಿಗೆ ಸಂಸತ್ತಿನೊಳಗೆ ವಾಕ್‌ಸ್ವಾತಂತ್ರ್ಯವಿದೆ. ಇವರು ಸಂಸತ್ತಿನಲ್ಲಿ ನೀಡುವ ಅಭಿಪ್ರಾಯವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

**ಪ್ರತಿಪಕ್ಷ ನಾಯಕರ ಪಾತ್ರ ಮತ್ತು ಕಾರ್ಯ:** ಆಡಳಿತ ಸರ್ಕಾರ ತಪ್ಪು ಎಸಗುತ್ತಿದ್ದರೆ ಅವುಗಳನ್ನು ಎತ್ತಿ ತೋರಿಸುವುದು; ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುವುದು; ಮತ್ತು ಸರ್ಕಾರ, ಮಂತ್ರಿಮಂಡಲ ಹಾಗೂ ಅಧಿಕಾರಿಗಳನ್ನು ಸತರ್ಕ(ಎಚ್ಚರ)ಗೊಳಿಸುವುದು. ಪ್ರತಿಪಕ್ಷದ ನಾಯಕರಿಗೆ ಗೌರವಾನ್ವಿತ ಸ್ಥಾನವಿದೆ.

## ಸಂಸತ್ತಿನ ಅಧಿಕಾರ ಹಾಗೂ ಕಾರ್ಯಗಳು

ಸಂಸತ್ತಿನ ಕೆಲವು ಮುಖ್ಯ ಅಧಿಕಾರ ಹಾಗೂ ಕಾರ್ಯಗಳು ಇಂತಿವೆ:

**1. ಶಾಸನೀಯ ಅಧಿಕಾರ:** ಸಂಸತ್ತಿನ ಮುಖ್ಯ ಕಾರ್ಯವೆಂದರೆ ಶಾಸನ ರಚಿಸುವುದು. ಅವಶ್ಯವಿದ್ದಲ್ಲಿ ಸಂಸತ್ತು ಶಾಸನವನ್ನು ತಿದ್ದುಪಡಿ ಮಾಡಬಹುದು, ಇಲ್ಲವೆ ರದ್ದು ಪಡಿಸಬಹುದು. ಮುಖ್ಯವಾಗಿ ಕೇಂದ್ರದ ಮಂತ್ರಿಮಂಡಲದ (ಪ್ರಧಾನಿಯನ್ನು ಒಳಗೊಂಡಂತೆ) ಮೇಲೆ ನಿಯಂತ್ರಣ (ಹತೋಟಿ) ಇಟ್ಟುಕೊಳ್ಳುವುದು. ಒಂದು ವೇಳೆ ವರ್ತನೆ ಅಥವಾ ನೀತಿಗಳು ಅಸಮಾಧಾನಕರವಾಗಿದ್ದರೆ ಬಹುಮತದಿಂದ ಮಂತ್ರಿಮಂಡಲವನ್ನು ವಜಾ ಮಾಡುವುದು ಸಹ ಸಂಸತ್ತಿನ ಪ್ರಮುಖ ಅಧಿಕಾರವಾಗಿದೆ.

**2. ಹಣಕಾಸಿನ ಅಧಿಕಾರ:** ಹಣಕಾಸಿನ ವಿಧೇಯಕವನ್ನು (ಬಿಲ್) ಮೊದಲು ಲೋಕಸಭೆಯಲ್ಲಿಯೇ ಮಂಡಿಸಬೇಕು. ಸಂಸತ್ತಿನ ಒಪ್ಪಿಗೆಯಿಲ್ಲದೆ ಸರ್ಕಾರವು ಯಾವುದೇ ತೆರಿಗೆಯನ್ನು ಸಂಗ್ರಹಿಸುವಂತಿಲ್ಲ ಹಾಗೂ ಹಣವನ್ನು ವೆಚ್ಚ ಮಾಡುವಂತಿಲ್ಲ. ಅಂದರೆ ದೇಶದ ಹಣಕಾಸಿನ ವ್ಯವಸ್ಥೆಯ ಮೇಲೆ ಸಂಸತ್ತಿಗೆ ಪೂರ್ಣ ನಿಯಂತ್ರಣವಿದೆ ಎಂದಾಯಿತು.

**3. ಆಡಳಿತದ ಅಧಿಕಾರ:** ಸಂಸತ್ತಿನಲ್ಲಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಮಂತ್ರಿಗಳು ಜವಾಬ್ದಾರಿಯಿಂದ ಉತ್ತರ ನೀಡಬೇಕಾಗುವುದು. ಸದಸ್ಯರು ಮಂತ್ರಿಗಳ ಕಾರ್ಯನಿರ್ವಹಣೆಯನ್ನು ಗಮನಿಸಿ, ಮಾಡುವ ತಪ್ಪುಗಳನ್ನು ಮತ್ತು ಅಧಿಕಾರದ ದುರುಪಯೋಗವನ್ನು ಟೀಕಿಸಬಹುದು.

© KTBS NOT TO BE REPUBLISHED

**4. ಸಂವಿಧಾನ ತಿದ್ದುಪಡಿ ಅಧಿಕಾರ:** ಸಾಮಾನ್ಯವಾಗಿ ಸಂಸತ್ತು ಸಂವಿಧಾನ ತಿದ್ದುಪಡಿ ಮಾಡುವ ಅಧಿಕಾರ ಹೊಂದಿದೆ.




@KTBS NOT TO BE REPUBLISHED

**ಕೇಂದ್ರ ಕಾರ್ಯಾಂಗ:** ಕೇಂದ್ರ ಕಾರ್ಯಾಂಗವು ರಾಷ್ಟ್ರಪತಿ, ಪ್ರಧಾನಿ ಹಾಗೂ ಅವರ ಮಂತ್ರಿಮಂಡಲಗಳನ್ನೊಳಗೊಂಡಿದೆ.

## ರಾಷ್ಟ್ರಪತಿ

ಭಾರತ ಗಣರಾಜ್ಯದ ಅತ್ಯುನ್ನತ ಅಧಿಕಾರಿಗೆ 'ರಾಷ್ಟ್ರಪತಿ' ಎನ್ನುವರು. ಇವರನ್ನು ರಾಷ್ಟ್ರದ ಪ್ರಪ್ರಥಮ ಪ್ರಜೆ ಎನ್ನುತ್ತಾರೆ. ಇವರ ಅಧಿಕೃತ ನಿವಾಸವೇ 'ರಾಷ್ಟ್ರಪತಿ ಭವನ'. ಸಂಸತ್ತಿನ ಎರಡು ಸದನಗಳ ಚುನಾಯಿತ ಸದಸ್ಯರು ಮತ್ತು ಎಲ್ಲ ರಾಜ್ಯ ವಿಧಾನಸಭೆಗಳ ಚುನಾಯಿತ ಸದಸ್ಯರು ರಾಷ್ಟ್ರಪತಿಯವರನ್ನು ಚುನಾಯಿಸುತ್ತಾರೆ.

ಭಾರತದ ರಾಷ್ಟ್ರಪತಿಯಾಗಬೇಕಾದರೆ ಅವರಿಗೆ ಕನಿಷ್ಠ 35 ವರ್ಷ ವಯಸ್ಸಾಗಿರಬೇಕು; ಮತ್ತು ಲೋಕಸಭೆಯ ಸದಸ್ಯರಿಗೆ ಇರುವ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕು. ರಾಷ್ಟ್ರಪತಿಯವರ ಅಧಿಕಾರಾವಧಿ ಐದು ವರ್ಷ.



ಸಂಸತ್ ಸದನ, ಹೊಸದಿಲ್ಲಿ

**ಅಧಿಕಾರಗಳು:** (1) ರಾಷ್ಟ್ರಪತಿಯವರು ಲೋಕಸಭೆಯಲ್ಲಿ ಬಹುಮತದ ಬೆಂಬಲ ಪಡೆದ ಪಕ್ಷದ ನಾಯಕರನ್ನು ಪ್ರಧಾನಮಂತ್ರಿಯುವರನ್ನಾಗಿ ನೇಮಿಸುವರು. ಪ್ರಧಾನಮಂತ್ರಿಯವರ ಸಲಹೆ ಮೇರೆಗೆ ಇತರ ಮಂತ್ರಿಗಳನ್ನು ನೇಮಿಸುವರು. (2) ಯಾವುದೇ ಕರಡು ಶಾಸನವು ಕಾನೂನಾಗಲು ರಾಷ್ಟ್ರಪತಿಯವರ ಅಂಕಿತ ಅಗತ್ಯವಾಗಿರುತ್ತದೆ. (3) ರಕ್ಷಣಾಪಡೆಗಳ ಮೇಲಿನ ಸರ್ವೋಚ್ಚ ಅಧಿಕಾರ ಇವರಿಗಿದೆ. ಯುದ್ಧಸಾರುವ ಅಧಿಕಾರವೂ ಇವರಿಗಿದೆ. (4) ಇವರಿಗೆ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವಿದೆ. (5) ಅಪರಾಧಿಗಳಿಗೆ ಕ್ಷಮದಾನ ನೀಡುವ ಮತ್ತು ಶಿಕ್ಷೆಯನ್ನು ಖಾಯಂಗೊಳಿಸುವ ಅಧಿಕಾರವಿದೆ.

**ಉಪರಾಷ್ಟ್ರಪತಿ:** ಕೇಂದ್ರ ಸಂಸತ್ತಿನ ಎರಡೂ ಸದನದ ಸದಸ್ಯರು ಉಪರಾಷ್ಟ್ರಪತಿಯವರನ್ನು ಚುನಾಯಿಸುವರು. ಭಾರತದ ಉಪರಾಷ್ಟ್ರಪತಿ ಆಗಬೇಕಾದರೆ ಅವರಿಗೆ ಕನಿಷ್ಠ 35 ವರ್ಷ ವಯಸ್ಸಾಗಿರಬೇಕು ಮತ್ತು ರಾಷ್ಟ್ರಪತಿಯಾಗಲು ಇರಬೇಕಾದ ಎಲ್ಲ ಅರ್ಹತೆಗಳನ್ನು ಹೊಂದಿರಬೇಕು. ಅವರ ಅಧಿಕಾರಾವಧಿ ಐದು ವರ್ಷ. ಅವರು ರಾಜ್ಯಸಭೆಯ ಅಧ್ಯಕ್ಷರು. ರಾಷ್ಟ್ರಪತಿಯ ಗೈರು ಹಾಜರಿಯಲ್ಲಿ ಅವರ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ.



ರಾಷ್ಟ್ರಪತಿ ಭವನ, ಹೊಸದಿಲ್ಲಿ

© KTBS NOT TO BE REPUBLISHED

## ಪ್ರಧಾನಮಂತ್ರಿ

**ಪ್ರಧಾನಮಂತ್ರಿಯವರ ಮಹತ್ವ:** ಸಂಸದೀಯ ಪದ್ಧತಿಯಲ್ಲಿ ಪ್ರಧಾನಮಂತ್ರಿಯವರ ಪಾತ್ರ ಮಹತ್ವದ್ದಾಗಿದೆ. ದೇಶದ ಭದ್ರತೆಯನ್ನು ಕಾಪಾಡುವುದರಲ್ಲಿ ಇವರ ಜವಾಬ್ದಾರಿ ಅಪಾರವಾದದ್ದು. ಪ್ರಧಾನಿಯವರು–

1 ಲೋಕಸಭೆಯ ನಾಯಕರಾಗಿದ್ದಾರೆ.

2 ಖಾತೆಗಳ ಹಂಚಿಕೆಯ ಅಧಿಕಾರ ಇವರಿಗಿದೆ.

3 ಸರ್ಕಾರದ ಮುಖ್ಯಸ್ಥರಾಗಿದ್ದಾರೆ.

4 ಸಚಿವ ಸಂಪುಟದ ಪುನರ್‌ರಚನೆಯ ಅಧಿಕಾರ ಇವರಿಗಿದೆ.

5 ವಿವಿಧ ಇಲಾಖೆಗಳಿಗೆ ಸಚಿವರನ್ನು ನೇಮಕ ಮಾಡುವಂತೆ ರಾಷ್ಟ್ರಪತಿಯವರಿಗೆ ಶಿಫಾರಸು ಮಾಡುತ್ತಾರೆ.

6 ಸಚಿವರನ್ನು ಪದಚ್ಯುತಿಗೊಳಿಸುವಂತೆ ರಾಷ್ಟ್ರಪತಿಯವರಿಗೆ ಶಿಫಾರಸು ಮಾಡುತ್ತಾರೆ.

**ಕೇಂದ್ರ ಮಂತ್ರಿಮಂಡಲ ರಚನೆ:** ರಾಷ್ಟ್ರಪತಿಯವರು ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕರನ್ನು ಸರ್ಕಾರ ರಚಿಸುವಂತೆ ಆಹ್ವಾನಿಸಿ, ಅವರನ್ನು ಪ್ರಧಾನಮಂತ್ರಿಯಾಗಿ ನೇಮಕ ಮಾಡುತ್ತಾರೆ. ಅನಂತರ ಪ್ರಧಾನಮಂತ್ರಿಯವರ ಸಲಹೆಯ ಮೇರೆಗೆ ಉಳಿದ ಸಚಿವರ ನೇಮಕ ಮಾಡುತ್ತಾರೆ. ಪ್ರಧಾನಿ ಮತ್ತು ಸಚಿವರು ಸೇರಿ ಕೇಂದ್ರ ಮಂತ್ರಿಮಂಡಲ (ಕ್ಯಾಬಿನೆಟ್) ರಚನೆಯಾಗುತ್ತದೆ. ಈ ರೀತಿ ಮಂತ್ರಿಮಂಡಲ ರಚನೆಯಾಗುವ ಪದ್ಧತಿಗೆ 'ಸಂಸದೀಯ ಪದ್ಧತಿ' ('ಕ್ಯಾಬಿನೆಟ್ ಪದ್ಧತಿ') ಎನ್ನುವರು.

ಮಂತ್ರಿಯವರು ಒಂದು ಸಚಿವ ಖಾತೆಯ ರಾಜಕೀಯ ಮುಖ್ಯಸ್ಥರಾಗಿರುತ್ತಾರೆ. ಸಚಿವರ ಹೊಣೆಗಾರಿಕೆಯು ಕ್ಯಾಬಿನೆಟ್ ಪದ್ಧತಿಯ ತಿರುಳಾಗಿದೆ. ಅಂದರೆ ತನ್ನ ಖಾತೆಯ ಕಾರ್ಯನಿರ್ವಹಣೆಗೆ ಮಂತ್ರಿಯವರು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

ಸಚಿವರ ಖಾತೆಗಳನ್ನು ಪ್ರಧಾನಿಯೇ ಹಂಚಿಕೊಡುತ್ತಾರೆ. ಪ್ರಧಾನಿಯವರು ಕೆಲವೊಂದು ಸಂದರ್ಭಗಳಲ್ಲಿ ಯಾವುದೇ ಸಚಿವರ ರಾಜೀನಾಮೆ ಕೇಳಬಹುದು. ಪ್ರಧಾನಮಂತ್ರಿಯವರು ರಾಜೀನಾಮೆ ನೀಡಿದಾಗ, ಅವರ ಸಂಗಡ ಸಚಿವ ಸಂಪುಟವೂ ವಿಸರ್ಜನೆಯಾಗುತ್ತದೆ. ಮಂತ್ರಿಮಂಡಲವು ಲೋಕಸಭೆಗೆ ಬದ್ಧವಾಗಿರುತ್ತದೆ. ಲೋಕಸಭೆಯು ಅವಿಶ್ವಾಸ ಗೊತ್ತುವಳಿ ಮಂಡಿಸಿ ಬಹುಮತ ಸಾಬೀತು ಪಡಿಸಿದರೆ ಮಂತ್ರಿಮಂಡಲ ವಜಾಗೊಳ್ಳುತ್ತದೆ.

© KTBS NOT TO BE REPUBLISHED

### ನಿಮಗೆ ತಿಳಿದಿರಲಿ

1. ಹೊಸದಿಲ್ಲಿಯ ಪಾರ್ಲಿಮೆಂಟ್ ಭವನ, ರಾಷ್ಟ್ರಪತಿ ಭವನ ಮುಂತಾದ ಭವ್ಯ ಕಟ್ಟಡಗಳನ್ನು ಬ್ರಿಟಿಷರ ಆಡಳಿತ ಕಾಲದಲ್ಲಿ ನಿರ್ಮಾಣ ಮಾಡಲಾಗಿತ್ತು. ರಾಷ್ಟ್ರಪತಿ ಭವನದಲ್ಲಿ 340 ಕೊಠಡಿಗಳಿವೆ. ಇದು 1929ರಲ್ಲಿ ಪೂರ್ಣಗೊಂಡಿತು.

2. ಸಂಸತ್ ಸದಸ್ಯರು ಮಾಸಿಕ ವೇತನ ಮತ್ತು ಕ್ಷೇತ್ರ ಭತ್ಯೆ ಪಡೆಯುತ್ತಾರೆ. ಜೊತೆಗೆ ಮೊಬೈಲ್, ದೂರವಾಣಿ, ಕಚೇರಿ ವೆಚ್ಚ, ರಸ್ತೆ ಮೈಲೇಜ್ ಭತ್ಯೆಗಳು, ಉಚಿತ ವಿದ್ಯುತ್, ನೀರು, ಸ್ಥಳೀಯ ದೂರವಾಣಿ ಕರೆಗಳು – ಈ ಎಲ್ಲಾ ಸೌಲಭ್ಯಗಳನ್ನು ಅವರಿಗೆ ಒದಗಿಸಲಾಗಿದೆ.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಕೇಂದ್ರ ಸರ್ಕಾರದ ಮೂರು ಅಂಗಗಳು ಯಾವುವು? ಇವುಗಳ ಕಾರ್ಯಗಳು ಯಾವುವು?

2 ಲೋಕಸಭಾ ಸದಸ್ಯರ ಅರ್ಹತೆಗಳು ಯಾವುವು?

3 ಸಂವಿಧಾನ ತಿದ್ದುಪಡಿ ಮಾಡುವ ಅಧಿಕಾರ ಯಾರಿಗಿದೆ?

4 ಭಾರತ ಗಣರಾಜ್ಯದ ಅತ್ಯುನ್ನತ ಅಧಿಕಾರಿ ಯಾರು?

5 ಪ್ರಧಾನಮಂತ್ರಿಯವರ ಮಹತ್ವವೇನು?

6 ಕೇಂದ್ರ ಮಂತ್ರಿಮಂಡಲ ಹೇಗೆ ರಚನೆಯಾಗುತ್ತದೆ?

### ಚರ್ಚಿಸಿ

ಲೋಕಸಭಾ ಸದಸ್ಯರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲು ನಾವೇನು ಮಾಡಬಹುದು?

### ಚಟುವಟಿಕೆಗಳು

1 ನಿಮ್ಮ ಕ್ಷೇತ್ರದ ಲೋಕಸಭಾ ಸದಸ್ಯರನ್ನು ಭೇಟಿ ಮಾಡಿ ಅವರ ಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಿ.

2 ನಿಮ್ಮ ಶಾಲೆಯಲ್ಲಿ ಲೋಕಸಭಾ ಸದನ ಕಲಾಪಗಳ ಅಣಕು ರೂಪವನ್ನು ಪ್ರದರ್ಶಿಸಿ.

3 ಭಾರತದ ಪ್ರಧಾನಮಂತ್ರಿಗಳ ಪಟ್ಟಿ ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿ.

© KTBS NOT TO BE REPUBLISHED

## ಭಾರತದ ಒಕ್ಕೂಟ

**28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳು.**
**ರಾಜಧಾನಿಗಳನ್ನು ಆವರಣದೊಳಗೆ ಕೊಡಲಾಗಿದೆ.**

### ರಾಜ್ಯಗಳು

1 ಆಂಧ್ರ ಪ್ರದೇಶ (ಅಮರಾವತಿ)
2 ಅರುಣಾಚಲ ಪ್ರದೇಶ (ಇಟಾನಗರ)
3 ಅಸ್ಸಾಂ (ದಿಸ್ಪುರ)
4 ಬಿಹಾರ (ಪಟ್ನಾ)
5 ಗೋವ (ಪಣಜಿ)
6 ಗುಜರಾತ್ (ಗಾಂಧೀನಗರ)
7 ಹರಿಯಾಣ (ಚಂಡಿಗಡ)
8 ಹಿಮಾಚಲ ಪ್ರದೇಶ (ಶಿಮ್ಲಾ)
9 ಕರ್ನಾಟಕ (ಬೆಂಗಳೂರು)
10 ಕೇರಳ (ತಿರುವನಂತಪುರ)
11 ಮಧ್ಯ ಪ್ರದೇಶ (ಭೋಪಾಲ)
12 ಮಹಾರಾಷ್ಟ್ರ (ಮುಂಬಯಿ)
13 ಮಣಿಪುರ (ಇಂಫಾಲ)
14 ಮೇಘಾಲಯ (ಶಿಲ್ಲಾಂಗ್)
15 ಮಿಜೊರಾಂ (ಐಜ್ವಾಲ್)
16 ನಾಗಲ್ಯಾಂಡ್ (ಕೋಹಿಮ)
17 ಒಡಿಶಾ (ಭುಬನೇಶ್ವರ)
18 ಪಂಜಾಬ್ (ಚಂಡೀಗಡ)
19 ರಾಜಸ್ತಾನ (ಜೈಪುರ)
20 ಸಿಕ್ಕಿಂ (ಗ್ಯಾಂಗ್ಟಕ್)
21 ತಮಿಳುನಾಡು (ಚೆನ್ನೈ)
22 ತ್ರಿಪುರ (ಅಗರ್ತಲ)
23 ಉತ್ತರ ಪ್ರದೇಶ (ಲಖನೌ)
24 ಪಶ್ಚಿಮ ಬಂಗಾಳ (ಕೊಲ್ಕತ)
25 ಛತ್ತೀಸ್‌ಗರ್ (ರಾಯಪುರ)
26 ಜಾರ್ಖಂಡ್ (ರಾಂಚಿ)
27 ಉತ್ತರಖಂಡ (ಡೆಹರಾಡೂನ್)
28 ತೆಲಂಗಾಣ (ಹೈದರಾಬಾದ್)

### ಕೇಂದ್ರಾಡಳಿತ ಪ್ರದೇಶಗಳು

1 ಜಮ್ಮು ಮತ್ತು ಕಾಶ್ಮೀರ (ಶ್ರೀನಗರ-ಬೇಸಿಗೆಕಾಲ ಜಮ್ಮು-ಚಳಿಗಾಲ
2 ಲಡಾಖ್ (ಲೆಹ್)
3 ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು (ಪೋರ್ಟ್ ಬ್ಲೇರ್)
4 ಚಂಡಿಗಡ (ಚಂಡಿಗಡ)
5 ದಾದ್ರ ಮತ್ತು ನಗರ ಹವೇಲಿ, ದಮನ್ ಮತ್ತು ದಿಯು (ಸಿಲ್ವಾಸ್ಸಾ)
6 ಲಕ್ಷದ್ವೀಪ (ಕವರತ್ತಿ)
7 ಪುದುಚೆರಿ (ಪುದುಚೆರಿ)
8 ದಿಲ್ಲಿ (ರಾಷ್ಟ್ರೀಯ ರಾಜಧಾನಿ ಪ್ರದೇಶ)

@KTBS NOT TO BE REPUBLISHED

| ಅಧ್ಯಾಯ 10 | ರಾಜ್ಯ ಸರ್ಕಾರ |
|---|---|

A4D3R2

ಈ ಪಾಠದಲ್ಲಿ ರಾಜ್ಯ ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಪರಿಚಯವಿದೆ. ಜೊತೆಗೆ ದ್ವಿಸದನ ವ್ಯವಸ್ಥೆ, ಮೇಲ್ಮನೆ ಮತ್ತು ಕೆಳಮನೆಗಳ ಮಹತ್ವವನ್ನು ನಿರೂಪಣೆ ಮಾಡಲಾಗಿದೆ. ಶಾಸಕರ ಅರ್ಹತೆಗಳು ಹಾಗೂ ಕಾರ್ಯಗಳು; ಮತ್ತು ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಅರ್ಹತೆಗಳು, ಕಾರ್ಯಗಳು ಮತ್ತು ಅಧಿಕಾರಗಳ ಬಗ್ಗೆ ಕೂಡ ಇಲ್ಲಿ ವಿವರಣೆಯಿದೆ.

**ಸಾಮರ್ಥ್ಯಗಳು**

1 ರಾಜ್ಯ ಸರ್ಕಾರದ ರಚನೆ ಮತ್ತು ಕಾರ್ಯಗಳನ್ನು ತಿಳಿಯುವುದು.

2 ರಾಜ್ಯ ಸರ್ಕಾರದ ಕಾರ್ಯವ್ಯಾಪ್ತಿಯನ್ನು ತಿಳಿಯುವುದು.

3 ರಾಜ್ಯಸಭೆ–ವಿಧಾನ ಪರಿಷತ್, ಲೋಕಸಭೆ–ವಿಧಾನಸಭೆ ಇವುಗಳನ್ನು ಪರಸ್ಪರ ಹೋಲಿಸಿ ಅರ್ಥೈಸಿಕೊಳ್ಳುವುದು.

4 ರಾಜ್ಯಪಾಲರ ಅರ್ಹತೆ ಹಾಗೂ ಅಧಿಕಾರ, ಮತ್ತು ಮುಖ್ಯಮಂತ್ರಿಯ ಅಧಿಕಾರ ಹಾಗೂ ಕರ್ತವ್ಯಗಳನ್ನು ಅರಿಯುವುದು.

© KTBS NOT TO BE REPUBLISHED

**ಕೆಳಗಿನ ಚಿತ್ರವನ್ನು ನೋಡಿ.**



ವಿಧಾನಸಭೆಯ ಜಂಟಿ ಅಧಿವೇಶನ

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಶಾಸನಗಳನ್ನು (ಕಾನೂನುಗಳನ್ನು) ಮಾಡುತ್ತಾರೆ. (ಶಾಸಕಾಂಗ)



ವಿಧಾನಸೌಧ, ಬೆಂಗಳೂರು



ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳಿವೆ. ಇವುಗಳ ಅಧಿಕಾರ ವ್ಯಾಪ್ತಿ ಕಡಿಮೆ. ಆದರೂ ಇವುಗಳಿಗೆ ತಮ್ಮದೇ ಆದ ಸ್ವಯಮಾಧಿಕಾರ ಅಥವಾ ಸ್ವಾಯತ್ತತೆ ಇದೆ. ರಾಜ್ಯಗಳು ಮುಖ್ಯವಾಗಿ ಭಾಷೆಗಳ ಆಧಾರದಲ್ಲಿ ರಚನೆಗೊಂಡಿವೆ. ಕರ್ನಾಟಕದಲ್ಲಿ ಕನ್ನಡ ರಾಜ್ಯ ಭಾಷೆ.

ನಮ್ಮ ಸಂವಿಧಾನವು ಎಲ್ಲ ರಾಜ್ಯಗಳಲ್ಲಿ ಏಕಪ್ರಕಾರದ ರಾಜ್ಯಾಡಳಿತವನ್ನು ರೂಪಿಸಿದೆ. ಸಾಮಾನ್ಯವಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮಾದರಿಯನ್ನೇ ಹೊಂದಿದೆ.

©KTBS NOT TO BE REPUBLISHED



ಸುವರ್ಣಸೌಧ, ಬೆಳಗಾವಿ

## ರಾಜ್ಯ ಶಾಸಕಾಂಗ

ಸರ್ಕಾರದ ಮೂರು ಅಂಗಗಳೆಂದರೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ. ರಾಜ್ಯಪಾಲ ಮತ್ತು ವಿಧಾನಮಂಡಲ(ಎರಡೂ ಸದನಗಳು) ಸೇರಿ ರಾಜ್ಯ ಶಾಸಕಾಂಗವಾಗುತ್ತದೆ. ಶಾಸಕಾಂಗವು ರಾಜ್ಯದ ಶಾಸನಗಳನ್ನು ಮಾಡುತ್ತದೆ.

ಭಾರತದ ಆರು ರಾಜ್ಯಗಳಲ್ಲಿ ಮಾತ್ರವೇ ಶಾಸಕಾಂಗವು 'ವಿಧಾನಸಭೆ' ಮತ್ತು 'ವಿಧಾನಪರಿಷತ್ತು' ಎಂಬ ಎರಡು ಸದನಗಳನ್ನು ಒಳಗೊಂಡಿದೆ. ಹೀಗಿದ್ದರೆ 'ದ್ವಿಸದನ ಪದ್ಧತಿ' ಎನ್ನುವರು. ಉಳಿದ ಎಲ್ಲ ರಾಜ್ಯಗಳಲ್ಲಿ ವಿಧಾನಸಭೆ ಮಾತ್ರವೇ ಇದೆ. ಇದು 'ಏಕಸದನ ಪದ್ಧತಿ' ಎನಿಸಿದೆ. ಕರ್ನಾಟಕದಲ್ಲಿ ದ್ವಿಸದನ ಪದ್ಧತಿಯಿದೆ.

## ವಿಧಾನಸಭೆ (ಕೆಳಮನೆ)

**ರಚನೆ:** ಇದು ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಬಂದ ಅಭ್ಯರ್ಥಿಗಳ ಸದನವಾಗಿದೆ. ಕರ್ನಾಟಕ ವಿಧಾನಸಭೆಯಲ್ಲಿ ಒಟ್ಟು 224 ಸ್ಥಾನಗಳಿವೆ.

> ವಿಧಾನ ಸಭೆಗೆ ರಾಜ್ಯಪಾಲರು ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಸೇರಿದ ಒಬ್ಬರನ್ನು ಸದಸ್ಯರನ್ನಾಗಿ ನಾಮಕರಣ ಮಾಡುತ್ತಾರೆ.

NOT TO BE REPUBLISHED ©KTBS

ವಿಧಾನಸಭೆಯ ಸದಸ್ಯರು (ಎಂಎಲ್ಎ) ತಮ್ಮೊಳಗೆ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ (ಸ್ಪೀಕರ್) ಚುನಾಯಿಸುತ್ತಾರೆ. ವಿಧಾನಸಭೆಯ ಅಧಿಕಾರಾವಧಿ ಐದು ವರ್ಷಗಳು. ಇದು ಖಾಯಂ ಸಭೆಯಲ್ಲ. ವಿಧಾನಸಭಾ ಸದಸ್ಯರ ಅರ್ಹತೆಗಳು:

- ಭಾರತದ ಪ್ರಜೆಯಾಗಿರಬೇಕು.
- ಕನಿಷ್ಠ 25 ವರ್ಷ ಆಗಿರಬೇಕು.
- ಸರ್ಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.
- ದಿವಾಳಿಯಾಗಿರಬಾರದು.

**ಶಾಸಕರ ಜವಾಬ್ದಾರಿಗಳು:** ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು, ಜನರ ಸುಖದುಃಖಗಳಲ್ಲಿ ಭಾಗವಹಿಸಿ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅವರ ಮುಖ್ಯ ಜವಾಬ್ದಾರಿಯಾಗಿದೆ. ಜನಕಲ್ಯಾಣ ಯೋಜನೆಗಳಲ್ಲಿಯೂ ಅವರು ವಿಶೇಷ ಕಾಳಜಿ ವಹಿಸತಕ್ಕದ್ದು. ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ, ಅವರಿಗೆ ಸರ್ಕಾರವು ಮಾಸಿಕ ವೇತನ ಮತ್ತು ಕೆಲವು ಸವಲತ್ತುಗಳನ್ನು ನೀಡಿದೆ. ಅವರು ಕೆಲವು ಹಕ್ಕುಗಳು ಮತ್ತು ರಕ್ಷಣೆಗಳನ್ನೂ ಪಡೆದಿದ್ದಾರೆ.

### ವಿಧಾನಸಭೆಯ ಅಧಿಕಾರ ಮತ್ತು ಕಾರ್ಯಗಳು

- ವಾಸ್ತವವಾಗಿ ವಿಧಾನಸಭೆಯೇ ರಾಜ್ಯದ ಶಾಸಕಾಂಗವಾಗಿದೆ.
- ಹಣಕಾಸು ವಿಷಯದಲ್ಲಿ ವಿಧಾನಸಭೆಯ ನಿರ್ಣಯವೇ ಅಂತಿಮ.
- ಪ್ರಮುಖವಾಗಿ ಮಂತ್ರಿಮಂಡಲದ ಮೇಲೆ ನಿಯಂತ್ರಣ (ಹತೋಟಿ) ಇಟ್ಟುಕೊಳ್ಳುವುದು ಅದರ ಕಾರ್ಯವಾಗಿದೆ. ಮಂತ್ರಿಮಂಡಲದ ಕಾರ್ಯ/ನೀತಿಗಳು ಅಸಮಧಾನಕರವಾಗಿದ್ದರೆ ಅವಿಶ್ವಾಸ ಗೊತ್ತುವಳಿ ಮಂಡಿಸಿ ಬಹುಮತ ಸಾಬೀತು ಪಡಿಸಿದರೆ ಮಂತ್ರಿಮಂಡಲವನ್ನು ವಜಾಗೊಳಿಸಬಹುದಾಗಿದೆ.
- ವಿಧಾನಸಭೆಯ ಸದಸ್ಯರು ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುತ್ತಾರೆ.

## ವಿಧಾನಪರಿಷತ್ತು (ಮೇಲ್ಮನೆ)

ರಚನೆ: ವಿಧಾನಪರಿಷತ್ತಿನ ಸದಸ್ಯರ (ಎಂ.ಎಲ್.ಸಿ.) ಸಂಖ್ಯೆಯು ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ 1/3ಕ್ಕಿಂತ ಹೆಚ್ಚಿರಬಾರದು. ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರ ಬಲ 75. ಕೆಲವು ಸದಸ್ಯರನ್ನು ರಾಜ್ಯಪಾಲರು ನಾಮಕರಣ ಮಾಡುತ್ತಾರೆ. ಇನ್ನುಳಿದವರನ್ನು ವಿಧಾನಸಭೆಯ ಸದಸ್ಯರು, ಸ್ಥಳೀಯ ಸಂಸ್ಥೆಗಳು, ನೋಂದಾಯಿಸಿದ ಪದವೀಧರರು ಹಾಗೂ ಶಿಕ್ಷಕರು ಆಯ್ಕೆಮಾಡುತ್ತಾರೆ.

ವಿಧಾನಪರಿಷತ್ತಿನ ಸದಸ್ಯರ ಅಧಿಕಾರಾವಧಿ ಆರು ವರ್ಷಗಳು. ಸದಸ್ಯರಿಗೆ ಕನಿಷ್ಠ 30 ವರ್ಷ ಆಗಿರಬೇಕು.

@KTBS NOT TO BE REPUBLISHED

## ರಾಜ್ಯ ಕಾರ್ಯಾಂಗ

ರಾಜ್ಯ ಕಾರ್ಯಾಂಗವು ರಾಜ್ಯಪಾಲ ಮತ್ತು ಮುಖ್ಯಮಂತ್ರಿ ಹಾಗೂ ಅವರ ಮಂತ್ರಿಮಂಡಲವನ್ನು ಒಳಗೊಂಡಿದೆ. ಸಾಮಾನ್ಯವಾಗಿ ಅದರ ರಚನೆ ಮತ್ತು ಕಾರ್ಯಗಳು ಕೇಂದ್ರ ಕಾರ್ಯಾಂಗವನ್ನು ಹೋಲುತ್ತದೆ.

## ರಾಜ್ಯಪಾಲ

ರಾಜ್ಯಪಾಲರು ಸಾಂವಿಧಾನಿಕವಾಗಿ ಮಾತ್ರವೇ ಕಾರ್ಯಾಂಗದ ಮುಖ್ಯಸ್ಥರು. ಕಾರ್ಯಾಂಗದ ನಿಜವಾದ ಮುಖ್ಯಸ್ಥರು ಮುಖ್ಯಮಂತ್ರಿಯವರು. ರಾಜ್ಯಪಾಲರನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ. ರಾಜ್ಯಪಾಲರ ಅಧಿಕಾರಾವಧಿ ಐದು ವರ್ಷ.

**ರಾಜ್ಯಪಾಲರ ಅರ್ಹತೆ:** ♦ ಭಾರತದ ಪ್ರಜೆಯಾಗಿರಬೇಕು. ♦ ಕನಿಷ್ಠ 35 ವರ್ಷಗಳು ತುಂಬಿರಬೇಕು. ♦ ಸಂಸತ್ತಿನ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು.

**ರಾಜ್ಯಪಾಲರ ಅಧಿಕಾರಗಳು:** ರಾಜ್ಯಪಾಲರು ಮುಖ್ಯಮಂತ್ರಿಯವರನ್ನು ನೇಮಿಸಿ ಅವರ ಸಲಹೆ ಮೇರೆಗೆ ಇತರ ಮಂತ್ರಿಗಳನ್ನು ನೇಮಿಸುತ್ತಾರೆ ♦ ಶಾಸನಸಭೆಗಳು ಅಂಗೀಕರಿಸಿದ ವಿಧೇಯಕವು ಜಾರಿಗೆ ಬರಬೇಕಾದರೆ ರಾಜ್ಯಪಾಲರ ಒಪ್ಪಿಗೆಬೇಕು. ♦ ರಾಜ್ಯದಲ್ಲಿ ಸಾಂವಿಧಾನಿಕ ಅಸ್ಥಿರತೆ ಉಂಟಾದರೆ, ರಾಜ್ಯಪಾಲರು ರಾಷ್ಟ್ರಪತಿಯವರಿಗೆ ವರದಿ ನೀಡಿ ರಾಜ್ಯ ಸರ್ಕಾರವನ್ನು ವಜಾ ಮಾಡಿಸಬಹುದು.

♦ ರಾಷ್ಟ್ರಾಧ್ಯಕ್ಷರು ರಾಜ್ಯ ಸರ್ಕಾರವನ್ನು ವಿಸರ್ಜಿಸಿ, ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿಯಲ್ಲಿರುವ ಅವಧಿಯಲ್ಲಿ, ರಾಜ್ಯಪಾಲರೇ ರಾಜ್ಯದ ಆಡಳಿತವನ್ನು ವಾಸ್ತವವಾಗಿ ನಡೆಸುತ್ತಾರೆ.

## ಮುಖ್ಯಮಂತ್ರಿ

ಕೇಂದ್ರದಲ್ಲಿ ಪ್ರಧಾನಮಂತ್ರಿಯವರು ಸರ್ಕಾರದ ಮುಖ್ಯಸ್ಥರಾಗಿದ್ದರೆ, ರಾಜ್ಯದಲ್ಲಿ ಮುಖ್ಯಮಂತ್ರಿಯವರು ಸರ್ಕಾರದ ಮುಖ್ಯಸ್ಥರು. ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ಅಥವಾ ಗುಂಪಿನ ನಾಯಕರನ್ನು ಮುಖ್ಯಮಂತ್ರಿಯವರನ್ನಾಗಿ ರಾಜ್ಯಪಾಲರು ನೇಮಿಸುತ್ತಾರೆ.

### ಮುಖ್ಯಮಂತ್ರಿಯವರ ಅಧಿಕಾರ ಮತ್ತು ಕರ್ತವ್ಯಗಳು

- ಮುಖ್ಯಮಂತ್ರಿಯವರ ಸಲಹೆ ಮೇರೆಗೆ ರಾಜ್ಯಪಾಲರು ಮಂತ್ರಿಗಳನ್ನು ನೇಮಿಸುತ್ತಾರೆ.
- ಮುಖ್ಯಮಂತ್ರಿಯವರು ಮಂತ್ರಿಗಳಿಗೆ ಖಾತೆಗಳನ್ನು ನೀಡುವ ಮತ್ತು ಬದಲಾಯಿಸುವ ಅಧಿಕಾರವನ್ನು ಪಡೆದಿದ್ದಾರೆ.
- ಮಂತ್ರಿಗಳನ್ನು ಪದಚ್ಯುತಿಗೊಳಿಸುವ ಅಧಿಕಾರ ಮುಖ್ಯಮಂತ್ರಿಯವರಿಗಿದೆ.
- ಕೇಂದ್ರ ಮತ್ತು ರಾಜ್ಯಗಳ ನಡುವೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳುವ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ಪ್ರಮುಖ ಪಾತ್ರವಹಿಸುತ್ತಾರೆ.

ಒಟ್ಟಿನಲ್ಲಿ ರಾಜ್ಯದ ಪ್ರಗತಿಯು ಮುಖ್ಯಮಂತ್ರಿಯವರ ನೇತೃತ್ವ ಹೊಂದಿರುವ ಮಂತ್ರಿಮಂಡಲದ ಉತ್ತಮ ಆಡಳಿತದಿಂದ ಸಾಧ್ಯವಾಗುತ್ತದೆ.

NOT TO BE REPUBLISHED ©KTBS

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ದ್ವಿಸದನ ಪದ್ಧತಿ ಎಂದರೇನು?

2 ಪ್ರಜಾಪ್ರತಿನಿಧಿಗಳು ಇರುವ ಶಾಸನಸಭೆ ಯಾವುದು?

3 ಶಿಕ್ಷಕರ ಪ್ರತಿನಿಧಿಗಳು ಯಾವ ಸದನದ ಸದಸ್ಯರು?

4 ನಿಮ್ಮ ವಿಧಾನಸಭಾ ಕ್ಷೇತ್ರದ ಶಾಸಕರು ಯಾರು?

5 ನಿಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಯಾರು?

6 ರಾಜ್ಯಪಾಲರ ಯಾವುದಾದರೂ ಮೂರು ಅಧಿಕಾರಗಳನ್ನು ಹೇಳಿ.

7 ಮುಖ್ಯಮಂತ್ರಿಯವರ ಮುಖ್ಯ ಅಧಿಕಾರ ಮತ್ತು ಕರ್ತವ್ಯಗಳು ಯಾವುವು?

8 ವಿಧಾನಸಭಾ ಸದಸ್ಯರ ಕರ್ತವ್ಯಗಳನ್ನು ಹೇಳಿ.

### ಚಟುವಟಿಕೆಗಳು

1. ವಿಧಾನಸಭೆ ಮತ್ತು ವಿಧಾನಪರಿಷತ್ ಕಲಾಪಗಳನ್ನು ನಿಮ್ಮ ಹಿರಿಯರೊಂದಿಗೆ ಹೋಗಿ ನೋಡಿ ಇಲ್ಲವೇ ದೂರದರ್ಶನದಲ್ಲಿ ವೀಕ್ಷಿಸಿ.
2. ತರಗತಿಯಲ್ಲಿ ಶಾಲಾ ಮಂತ್ರಿಮಂಡಲವನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ರಚಿಸಿ.
3. ನಿಮ್ಮ ಮತಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಭೇಟಿ ಮಾಡಿ ಅವರ ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಿ.
4. ಕರ್ನಾಟಕದ ಮುಖ್ಯಮಂತ್ರಿಗಳ ಪಟ್ಟಿಯನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿ.

©KTBS NOT TO BE REPUBLISHED

# ಭೂಗೋಳ ವಿಜ್ಞಾನ

N8Z7A1

## ಅಧ್ಯಾಯ 11

## ಭಾರತದ ಪ್ರಾಕೃತಿಕ ವಿಭಾಗಗಳು

**ಪಾಠದ ಪರಿಚಯ**

ಈ ಪಾಠದಲ್ಲಿ ನಮ್ಮ ದೇಶ ಭಾರತ (ಮಾತೃ ಭೂಮಿ) ಹಾಗೂ ನಮ್ಮ ರಾಜ್ಯ ಕರ್ನಾಟಕವೆಂಬ ತಿಳುವಳಿಕೆ. ಪ್ರಪಂಚದಲ್ಲಿ ಭಾರತದ ಸ್ಥಾನ, ಗಾತ್ರ ವಿಸ್ತರಣೆ, ಅದರ ವಿವಿಧ ಭೂ ಸ್ವರೂಪಗಳನ್ನು ತಿಳಿಯುವುದು. ನಮ್ಮ ತಾಯ್ನಾಡು ಕರ್ನಾಟಕದ ಸ್ಥಾನ, ವಿಸ್ತರಣೆ, ನೆರೆಯ ರಾಜ್ಯಗಳು. ಕರ್ನಾಟಕದ ಭೂ ಲಕ್ಷಣಗಳ ಸಂಕ್ಷಿಪ್ತ ಮಾಹಿತಿ ಹಾಗೂ ವಿಭಾಗಗಳನ್ನು ಪರಿಚಯಿಸುವುದು.

**ಸಾಮರ್ಥ್ಯಗಳು**

1 ಭಾರತ ಮತ್ತು ಕರ್ನಾಟಕಗಳ ಭೌಗೋಳಿಕ (ಸ್ಥಾನ) ಹಿನ್ನೆಲೆ ಬಗ್ಗೆ ಅರ್ಥೈಸುವುದು.
2 ಭಾರತ ಮತ್ತು ಕರ್ನಾಟಕ ರಾಜ್ಯದ ವಿವಿಧ ಪ್ರಾಕೃತಿಕ ವಿಭಾಗಗಳನ್ನು ಅರ್ಥೈಸುವುದು.
3 ಭಾರತದ ಮರುಭೂಮಿ ಮತ್ತು ದ್ವೀಪ ಸಮೂಹಗಳ ಬಗ್ಗೆ ಅರಿವು.

NOT TO BE REPUBLISHED ©KTBS

### 1 ಭಾರತ : ಭೌಗೋಳಿಕ ಸನ್ನಿವೇಶ




ಭಾರತವು ಸಂಪೂರ್ಣವಾಗಿ ಉತ್ತರಗೋಳಾರ್ಧ ನೆಲೆಸಿದೆ. ಇದೊಂದು ದಕ್ಷಿಣ ಏಷ್ಯಾದ ಪರ್ಯಾಯ ದ್ವೀಪ, ಭಾರತವು ವಿಸ್ತೀರ್ಣದಲ್ಲಿ ಪ್ರಪಂಚದ 7ನೆಯ ಸ್ಥಾನದಲ್ಲಿದೆ ಹಾಗೂ ಎರಡನೆಯ ಜನಭರಿತ ರಾಷ್ಟ್ರ, ಇದು ಉತ್ತರದ ಕಾಶ್ಮೀರದಿಂದ ದಕ್ಷಿಣದ ಕನ್ಯಾಕುಮಾರಿ ಭೂಶಿರದವರೆಗೆ ಹಾಗೂ ಪಶ್ಚಿಮದ ಕಛ್‌ನಿಂದ ಪೂರ್ವದ ಅರುಣಾಚಲ ಪ್ರದೇಶದವರೆಗೆ ವಿಸ್ತರಿಸಿದೆ. ಅಕ್ಷಾಂಶಿಕವಾಗಿ $8^\circ$ ಉತ್ತರದಿಂದ $37^\circ$ ಉತ್ತರ ಅಕ್ಷಾಂಶ ಹಾಗೂ ರೇಖಾಂಶಿಕವಾಗಿ $68^\circ$ ಪೂರ್ವ. ದಿಂದ $97^\circ$ ಪೂರ್ವ ರೇಖಾಂಶಗಳವರೆಗೆ ವಿಸ್ತರಿಸಿದೆ. ಕರ್ಕಾಟಕ ಸಂಕ್ರಾಂತಿ ವೃತ್ತವು ದೇಶದ ಮಧ್ಯಭಾಗದಲ್ಲಿ ಹಾಯ್ದು ಹೋಗಿದೆ.

ಭಾರತದ ನೆರೆಹೊರೆಯ ದೇಶಗಳೆಂದರೆ, ವಾಯುವ್ಯಕ್ಕೆ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರಕ್ಕೆ ನೇಪಾಳ, ಭೂತಾನ ಮತ್ತು ಚೀನ ಮತ್ತು ಪೂರ್ವಕ್ಕೆ ಬಾಂಗ್ಲಾದೇಶ ಮತ್ತು ಮಯನ್ಮಾರ್ ದೇಶಗಳಿವೆ. ಆಗ್ನೇಯ ದಿಕ್ಕಿನಲ್ಲಿ ಶ್ರೀಲಂಕವಿದ್ದು, ಅದು ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಭಾರತದಿಂದ ಪ್ರತ್ಯೇಕಗೊಂಡಿದೆ.

ಭಾರತವನ್ನು ಸುತ್ತುವರಿದ ಜಲ ಭಾಗಗಳೆಂದರೆ : ಪೂರ್ವಕ್ಕೆ ಬಂಗಾಳಕೊಲ್ಲಿ, ಪಶ್ಚಿಮಕ್ಕೆ ಅರಬ್ಬಿ ಸಮುದ್ರ ಹಾಗೂ ದಕ್ಷಿಣಕ್ಕೆ ಹಿಂದೂ ಮಹಾಸಾಗರಗಳಿವೆ. ಆದ್ದರಿಂದ ಭಾರತವು ಉದ್ದವಾದ ಸಮುದ್ರ ತೀರ ಮತ್ತು ದ್ವೀಪಗಳನ್ನು ಹೊಂದಿದೆ.

ಭಾರತದಲ್ಲಿ 28 ರಾಜ್ಯಗಳು, 8 ಕೇಂದ್ರಾಡಳಿತ ಪ್ರದೇಶಗಳು ಮತ್ತು ದೆಹಲಿಯು ರಾಷ್ಟ್ರೀಯ ರಾಜಧಾನಿ ಪ್ರದೇಶವಾಗಿದೆ.

## ಭಾರತದ ಪ್ರಾಕೃತಿಕ ವಿಭಾಗಗಳು

ಭಾರತದಲ್ಲಿ ವೈವಿಧ್ಯವಾದ ಮೇಲ್ಮೈ ಲಕ್ಷಣಗಳಿವೆ. ಭೂರೂಪಾಕೃತಿಯನ್ನಾಧರಿಸಿ ಭಾರತವನ್ನು ನಾಲ್ಕು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು :

1 ಉತ್ತರದ ಪರ್ವತಗಳು  2 ಉತ್ತರದ ಮೈದಾನಗಳು
3 ಪರ್ಯಾಯ ಪ್ರಸ್ಥಭೂಮಿ  4 ಕರಾವಳಿ ಮೈದಾನಗಳು

NOT TO BE REPUBLISHED @KTBS

**1 ಉತ್ತರದ ಪರ್ವತಗಳು:** ಇದು ಬಹಳಷ್ಟು ಮಟ್ಟಿಗೆ ಹಿಮಾಲಯ ಪರ್ವತ ಸರಣಿಗಳನ್ನೊಳಗೊಂಡಿದೆ. ದೇಶದ ಉತ್ತರ, ಈಶಾನ್ಯ ಮತ್ತು ಪೂರ್ವಭಾಗಗಳಿಗೆ ಹಿಮಾಲಯಗಳು ನೈಸರ್ಗಿಕ ಗಡಿಯಂತಿವೆ. ಇವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳಾಗಿದ್ದು, ಹಿಮದಿಂದಾವೃತವಾಗಿವೆ. ಅವುಗಳಲ್ಲಿ ಹಲವು ಅತ್ಯಂತ ಎತ್ತರವಾದ ಶಿಖರ, ಆಳವಾದ ಕಣಿವೆ ಕಂದರ, ಹಿಮನದಿ, ಪರ್ವತ ಘಾಟಿ ಮೊದಲಾದ ಸ್ವರೂಪಗಳಿವೆ. ಇಲ್ಲಿನ ಮೌಂಟ್ ಎವರೆಸ್ಟ್ ಶಿಖರವು (8848 ಮೀ.) ಪ್ರಪಂಚದಲ್ಲೇ ಎತ್ತರವಾದುದು. ಆದರೆ ಮೌಂಟ್ ಗಾಡ್ವಿನ್ ಅಸ್ಟಿನ್ (k2, 8611 ಮೀ.) ಭಾರತದ ಅತ್ಯಂತ ಎತ್ತರವಾದ ಶಿಖರ.

ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಹಿಮಾಲಯ ಪರ್ವತಗಳ ಪಾತ್ರವು ಮಹತ್ವವುಳ್ಳದ್ದು. ಅವು ಸ್ವಾಭಾವಿಕ ಗಡಿಯಂತೆ ವರ್ತಿಸುತ್ತವೆ. ಮಧ್ಯ ಏಷ್ಯಾದಿಂದ ಬೀಸಿ ಬರುವ ಶೀತಗಾಳಿಗಳನ್ನು ತಡೆಯುತ್ತವೆ ಮತ್ತು ಮಾನ್ಸೂನ್ ಮಾರುತಗಳನ್ನು ನಿಯಂತ್ರಿಸಿ ಹೆಚ್ಚು ಮಳೆಯನ್ನು ಸುರಿಸುತ್ತವೆ. ಅನೇಕ ನದಿಗಳಿಗೆ ಉಗಮಸ್ಥಾನ ಹಾಗೂ ಹಲವು ಗಿರಿಧಾಮಗಳಿಗೆ ನೆಲೆಯಾಗಿವೆ.

**2. ಉತ್ತರದ ಮೈದಾನಗಳು :** ಇವು ಹಿಮಾಲಯ ಪರ್ವತ ಮತ್ತು ಪರ್ಯಾಯ ಪ್ರಸ್ಥಭೂಮಿಗಳ ನಡುವೆ ವಿಸ್ತರಿಸಿವೆ. ಹಿಮಾಲಯ ಪರ್ವತಗಳಲ್ಲಿ ಉಗಮ ಹೊಂದಿ ಇಲ್ಲಿ ಹರಿಯುವ ಸಟ್ಲೇಜ್, ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪ ನದಿಗಳು ತಂದು

ಸಂಚಯ ಮಾಡಿದ ಮೆಕ್ಕಲಿನಿಂದ ಇವು ನಿರ್ಮಾಣವಾಗಿವೆ. ಹೀಗಾಗಿ ಇವು ಫಲವತ್ತಾದ, ವಿಸ್ತಾರವಾದ ಹಾಗೂ ಸಮತಟ್ಟಾದ ಮೈದಾನಗಳಾಗಿವೆ. ಇವು ಕೃಷಿ, ಕೈಗಾರಿಕೆ, ಸಾರಿಗೆ, ನಗರ, ಪಟ್ಟಣ ಇತ್ಯಾದಿಗಳ ಅಭಿವೃದ್ಧಿಗೆ ಪ್ರೋತ್ಸಾಹವಾಗಿವೆ. ಈ ಎಲ್ಲ ಅನುಕೂಲಗಳಿಂದ ಈ ಮೈದಾನಗಳು ಅಧಿಕ ಜನಸಾಂದ್ರತೆಯನ್ನು ಹೊಂದಿವೆ.




ಭಾರತದ ಪ್ರಾಕೃತಿಕ ವಿಭಾಗಗಳು

**3. ಪರ್ಯಾಯ ಪ್ರಸ್ಥಭೂಮಿ:** ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಇದು ಹೆಚ್ಚು ವಿಸ್ತಾರವಾದುದು. ಉತ್ತರ ಭಾರತದ ಮೈದಾನದಿಂದ ದಕ್ಷಿಣ ಭಾಗದಲ್ಲಿದ್ದು ಬಹುಪಾಲು ಪುರಾತನ ಕಠಿಣವಾದ ಶಿಲೆಗಳಿಂದ ರಚನೆಯಾಗಿದೆ. ನರ್ಮದಾ–ಸೋನೆ ಸೀಳು ಕಣಿವೆಯು

ಈ ವಿಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಇದರಿಂದ ಉತ್ತರದ ಭಾಗವನ್ನು ಮಾಳ್ವ ಪ್ರಸ್ಥಭೂಮಿ ಎಂತಲೂ ಮತ್ತು ದಕ್ಷಿಣದ ಭಾಗವನ್ನು ದಖನ್ ಪ್ರಸ್ಥಭೂಮಿ ಎಂತಲೂ ಕರೆಯಲಾಗಿದೆ.

**ಮಾಳ್ವ ಪ್ರಸ್ಥ**ಭೂಮಿಯು ಉತ್ತರದಲ್ಲಿ ಅರಾವಳಿ ಮತ್ತು ದಕ್ಷಿಣದಲ್ಲಿ ವಿಂಧ್ಯ ಪರ್ವತಗಳಿಂದ ಸುತ್ತುವರಿದಿದೆ. ಅರಾವಳಿ ಸರಣಿಗಳಲ್ಲಿ ಗುರುಶಿಕ್ವಾರ್ ಎಂಬುದು (1722 ಮೀ) ಅತ್ಯಂತ ಎತ್ತರವಾದ ಶಿಖರ.

**ದಖನ್ ಪ್ರಸ್ಥಭೂಮಿ**ಯು ಉತ್ತರದಲ್ಲಿ ಸಾತ್ಪುರ, ಮೈಕೇಲ, ಅಮರಕಂಟಕ ಮತ್ತು ರಾಜಮಹಲ್ ಬೆಟ್ಟಗಳು, ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳು ಮತ್ತು ಪೂರ್ವದಲ್ಲಿ ಪೂರ್ವ ಘಟ್ಟಗಳಿಂದ ಸುತ್ತುವರಿದಿದೆ. ಪಶ್ಚಿಮ ಘಟ್ಟಗಳು ದಕ್ಷಿಣದ ಕಡೆಗೆ ಅಣ್ಣಾಮಲೈ, ಕಾರ್ಡಮಮ್, ಪಳನಿ ಬೆಟ್ಟ ಇತ್ಯಾದಿಯಾಗಿ ಮುಂದುವರಿಯುತ್ತವೆ. ಅಣ್ಣಾಮಲೈನಲ್ಲಿರುವ 'ಅಮುಡಿ' (2695 ಮೀ.) ಎಂಬುದು ದಕ್ಷಿಣ ಭಾರತದಲ್ಲೇ ಅತ್ಯಂತ ಎತ್ತರವಾದ ಶಿಖರ, ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ. ಇಲ್ಲಿ ಉದಕ ಮಂಡಲವೆಂಬ ಪ್ರಸಿದ್ಧ ಗಿರಿಧಾಮವಿದೆ. ಪೂರ್ವ ಘಟ್ಟಗಳಿಗಿಂತ ಪಶ್ಚಿಮ ಘಟ್ಟಗಳು ಎತ್ತರವಾಗಿವೆ. ಪಶ್ಚಿಮ ಘಟ್ಟಗಳಲ್ಲಿ ಹಲವು ದಕ್ಷಿಣ ಭಾರತದ ನದಿಗಳು ಉಗಮವಾಗುತ್ತವೆ.

ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜ ಸಂಪತ್ತುಗಳನ್ನು ಹೊಂದಿದೆ. ಇಲ್ಲಿ ಹರಿಯುವ ನದಿಗಳು ಬೆಳೆಗಳ ಸಾಗುವಳಿಗೆ ನೆರವಾಗುತ್ತವೆ. ಹಾಗೂ ಹಲವು ಜಲಪಾತಗಳಿದ್ದು ಅವು ಜಲವಿದ್ಯುತ್ ತಯಾರಿಕೆಗೆ ಉಪಯುಕ್ತ.

**4. ಕರಾವಳಿ ಮೈದಾನಗಳು :** ಪರ್ಯಾಯ ಪ್ರಸ್ಥಭೂಮಿಯ ಎರಡೂ ಬದಿ(ಪಕ್ಕ)ಗಳು ಕರಾವಳಿ ಮೈದಾನಗಳಿಂದ ಆವರಿಸಿದೆ. ಅದನ್ನು ಪಶ್ಚಿಮ ತೀರ ಮೈದಾನ ಮತ್ತು ಪೂರ್ವ ತೀರ ಮೈದಾನವೆಂದು ವಿಂಗಡಿಸಬಹುದು.

ಪಶ್ಚಿಮ ಕರಾವಳಿಯು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇದೆ. ಇದು ಕಚ್ (ಉತ್ತರ)ನಿಂದ ಕನ್ಯಾಕುಮಾರಿ ಭೂಶಿರ(ದಕ್ಷಿಣ)ದ ವರೆಗೆ ವಿಸ್ತರಿಸಿದೆ. ಇದು ನೇರವಾಗಿದ್ದು ಕಿರಿದಾದ ಶಿಲಾರಚಿತ ಸ್ವರೂಪವುಳ್ಳದ್ದು.

ಪೂರ್ವ ಕರಾವಳಿಯು ಬಂಗಾಳಕೊಲ್ಲಿ ಮತ್ತು ಪೂರ್ವ ಘಟ್ಟಗಳ ಮಧ್ಯೆ, ಉತ್ತರದಲ್ಲಿ ಗಂಗಾ ನದಿಮುಖಜದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. ಇದು ಅಗಲವಾಗಿದೆ. ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಪ್ರಮುಖ ಬಂದರುಗಳಿವೆ.

## ದ್ವೀಪಗಳು

ಭಾರತದ ಪ್ರಾಂತೀಯ ಜಲರಾಶಿಗಳಲ್ಲಿ 247 ದ್ವೀಪಗಳಿವೆ. ಅವುಗಳಲ್ಲಿ 204 ಬಂಗಾಳಕೊಲ್ಲಿಯಲ್ಲಿವೆ. ಅವುಗಳನ್ನು ಅಂಡಮಾನ್-ನಿಕೋಬಾರ್ ದ್ವೀಪಗಳೆಂದು

©KTBS NOT TO BE REPUBLISHED

ಕರೆಯಲಾಗಿದೆ. ಉಳಿದ 43 ದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು, ಅವುಗಳನ್ನು ಲಕ್ಷದ್ವೀಪಗಳು ಎನ್ನುವರು. ಅಂಡಮಾನ್ ನಿಕೋಬಾರ್ ದ್ವೀಪಗಳು ಜ್ವಾಲಾಮುಖಿಜನಿತ ಗಟ್ಟಿಶಿಲೆಗಳಿಂದ ರಚನೆಯಾಗಿವೆ. ಆದರೆ ಲಕ್ಷದ್ವೀಪಗಳು 'ಹವಳ ದಿಣ್ಣೆ'ಗಳಿಂದ ನಿರ್ಮಾಣವಾದವು.

### ಮರುಭೂಮಿ

ಭಾರತದಲ್ಲೊಂದು ಮರುಭೂಮಿಯಿದೆ. ಅದನ್ನು 'ಥಾರ್ ಮರುಭೂಮಿ' ಎನ್ನುವರು. ಇದು ಭಾರತದ ವಾಯವ್ಯ ಭಾಗದಲ್ಲಿ ವಿಸ್ತರಿಸಿದೆ. ಇದರ ವಿಸ್ತೀರ್ಣದಲ್ಲಿ ಮೂರನೇ ಎರಡು ಭಾಗ ರಾಜಸ್ತಾನದಲ್ಲಿದೆ. ಉಳಿದ ಭಾಗವು ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಹರಡಿದೆ. ಮರುಭೂಮಿಯಲ್ಲಿ ಕೆಲವು ಉಪ್ಪಿನ ಸರೋವರಗಳು ಕಂಡುಬರುತ್ತವೆ. ಅವುಗಳಿಗೆ ಕರ್ನಾಟಕ ರಾಜ್ಯ "ಪ್ಲಾಯಾ" ಎನ್ನುವರು. ಸಾಮಾನ್ಯ ಉಪ್ಪು ಪೂರೈಸುವಂತಹ ಹಲವು ಲವಣೀಯ ಸರೋವರಗಳಿವೆ. ಉದಾ : ಸಾಂಬಾರ್, ದಿಡ್ವಾನ್, ಸಾರಗೋಲ್ ಇತ್ಯಾದಿ. ಸಾಂಬಾರ್ ಸರೋವರ ಭಾರತದ ಅತಿ ವಿಸ್ತಾರವಾದ ಉಪ್ಪಿನ ಸರೋವರ.




ಭಾರತದಲ್ಲಿ ಕರ್ನಾಟಕ

## 2. ಕರ್ನಾಟಕದ ಭೌಗೋಳಿಕ ಸನ್ನಿವೇಶ

ನಮ್ಮ ರಾಜ್ಯವಾದ ಕರ್ನಾಟಕವು ಭಾರತದ ನೈಋತ್ಯ ಭಾಗದಲ್ಲಿದೆ. ವಿಸ್ತೀರ್ಣದಲ್ಲಿ ಭಾರತದ ರಾಜ್ಯಗಳಲ್ಲಿ ಇದು 8ನೆಯ ದೊಡ್ಡ ರಾಜ್ಯ. ಇದು 11° ಮತ್ತು 18° ಉತ್ತರ ಅಕ್ಷಾಂಶ ಹಾಗೂ 74° ಮತ್ತು 78° ಪೂರ್ವ ರೇಖಾಂಶ ನಡುವೆ ವಿಸ್ತರಿಸಿದೆ.

ನಮ್ಮ ರಾಜ್ಯವು ಜಲ ಮತ್ತು ನೆಲ ಮೇರೆಗಳೆರಡನ್ನೂ ಹೊಂದಿದೆ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವ ದಿಕ್ಕಿನಲ್ಲಿ ಆಂಧ್ರ ಮತ್ತು ತೆಲಂಗಾಣ ಹಾಗೂ ನೈಋತ್ಯದಲ್ಲಿ ಕೇರಳ ರಾಜ್ಯಗಳಿವೆ. ಪಶ್ಚಿಮದಲ್ಲಿ ಸಮುದ್ರವಿದೆ. ರಾಜ್ಯದಲ್ಲಿ 31 ಜಿಲ್ಲೆ ಮತ್ತು 227 ತಾಲ್ಲೂಕುಗಳಿವೆ.

@KTBS NOT TO BE REPUBLISHED

## ಕರ್ನಾಟಕ : ಪ್ರಾಕೃತಿಕ ವಿಭಾಗಗಳು

ಕರ್ನಾಟಕವು ಭಾರತದ ಪರ್ಯಾಯ ಪ್ರಸ್ಥಭೂಮಿಯ ಒಂದು ಭಾಗವಾಗಿದ್ದು, ವಿವಿಧ ಮೇಲ್ಮೈ ಲಕ್ಷಣಗಳನ್ನು ಹೊಂದಿದೆ. ಪ್ರಾಕೃತಿಕ ರೂಪಾಕೃತಿಯನ್ನಾಧರಿಸಿ ಕರ್ನಾಟಕವನ್ನು ಮೂರು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು :

1. ಕರಾವಳಿ ಪ್ರದೇಶ, 2. ಮಲೆನಾಡು ಮತ್ತು 3. ಮೈದಾನ.

**1. ಕರಾವಳಿ ಪ್ರದೇಶ :** ಇದು ಕರ್ನಾಟಕದ ಪಶ್ಚಿಮ ಭಾಗ, ಮಲೆನಾಡು ಮತ್ತು ಅರಬೀ ಸಮುದ್ರಗಳ ನಡುವೆ ಕಂಡುಬರುತ್ತದೆ. ಇದು ಉತ್ತರದಲ್ಲಿ ಗೋವಾ ತೀರದಿಂದ ದಕ್ಷಿಣದಲ್ಲಿ ಕೇರಳ ತೀರದವರೆಗೆ (324 ಕಿ.ಮೀ.) ವ್ಯಾಪಿಸಿದೆ. ಇದರಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸಮುದ್ರ ತೀರಗಳು ಸೇರಿವೆ.



NOT TO BE REPUBLISHED @KTBS

ಕರ್ನಾಟಕದ ಪ್ರಾಕೃತಿಕ ವಿಭಾಗಗಳು

ರಾಜ್ಯದ ಕರಾವಳಿ ಉತ್ತರದಲ್ಲಿ ಕಿರಿದಾಗಿದ್ದು ದಕ್ಷಿಣದಲ್ಲಿ ಅಗಲವಾಗಿದೆ. ಈ ಮೂಲಕ ಕರ್ನಾಟಕದ ಪಶ್ಚಿಮಕ್ಕೆ ಹರಿಯುವ ಅನೇಕ ನದಿಗಳು ದಾಟುತ್ತವೆ. ತೀರಕ್ಕೆ ಸಮೀಪದಲ್ಲಿ ಕೆಲವು ದ್ವೀಪಗಳಿವೆ. ಉದಾ: ಸೇಂಟ್‌ಮೇರಿ ದ್ವೀಪ (ಕೋಕನಟ್ ದ್ವೀಪ) ಇತ್ಯಾದಿ. ಈ ಕರಾವಳಿಯಲ್ಲಿ ಭಾರತದ ಪ್ರಮುಖ ಬಂದರುಗಳಲ್ಲಿ ಒಂದಾದ ನವಮಂಗಳೂರು ಬಂದರಿದೆ. ಅದನ್ನು 'ಕರ್ನಾಟಕದ ಹೆಬ್ಬಾಗಿಲು' ಎನ್ನುವರು.

**2. ಮಲೆನಾಡು:** ಇದು ಗುಡ್ಡಕಾಡು ಪ್ರದೇಶವಾಗಿದ್ದು, ಕರಾವಳಿ ಮತ್ತು ಮೈದಾನಗಳ ನಡುವೆ ವಿಸ್ತರಿಸಿದೆ. ಇದನ್ನು 'ಸಹ್ಯಾದ್ರಿ ಸರಣಿಗಳು' ಎಂತಲೂ ಕರೆಯುವುದು ಜನಪ್ರಿಯವಾಗಿದೆ. ಇದೊಂದು ಕರ್ನಾಟಕದ ಅತಿ ಪ್ರಮುಖ ಪ್ರಾಕೃತಿಕ ವಿಭಾಗ, ಇಲ್ಲಿ ಹೆಚ್ಚು ಮಳೆ ಬೀಳುವುದರಿಂದ ದಟ್ಟವಾದ ಅರಣ್ಯ ಹಾಗೂ ವನ್ಯಧಾಮಗಳಿವೆ. ಅನೇಕ ನದಿಗಳು ಇಲ್ಲಿ ಉಗಮವಾಗುತ್ತವೆ. ಸುಂದರವಾದ ಜಲಪಾತಗಳು (ಉದಾ: ಜೋಗ್ ಜಲಪಾತ) ಹಾಗೂ ಪ್ರವಾಸಿ ಕೇಂದ್ರಗಳಿವೆ. ರಾಜ್ಯದಲ್ಲೇ ಅತಿ ಹೆಚ್ಚು ಮಳೆ ಬೀಳುವ 'ಆಗುಂಬೆ' ಈ ವಿಭಾಗದಲ್ಲಿದೆ. ಕೆಲವು ಎತ್ತರವಾದ ಬೆಟ್ಟಗಳೂ ಇವೆ. ಅವುಗಳಲ್ಲಿ ಒಂದಾದ 'ಮುಳ್ಳಯ್ಯನಗಿರಿ' (1913 ಮೀ.) ರಾಜ್ಯದಲ್ಲೇ ಎತ್ತರವಾದುದು.

**3. ಮೈದಾನ ಪ್ರದೇಶ:** ಇದು ಮಲೆನಾಡಿನಿಂದ ಪೂರ್ವ ಭಾಗದಲ್ಲಿದ್ದು, ಏರುದಿಣ್ಣೆಗಳಿಂದ ಕೂಡಿದ ಮೇಲ್ಮೈ ಲಕ್ಷಣಗಳನ್ನು ಹೊಂದಿದೆ. ಇದನ್ನು ಈ ಪ್ರದೇಶದ ಮಧ್ಯ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿಯನ್ನಾಧರಿಸಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ: ಉತ್ತರ ಮೈದಾನ ಮತ್ತು ದಕ್ಷಿಣ ಮೈದಾನ

**i) ಉತ್ತರ ಮೈದಾನ:** ಸಮತಟ್ಟಾದ ಮೇಲ್ಮೈವುಳ್ಳ ವಿಶಾಲವಾದ ಪ್ರಸ್ಥಭೂಮಿ. ಅಲ್ಲಲ್ಲಿ ಕೆಲವು ಚಪ್ಪಟೆ ಮೇಲ್ತುದಿಯನ್ನುಳ್ಳ ಬೆಟ್ಟಗಳಿವೆ. ಈ ಮೈದಾನದ ಭಾಗವು ಬಸಾಲ್ಟ್ ಶಿಲೆಗಳಿಂದ ರಚಿತವಾಗಿದ್ದು ಕಪ್ಪು ಮಣ್ಣಿನಿಂದ ಆವರಿಸಿದೆ. ಇದು ಪೂರ್ವದ ಕಡೆಗೆ ಇಳಿಜಾರು ಹೊಂದಿದೆ. ಇದನ್ನು ಅನುಸರಿಸಿ ಕೃಷ್ಣಾ ಮತ್ತು ಭೀಮಾ ನದಿಗಳು ಹರಿಯುತ್ತವೆ. ಉತ್ತರ ಮೈದಾನವು ಅತಿ ಕಡಿಮೆ ಮಳೆಯನ್ನು ಪಡೆಯುತ್ತದೆ.

**ii) ದಕ್ಷಿಣ ಮೈದಾನ :** ಇದನ್ನು ಮೈಸೂರು ಪ್ರಸ್ಥಭೂಮಿ ಎಂದು ಕರೆಯಲಾಗಿದೆ. ಇದು ಸಾಕಷ್ಟು ಏರುದಿಣ್ಣೆಗಳನ್ನುಳ್ಳ ಮೇಲ್ಮೈ ಲಕ್ಷಣ ಹಾಗೂ ಬೆಟ್ಟಗಳ ಸಾಲುಗಳನ್ನು ಹೊಂದಿದೆ. ಅವುಗಳೆಂದರೆ : ಬಿಳಿಗಿರಿರಂಗನ ಬೆಟ್ಟ, ಮಲೆಮಹಾದೇಶ್ವರ ಬೆಟ್ಟ, ನಂದಿ ಬೆಟ್ಟ, ಚಾಮುಂಡಿ ಬೆಟ್ಟ ಮೊದಲಾದವು. ಉತ್ತರ ಮೈದಾನದಂತೆ ಇದೂ ಸಹ ಪೂರ್ವದ ಕಡೆಗೆ ಇಳಿಜಾರಾಗಿದೆ. ಅದನ್ನನುಸರಿಸಿ ಕಾವೇರಿ ನದಿ ಹರಿಯುವುದು. ಈ ಪ್ರಾಕೃತಿಕ ವಿಭಾಗದ ಬಹುಭಾಗವು ಕೆಂಪು ಮಣ್ಣಿನಿಂದ ಕೂಡಿದೆ. ಉತ್ತರ ಮೈದಾನಕ್ಕಿಂತ ಈ ವಿಭಾಗದಲ್ಲಿ ಹೆಚ್ಚು ಮಳೆ ಬೀಳುವುದು.

NOT TO BE REPUBLISHED ©KTBS

### ಹೊಸ ಪದಗಳು

ಪರ್ಯಾಯ ದ್ವೀಪ, ವೈವಿಧ್ಯ, ಸಮುದ್ರತೀರ (ಕರಾವಳಿ), ಪ್ರಾಕೃತಿಕ ವಿಭಾಗಗಳು, ಹವಳ, ಘಟ್ಟಗಳು, ಬಸಾಲ್ಟ್.

### ನಿಮಗೆ ತಿಳಿದಿರಲಿ

- 'ಇಂಡಿಯ' ಎಂಬ ದೇಶದ ಹೆಸರಿನ ಮೂಲಕ ಗುರುತಿಸಲ್ಪಡುವ ಮಹಾ ಸಾಗರವೇ ಹಿಂದೂ ಮಹಾಸಾಗರ (ಇಂಡಿಯನ್ ಓಶಿಯನ್).
- ಗಂಗಾ ನದಿಯು ಭಾರತದ ಜನರಿಗೆ ಪವಿತ್ರ ನದಿಯಾಗಿದೆ.
- ನಮ್ಮ ದೇಶದ ಮಧ್ಯದಲ್ಲಿ ಹಾಯ್ದು ಹೋಗಿರುವ $82^1/_2{}^0$ ಪೂರ್ವ ರೇಖಾಂಶ ರೇಖೆಯನ್ನಾಧರಿಸಿ ಭಾರತೀಯ ಪ್ರಮಾಣಿತ ಸಮಯ (Indian Standard Time) ನಿರ್ಧರಿಸಲಾಗಿದೆ.
- ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಯಾಣ ಬೆಟ್ಟವು ಎರಡು ಕೋಡಗಲ್ಲುಗಳಿಂದ ನಿರ್ಮಾಣಗೊಂಡಿದೆ. ಇಲ್ಲಿಂದ ತಗ್ಗಿಗೆ ತೊರೆಗಳು ಹರಿಯುತ್ತವೆ. ಇದು ಸುತ್ತಲೂ ದಟ್ಟ ಕಾಡುಗಳಿಂದ ಆವರಿಸಿದ್ದು, ಒಂದು ಪ್ರವಾಸಿ ತಾಣವಾಗಿದೆ.
- ವಿಶಿಷ್ಟವಾದ ಆಫ್ರಿಕ ಮೂಲದ ಸೀಸೆ ಆಕೃತಿಯ ಬೃಹದಾಕಾರದ ಬೇಯೋಬಾಬ್ ಮರದ ತೋಪು ಹಾವೇರಿ ಜಿಲ್ಲೆಯ ಸವಣೂರಿನಲ್ಲಿದೆ. (ಇದನ್ನು ಗೋರಖನಾಥ ವೃಕ್ಷ ಎಂದೂ ಕರೆಯುತ್ತಾರೆ).
- ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ 'ಮುಧೋಳ ಹೌಂಡ್ಸ್' ಎಂಬ ತಳಿಯ ಬೇಟೆನಾಯಿ ಪ್ರಸಿದ್ಧ ಹಾಗೂ ಅವು ವಿದೇಶಗಳಿಗೂ ರಫ್ತಾಗುತ್ತವೆ.
- ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯ ಕೈಮಗ್ಗದ ಬಟ್ಟೆ (ಸೀರೆ), ಇಳಕಲ್‌ನ ರೇಷ್ಮೆ ಸೀರೆ ಮತ್ತು ಅಥಣಿಯ ಪಾದರಕ್ಷೆಗಳು ಪ್ರಸಿದ್ಧ ಮತ್ತು ಅವುಗಳಿಗೆ ಅಪಾರ ಬೇಡಿಕೆಯಿದೆ.
- ರಾಯಚೂರು ಜಿಲ್ಲೆಯ ಮಸ್ಕಿ ಸಮೀಪದ ಗುಡ್ಡವೊಂದು ಮಲಗಿದ ಬುದ್ಧನ ಆಕಾರದಲ್ಲಿದೆ.
- ಬಸವಕಲ್ಯಾಣದ (ಬೀದರ್) ಮುಖಾಂತರ ಹರಿಯುವ ಚುಳುಕಿ ನದಿಯು ಬಸವಣ್ಣನವರಿಗೆ ಸ್ಫೂರ್ತಿದಾಯಕವಾಯಿತು.
- ದಾವಣಗೆರೆಯು ಹತ್ತಿ ಜವಳಿ ಉದ್ದಿಮೆಗೆ ಪ್ರಸಿದ್ಧಿಯಾಗಿತ್ತು. ಅದನ್ನು 'ಕರ್ನಾಟಕದ ಮ್ಯಾನ್‌ಚೆಸ್ಟರ್" ಎಂದು ಕರೆಯಲಾಗಿದೆ.

© KTBS NOT TO BE REPUBLISHED

## ಅಭ್ಯಾಸಗಳು

### ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1 ಜನಸಂಖ್ಯೆ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರಪಂಚದಲ್ಲಿ ಭಾರತದ ಸ್ಥಾನ ಯಾವುದು?

2 ಭಾರತದ ಭೌಗೋಳಿಕ ಸ್ಥಾನವಾವುದು?

3 ಜನಸಂಖ್ಯೆ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಕರ್ನಾಟಕದ ಸ್ಥಾನವೇನು?

4 ಕರ್ನಾಟಕದ ನೆರೆಹೊರೆಯ ರಾಜ್ಯಗಳ ಪಟ್ಟಿಮಾಡಿ.

5 ಭಾರತದ ಪ್ರಾಕೃತಿಕ ವಿಭಾಗಗಳನ್ನು ಹೆಸರಿಸಿ.

6 ಭಾರತದಲ್ಲಿ ಎಷ್ಟು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿವೆ?

7 ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ?

8 ಕರ್ನಾಟಕದ ಪ್ರಾಕೃತಿಕ ವಿಭಾಗಗಳಾವುವು?

9 ಕರಾವಳಿಯನ್ನು ಹೊಂದಿರುವ ಕರ್ನಾಟಕದ ಜಿಲ್ಲೆಗಳನ್ನು ತಿಳಿಸಿ.

10 ಕರ್ನಾಟಕದ ಆಡಳಿತ ವಿಭಾಗಗಳನ್ನು ತಿಳಿಸಿ.

© KTBS NOT TO BE REPUBLISHED

### ಚಟುವಟಿಕೆಗಳು

1 ಭಾರತ ಮತ್ತು ಕರ್ನಾಟಕದ ಬಾಹ್ಯ ನಕ್ಷೆಯಲ್ಲಿ ಪ್ರಾಕೃತಿಕ ವಿಭಾಗಗಳನ್ನು ಗುರುತಿಸುವುದು.

2 ಭಾರತ ಮತ್ತು ಕರ್ನಾಟಕದಲ್ಲಿ ಕಂಡುಬರುವ ಪ್ರಮುಖ ಪರ್ವತ, ಪ್ರಸ್ಥಭೂಮಿ ಮತ್ತು ಮೈದಾನಗಳನ್ನು ಬಾಹ್ಯನಕ್ಷೆಗಳಲ್ಲಿ ಉಪಾಧ್ಯಾಯರ ನೆರವಿನಿಂದ ಗುರುತಿಸಿ,

3 ನಿಮ್ಮ ಸುತ್ತಲಿನ ಪ್ರದೇಶವನ್ನು ವೀಕ್ಷಿಸಿ ಪ್ರಾಕೃತಿಕ ಲಕ್ಷಣಗಳು, ಸಸ್ಯವರ್ಗ ಮತ್ತು ಬೆಳೆಗಳ ಪಟ್ಟಿಯನ್ನು ಸಿದ್ಧಪಡಿಸಿ,

| ಅಧ್ಯಾಯ 12 | ಉತ್ತರ ಅಮೆರಿಕ |
|---|---|

J5H3Y1

## ಪಾಠದ ಪರಿಚಯ

ಕಳೆದ ವರ್ಷ ನೀವು ಏಷ್ಯ, ಯುರೋಪ್ ಮತ್ತು ಆಫ್ರಿಕ ಖಂಡಗಳ ಭೌಗೋಳಿಕ ಲಕ್ಷಣಗಳು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ಅಧ್ಯಯನ ಮಾಡಿದ್ದೀರಿ. ಈ ವರ್ಷ ನೀವು ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್ಟಿಕ್ ಖಂಡಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅರಿಯುವಿರಿ.

ಈ ಪಾಠದಲ್ಲಿ ಉತ್ತರ ಅಮೆರಿಕ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ, ಪ್ರಾಕೃತಿಕ ವಿಭಾಗಗಳು, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ, ವ್ಯವಸಾಯ, ಪ್ರಮುಖ ಖನಿಜಗಳು ಹಾಗೂ ಕೈಗಾರಿಕೆಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಪರಿಚಯಿಸಲಾಗಿದೆ.

## ಸಾಮರ್ಥ್ಯಗಳು

1 ಉತ್ತರ ಅಮೆರಿಕದ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶಗಳನ್ನು ತಿಳಿಯುವುದು.

2 ಉತ್ತರ ಅಮೆರಿಕದ ಪ್ರಾಕೃತಿಕ ವಿಭಾಗಗಳ ವೈವಿಧ್ಯವನ್ನು ಹೋಲಿಕೆ ಮಾಡಿ ಅರಿಯುವುದು.

3 ಉತ್ತರ ಅಮೆರಿಕದ ನದಿ ಹಾಗೂ ಮಹಾಸರೋವರಗಳ ಬಗ್ಗೆ ತಿಳಿದುಕೊಳ್ಳುವುದು.

4 ಉತ್ತರ ಅಮೆರಿಕದ ವೈವಿಧ್ಯ ವಾಯುಗುಣವು ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿವರ್ಗಗಳ ಮೇಲೆ ಬೀರುವ ಪ್ರಭಾವವನ್ನು ತಿಳಿದುಕೊಳ್ಳುವುದು.

5 ಉತ್ತರ ಅಮೆರಿಕದಲ್ಲಿನ ವ್ಯವಸಾಯದ ಅಭಿವೃದ್ಧಿಯನ್ನು ಅರಿತುಕೊಳ್ಳುವುದು.

6 ಪ್ರಮುಖ ಖನಿಜಗಳ ಸಮೃದ್ಧಿಯನ್ನು ಬಳಸಿಕೊಂಡು ಉತ್ತರ ಅಮೆರಿಕವು ಹೇಗೆ ಕೈಗಾರಿಕಾ ಅಭಿವೃದ್ಧಿಯನ್ನು ಹೊಂದಿದೆ ಎಂಬುದನ್ನು ತಿಳಿಯುವುದು.

7 ಉತ್ತರ ಅಮೆರಿಕದ ಜನಸಂಖ್ಯೆಯ ಮೂಲ, ಸಾಂದ್ರತೆ ಹಾಗೂ ಹಂಚಿಕೆಗಳನ್ನು ತಿಳಿಯುವುದು.

©KTBS NOT TO BE REPUBLISHED

ಉತ್ತರ ಅಮೆರಿಕವು ಇತ್ತೀಚೆಗೆ ಕಂಡುಹಿಡಿದ ಖಂಡವಾಗಿದೆ. ಈ ಖಂಡದಲ್ಲಿನ ಬಹುತೇಕ ನಿವಾಸಿಗಳು ಯುರೋಪಿಯನ್ನರು ಮತ್ತು ಇತರ ದೇಶಗಳಿಂದ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ಸ್ಪೇನಿನವರು ಮೆಕ್ಸಿಕೋದ ಚಿನ್ನವನ್ನು ಬಳಕೆ ಮಾಡಿದರೆ, ಫ್ರೆಂಚರು ಕೆನಡದಲ್ಲಿ ಉಣ್ಣೆ (fur) ವ್ಯಾಪಾರವನ್ನು ಲಾಭದಾಯಕವಾಗಿ ಮಾಡಿಕೊಂಡರು. ಬ್ರಿಟಿಷರು ಕೆನಡದ ಅಟ್ಲಾಂಟಿಕ್ ಪ್ರಾಂತ್ಯ ಮತ್ತು ನ್ಯೂಇಂಗ್ಲೆಂಡ್‌ನಲ್ಲಿ ಮೀನುಗಾರಿಕೆ ಮಾಡಿದರಲ್ಲದೆ ಅಲ್ಲಿನ ಅರಣ್ಯವನ್ನು ಲೂಟಿಮಾಡಿದರು.




*ಉತ್ತರ ಅಮೆರಿಕ (ರಾಜಕೀಯ)*

ಉತ್ತರ ಅಮೆರಿಕದ ಹೇರಳವಾದ ಸಂಪನ್ಮೂಲಗಳು ಅಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ತಳಹದಿಯಾಗಿವೆ. ವಿಸ್ತಾರವಾದ ಸ್ಥಳೀಯ ಮಾರುಕಟ್ಟೆ, ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧ, ಉತ್ತಮ ಸಾರಿಗೆ ಮುಂತಾದವುಗಳಿಂದ ಉತ್ತರ ಅಮೆರಿಕವು ಜಗತ್ತಿನ

©KTBS NOT TO BE REPUBLISHED

ಅತಿ ಶ್ರೀಮಂತ ಮತ್ತು ಆರ್ಥಿಕವಾಗಿ ಪ್ರಾಬಲ್ಯ ಹೊಂದಿದ ಖಂಡಗಳಲ್ಲೊಂದಾಗಿದೆ. ಈ ಖಂಡವನ್ನು ಮಾದರಿಯಾಗಿಟ್ಟುಕೊಂಡು ಇತರ ಖಂಡಗಳೊಡನೆ ಹೋಲಿಕೆ ಮಾಡಿ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

## ನೆಲೆ, ಸ್ಥಾನ ಮತ್ತು ವಿಸ್ತೀರ್ಣ

ಉತ್ತರ ಅಮೆರಿಕವು ಸಂಪೂರ್ಣವಾಗಿ ಸಮಭಾಜಕವೃತ್ತದ ಉತ್ತರದಲ್ಲಿ ನೆಲೆಗೊಂಡಿದೆ. ಅದು ಅಕ್ಷಾಂಶಿಕವಾಗಿ $7^0$ ಉತ್ತರ ಅಕ್ಷಾಂಶದಿಂದ $84^0$ ಉತ್ತರ ಅಕ್ಷಾಂಶದವರೆಗೆ ಹಬ್ಬಿದೆ. ಕರ್ಕಾಟಕ ಸಂಕ್ರಾಂತಿ ವೃತ್ತವು ($23\frac{1}{2}\,^0$ ಉ.ಅ) ಈ ಖಂಡದ ದಕ್ಷಿಣದಲ್ಲಿಯೂ ಉತ್ತರ ಮೇರು ವೃತ್ತವು ($66\,\frac{1}{2}^0$ ಉ.ಆರ್ಕ್ಟಿಕ್ ವೃತ್ತ) ಉತ್ತರ ಭಾಗದಲ್ಲಿಯೂ ಹಾದು ಹೋಗಿವೆ. ಉತ್ತರ ಅಮೆರಿಕವು ಪೂರ್ವದಲ್ಲಿ ಅಟ್ಲಾಂಟಿಕ್ ಮಹಾಸಾಗರದಿಂದಲೂ, ಪಶ್ಚಿಮದಲ್ಲಿ ಫೆಸಿಫಿಕ್ ಮಹಾಸಾಗರದಿಂದಲೂ ಮತ್ತು ಉತ್ತರದಲ್ಲಿ ಆರ್ಕ್ಟಿಕ್ (ಉತ್ತರ ಶೀತ) ಸಾಗರದಿಂದಲೂ ಸುತ್ತುವರಿದಿದೆ. ಬೇರಿಂಗ್ ಜಲಸಂಧಿಯು ಇದನ್ನು ಏಷ್ಯ ಖಂಡದಿಂದ ಪ್ರತ್ಯೇಕಿಸಿದೆ. ಪನಾಮ ಭೂಕಂಠದಿಂದಾಗಿ ಇದು ದಕ್ಷಿಣ ಅಮೆರಿಕದೊಂದಿಗೆ ಭೂಸಂಪರ್ಕವನ್ನು ಹೊಂದಿದೆ. ಅಸಂಖ್ಯಾತ ಸಣ್ಣ ಸಣ್ಣ ಜಲಭಾಗಗಳನ್ನು ಇಲ್ಲಿ ಕಾಣಬಹುದು. ಉದಾ:– ಮೆಕ್ಸಿಕೊ ಖಾರಿ, ಹಡ್ಸನ್‌ಕೊಲ್ಲಿ, ಅಲಾಸ್ಕ ಖಾರಿ, ಕ್ಯಾಲಿಫೋರ್ನಿಯ ಖಾರಿ ಇತ್ಯಾದಿ. ವೆಸ್ಟ್ ಇಂಡಿಸ್ ಮತ್ತು ಕ್ಯೂಬಾ ದ್ವೀಪಗಳನ್ನು ಕೆರಬಿಯನ್ ಸಮುದ್ರದಲ್ಲಿ ಕಾಣಬಹುದು. ಕೆನಡದ ಪೂರ್ವ ಕರಾವಳಿಯಲ್ಲಿ ನ್ಯೂಫೌಂಡ್‌ಲ್ಯಾಂಡ್ ಪ್ರದೇಶವಿದೆ. ಆರ್ಕ್ಟಿಕ್ ಮಹಾಸಾಗರದಲ್ಲಿ ಅಸಂಖ್ಯಾತ ದ್ವೀಪಗಳಿದ್ದು, ಅವುಗಳಲ್ಲಿ ಗ್ರೀನ್‌ಲ್ಯಾಂಡ್ ಅತಿ ದೊಡ್ಡದಾಗಿದೆ. ಉತ್ತರ ಅಮೆರಿಕದ ದಕ್ಷಿಣದಲ್ಲಿರುವ ಅಂಚಿನ ಭೂಭಾಗವನ್ನು ಮಧ್ಯ ಅಮೆರಿಕವೆಂದು ಕರೆಯಲಾಗಿದೆ.

ಉತ್ತರ ಅಮೆರಿಕವು ಭೂವಿಸ್ತೀರ್ಣದಲ್ಲಿ (16.46%) ಏಷ್ಯ ಮತ್ತು ಆಫ್ರಿಕಗಳ ನಂತರ ಮೂರನೇ ಅತಿ ದೊಡ್ಡ ಭೂಖಂಡವಾಗಿದೆ. ಇದು ಭಾರತಕ್ಕಿಂತ ಸುಮಾರು ಏಳು ಪಟ್ಟು (24.24 ದಶಲಕ್ಷ ಚ.ಕಿ.ಮೀ) ದೊಡ್ಡದಾಗಿದೆ. ಉತ್ತರ ಅಮೆರಿಕದಲ್ಲಿ 24 ದೇಶಗಳಿವೆ. ಕೆನಡ, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಮೆಕ್ಸಿಕೋ ಈ ಮೂರು ದೇಶಗಳು ಗಾತ್ರದಲ್ಲಿ ದೊಡ್ಡದಾಗಿವೆ. ಉತ್ತರ ಅಮೆರಿಕದ ಭೌತಿಕ ವ್ಯಾಖ್ಯೆಯಲ್ಲಿ ಕೆರಿಬಿಯನ್ ದ್ವೀಪಗಳನ್ನೂ ಸಹ ಸೇರಿಸಲಾಗಿದೆ.

**ನಿಮಗಿದು ತಿಳಿದಿದೆಯೇ?**

| ದೇಶಗಳು | ಅವುಗಳ ವಿಶೇಷತೆ |
|---|---|
| ಮೆಕ್ಸಿಕೋ | – ಟ್ರಾನ್ಸ್ ಕೆನಡಿಯನ್ ರೈಲ್ವೆ |
| ಕೆನಡ | – ಹಿಮ ಹಾಕಿ, ಹಿಮ ಕರಡಿ |
| ಯು.ಎಸ್.ಎ. | – ಗ್ರ್ಯಾಂಡ್ ಕ್ಯಾನಿಯನ್, ಹೋಮ್ಸ್, ಬಾರ್ ರಿಂಗರ್ ಕ್ರೇಟರ್, ವಾಲ್ಕನಾಸ್ |
| ವೆಸ್ಟ್ ಇಂಡಿಸ್ | – ಕ್ರಿಕೆಟ್, ದ್ವೀಪಗಳು |

© KTBS NOT TO BE REPUBLISHED

## ಪ್ರಾಕೃತಿಕ ವಿಭಾಗಗಳು

ಉತ್ತರ ಅಮೆರಿಕ ಖಂಡವನ್ನು ನಾಲ್ಕು ಮುಖ್ಯ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1 ಪಶ್ಚಿಮದ ಪರ್ವತಾವಳಿಗಳು ಅಥವಾ ರಾಕಿ ಪರ್ವತಗಳು

2 ಮಹಾ ಮತ್ತು ಕೇಂದ್ರೀಯ ಮೈದಾನಗಳು

3 ಕೆನಡಿಯನ್ ಭೂಫಲಕ 4. ಅಪಲೇಷಿಯನ್ ಉನ್ನತ ಪ್ರದೇಶಗಳು




ಉತ್ತರ ಅಮೆರಿಕ (ಪ್ರಾಕೃತಿಕ)

## 1 ಪಶ್ಚಿಮದ ಪರ್ವತಾವಳಿಗಳು

ಇವುಗಳು, ಭಾರತದ ಹಿಮಾಲಯ ಪರ್ವತಗಳಂತೆಯೇ ಮಡಿಕೆ ಪರ್ವತ ಶ್ರೇಣಿಗಳಾಗಿವೆ. ಪಶ್ಚಿಮದ ಈ ಪರ್ವತಾವಳಿಗಳು ಉತ್ತರದಲ್ಲಿ ಅಲಾಸ್ಕದಿಂದ ದಕ್ಷಿಣದಲ್ಲಿ ಪನಾಮದವರೆಗೂ ಹಬ್ಬಿವೆ. ಅವು ನಿರಂತರವಾದ ಪ್ರಸ್ಥಭೂಮಿಗಳನ್ನು ಒಳಗೊಂಡಿವೆ. ಉದಾ: ಕೊಲರಾಡೊ, ಮೆಕ್ಸಿಕನ್, ಯೂಕಟನ್ ಪ್ರಸ್ಥಭೂಮಿಗಳು.



*ರಾಕಿ ಪರ್ವತ ಸರಣಿ*



*ಅಲಾಸ್ಕ ಪರ್ವತ ಸರಣಿ*



*ಮ್ಯಾಕ್‌ಕಿನ್ಲೆ ಪರ್ವತ*

ಪಶ್ಚಿಮದ ಪರ್ವತಾವಳಿಗಳಲ್ಲಿ ರಾಕಿ ಪರ್ವತಗಳು ಅತಿ ಪ್ರಮುಖವಾದ ಸರಣಿಗಳಾಗಿವೆ. ಈ ಪ್ರದೇಶದಲ್ಲಿ ಮೌಂಟ್ ಮ್ಯಾಕ್‌ಕಿನ್ಲೆ (6194 ಮೀ) ಅತಿ ಎತ್ತರವಾದ ಶಿಖರವಾಗಿದ್ದರೆ, ಮೃತ್ಯುಕಣಿವೆಯು (ಸಮುದ್ರ ಮಟ್ಟದಿಂದ 86 ಮೀ.ನಷ್ಟು ತಗ್ಗಾದ) ಅತಿ ತಗ್ಗಾದ ಭಾಗವಾಗಿದೆ. ಕ್ಯಾಲಿಫೋರ್ನಿಯದಲ್ಲಿರುವ ವೈಟ್ನೀ ಪರ್ವತ ಮತ್ತು ಶ್ವೇತ ಪರ್ವತಗಳು ತಮ್ಮದೇ ಆದ ಏರಿಳಿತ ಲಕ್ಷಣಗಳನ್ನು ಹೊಂದಿದ್ದು, ಅವು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿವೆ. ಈ ಪ್ರಸ್ಥಭೂಮಿಗಳ ಮಧ್ಯೆ ಕೆಲವು ಅಂತರ್ ಪರ್ವತ ಪ್ರಸ್ಥಭೂಮಿಗಳನ್ನು ಕಾಣಬಹುದು.

ಕೊಲಂಬಿಯ. ಕೊಲರಾಡೊ ಮತ್ತು ಮೆಕ್ಸಿಕನ್ ಪ್ರಸ್ಥಭೂಮಿಗಳು ಅವುಗಳಲ್ಲಿ ಪ್ರಮುಖವಾದವುಗಳಾಗಿವೆ. ಕೊಲರಾಡೊ ನದಿಯು ಕೊಲರಾಡೊ ಪ್ರಸ್ಥಭೂಮಿಯನ್ನು ತನ್ನ ಅಪಾರ ಸವಕಳಿಯ ಮೂಲಕ 'ಮಹಾ ಕಂದರ' (ಗ್ರ್ಯಾಂಡ್ ಕ್ಯಾನಿಯನ್) ನಿರ್ಮಾಣಕ್ಕೆ ಕಾರಣವಾಗಿದೆ.

ಓಲ್ಡ್ ಫೇಥ್‌ಫುಲ್ ಗೈಸರ್ – ಪ್ರಪಂಚದ ಹೆಸರಾಂತ ಗೈಸರ್ (ಬಿಸಿ ನೀರಿನ ಬುಗ್ಗೆ) ಆಗಿದ್ದು ಅಮೆರಿಕ ಸಂಯುಕ್ತ ಸಂಸ್ಥಾನದ ಯೆಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನವನದಲ್ಲಿದೆ.



ಓಲ್ಡ್ ಫೇಥ್‌ಫುಲ್ ಗೈಸರ್

## 2 ಮಹಾ ಮತ್ತು ಕೇಂದ್ರೀಯ ಮೈದಾನಗಳು

ಕೇಂದ್ರೀಯ ಮೈದಾನಗಳನ್ನು ಪ್ರೈರೀಸ್‌ನ ಮಹಾಮೈದಾನಗಳೆಂದೂ ಕರೆಯಲಾಗಿದೆ. ಅವುಗಳು ಪೂರ್ವದಲ್ಲಿ ಅಪಲೇಷಿಯನ್‌ಗಳು ಮತ್ತು ಪಶ್ಚಿಮದಲ್ಲಿ ಪರ್ವತಾವಳಿಗಳ ಮಧ್ಯೆ ಕಂಡುಬರುತ್ತವೆ. ಈ ಮೈದಾನಗಳು ಹೆಚ್ಚು ವಿಸ್ತಾರವಾಗಿದ್ದು (ಉತ್ತರ ಅಮೆರಿಕದ ಒಟ್ಟು ಭೂಭಾಗದ 3/5ರಷ್ಟು) ಸಮತಟ್ಟಾದ ಲಕ್ಷಣದಿಂದ ಇಳಿಜಾರು ಲಕ್ಷಣದವರೆಗಿನ ಭೂಭಾಗದಿಂದ ಕೂಡಿವೆ. ಈ ಮೈದಾನಗಳು ಮಿಸಿಸಿಪ್ಪಿ ಮತ್ತು ಮಿಸ್ಸೌರಿ ನದಿಗಳು ಮತ್ತು ಅವುಗಳ ಉಪನದಿಗಳಿಂದ ನಿರ್ಮಾಣವಾಗಿವೆ. ಇದು ವಿಶ್ವದ ಅತಿ ಫಲವತ್ತಾದ ಮೈದಾನಗಳಲ್ಲೊಂದಾಗಿದ್ದು, ಉತ್ತಮ ಕೃಷಿ ಪ್ರದೇಶವಾಗಿದೆ. ಈ ಪ್ರದೇಶದ ಉತ್ತರ ಭಾಗವು ಹಿಮಹಾಳೆಗಳಿಂದ (ಹಿಮನದಿ) ಭೂನಗ್ನೀಕರಣಕ್ಕೆ ಒಳಗಾಗಿರುವ ಕಾರಣದಿಂದಾಗಿ ಅಧಿಕ ಸಂಖ್ಯೆಯ ಜಲಾನಯನ ತಗ್ಗುಗಳು ನಿರ್ಮಾಣಗೊಂಡಿವೆ. ಈ ತಗ್ಗುಗಳು ಸರೋವರಗಳಿಂದ ಕೂಡಿವೆ.

ಧೂಳಿನ ಬೋಗುಣಿ (Dust Bowl) – ಇದು ಧೂಳಿನಿಂದ ಕೂಡಿದ ಸ್ಥಳೀಯ ಸುಂಟರಗಾಳಿಯಿಂದಾಗಿದೆ. ಇದು ಅಮೆರಿಕ ಮತ್ತು ಕೆನಡದ ಪ್ರೈರೀಸ್‌ನಲ್ಲಿನ ಕೃಷಿಗೆ ಅನಾಹುತವನ್ನುಂಟು ಮಾಡುತ್ತದೆ.

© KTBS NOT TO BE REPUBLISHED

## 3 ಕೆನಡಿಯನ್ ಭೂಫಲಕ

ಕೆನಡಿಯನ್ ಭೂಫಲಕವು ಉತ್ತರ ಅಮೆರಿಕದ ಉತ್ತರ ಭಾಗದಲ್ಲಿದ್ದು, ಹಡ್ಸನ್ ಕೊಲ್ಲಿಯ ಸುತ್ತಲೂ ವಿಸ್ತರಿಸಿದೆ. ಇದು ಭಾರತದ ದಖ್ಖನ್ ಪ್ರಸ್ಥಭೂಮಿಯಂತೆ ಜಗತ್ತಿನ ಕೆಲವು ಅತಿ ಪ್ರಾಚೀನ ಶಿಲೆಗಳಿಂದ ನಿರ್ಮಾಣಗೊಂಡಿದೆ.

## 4. ಅಪಲೇಷಿಯನ್ ಉನ್ನತ ಪ್ರದೇಶಗಳು

ಪೂರ್ವದ ಉನ್ನತ ಪ್ರದೇಶಗಳನ್ನು ಅಪಲೇಷಿಯನ್‌ಗಳೆಂದೂ ಕರೆಯಲಾಗುತ್ತದೆ. ಇವುಗಳು ಭೂಖಂಡದ ಪೂರ್ವ ಅಂಚಿನುದ್ದಕ್ಕೂ ನ್ಯೂಫೌಂಡ್‌ಲ್ಯಾಂಡ್ ಪ್ರದೇಶದಿಂದ ಅಲಬಾಮದವರೆಗೂ ವಿಸ್ತರಿಸಿವೆ. ಅಪಲೇಷಿಯನ್‌ಗಳು ಪ್ರಾಚೀನ ಮಡಿಕೆ ಪರ್ವತಗಳಾಗಿದ್ದು ಭೂನಗ್ನೀಕರಣದಿಂದಾಗಿ ಅವುಗಳು ಪ್ರಸ್ತುತ ಎತ್ತರವನ್ನು ಹೊಂದಿವೆ.



*ಅಪಲೇಷಿಯನ್ ಮಡಿಕೆ ಪರ್ವತಗಳು*

ಅಪಲೇಷಿಯನ್ ಸರಣಿಗಳ ಪೂರ್ವ ಭಾಗಗಳು ಪಾದಭಾಗದ ಪ್ರಸ್ಥಭೂಮಿ ಮತ್ತು ಅಟ್ಲಾಂಟಿಕ್ ಕರಾವಳಿಗಳಲ್ಲಿ ಕಂಡುಬರುತ್ತವೆ. ಸೆಂಟ್ ಲಾರೆನ್ಸ್ ಕಣಿವೆಯು ಲಾಬ್ರಡಾರ್ ಪ್ರಸ್ಥಭೂಮಿಯನ್ನು ಅಪಲೇಷಿಯನ್ ಶ್ರೇಣಿಗಳಿಂದ ಪ್ರತ್ಯೇಕಿಸುತ್ತದೆ. ಅವುಗಳು ಕಲ್ಲಿದ್ದಲು, ಸೀಸ, ಸತು, ಕಬ್ಬಿಣದ ಅದಿರು, ತಾಮ್ರ, ಜಲಶಕ್ತಿ ಮತ್ತು ಕಾಡುಮರಗಳಂತಹ ಸಂಪನ್ಮೂಲಗಳಲ್ಲಿ ಶ್ರೀಮಂತವಾಗಿವೆ. ಈ ಪ್ರದೇಶವು ಅಪಾರ ಜನಸಂಖ್ಯೆಯನ್ನು ಹೊಂದಿದ್ದು, ಅದು ಉತ್ತರ ಅಮೆರಿಕದ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡಿದೆ.

## ನದಿಗಳು ಮತ್ತು ದೊಡ್ಡ ಸರೋವರಗಳು

ಉತ್ತರ ಅಮೆರಿಕವು ಕೆಲವು ದೊಡ್ಡ ಮತ್ತು ಚಿಕ್ಕ ನದಿಗಳನ್ನು ಹೊಂದಿದೆ. ಈ ಖಂಡದ ಕೆನಡಿಯನ್ ಭೂಫಲಕದಲ್ಲಿ ಒಂದೇ ರೀತಿಯ ಭೌತಿಕ ಲಕ್ಷಣಹೊಂದಿರುವ ಅಸಂಖ್ಯಾತ ಸರೋವರಗಳು ನಿರ್ಮಾಣಗೊಂಡಿವೆ. ಅವು ಹಿಮನದಿಗಳ ಕಾರ್ಯಾಚರಣೆಯಿಂದಾಗಿವೆ.

**ನದಿಗಳು:** ಮಿಸಿಸಿಪ್ಪಿ ಮತ್ತು ಮಿಸ್ಸೋರಿಗಳು ಉತ್ತರ ಅಮೆರಿಕದ ಅತಿ ದೊಡ್ಡ ನದಿಗಳಾಗಿದ್ದು, ಒಟ್ಟಾರೆ ಅವು 2/3ರಷ್ಟು ಭೂಭಾಗದ ಮೂಲಕ ಹರಿಯುತ್ತವೆ. ಮಿಸಿಸಿಪ್ಪಿ ಅತಿ ದೊಡ್ಡ ನದಿಯಾಗಿದ್ದು, ಮೆಕ್ಸಿಕೊ ಖಾರಿಯೊಳಕ್ಕೆ ಹರಿಯುತ್ತದೆ.




ಉತ್ತರ ಅಮೆರಿಕದ ನದಿಗಳು

ಕೊಲರಾಡೊ ನದಿಯು ಕೊಲರಾಡೊ ಪ್ರಸ್ಥಭೂಮಿಯ ಮೂಲಕ ಹರಿಯುತ್ತಾ ಮಹಾಕಂದರವನ್ನು ನಿರ್ಮಾಣ ಮಾಡಿದೆ. ಅದು ಪ್ರಕೃತಿ ಸೌಂದರ್ಯ ಮತ್ತು ಪ್ರವಾಸೋದ್ಯಮದ ಕೇಂದ್ರವಾಗಿದೆ. ಮಹಾಕಂದರವನ್ನು 'ಪ್ರಪಂಚದ ಪ್ರಾಕೃತಿಕ ಅದ್ಭುತ' ಎಂದು ಕರೆಯಲಾಗಿದೆ.

ಮಹಾಕಂದರ (ಅರಿಜೋನ, ಯು.ಎಸ್.ಎ.)

ಆಳ – ಸುಮಾರು 1800 ಮಿ.

ಅಗಲ – 3ರಿಂದ 29 ಕಿ.ಮೀ.



*ಗ್ರ್ಯಾಂಡ್ ಕ್ಯಾನಿಯನ್ (ಮಹಾ ಕಂದರ)*

ಸೆಂಟ್ ಲಾರೆನ್ಸ್ ಅಮೆರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಅತಿ ಪ್ರಮುಖವಾದ ನದಿಯಾಗಿದೆ. ಇದು ಮಹಾಸರೋವರಗಳ ಮೂಲಕ ಹರಿಯುತ್ತದೆ. ಒಂದು ವರ್ಷದ ಅವಧಿಯಲ್ಲಿ ಇದು ಮೂರು ತಿಂಗಳುಗಳ ಕಾಲ ಹಿಮರೂಪದಲ್ಲಿರುತ್ತದೆ.

**ಸರೋವರಗಳು:** ಉತ್ತರ ಅಮೆರಿಕವು ಅಪಾರ ಸಂಖ್ಯೆಯ ಸಿಹಿನೀರಿನ ಮತ್ತು ಉಪ್ಪು ನೀರಿನ ಸರೋವರಗಳನ್ನು ಹೊಂದಿದೆ. ಅವುಗಳು ಕೆನಡಿಯನ್ ಭೂಫಲಕದ ದಕ್ಷಿಣದ ಗಡಿಭಾಗದಲ್ಲಿ ನೆಲೆಗೊಂಡಿವೆ. ಹ್ಯೂರಾನ್, ಓಂಟಾರಿಯೊ, ಮಿಚಿಗನ್, ಐರಿ ಮತ್ತು ಸುಪೀರಿಯರ್‌ಗಳು ಪ್ರಮುಖವಾದ ಸರೋವರಗಳಾಗಿವೆ.



*ಸುಪೀರಿಯರ್ ಸರೋವರ*

NOT TO BE REPUBLISHED ©KTBS

ಒಟ್ಟಾರೆಯಾಗಿ ಸರೋವರಗಳನ್ನು **ಹೋಮ್ಸ್** ಎಂದು ಕರೆಯಲಾಗಿದೆ. ಸುಪೀರಿಯರ್ ಸರೋವರವು ಮಹಾಸರೋವರಗಳಲ್ಲಿ ದೊಡ್ಡದಾಗಿದ್ದು ವಿಶ್ವದ ಅತಿ ದೊಡ್ಡ ಸಿಹಿ ನೀರಿನ ಸರೋವರವಾಗಿದೆ. ಚಿಕಾಗೊ ಮತ್ತು ಡೆಟ್ರಾಯಿಟ್ ನಗರಗಳು ಮಿಚಿಗನ್ ಸರೋವರದ ದಡದ ಮೇಲೆ ನೆಲೆಗೊಂಡಿವೆ. ಈ ಎಲ್ಲಾ ಸರೋವರಗಳು ಪ್ರಮುಖವಾದ ಜಲಮಾರ್ಗಗಳನ್ನು ಒದಗಿಸಿವೆ.

## ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ

**ವಾಯುಗುಣ:** ಉತ್ತರ ಅಮೆರಿಕವು ಅತಿ ವಿಸ್ತಾರವಾದ ವಿಭಿನ್ನ ಮೇಲ್ಮೈ ಲಕ್ಷಣ ಮುಂತಾದವುಗಳಿಂದಾಗಿ ಭಿನ್ನವಾದ ವಾಯುಗುಣವನ್ನು ಹೊಂದಿದೆ. ಅಲಾಸ್ಕ ಮತ್ತು ಗ್ರೀನ್‌ಲ್ಯಾಂಡ್ ಹೆಪ್ಪುಗಟ್ಟುವ ಹವಾಗುಣ ಪರಿಸ್ಥಿತಿಗಳನ್ನು (ಟಂಡ್ರಾ ಮಾದರಿ) ಹೊಂದಿದ್ದರೆ, ಅಮೆರಿಕ ಸಂಯುಕ್ತ ಸಂಸ್ಥಾನದ ನೈರುತ್ಯದಲ್ಲಿರುವ ಮರುಭೂಮಿಗಳು ಸುಡುವ ಶಾಖವನ್ನು ಹೊಂದಿವೆ. ಫ್ಲಾರಿಡದ ಆಗ್ನೇಯ ಭಾಗ, ಕೆರಿಬಿಯನ್ ಮತ್ತು ಕೇಂದ್ರೀಯ ಅಮೆರಿಕ ಉಷ್ಣವಲಯ ಪರಿಸ್ಥಿತಿಯನ್ನು ಹೊಂದಿವೆ. ಈ ಖಂಡದ ಕೇಂದ್ರ ಮತ್ತು ದಕ್ಷಿಣ ಪ್ರದೇಶಗಳು ಹರಿಕೇನ್ಸ್ ಮತ್ತು ಟರ್ನೋಡೊಗಳಂತಹ ತೀವ್ರವಾದ ಬಿರುಗಾಳಿಯುಕ್ತ ಪ್ರದೇಶಗಳಾಗಿವೆ.



*ಹರಿಕೇನ್ಸ್*



*ಟರ್ನೋಡೊ*



*ಟ್ವಿಸ್ಟರ್*




ಉತ್ತರ ಅಮೆರಿಕದ ಸ್ವಾಭಾವಿಕ ಸಸ್ಯವರ್ಗ

**ಸ್ವಾಭಾವಿಕ ಸಸ್ಯವರ್ಗ:** ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಜೀವನವು ಹೆಚ್ಚಾಗಿ ಅಲ್ಲಿನ ವಾಯುಗುಣ, ಮಣ್ಣು ಮತ್ತು ಭೂಸ್ವರೂಪ ಲಕ್ಷಣಗಳನ್ನು ಅವಲಂಬಿಸಿದೆ. ಉತ್ತರ ಅಮೆರಿಕವು ಹೊಂದಿರುವ ವಾಯುಗುಣ ಮತ್ತು ಭೂಸ್ವರೂಪದ ವೈವಿಧ್ಯತೆಯಿಂದಾಗಿ, ಅದು ಅಧಿಕ ಪ್ರಮಾಣದ ವೈವಿಧ್ಯಮಯ ಅರೆಶುಷ್ಕ ಸಸ್ಯವರ್ಗಗಳನ್ನು ಹೊಂದಿದೆ.

ಈ ಸಸ್ಯವರ್ಗದ ಪಟ್ಟಿಗಳು ಮುಖ್ಯವಾಗಿ ವಾಯುಗುಣ ಪ್ರದೇಶಗಳನ್ನು ಅನುಸರಿಸುತ್ತವೆ. ಅವುಗಳೆಂದರೆ ಟಂಡ್ರಾ ಮಾದರಿಯ ಸಸ್ಯವರ್ಗವು ಉತ್ತರ ಮೇರುವೃತ್ತ (ಆರ್ಕ್ಟಿಕ್ ವೃತ್ತ)ದೊಳಗೆ ಕಂಡುಬರುತ್ತದೆ. ಅದರಲ್ಲೂ ಮುಖ್ಯವಾಗಿ ಕೆನಡ, ಅಲಾಸ್ಕ ಮತ್ತು ಗ್ರೀನ್‌ಲ್ಯಾಂಡ್‌ಗಳಲ್ಲಿ ಕಂಡುಬರುತ್ತದೆ. ಚಳಿಗಾಲವು ದೀರ್ಘ ಮತ್ತು ಹೆಪ್ಪುಗಟ್ಟುವ ಹಾಗೂ ಬೇಸಿಗೆಯು ಅತಿಕಡಿಮೆ ಅವಧಿಯ ಲಕ್ಷಣದಿಂದ ಕೂಡಿದೆ. ಇಲ್ಲಿ ಕಂಡುಬರುವ ಸಸ್ಯವರ್ಗಗಳೆಂದರೆ ಪಾಚಿ ಮತ್ತು ಹಾವಸೆಗಳು ಮಾತ್ರ. ಬೇಸಿಗೆ ಋತುಮಾನದಲ್ಲಿ ಕೆಲವು ಸುಗಂಧ ದ್ರವ್ಯಕ್ಕೆ ಸಂಬಂಧಿಸಿದ ಹೂಬಿಡುವ ಸಸ್ಯಗಳು ಬೆಳೆಯುತ್ತವೆ. ಇಂತಹ ಕಷ್ಟ ಮತ್ತು ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಬದುಕಬಲ್ಲ ಹಿಮಜಿಂಕೆ, ಕಾರಿಬೊ ಮತ್ತು ಶಾಖಾಹಾರಿಗಳಾದ ಹಿಮಕರಡಿಗಳು ಇಲ್ಲಿ ಕಂಡು ಬರುತ್ತವೆ.



*ಸೂಚಿಪರ್ಣ ಅರಣ್ಯ*

ಟಂಡ್ರಾ ಪಟ್ಟಿಯ ದಕ್ಷಿಣದಲ್ಲಿ ತಂಪಾದ ಸಮಶೀತೋಷ್ಣ ವಿಧದ ವಾಯುಗುಣ ಪ್ರದೇಶವಿರುವುದರಿಂದ ಶೀತವಾಯುಗುಣದ ನರಿಗಳು ಕಂಡುಬರುತ್ತವೆ. ಇದು ವಾಸ್ತವವಾಗಿ ಸೂಚಿಪರ್ಣ ಅರಣ್ಯದ ಪಟ್ಟಿಯಾಗಿದ್ದು ಅದನ್ನು **ಟೈಗಾ** ಎಂದು ಕರೆಯಲಾಗಿದೆ. ಸೂಚಿಪರ್ಣ ಅರಣ್ಯಗಳಲ್ಲಿ ಸದಾ ಹಸಿರಿನಿಂದ ಕೂಡಿದ ಸಂಕುಲಗಳಾದ ಪೈನ್, ಫರ್, ಸ್ಪ್ರೂಸ್, ಲಾರ್ಚ್ ಮುಂತಾದವುಗಳು ಕಂಡುಬರುತ್ತವೆ. ಉಣ್ಣೆಯಂತಹ ಕೂದಲನ್ನು ಹೊಂದಿರುವ ಪ್ರಾಣಿಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ಉದಾ: ಲೈನಾಕ್ಸ್, ಸಾಬಲ್, ಸಿಲ್ವರ್ ಫಾಕ್ಸ್ ಇತ್ಯಾದಿ

@KTBS NOT TO BE REPUBLISHED



*ಬೀವರ್*



*ಕಪ್ಪು ಕರಡಿ*



ಹಿಮ ಕಪ್ಪುಕರಡಿ



ಸಿಲ್ವರ್ ಫಾಕ್ಸ್



ಸೈಫ್ರಸ್



ಚೆಸ್ಟ್‌ನೆಟ್

©KTBS NOT TO BE REPUBLISHED

ಎಲೆಯುದುರುವ ವಿಧದ ಅರಣ್ಯಗಳನ್ನು ಸೆಂಟ್ ಲಾರೆನ್ಸ ಮತ್ತು ಮಹಾಸರೋವರಗಳ ಪೂರ್ವಭಾಗದಲ್ಲಿ ಕಾಣಬಹುದು. ಈ ಪ್ರಾಂತ್ಯದ ಉತ್ತರ ಭಾಗವು ಶೀತದಿಂದ ಮತ್ತು ದಕ್ಷಿಣದ ಭಾಗವು ಬೆಚ್ಚನೆಯ ಗುಣದಿಂದ ಕೂಡಿದೆ. ಚಳಿಗಾಲವು ಶೀತವಾಗಿದ್ದರೆ ಬೇಸಿಗೆಯು ಬೆಚ್ಚಗಾಗಿದೆ ಮತ್ತು ಸಾಮಾನ್ಯವಾಗಿ ಮಳೆಯನ್ನು ಪಡೆಯುತ್ತದೆ. ಇಲ್ಲಿ ಕಂಡುಬರುವ ಮರಗಳು ನಿರ್ದಿಷ್ಟ ಪಡಿಸಿದ ಅವಧಿಯಲ್ಲಿ ತಮ್ಮ ಎಲೆಗಳನ್ನು ಉದುರಿಸಿಕೊಳ್ಳುತ್ತವೆ. ಉದಾ: ಸೈಪ್ರಸ್, ಓಕ್, ಆಕ್ ಮತ್ತು ಚೆಸ್ಟ್‌ನಟ್‌ಗಳು. ಇಲ್ಲಿ ಕಂಡುಬರುವ ವನ್ಯಜೀವಿಗಳೆಂದರೆ ಬೀವರ್, ಕಪ್ಪುಕರಡಿ, ಹಿಮಇಲಿ ಮತ್ತು ಪೋರ್ಕುಪೈನ್‌ಗಳಾಗಿವೆ.

ತಂಪಾದ ಸಮಶೀತೋಷ್ಣವಲಯದ ಸಸ್ಯವರ್ಗ ಮತ್ತು ವಾಯುಗುಣವನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಭಾಗಗಳಲ್ಲಿ ಕಾಣಬಹುದಾಗಿದೆ. ರಾಕೀ ಪರ್ವತಗಳು ಮತ್ತು ಮಿಸಿಸಿಪ್ಪಿ- ಮಿಸ್ಸೋರಿ ಮಹಾನದಿ ಮುಖಜಭೂಮಿಗಳ ಮಧ್ಯೆ ವಿಶಾಲವಾದ ಹುಲ್ಲುಗಾವಲು ಪ್ರದೇಶವಿದೆ. ಇದನ್ನು **ಪ್ರೈರೀಸ್** ಎಂತಲೂ ಕರೆಯಲಾಗುತ್ತದೆ. ಇದು ವಾಸ್ತವವಾಗಿ ವಿಶಾಲವಾದ ವೃಕ್ಷರಹಿತ ಮೈದಾನವಾಗಿದೆ. ಈ ಮೈದಾನ ಪ್ರದೇಶವು

ಗೋಧಿ ಬೇಸಾಯ ಮತ್ತು ಪಶುಸಂಗೋಪನೆಗೆ ಹೆಸರುವಾಸಿಯಾಗಿದೆ. ಇದನ್ನು ಪ್ರಪಂಚದ ಗೋಧಿಯ ಕಣಜ ಅಥವಾ 'ರೊಟ್ಟಿಯ ಬುಟ್ಟಿ' ಎಂದು ಕರೆಯುತ್ತಾರೆ.



*ಪ್ರೈರೀಸ್ ಹುಲ್ಲುಗಾವಲು*

ಸೂಚಿಪರ್ಣ ಮತ್ತು ಎಲೆಯುದುರುವ ಅರಣ್ಯಗಳ ಮರಗಳು ಸಮಶೀತೋಷ್ಣ ಮಿಶ್ರ ಅರಣ್ಯಗಳಲ್ಲಿ ಕಂಡುಬರುತ್ತವೆ. ಕೆನಡ ಮತ್ತು ಉತ್ತರ ಕ್ಯಾಲಿಫೋರ್ನಿಯಗಳು ಅಂತಹ ಅರಣ್ಯಗಳನ್ನು ಹೊಂದಿವೆ. ಈ ಅರಣ್ಯ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಮರಗಳೆಂದರೆ ಬರ್ಚ್, ಬೀಚ್, ಮ್ಯಾಪಲ್, ಓಕ್ ಮುಂತಾದವುಗಳು.



*ಮಹಾಗನಿ*



*ಮ್ಯಾಪಲ್*

ಕೆನಡ ಸರೋವರಗಳಿಂದ ಕೂಡಿದ ದೇಶ. ವಿರಳ ಜನಸಂಖ್ಯೆ ಹಾಗೂ ಅಪಾರ ಟೈಗಾ ಮಾದರಿಯ ಕಾಡುಗಳಿಂದಾಗಿದೆ. ಪ್ರಪಂಚದ ಅತ್ಯಧಿಕ ಮರದ ರಫ್ತು ಇಲ್ಲಿಂದಾಗುತ್ತದೆ.

ಮೆಕ್ಸಿಕೊದ ದಕ್ಷಿಣ ಭಾಗ ಮತ್ತು ವೆಸ್ಟ್ ಇಂಡೀಸ್ ಪ್ರದೇಶವು ಉಷ್ಣವಲಯದ ಅರಣ್ಯಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ಗಟ್ಟಿಮರಗಳಾದ ಮಹಾಗನಿ ಮತ್ತು ಲಾಗ್‌ವುಡ್‌ಗಳನ್ನು ಒಳಗೊಂಡಂತಿರುವ ಮಿಶ್ರ ಅರಣ್ಯಗಳನ್ನು ಕಾಣಬಹುದು.

ಕ್ಯಾಲಿಫೋರ್ನಿಯದ ಪಶ್ಚಿಮ ಕರಾವಳಿಯು ಮೆಡಿಟರೇನಿಯನ್ ವಿಧದ ವಾಯುಗುಣ ಪರಿಸ್ಥಿಯನ್ನು ಹೊಂದಿದೆ. ದಕ್ಷಿಣ ಕ್ಯಾಲಿಫೋರ್ನಿಯ, ಮೆಕ್ಸಿಕೊ ಮತ್ತು ಅರಿಝೋನಗಳಲ್ಲಿ ಈ ಖಂಡದ ಪಶ್ಚಿಮ ಭಾಗದ ಮರುಭೂಮಿಯಂತಹ (ಶುಷ್ಕ) ಪರಿಸ್ಥಿತಿಯನ್ನು ಕಾಣಬಹುದಾಗಿದೆ. ವಿವಿಧ ರೀತಿಯ ಪಾಪಾಸು ಕಳ್ಳಿ ಮತ್ತು ಮುಳ್ಳಿನ ಪೊದೆಗಳು ಇಲ್ಲಿ ಸರ್ವೇಸಾಮಾನ್ಯ. ಇಲ್ಲಿನ ಮರುಭೂಮಿಯ ರಾತ್ರಿಗಳನ್ನು 'ಮರುಭೂಮಿಗಳ ಚಳಿಗಾಲ'ವೆಂದು ಕರೆಯಲಾಗಿದೆ.







*ಮರುಭೂಮಿ ಸಸ್ಯ – ವಿವಿಧ ಪಾಪಾಸು ಕಳ್ಳಿಗಳು*

NOT TO BE REPUBLISHED © KTBS

## ಕೃಷಿ

ಕೃಷಿಯು ಉತ್ತರ ಅಮೆರಿಕದ ಒಂದು ಪ್ರಮುಖವಾದ ಕಸಬಾಗಿದೆ. ಈ ಖಂಡದ ಕೇಂದ್ರೀಯ ತಗ್ಗು ಪ್ರದೇಶಗಳಾದ ಅದರಲ್ಲೂ ವಿಶೇಷವಾಗಿ ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಅತ್ಯಧಿಕ ಕೃಷಿ ಉತ್ಪನ್ನ ರಾಷ್ಟ್ರಗಳಾಗಿವೆ. ಉತ್ತರ ಅಮೆರಿಕದ ಒಟ್ಟು ಭೂಭಾಗದಲ್ಲಿನ ಶೇ.10ರಷ್ಟು ಪ್ರದೇಶವು ಮಾತ್ರ ಕೃಷಿಗೆ ಸೂಕ್ತವಾಗಿದೆ. ಆದರೆ ಆ ಕೃಷಿಕ್ಷೇತ್ರಗಳಿಂದ ಬರುತ್ತಿರುವ ಉತ್ಪನ್ನ ಅತಿ ಹೆಚ್ಚು. ಏಕೆಂದರೆ ವಿಸ್ತಾರವಾದ ಕೃಷಿ ಕ್ಷೇತ್ರಗಳು, ಫಲವತ್ತಾದ ಮಣ್ಣು, ಸಾಕಷ್ಟು ನೀರಾವರಿ, ಯಾಂತ್ರಿಕ ಬೇಸಾಯ ಹಾಗೂ ಇತರ ಸೌಲಭ್ಯಗಳ ಜೊತೆಗೆ ಮಾನವನ ಪೂರ್ಣ ಶ್ರಮವಿರುವುದರಿಂದ ಉತ್ತರ ಅಮೆರಿಕವನ್ನು ವಿಶ್ವದ ಅತಿದೊಡ್ಡ ಕೃಷಿಪ್ರದೇಶವನ್ನಾಗಿ ಮಾರ್ಪಡಿಸಿದೆ.

ವಿಶಿಷ್ಟ ಬೆಳೆಗಳ ಉತ್ಪಾದನೆಯಲ್ಲಿ ವಿಶಿಷ್ಟತೆಯನ್ನು ಹೊಂದಿರುವ ಪ್ರಾಂತ್ಯಗಳನ್ನು ಬೆಳೆಪಟ್ಟಿ ಎಂದು ಕರೆಯಲಾಗಿದೆ. ಉದಾ: ಕಾರ್ನ್‌ಪಟ್ಟಿ, ಗೋಧಿಪಟ್ಟಿ, ಹತ್ತಿಪಟ್ಟಿ, ತಂಬಾಕುಪಟ್ಟಿ ಇತ್ಯಾದಿ.

ಉತ್ತರ ಅಮೆರಿಕ ಅದರಲ್ಲೂ ವಿಶೇಷವಾಗಿ ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಗೋಧಿಯನ್ನು ಒಂದು ಪ್ರಮುಖ ಆಹಾರ ಧಾನ್ಯವನ್ನಾಗಿ ಬೆಳೆಯುತ್ತಿದೆ. ಪ್ರೈರೀ ಪ್ರದೇಶವು ಗೋಧಿ ಬೇಸಾಯಕ್ಕೆ ಸೂಕ್ತ ಮಣ್ಣನ್ನು ಒದಗಿಸಿದೆ. ಇಲ್ಲಿನ ಜನಸಂಖ್ಯೆಯು ಕಡಿಮೆಯಿದ್ದು, ಅಪಾರ ಪ್ರಮಾಣದ ಉತ್ಪಾದನೆ ಇರುವುದರಿಂದ ಅದನ್ನು ರಫ್ತು ಮಾಡಲಾಗುತ್ತಿದೆ. ಮೆಕ್ಕೆಜೋಳವು **ಕಾರ್ನ್** ಎಂದು ಪ್ರಖ್ಯಾತಿಪಡೆದಿದೆ. ಅದನ್ನು ಸಂಯುಕ್ತ ರಾಜ್ಯಗಳು ಮತ್ತು ಮೆಕ್ಸಿಕೊಗಳಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಬಹುತೇಕ ಪ್ರಮಾಣದ ಮೆಕ್ಕೆ ಜೋಳವನ್ನು ಹಸುಗಳು ಮತ್ತು ಹಂದಿಗಳ ಮೇವುಗಳಿಗಾಗಿ ಉಪಯೋಗಿಸಲಾಗುತ್ತದೆ. ಇವುಗಳನ್ನು ಮೆಕ್ಸಿಕೊದಲ್ಲಿ ಮಾಂಸಕ್ಕಾಗಿ ಸಾಕಲಾಗುತ್ತದೆ. ಇದೊಂದು ಆಹಾರ ಧಾನ್ಯವಾಗಿದೆ. ಆದರೆ ಇಂದು ಮೆಕ್ಕೆಜೋಳವು ಇಂಧನ ಬೆಳೆಯಾಗಿ ಬೆಳೆಯಲಾಗುತ್ತಿದೆ.

© KTBS NOT TO BE REPUBLISHED



ಗೋಧಿ



ಮೆಕ್ಕೆಜೋಳ

ಇತರ ಪ್ರಧಾನ ಬೆಳೆಗಳೆಂದರೆ ಬಾರ್ಲಿ, ಓಟ್ಸ್ ಮತ್ತು ಆಲುಗಡ್ಡೆಗಳಾಗಿವೆ. ಬಾರ್ಲಿಯನ್ನು ಬಿಯರ್ (beer) ತಯಾರಿಕೆಗೆ ಬಳಸಲಾಗುತ್ತದೆ. ಓಟ್ಸನ್ನು ಪ್ರಾಣಿಗಳ ಮೇವುಗಳಿಗಾಗಿ ಉಪಯೋಗಿಸಲಾಗುತ್ತದೆ. ಈ ಖಂಡದಲ್ಲಿ ಆಲುಗಡ್ಡೆಯನ್ನು ಸಹ ಬೆಳೆಯಲಾಗುತ್ತಿದ್ದು ಇದು ಪ್ರಮುಖ ಆಹಾರ ಬೆಳೆಯಾಗಿದೆ.

ಉತ್ತರ ಅಮೆರಿಕದಲ್ಲಿ ಹತ್ತಿ ಮತ್ತು ತಂಬಾಕುಗಳನ್ನು ವಾಣಿಜ್ಯ ಬೆಳೆಗಳನ್ನಾಗಿ ದಕ್ಷಿಣ ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ಮಿಸಿಸಿಪಿ ನದಿಯ ಕಣಿವೆಯುದ್ದಕ್ಕೂ ಹತ್ತಿ ಪ್ರದೇಶವು ಕಂಡುಬರುತ್ತದೆ. ಅಮೆರಿಕ ತಂಬಾಕು ಬೆಳೆಯುತ್ತಿರುವ ವಿಶ್ವದ ರಾಷ್ಟ್ರಗಳಲ್ಲಿ ಚೀನದ ನಂತರ ಎರಡನೇ ಸ್ಥಾನದಲ್ಲಿದೆ.

ಕಬ್ಬು ಇಲ್ಲಿ ಬೆಳೆಯುತ್ತಿರುವ ಮತ್ತೊಂದು ಪ್ರಮುಖ ಬೆಳೆಯಾಗಿದೆ. ಕ್ಯೂಬಾ ವಿಶ್ವದಲ್ಲಿ ಸಕ್ಕರೆ ಉತ್ಪಾದನೆಯ ಮೂರನೇ ಅತಿ ದೊಡ್ಡ ರಾಷ್ಟ್ರವಾಗಿರುವುದರಿಂದಲೇ ಇದನ್ನು 'ಜಗತ್ತಿನ ಸಕ್ಕರೆ ಬೋಗುಣಿ' ಎಂದು ಕರೆಯಲಾಗಿದೆ.



*ಸೇಬಿನ ತೋಟ*



*ದ್ರಾಕ್ಷಿ*

ಕಾಫಿ ಮತ್ತು ಕೋಕ್‌ಗಳು ಉಷ್ಣವಲಯದ ತೋಟಗಾರಿಕಾ ಬೆಳೆಯಾಗಿದ್ದು, ಇದನ್ನು ಕೇಂದ್ರೀಯ ಅಮೆರಿಕದ ಭಾಗಗಳು ಮತ್ತು ವೆಸ್ಟ್ ಇಂಡೀಸ್‌ಗಳಲ್ಲಿ ಬೆಳೆಯಲಾಗುತ್ತಿದೆ. ಕ್ಯಾಲಿಫೋರ್ನಿಯ, ಫ್ಲಾರಿಡಾ, ನ್ಯೂಜೆರ್ಸಿ ಮತ್ತು ನಗರ ಕೇಂದ್ರಗಳ ಸುತ್ತಲಿನ ಪ್ರದೇಶಗಳಲ್ಲಿ ದ್ರಾಕ್ಷಿ, ಕಿತ್ತಳೆ, ನಿಂಬೆ (ಲಿಂಬೆ), ಸೇಬು, ಸೀಬೆ, ಪೀಚ್ ಇತ್ಯಾದಿ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಕ್ಯಾಲಿಫೋರ್ನಿಯವು ಉತ್ತರ ಅಮೆರಿಕದ ಶೇ.90ರಷ್ಟು ದ್ರಾಕ್ಷಿಯನ್ನು ಬಳಸಿ ದ್ರಾಕ್ಷಾರಸ ಉತ್ಪಾದಿಸುತ್ತದೆ. ಆದುದರಿಂದ ಕ್ಯಾಲಿಫೋರ್ನಿಯವನ್ನು 'ದ್ರಾಕ್ಷಾರಸದ ರಾಜ್ಯ' ಎಂದು ಕರೆಯಲಾಗಿದೆ.

ಉತ್ತರ ಅಮೆರಿಕ ಖಂಡದ ಈಶಾನ್ಯ ಭಾಗದ ಅಂಟ್ಲಾಂಟಿಕ್ ಸಾಗರ ತೀರದಲ್ಲಿ ಗ್ರ್ಯಾಂಡ್ ಬ್ಯಾಂಕ್‌ಗಳು, ನ್ಯೂಇಂಗ್ಲೆಂಡಿನ ಜಾರ್ಜಸ್ ಬ್ಯಾಂಕ್‌ಗಳು ಮತ್ತು ನ್ಯೂಫೌಂಡ್ ಲ್ಯಾಂಡ್ ಕರಾವಳಿಗಳ ಆಳವಿಲ್ಲದ ಖಂಡಾವರಣ ಪ್ರದೇಶಗಳು ಹೆಸರಾಂತ ಮೀನುಗಾರಿಕಾ ಪ್ರದೇಶಗಳಾಗಿವೆ.

## ಪ್ರಮುಖ ಖನಿಜಗಳು ಮತ್ತು ಕೈಗಾರಿಕೆಗಳು

ಉತ್ತರ ಅಮೆರಿಕವು ಸಾಕಷ್ಟು ಸಂಪನ್ಮೂಲಗಳ ಕೃಪೆಗೆ ಒಳಗಾಗಿದೆ. ಅದರ ನೈಸರ್ಗಿಕ ಸಂಪನ್ಮೂಲಗಳೆಂದರೆ ವೈವಿಧ್ಯಮಯ ಮಣ್ಣುಗಳು, ವಿಸ್ತಾರವಾದ ಹುಲ್ಲುಗಾವಲುಗಳು, ಖನಿಜಗಳು, ಶಕ್ತಿ ಸಂಪನ್ಮೂಲಗಳು ಮತ್ತು ಅರಣ್ಯ ಸಂಪತ್ತುಗಳಾಗಿದೆ.

ಉತ್ತರ ಅಮೆರಿಕ ಭೂಖಂಡವು ವಿವಿಧ ಬೆಲೆಬಾಳುವ ಖನಿಜಗಳ ಅಧಿಕ ನಿಕ್ಷೇಪವನ್ನು ಹೊಂದಿದೆ. ಇಲ್ಲಿರುವ ಚಿನ್ನದ ನಿಕ್ಷೇಪವು ಜನರನ್ನು ಈ ಖಂಡಕ್ಕೆ ಬಹು ಹಿಂದೆಯೇ ಆಕರ್ಷಿಸಿದೆ. ಇದಲ್ಲದೆ ಕಬ್ಬಿಣದ ಅದಿರು, ತಾಮ್ರ, ನಿಕಲ್, ಬೆಳ್ಳಿ ಮತ್ತು ಸತುಗಳು ಇತರ ಪ್ರಮುಖವಾದ ಖನಿಜ ನಿಕ್ಷೇಪಗಳಾಗಿವೆ. ಈ ಖಂಡವು ಸಾಕಷ್ಟು ಪ್ರಮಾಣದ ಕಲ್ಲಿದ್ದಲು, ಕಲ್ಲೆಣ್ಣೆ ಮತ್ತು ನೈಸರ್ಗಿಕ ಅನಿಲಗಳನ್ನು ಹೊಂದಿದೆ.

ಉತ್ತರ ಅಮೆರಿಕದಲ್ಲಿ ಪ್ರಪ್ರಥಮ ಖನಿಜ ಗಣಿಯೆಂದರೆ ಚಿನ್ನದ ಗಣಿಯಾಗಿದೆ. ಕ್ಯಾಲಿಫೋರ್ನಿಯ ಮತ್ತು ಯೂಕಾಟನ್ ಕಣಿವೆಗಳು ಚಿನ್ನದ ಗಣಿಗಳ ಪ್ರಮುಖ ಪ್ರದೇಶಗಳಾಗಿವೆ. ಸುಪೀರಿಯರ್ ಸರೋವರ ಮತ್ತು ಅದನ್ನು ಸುತ್ತುವರಿದಿರುವ ಪ್ರದೇಶಗಳು ಅಪಾರ ಪ್ರಮಾಣದ ಕಬ್ಬಿಣದ ಅದಿರಿನ ನಿಕ್ಷೇಪಕ್ಕೆ ಪ್ರಖ್ಯಾತಿ ಪಡೆದಿವೆ. ಅತಿ ಉತ್ಕೃಷ್ಟ ದರ್ಜೆಯ ಕಬ್ಬಿಣದ ಅದಿರನ್ನು ಕೆನಡಿಯನ್ ಭೂಫಲಕದಲ್ಲಿ ಮತ್ತು ಅದನ್ನು ಸುತ್ತುವರಿದ ಪ್ರದೇಶದಲ್ಲಿ ಕಾಣಬಹುದಾಗಿದೆ. ಮೆಕ್ಸಿಕೊ ವಿಶ್ವದ ಪ್ರಮುಖ ಬೆಳ್ಳಿ ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಪಂಚದಲ್ಲಿ ಅತ್ಯಧಿಕ ತಾಮ್ರವನ್ನು ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆ.

© KTBS NOT TO BE REPUBLISHED



ಚಿನ್ನ



ಕಬ್ಬಿಣ



ಉಕ್ಕು



ಇದ್ದಿಲು



ತಾಮ್ರ



ನಿಕಲ್



ಬೆಳ್ಳಿ



ತವರ (ಸತುವು)

@KTBS NOT TO BE REPUBLISHED

ಉತ್ತರ ಅಮೆರಿಕವು ಇಲ್ಲಿನ ಅಪಲೇಷಿಯನ್ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲ್ಲಿನ ಅಧಿಕ ನಿಕ್ಷೇಪವನ್ನು ಹೊಂದಿದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಪಂಚದ ಅತ್ಯಧಿಕ ಕಲ್ಲಿದ್ದಲನ್ನು ರಫ್ತು ಮಾಡುತ್ತಿರುವ ದೇಶವಾಗಿದೆ. ಪೆಸಿಫಿಕ್ ಮಹಾಸಾಗರದಂಚಿನ ಪ್ರದೇಶಗಳು ನೈಸರ್ಗಿಕ ಅನಿಲದ ಅಧಿಕ ನಿಕ್ಷೇಪವನ್ನು ಹೊಂದಿವೆ. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಮುಖ ಪೆಟ್ರೋಲಿಯಂ ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆಯಲ್ಲದೆ ವಿಶ್ವದಲ್ಲಿ ಅಧಿಕ ಅಣುಶಕ್ತಿಯನ್ನು ಉತ್ಪಾದಿಸುತ್ತಿರುವ ದೇಶವೂ ಆಗಿದೆ.

ಉತ್ತರ ಅಮೆರಿಕದ ದೇಶಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳು ಅತಿ ಕೈಗಾರಿಕೀಕರಣಕ್ಕೊಳಪಟ್ಟಿವೆ. ಇಲ್ಲಿ ಲಭ್ಯವಿರುವ ಕಬ್ಬಿಣದ ಅದಿರು, ಕಲ್ಲಿದ್ದಲು, ತಾಮ್ರ, ಬಾಕ್ಸೈಟ್‌ಗಳಂತಹ ಕಚ್ಚಾ ವಸ್ತುಗಳು ಭಾರಿ ಕೈಗಾರಿಕೆಗಳಿಗೆ ಸಹಾಯಕವಾಗಿವೆ. ಶಕ್ತಿ, ಸಾರಿಗೆ ಮತ್ತು ಆಧುನಿಕ ತಾಂತ್ರಿಕತೆಗಳ ಲಭ್ಯತೆಯು ವಿಸ್ತೃತ ಕೈಗಾರಿಕೀಕರಣಕ್ಕೆ ಕಾರಣವಾಗಿದೆ.

ಐರಿ, ಸುಪೀರಿಯರ್ ಮತ್ತು ಮಿಚಿಗನ್ ಸರೋವರಗಳ ಪ್ರದೇಶಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಉತ್ತಮವಾಗಿ ಅಭಿವೃದ್ಧಿಗೊಂಡಿರುವುದನ್ನು ಕಾಣಬಹುದು. ಇದಕ್ಕೆ ಇಲ್ಲಿನ ಕಚ್ಚಾವಸ್ತುಗಳು ಮತ್ತು ಜಲಸಾರಿಗೆಗಳು ಸಹಾಯಕವಾಗಿವೆ. ಇಲ್ಲಿನ ಪಿಟ್ಸ್‌ಬರ್ಗ್ ನಗರವನ್ನು 'ಉಕ್ಕಿನ ನಗರ' ಎಂದು ಕರೆಯಲಾಗಿದೆ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಮೂಲ ಕೈಗಾರಿಕೆಯಾದ್ದರಿಂದ ಇದು ಇತರ ಕೈಗಾರಿಕೆಗಳಾದ ಆಟೋಮೊಬೈಲ್, ಹಡಗು ನಿರ್ಮಾಣ, ಲೋಕೋಮೋಟೀವ್, ಭಾರಿ ಇಂಜಿನಿಯರಿಂಗ್, ವಿಮಾನ ನಿರ್ಮಾಣ ಮುಂತಾದ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ.



**ಪಿಟ್ಸ್‌ಬರ್ಗ್ – ಉಕ್ಕಿನ ನಗರ**

ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳಲ್ಲಿ ಮೃದು ಮರಗಳನ್ನು ಕಾಗದ, ಕಾರ್ಡ್‌ಬೋರ್ಡ್ ಮತ್ತು ನ್ಯೂಸ್‌ಪ್ರಿಂಟ್‌ಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ತಿರುಳನ್ನು ಕೃತಕ ನಾರು ತಯಾರಿಕೆಯಲ್ಲಿ ಬಳಸುವರು. ಕಾಗದ, ತಿರುಳು ಮತ್ತು ನ್ಯೂಸ್‌ಪ್ರಿಂಟ್‌ಗಳ ರಫ್ತಿನಲ್ಲಿ ಕೆನಡವು ಅತಿ ಪ್ರಮುಖ ರಾಷ್ಟ್ರವಾಗಿದೆ. ಮರಕಡಿಯುವಿಕೆ ಉತ್ತರ ಅಮೆರಿಕದಲ್ಲಿ ಉತ್ತಮ ಸಂಘಟಿತ ವೃತ್ತಿಯಾಗಿದೆ. ಕೆನಡದಲ್ಲಿ ಮರಕಡಿಯುವ ವೃತ್ತಿಯನ್ನು ಅವಲಂಬಿಸಿರುವ ಜನರನ್ನು **ಲಂಬರ್ ಜಾಕ್ಸ್** ಎಂದು ಕರೆಯಲಾಗುತ್ತದೆ. ರಾಸಾಯನಿಕ ಕೈಗಾರಿಕೆಯು ಕೃತಕ ರಬ್ಬರ್, ಪ್ಲಾಸ್ಟಿಕ್, ರಸಗೊಬ್ಬರಗಳು ಮತ್ತು ಔಷಧಿಗಳಂತಹ ವಿಭಿನ್ನ ವಸ್ತುಗಳನ್ನು ಉತ್ಪಾದಿಸುತ್ತದೆ. ಈಗ ಮರದ ಬದಲಾಗಿ ಪ್ಲಾಸ್ಟಿಕ್‌ನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪ್ಲಾಸ್ಟಿಕ್‌ನ್ನು ತಯಾರಿಸಲಾಗುತ್ತಿದೆ. ಚಿಕಾಗೊ ನಗರವು ಪ್ಲಾಸ್ಟಿಕ್ ಕೈಗಾರಿಕೆಗೆ ಹೆಸರುವಾಸಿಯಾಗಿದೆ.

ಮಾಂಸವನ್ನು ಡಬ್ಬಿಗಳಲ್ಲಿ ತುಂಬುವುದು ಒಂದು ಪ್ರಮುಖ ಕೈಗಾರಿಕೆಯಾಗಿದ್ದು, ಅಸಂಖ್ಯಾತ ಕೇಂದ್ರಗಳಲ್ಲಿ ಮುಖ್ಯವಾಗಿ ಚಿಕಾಗೊ, ಕಾನ್ಸಾಸ್ ನಗರ ಮತ್ತು ಸೆಂಟ್ ಲೂಯಿಸ್‌ಗಳಲ್ಲಿ ವಿಸ್ತೃತವಾಗಿ ಹರಡಿದೆ. ವಿದ್ಯುತ್ ಮತ್ತು ವಿದ್ಯುನ್ಮಾನ ವಸ್ತುಗಳು ಸಹ ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತವೆ. ಹಲವು ಕೈಗಾರಿಕಾ ಉತ್ಪನ್ನಗಳು ಮತ್ತು ಯಂತ್ರಗಳು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡ ರಾಷ್ಟ್ರಗಳಿಂದ ರಫ್ತಾಗುತ್ತವೆ.

© KTBS NOT TO BE REPUBLISHED




**ಚಿಕಾಗೊ ಕೈಗಾರಿಕಾ ನಗರ**

## ಜನಸಂಖ್ಯೆ

ಬಹುತೇಕ ಉತ್ತರ ಅಮೆರಿಕನರು ಯುರೋಪಿಯನ್ನರು, ಅಮೆರಿಕನ್ ಇಂಡಿಯನ್ಸ್ ಮತ್ತು ಆಫ್ರಿಕನ್ನರಾಗಿದ್ದಾರೆ. ಅವರಲ್ಲಿ ಬಹುತೇಕ ಜನರು ಸ್ಪ್ಯಾನಿಷ್, ಇಂಗ್ಲಿಷ್, ಫ್ರೆಂಚ್ ಅಥವಾ ಅಮೆರಿಕನ್ ಇಂಡಿಯನ್ ಭಾಷೆಗಳನ್ನು ಮಾತನಾಡುತ್ತಾರೆ.




*ಉತ್ತರ ಅಮೆರಿಕದ ಜನಸಾಂದ್ರತೆ*

ಉತ್ತರ ಅಮೆರಿಕದ ಪೂರ್ವಭಾಗಗಳಲ್ಲಿ ಅತಿ ಹೆಚ್ಚಿನ ಜನಸಾಂದ್ರತೆಯನ್ನು ಕಾಣಬಹುದು. ಇಲ್ಲಿ ಹೆಚ್ಚಿನ ನಗರೀಕರಣವಿದೆ. ಉದಾ: ನ್ಯೂಯಾರ್ಕ್, ವಾಷಿಂಗ್‌ಟನ್, ಚಿಕಾಗೊ ಇತ್ಯಾದಿ. ಆದರೆ ಖಂಡದ ಬಹುತೇಕ ಉತ್ತರ ಭಾಗವು ಸಾಮಾನ್ಯವಾಗಿ ಹೆಚ್ಚು ಹಿಮಾವೃತದಿಂದ ಕೂಡಿರುವುದರಿಂದ ಖಾಲಿ ಲಕ್ಷಣದಿಂದ ಕೂಡಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದ ನಗರ ಕೇಂದ್ರಗಳು ಮತ್ತು ಕೈಗಾರಿಕಾ ಪ್ರದೇಶಗಳು ಅಧಿಕ ಜನಸಾಂದ್ರತೆಯ ಪ್ರದೇಶಗಳಾಗಿವೆ. ಉತ್ತರ ಅಮೆರಿಕದ ಶೇ.98ರಷ್ಟು ಜನಸಂಖ್ಯೆಯು ನಗರ ಜನಸಂಖ್ಯೆಯಾಗಿದೆ.

**ಹೊಸ ಪದಗಳು :**

ಪ್ರೈರೀಸ್, ಕೆರಿಬಿಯನ್, ಪರ್ವತಾವಳಿಗಳು, ರಾಕೀಸ್, ಅಪಲೇಷಿಯನ್, ಕೆನಡಿಯನ್, ಮಡಿಕೆ ಪರ್ವತ, ಭೂಫಲಕ, ಮಹಾಕಂದರ, ಹೋಮ್ಸ್, ಹರಿಕೇನ್ಸ್, ಟರ್ನೋಡೊ, ಟಂಡ್ರಾ, ಹಿಮಜಿಂಕೆ, ಕಾರಿಬೊ, ತೈಗಾ, ಬೆಳೆಪಟ್ಟಿ, ಓಟ್ಸ್, ಡಸ್ಟಬೌಲ್, ಕೋಕಿಂಗ್, ಲೋಕೋಮೋಟೀವ್ಸ್, ಲಂಬರ್ ಜಾಕ್ಸ್.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಉತ್ತರ ಅಮೆರಿಕ ಖಂಡವನ್ನು 'ಪ್ರೈರೀಸ್‌ಗಳ ನಾಡು' ಎಂದು ಏಕೆ ಕರೆಯುತ್ತಾರೆ?

2 ಉತ್ತರ ಅಮೆರಿಕ ಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.

3 ಉತ್ತರ ಅಮೆರಿಕ ಖಂಡದ ಪ್ರಮುಖ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ.

4 ಉತ್ತರ ಅಮೆರಿಕದ ಗ್ರ್ಯಾಂಡ್ ಕ್ಯಾನಿಯನ್ ಹೇಗೆ ನಿರ್ಮಾಣಗೊಂಡಿದೆ?

5 ಉತ್ತರ ಅಮೆರಿಕದ ಪ್ರಮುಖ ಸಸ್ಯ ಹಾಗೂ ಪ್ರಾಣಿಗಳನ್ನು ಹೆಸರಿಸಿರಿ.

6 ಉತ್ತರ ಅಮೆರಿಕದ ಪ್ರಮುಖ ನದಿಗಳನ್ನು ಪಟ್ಟಿ ಮಾಡಿರಿ.

7 ಉತ್ತರ ಅಮೆರಿಕದಲ್ಲಿ 'ಲಂಬರ್ ಜಾಕ್ಸ್' ಎಂದು ಯಾರನ್ನು ಕರೆಯುತ್ತಾರೆ?

8 ಉತ್ತರ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಜನರು ಹಾಗೂ ಅವರ ಭಾಷೆಗಳನ್ನು ತಿಳಿಸಿರಿ.

NOT TO BE REPUBLISHED ©KTBS



**ಚಟುವಟಿಕೆಗಳು**

1 ಉತ್ತರ ಅಮೆರಿಕ ಖಂಡದ ಬಾಹ್ಯರೇಖಾ ನಕ್ಷೆಯಲ್ಲಿ ಅಟ್ಲಾಸ್ ಪುಸ್ತಕದ ಸಹಾಯದಿಂದ ಖಂಡದ ಪ್ರಮುಖ ಪರ್ವತ, ನದಿ, ಮಹಾಸರೋವರ, ಮೈದಾನಗಳನ್ನು ಗುರುತಿಸಿರಿ.

2 ಉತ್ತರ ಅಮೆರಿಕ ಖಂಡದಲ್ಲಿ ಕಂಡುಬರುವ ಪ್ರಮುಖ ಸಸ್ಯ ಹಾಗೂ ಪ್ರಾಣಿಗಳನ್ನು ಪಟ್ಟಿ ಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸಿರಿ.

ಅಧ್ಯಾಯ
13

# ದಕ್ಷಿಣ ಅಮೆರಿಕ

P3S1B1

**ಪಾಠದ ಪರಿಚಯ**

ಈ ಪಾಠದಲ್ಲಿ ದಕ್ಷಿಣ ಅಮೆರಿಕ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌತಿಕ ಅಂಶಗಳು, ನದಿಗಳು ಮತ್ತು ಸರೋವರಗಳು, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ, ವನ್ಯಜೀವಿಗಳು, ಕೃಷಿ ಮತ್ತು ಪ್ರಾಣಿಸಾಕಣೆ, ಜನಸಂಖ್ಯೆಯ ಸಂಯೋಜನೆ, ಜನಾಂಗ, ಹಂಚಿಕೆ ಹಾಗೂ ಸಾಂದ್ರತೆಗಳನ್ನು ಕುರಿತ ಪರಿಚಯವಿದೆ.

**ಸಾಮರ್ಥ್ಯಗಳು.**

1 ದಕ್ಷಿಣ ಅಮೆರಿಕದ ಸ್ಥಾನ (ನೆಲೆ), ವಿಸ್ತೀರ್ಣ (ವಿಸ್ತಾರ) ಹಾಗೂ ಭೌಗೋಳಿಕ ಸನ್ನಿವೇಶಗಳ ಬಗ್ಗೆ ತಿಳಿಯುವುದು.

2 ದಕ್ಷಿಣ ಅಮೆರಿಕದ ನದಿ ಹಾಗೂ ಸರೋವರಗಳ ಬಗ್ಗೆ ಅರಿತುಕೊಳ್ಳುವುದು.

3 ದಕ್ಷಿಣ ಅಮೆರಿಕದ ವಾಯುಗುಣದ ವೈವಿಧ್ಯತೆ, ವೈವಿದ್ಯ ಪ್ರಾಣಿವರ್ಗ ಹಾಗೂ ಸಸ್ಯವರ್ಗಗಳನ್ನು ತಿಳಿಯುವುದು.

4 ದಕ್ಷಿಣ ಅಮೆರಿಕದ ಕೃಷಿ ಮತ್ತು ಪ್ರಾಣಿಸಾಕಣೆಯಲ್ಲಿನ ವಿಶಿಷ್ಟತೆಯನ್ನು ಅರಿಯುವುದು.

5 ದಕ್ಷಿಣ ಅಮೆರಿಕದ ಜನಸಂಖ್ಯೆ, ಜನಾಂಗೀಯ ಮಿಶ್ರಣ, ಹಂಚಿಕೆ, ಸಾಂದ್ರತೆಗಳನ್ನು ತಿಳಿಯುವುದು.

NOT TO BE REPUBLISHED ©KTBS

ದಕ್ಷಿಣ ಅಮೆರಿಕವು ಪ್ರಪಂಚದ ನಾಲ್ಕನೇ ಅತಿ ದೊಡ್ಡ ಭೂಖಂಡವಾಗಿದೆ. 1498ರಲ್ಲಿ ಕ್ರಿಸ್ಟೋಫರ್ ಕೊಲಂಬಸನು ಈ ಭೂಖಂಡವನ್ನು ತಲುಪಿ, ಅದನ್ನು ಭಾರತವೆಂದು ಭಾವಿಸಿದ. ಅಲ್ಲಿನ ಸ್ಥಳೀಯರನ್ನು ರೆಡ್ ಇಂಡಿಯನ್ಸ್‌ರೆಂದು ಕರೆದನು. ನಂತರ ಯುರೋಪಿಯನ್ನರು (ಸ್ಪ್ಯಾನಿಷ್ ಮತ್ತು ಪೋರ್ಚುಗೀಸರು) ಈ ಭೂಖಂಡಕ್ಕೆ ಮುಗಿಬಿದ್ದರು.

ದಕ್ಷಿಣ ಅಮೆರಿಕವು ಆ್ಯಂಡೀಸ್ ಪರ್ವತ ಮತ್ತು ಅಮೆಜಾನ್ ನದಿಯಿಂದ ಕೂಡಿರುವ ವಿಶೇಷವಾದ ಭೂಭಾಗವಾಗಿದೆ. ಅದು ಪ್ರಪಂಚದಲ್ಲೇ ಅತ್ಯಧಿಕ ಕಾಫಿಯನ್ನು ಉತ್ಪಾದಿಸುತ್ತಿದೆ. ಅದನ್ನು ಸಾಮಾನ್ಯವಾಗಿ 'ಹುಲ್ಲುಗಾವಲುಗಳ ನಾಡು' ಎಂದು ಕರೆಯಲಾಗಿದೆ.

## ನೆಲೆ, ವಿಸ್ತಾರ ಮತ್ತು ಭೌತಿಕ ಅಂಶಗಳು

ದಕ್ಷಿಣ ಆಮೆರಿಕ ಖಂಡದ ಬಹುಭಾಗವು ದಕ್ಷಿಣಾರ್ಧಗೋಳದಲ್ಲಿದೆ. ಭೂಮಧ್ಯರೇಖೆ ಮತ್ತು ಮಕರ ಸಂಕ್ರಾಂತಿ ವೃತ್ತಗಳು ಈ ಖಂಡದ ಮೂಲಕ ಹಾದುಹೋಗಿವೆ.



©KTBS NOT TO BE REPUBLISHED

*ದಕ್ಷಿಣ ಅಮೆರಿಕ ಪ್ರಾಕೃತಿಕ*

ಇದು ಉತ್ತರದಲ್ಲಿ ಅಗಲವಾಗಿಯೂ ಮತ್ತು ದಕ್ಷಿಣದ ಕಡೆಗೆ ಕಿರಿದಾಗಿದ್ದು ತ್ರಿಕೋನಾಕಾರವಾಗಿದೆ. ಅದರ ಅಕ್ಷಾಂಶಿಕ ವಿಸ್ತೀರ್ಣವು $12^0$ ಉ. ಅಕ್ಷಾಂಶದಿಂದ $56^0$ ದಕ್ಷಿಣ ಅಕ್ಷಾಂಶದವರೆಗೂ ಮತ್ತು ರೇಖಾಂಶಿಕವಾಗಿ $35^0$ ಪ. ರೇಖಾಂಶದಿಂದ $81^0$ ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ. ದಕ್ಷಿಣ ಅಮೆರಿಕ ಖಂಡವು ಪಶ್ಚಿಮಾರ್ಧಗೋಳದಲ್ಲಿ ನೆಲೆಗೊಂಡಿದೆ.

ದಕ್ಷಿಣ ಅಮೆರಿಕ ಖಂಡವು ಉತ್ತರ ಭಾಗವನ್ನು ಹೊರತುಪಡಿಸಿ ಉಳಿದೆಲ್ಲಾ ದಿಕ್ಕುಗಳು ಜಲಭಾಗಗಳಿಂದ ಸುತ್ತುವರೆದಿದೆ. ಉತ್ತರದಲ್ಲಿ ಪನಾಮ ಕಾಲುವೆಯು ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನು ಪ್ರತ್ಯೇಕಿಸಿದೆ. ದಕ್ಷಿಣ ಅಮೆರಿಕ ಖಂಡವು ಉತ್ತರದಲ್ಲಿ ಕೆರಿಬಿಯನ್ ಸಮುದ್ರಗಡಿಯಿಂದ, ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ ಅಟ್ಲಾಂಟಿಕ್ ಸಾಗರದಿಂದ, ಪಶ್ಚಿಮದಲ್ಲಿ ಪೆಸಿಫಿಕ್ ಮಹಾಸಾಗರದಿಂದ ಮತ್ತು ದಕ್ಷಿಣದಲ್ಲಿ ಅಂಟಾರ್ಕ್ಟಿಕ್ ಸಾಗರದ ಹಿಮನೀರಿನಿಂದ ಆವರಿಸಲ್ಪಟ್ಟಿದೆ.

ದಕ್ಷಿಣ ಅಮೆರಿಕದ ಒಟ್ಟು ಭೂಭಾಗವು ಸುಮಾರು 177.1 ಲಕ್ಷ ಚ.ಕಿ.ಮೀ.ಗಳಷ್ಟಿದ್ದು ಅದು ಭಾರತಕ್ಕಿಂತಲೂ 3–1/2 ಪಟ್ಟು ದೊಡ್ಡದಾಗಿದೆ. ಈ ಖಂಡದಲ್ಲಿ ಒಟ್ಟು ಹದಿಮೂರು ರಾಷ್ಟ್ರಗಳಿವೆ. ಬ್ರೆಜಿಲ್ ಅತಿ ದೊಡ್ಡ ಮತ್ತು ಫ್ರೆಂಚ್ ಗಯಾನವು ಅತಿ ಚಿಕ್ಕ ರಾಷ್ಟ್ರವಾಗಿದೆ, ಬೊಲಿವಿಯಾ ಮತ್ತು ಪರಾಗ್ವೆ ಹೊರತುಪಡಿಸಿ ದಕ್ಷಿಣ ಅಮೆರಿಕದ ಎಲ್ಲಾ ದೇಶಗಳು ಕರಾವಳಿ ತೀರವನ್ನು ಹೊಂದಿವೆ. ಚಿಲಿ ದೇಶವು ನೀಳವಾದ ರಾಷ್ಟ್ರವಾಗಿದೆ.

- ಪನಾಮ ಕಾಲುವೆಯು (1912) ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳ ಮಧ್ಯೆ ಇರುವ ಮುಖ್ಯ ಸಾಗರ ಮಾರ್ಗವಾಗಿದೆ.
- ಅರ್ಜೆಂಟೈನಾ ಮತ್ತು ಬ್ರೆಜಿಲ್‌ಗಳು ಫುಟ್‌ಬಾಲ್ ಆಟಕ್ಕೆ ಪ್ರಖ್ಯಾತವಾಗಿವೆ.
- 2020ರಲ್ಲಿ ಟೋಕಿಯೋ, ಜಪಾನ್‌ನಲ್ಲಿ ಒಲಿಂಪಿಕ್ ಕ್ರೀಡಾಕೂಟ ನಡೆಯಿತು.
- ವೆನಿಜೂಲ ದೇಶವು ಮಾಡಲಿಂಗ್ ಮತ್ತು ವಿನ್ಯಾಸಕ್ಕೆ ಹೆಸರುವಾಸಿಯಾಗಿದೆ.
- ಸಾವೋ ಪೌಲೊ ಸಿಟಿ ಆಫ್ ಸ್ಕೈಸ್ಕೇಪರ್ (ಗಗನಚುಂಬಿ ಕಟ್ಟಡಗಳ ಶಹರ) ಎಂದು ಪ್ರಖ್ಯಾತವಾಗಿದೆ.

## ಮೇಲ್ಮೈ ಲಕ್ಷಣಗಳು

ದಕ್ಷಿಣ ಅಮೆರಿಕವು ವಿಶಿಷ್ಟವಾದ ಭೂಮೇಲ್ಮೈ ಲಕ್ಷಣಗಳನ್ನು ಹೊಂದಿದೆ. ಅದು ಹಿಮಾವೃತವಾದ ಶಿಖರಗಳನ್ನು ಮತ್ತು ದಟ್ಟವಾದ (ಉಷ್ಣವಲಯದ) ಸಮಭಾಜಕವೃತ್ತದ ಅರಣ್ಯಗಳನ್ನು ಹೊಂದಿದೆ. ಈ ಭೂಖಂಡವು ಅತಿ ಫಲವತ್ತಾದ ಮೈದಾನ ಪ್ರದೇಶ ಅಂತೆಯೇ ಅನುಪಯುಕ್ತ ಮರುಭೂಮಿಗಳನ್ನು ಹೊಂದಿದೆ. ಈ ಖಂಡದ ಪ್ರಮುಖ ಪ್ರಾಕೃತಿಕ ವಿಭಾಗಗಳೆಂದರೆ:

1 ಆ್ಯಂಡೀಸ್ ಪರ್ವತಗಳು
2 ಪೂರ್ವದ ಉನ್ನತ ಪ್ರದೇಶಗಳು
3 ಕೇಂದ್ರೀಯ ತಗ್ಗು ಪ್ರದೇಶಗಳು
4 ಪಶ್ಚಿಮದ ಕರಾವಳಿ ಮೈದಾನಗಳು

© KTBS NOT TO BE REPUBLISHED

## 1 ಆ್ಯಂಡೀಸ್ ಪರ್ವತಗಳು

ಆ್ಯಂಡೀಸ್ ಪರ್ವತಗಳು ಪೆಸಿಫಿಕ್ ಸಾಗರದ ಕರಾವಳಿ ತೀರದುದ್ದಕ್ಕೂ ಸುಮಾರು 6,440 ಕಿ.ಮೀ.ಗಳಷ್ಟು ದೂರ ಹಬ್ಬಿರುವ ಪ್ರಪಂಚದ ಅತ್ಯಂತ ಉದ್ದವಾದ ಪರ್ವತ ಸರಣಿಯಾಗಿದೆ. ಇವು ಪೆಸಿಫಿಕ್ ಸಾಗರದಂಚಿನ ಅಗ್ನಿಯುಂಗುರ ಪ್ರದೇಶದಲ್ಲಿರುವುದರಿಂದ ಈ ಭಾಗದಲ್ಲಿ ಹಲವು ಭೂಕಂಪನಗಳು ಮತ್ತು ಜ್ವಾಲಾಮುಖಿಗಳಿರುವುದನ್ನು ಗುರುತಿಸಬಹುದು. ಮೌಂಟ್ ಅಕನ್‌ಕಾಗುವ (6,960 ಮಿ.) ಅರ್ಜೆಂಟೈನಾ–ಚಿಲಿ ಗಡಿಭಾಗದಲ್ಲಿರುವ ಅತಿ ಎತ್ತರದ ಶಿಖರವಾಗಿದೆ. ಆ್ಯಂಡೀಸ್ ಪರ್ವತ ಪ್ರದೇಶವು ತಾಮ್ರ ಮತ್ತು ತವರಗಳಂತಹ ಶ್ರೀಮಂತ ಖನಿಜಗಳನ್ನು ಹೊಂದಿದೆ.



*ಆ್ಯಂಡೀಸ್ ಪರ್ವತಗಳು*

## 2 ಪೂರ್ವದ ಉನ್ನತ ಪ್ರದೇಶಗಳು

ಈ ಪ್ರದೇಶವು ಎರಡು ವಿಭಿನ್ನ ಉನ್ನತ ಪ್ರದೇಶಗಳನ್ನು ಒಳಗೊಂಡಿದೆ. (i) ಉತ್ತರದಲ್ಲಿ ಗಯಾನ ಉನ್ನತ ಪ್ರದೇಶಗಳು (ಭೂಫಲಕ) ಮತ್ತು (ii) ದಕ್ಷಿಣದಲ್ಲಿ ಬ್ರೆಜಿಲ್ ಉನ್ನತ ಪ್ರದೇಶಗಳು (ಭೂಫಲಕ). ಇವುಗಳು ಭಾರತದ ದಕ್ಷಿಣ ಪ್ರಸ್ಥಭೂಮಿಯಂತೆ ಹಳೆಯ ಶಿಲೆಗಳಿಂದ ರಚಿಸಲ್ಪಟ್ಟಿವೆ. ಓರಿನೊಕೊ ನದಿಯ ಉಪನದಿಯಾದ ಚೂರನ್ ವಿಶ್ವದ ಅತ್ಯಂತ ಎತ್ತರವಾದ ಏಂಜಲ್ ಜಲಪಾತವನ್ನು (974 ಮೀ.) ಗಯಾನ ಭೂಫಲಕದಲ್ಲಿ ನಿರ್ಮಾಣಮಾಡಿದೆ.



*ಏಂಜಲ್ ಜಲಪಾತ*

## 3 ಕೇಂದ್ರೀಯ ತಗ್ಗು ಪ್ರದೇಶಗಳು

ಆ್ಯಂಡೀಸ್ ಪರ್ವತಗಳು ಮತ್ತು ಪೂರ್ವದ ಉನ್ನತ ಭೂಭಾಗಗಳ ಮಧ್ಯೆ ಕಂಡುಬರುತ್ತವೆ. ಇವು ವಿಶಾಲವಾದ ನದಿ ಜಲಾನಯನ ಪ್ರದೇಶಗಳಿಂದ ಕೂಡಿವೆ. ಅವುಗಳೆಂದರೆ: ಅಮೆಜಾನ್, ಒರಿನೊಕೊ ಮತ್ತು ಲಾಪ್ಲಾಟಾ ನದಿಮುಖಜಭೂಮಿಗಳಾಗಿವೆ. ಅವುಗಳಲ್ಲಿ ಅಮೆಜಾನ್ ನದಿ ಜಲಾನಯನ ಪ್ರದೇಶವು ಅತಿ ದೊಡ್ಡದಾಗಿದ್ದು ಪ್ರಖ್ಯಾತವಾಗಿದೆ.

## 4 ಪಶ್ಚಿಮ ಕರಾವಳಿ ಮೈದಾನಗಳು

ಇವುಗಳು ಕಿರಿದಾದ ಮೈದಾನಗಳಾಗಿದ್ದು ಪೆಸಿಫಿಕ್ ಮಹಾಸಾಗರ ಮತ್ತು ಆ್ಯಂಡೀಸ್ ಪರ್ವತ ಶ್ರೇಣಿಗಳ ಮಧ್ಯೆ ಕಂಡುಬರುತ್ತವೆ. ಪಶ್ಚಿಮ ಕರಾವಳಿ ತೀರವು ಬಹುತೇಕ ಒಡೆದ ತೀರದಂತಿದೆ. ಏಕೆಂದರೆ ಕರಾವಳಿಯಿಂದ ಆ್ಯಂಡೀಸ್ ಪರ್ವತವು ಕಡಿದಾಗಿ ಮೇಲಕ್ಕೆತ್ತಲ್ಪಟ್ಟಿದೆ. ಕೇಂದ್ರೀಯ ಚಿಲಿ ಮತ್ತು ಕೊಲಂಬಿಯಗಳ ಪಶ್ಚಿಮ ಕರಾವಳಿ ತೀರದುದ್ದಕ್ಕೂ ಕಿರಿದಾದ ಕರಾವಳಿ ಮೈದಾನಗಳನ್ನು ಕಾಣಬಹುದು. ಈ ಕರಾವಳಿಯು ಒಡೆದ ತೀರವಾಗಿದೆ. ಹಲವಾರು ದೊಡ್ಡನಗರಗಳು ಕರಾವಳಿ ಮೈದಾನದಲ್ಲಿ ನೆಲೆಗೊಂಡಿವೆ. ಕರಾವಳಿಯ ದಕ್ಷಿಣ ಭಾಗದಲ್ಲಿ ಹಾಗೂ ಇತರ ಕಡೆಗಳಲ್ಲಿ ಹಲವು ದ್ವೀಪಗಳಿವೆ.

## ನದಿಗಳು ಮತ್ತು ಸರೋವರಗಳು

ಅಮೆಜಾನ್, ಪರಾನ, ಪರಗ್ವೆ, ಉರುಗ್ವೆ ಮತ್ತು ಒರಿನೊಕೊಗಳು ದಕ್ಷಿಣ ಅಮೆರಿಕದ ಪ್ರಮುಖ ನದಿವ್ಯೂಹಗಳಾಗಿವೆ. ಅಮೆಜಾನ್ (6,450 ಕಿ.ಮೀ.) ನದಿಯು ಆ್ಯಂಡೀಸ್ ಪರ್ವತದಲ್ಲಿ ಹುಟ್ಟುವ ದಕ್ಷಿಣ ಅಮೆರಿಕದ ಅತಿ ಉದ್ದವಾದ ನದಿಯಾಗಿರುವುದಲ್ಲದೆ ಪ್ರಪಂಚದ ಅತಿ ದೊಡ್ಡ ನದಿಯಾಗಿದೆ. ಈ ನದಿಯ ಪಾತ್ರದುದ್ದಕ್ಕೂ ಬಹುದೂರ ನೌಕಾಯಾನಕ್ಕೆ ಅನುಕೂಲವಾಗಿದೆ. ಒರಿನೊಕೊ ಮತ್ತೊಂದು ಪ್ರಮುಖವಾದ ನದಿವ್ಯೂಹವಾಗಿದೆ. ಪರಾನ, ಪರಗ್ವೆ ಮತ್ತು ಉರುಗ್ವೆಗಳ ಒಗ್ಗೂಡಿದ ನದಿವ್ಯೂಹವನ್ನು ಲಾಪ್ಲಾಟಾವೆಂದು ಕರೆಯಲಾಗಿದೆ.

ಟಿಟಿಕಾಕ ಸರೋವರವು (ಬೊಲಿವಿಯ) ಪ್ರಪಂಚದಲ್ಲಿಯೇ ಎತ್ತರದಲ್ಲಿರುವ ಸರೋವರವಾಗಿದೆ ಹಾಗು ದಕ್ಷಿಣ ಅಮೆರಿಕದ ನೌಕಾಯಾನಕ್ಕೆ ಸಹಾಯಕವಾಗಿರುವ ಸರೋವರವಾಗಿದೆ.

© KTBS NOT TO BE REPUBLISHED



*ಟಿಟಿಕಾಕ ಸರೋವರ*




NOT TO BE REPUBLISHED

*ದಕ್ಷಿಣ ಅಮೆರಿಕ ನದಿಗಳು*

- ಅಮೆಜಾನ್ – ನದಿ
  - – ಅನಕೊಂಡ ಮತ್ತು ಪಿರಾನ್ಹ
  - – ಅತಿದೊಡ್ಡ ನದಿ, 1,000ಕ್ಕಿಂತ ಅಧಿಕವಾದ ಉಪನದಿಗಳು
  - – ವಿಶ್ವಭೂಭಾಗ ಸುಮಾರು 11.5%ದಷ್ಟು ಭೂಭಾಗ

## ವಾಯುಗುಣ

ದಕ್ಷಿಣ ಅಮೆರಿಕವು ವೈವಿಧ್ಯಮಯ ವಾಯುಗುಣವನ್ನು ಹೊಂದಿದೆ. ಈ ಖಂಡದ ವಾಯುಗುಣದಲ್ಲಿನ ವ್ಯತ್ಯಾಸಕ್ಕೆ ಅಲ್ಲಿನ ಪೆಸಿಫಿಕ್ ಹಾಗು ಅಟ್ಲಾಂಟಿಕ್ ಮಹಾಸಾಗರಗಳ ಸಾಮೀಪ್ಯ ಕಾರಣವಾಗಿದೆ.

ಈ ಖಂಡದ ಉತ್ತರ ಭಾಗದಲ್ಲಿ ಭೂಮಧ್ಯರೇಖೆಯು ಹಾದುಹೋದರೆ, ಇದರ ದಕ್ಷಿಣ ಭಾಗದಲ್ಲಿ ಮಕರ ಸಂಕ್ರಾಂತಿ ವೃತ್ತವು ಹಾದು ಹೋಗುತ್ತದೆ. ಈ ಎರಡು ಅಕ್ಷಾಂಶಗಳ ಮಧ್ಯೆ ಕಂಡುಬರುವ ಭೂಭಾಗವು ಉಷ್ಣವಲಯದಲ್ಲಿ ಕಂಡುಬರುತ್ತದೆ. ಉತ್ತರದಲ್ಲಿ ಅಗಲವಾದ ಭಾಗವು ಉಷ್ಣವಲಯ ವಾಯುಗುಣದ ಪ್ರಭಾವಕ್ಕೆ ಒಳಪಟ್ಟಿದೆ. ಆದ್ದರಿಂದ ಇಲ್ಲಿನ ವಾಯುಗುಣವು ಶಾಖ ಮತ್ತು ತೇವಯುತವಾಗಿದೆ. ಸಮಭಾಜಕವೃತ್ತವಿರುವುದರಿಂದ ಅಮೆಜಾನ್ ನದಿ ಬಯಲು ಉಷ್ಣ ಮತ್ತು ತೇವಯುತ ಸಮಭಾಜಕವೃತ್ತದ ವಾಯುಗುಣವನ್ನು ಹೊಂದಿದೆ. ಈ ಪ್ರದೇಶವು ಬಹುತೇಕವಾಗಿ ಪ್ರತಿನಿತ್ಯವೂ ಪರಿಸರಣ ಮಳೆಯ ಅನುಭವವನ್ನು ಹೊಂದಿದೆ. ಈ ಪ್ರದೇಶದಲ್ಲಿ ಬೀಳುವ ಭಾರಿ ಮಳೆಯು ದಟ್ಟವಾದ ಅರಣ್ಯದ ಬೆಳವಣಿಗೆಗೆ ಕಾರಣವಾಗಿದೆ. ಅಮೆಜಾನ್ ಮುಖಜಭೂಮಿಯು ದಟ್ಟ ಅರಣ್ಯವನ್ನು ಹೊಂದಿದ್ದು, ಸಸ್ಯವರ್ಗ ಮತ್ತು ಪ್ರಾಣಿವರ್ಗಗಳಿಗೆ ನೆಲೆಯನ್ನು ಕಲ್ಪಿಸಿಕೊಟ್ಟಿದೆ. ಸರೀಸೃಪಗಳು, ಪಕ್ಷಿಗಳು ಮತ್ತು ಮಂಗಗಳು ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

© KTBS NOT TO BE REPUBLISHED

ಒಂದು ಭೂಭಾಗದ ಜಲರಾಶಿಯು ಬೆಳಗಿನಿಂದಲೇ ಸೂರ್ಯನ ಶಾಖದಿಂದ ಆವಿಯಾಗಿ ಮೇಲೇರಿ, ಮೋಡವಾಗಿ ಅಂದೇ ಅದೇ ಪ್ರದೇಶದಲ್ಲಿ ಮಳೆಯಾಗುವುದಕ್ಕೆ 'ಪರಿಸರಣ ಮಳೆ' ಎನ್ನುತ್ತಾರೆ. ಸಮಭಾಜಕ ವೃತ್ತ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆಯನ್ನು ಅಪರಾಹ್ನದ ಮಳೆ, ಚಹ ವಿರಾಮದ ಮಳೆ, ಮತ್ತು 4 ಗಂಟೆಯ ಮಳೆ ಎಂದು ಕರೆಯಲಾಗಿದೆ.

ಈ ಖಂಡದ ಪಶ್ಚಿಮ ಅಂಚಿನುದ್ದಕ್ಕೂ ಆ್ಯಂಡೀಸ್ ಪರ್ವತಗಳು ಹಬ್ಬಿವೆ. ಕರಾವಳಿ ಅಂಚಿನಲ್ಲಿ ಬೀಸುವ ಮಾರುತಗಳು ವಾಯುಮುಖ ಭಾಗದ ಕಡೆಗೆ ಮಳೆಯನ್ನು ತರುತ್ತವೆ. ಆದರೆ, ಆ್ಯಂಡೀಸ್ ಪರ್ವತದ ಪೂರ್ವ ಭಾಗಗಳು ಕಡಿಮೆ ಮಳೆಯನ್ನು ಪಡೆಯುತ್ತವೆ. ಇದು ಮಳೆನೆರಳಿನ ಪ್ರದೇಶವಾಗಿದ್ದು, ಇಲ್ಲಿ ದಕ್ಷಿಣ ಅಮೆರಿಕದ ಸಮಶೀತೋಷ್ಣವಲಯದ ಮರುಭೂಮಿಗಳಿವೆ. ಅಟಕಾಮ ಮರುಭೂಮಿಯು (ಚಿಲಿ) ಭೂಮಿಯ ಮೇಲಿನ ಅತಿ ಶುಷ್ಕ ಪ್ರದೇಶವಾಗಿದೆ. ಕಳೆದ 200 ವರ್ಷಗಳಿಂದಲೂ ಇಲ್ಲಿ ಮಳೆ ಬಿದ್ದಿಲ್ಲ.



***ಅಟಕಾಮ ಮರುಭೂಮಿ***

## ಸ್ವಾಭಾವಿಕ ಸಸ್ಯವರ್ಗ



***ನಿತ್ಯ ಹರಿದ್ವರ್ಣದ ಕಾಡು***



***ಸೆಲ್ವಾಸ್***

ಅಮೆಜಾನ್ ಬಯಲಿನ ಸಮಭಾಜಕವೃತ್ತ ಪ್ರದೇಶವು ವಿಶ್ವದ ಅತಿದೊಡ್ಡ ಮಳೆಅರಣ್ಯವಾಗಿದ್ದು, ಸ್ಥಳೀಯವಾಗಿ **ಸೆಲ್ವಾಸ್** ಎಂದು ಕರೆಯಲಾಗಿದೆ. ಗಟ್ಟಿ ಮರದ ನಿತ್ಯ ಹರಿದ್ವರ್ಣ ಕಾಡುಗಳು ಸಾಂದ್ರವಾದ ಚಪ್ಪರದಾಕಾರದ ಮರಗಳಿಂದ ಕೂಡಿರುವುದನ್ನು ಇಲ್ಲಿ ಕಾಣಬಹುದು. ಮಹಾಗನಿ ಮತ್ತು ಎಬೋನಿಗಳು ಈ ಪ್ರದೇಶದಲ್ಲಿ ಕಂಡುಬರುವ ಬೆಲೆಬಾಳುವ ಮರಗಳಾಗಿವೆ. ಇಲ್ಲಿನ ರಬ್ಬರ್ ಮರಗಳನ್ನು 'ಲ್ಯಾಟೆಕ್ಸ್' (ರಬ್ಬರ್ ಹಾಲು) ತೆಗೆಯಲು ಬಳಸಲಾಗುತ್ತದೆ. ಸಮಭಾಜಕವೃತ್ತ ಅರಣ್ಯಗಳ ಎರಡೂ ಪಾರ್ಶ್ವಭಾಗಗಳಲ್ಲಿ ಹುಲ್ಲುಗಾವಲುಗಳಿವೆ. ಇವುಗಳನ್ನು ಓರಿನೊಕೊ ನದಿ ಬಯಲಿನಲ್ಲಿ ಲಾನೋಸ್

ಎಂದು ಕರೆದರೆ, ಬ್ರೆಜಿಲಿನ ಉನ್ನತ ಭಾಗಗಳಲ್ಲಿ (ವೆನಿಜೂಲ) **ಕಾಂಪಾಸ್** ಎಂದು ಕರೆಯಲಾಗುತ್ತದೆ. ಬ್ರೆಜಿಲಿನ ಆಗ್ನೇಯ ಕರಾವಳಿಯು ಉಷ್ಣವಲಯದ ಎಲೆಯುದುರುವ ಕಾಡುಗಳಿಂದ ಕೂಡಿದೆ.



@KTBS NOT TO BE REPUBLISHED

*ದಕ್ಷಿಣ ಅಮೆರಿಕ ಸ್ವಾಭಾವಿಕ ಸಸ್ಯವರ್ಗ*

ದಕ್ಷಿಣ ಅಮೆರಿಕ 'ಹುಲ್ಲುಗಾವಲುಗಳ ನಾಡು'

- ವೆನಿಜೂಲದ ಲಾನೋಸ್ (Lianos)
- ಬ್ರೆಜಿಲ್‌ನ ಕಾಂಪಾಸ್ (Compos)
- ಅರ್ಜೆಂಟೈನಾದ ಪಂಪಾಸ್ (Pampos)

ಗ್ರಾನ್ ಚಾಕೋ ಪ್ರದೇಶದ ದಕ್ಷಿಣ ಭಾಗವು (ಅರ್ಜೆಂಟೈನಾ ಮತ್ತು ಉರುಗ್ವೆ) ಅತಿ ವಿಸ್ತಾರವಾದ ಸಮಶೀತೋಷ್ಣ ವಲಯದ ಹುಲ್ಲುಗಾವಲುಗಳಿಂದ ಕೂಡಿದ್ದು, ಅದನ್ನು **ಪಂಪಾಸ್** ಎಂದು ಕರೆಯಲಾಗಿದೆ. ಆ್ಯಂಡೀಸ್ ಪರ್ವತದ ಪೂರ್ವದ ಕಡೆಗೆ ಪಟಗೋನಿಯ ಪ್ರಸ್ಥಭೂಮಿಯಿದ್ದು ಕುರುಚಲು ಸಸ್ಯವರ್ಗಗಳಿಂದ ಕೂಡಿದ ಸಮಶೀತೋಷ್ಣವಲಯ ಮರುಭೂಮಿಯನ್ನು ಹೊಂದಿದೆ. ಕೇಂದ್ರೀಯ ಪ್ರದೇಶವು ಮಿಶ್ರ ವಿಧದ ಅರಣ್ಯಗಳಿಂದ ಕೂಡಿದೆ.



*ಸಮಶೀತೋಷ್ಣವಲಯದ ಹುಲ್ಲುಗಾವಲು*

@KTBS NOT TO BE REPUBLISHED

## ವನ್ಯ ಜೀವಿಗಳು

ದಕ್ಷಿಣ ಅಮೆರಿಕವು ವೈವಿಧ್ಯಮಯವಾದ ವನ್ಯಪ್ರಾಣಿಗಳು, ಪಕ್ಷಿಗಳು ಮತ್ತು ಸರೀಸೃಪಗಳನ್ನು ಹೊಂದಿದೆ. ದಕ್ಷಿಣ ಅಮೆರಿಕ ಖಂಡವನ್ನು 'ಪಕ್ಷಿಗಳ ಖಂಡ' ಎಂದು ಕರೆಯಲಾಗಿದೆ. ಕಾಂಡರ್ ಪ್ರಪಂಚದ ಅತಿದೊಡ್ಡ ಪಕ್ಷಿಯಾಗಿದೆ. ಆಫ್ರಿಕದಲ್ಲಿನ ಆಸ್ಟ್ರಿಚ್‌ನಂತೆ ರ್ಹಿಯಾ ಹಾರಲಾರದ ಒಂದು ದೊಡ್ಡ ಪಕ್ಷಿಯಾಗಿದೆ. ಹಾರುವ ಮಂಗ, ಅಳಿಲು ಮತ್ತು ಮಂಗಗಳು ಅಮೆಜಾನ್ ಅರಣ್ಯಗಳ ಮರಗಳಲ್ಲಿ ವಾಸಿಸುತ್ತವೆ. ಹೆಬ್ಬಾವು (ಅನಕೊಂಡ) ಇಲ್ಲಿನ ಮಳೆ ಅರಣ್ಯಗಳಲ್ಲಿ ಜೀವಿಸುತ್ತಿರುವ ಅತಿ ದೊಡ್ಡ ಸರೀಸೃಪವಾಗಿದೆ. ಪ್ಯೂಮ ಮತ್ತು ಜಾಗ್ವಾರ್‌ಗಳು ದೊಡ್ಡ ಪ್ರಾಣಿಗಳಾಗಿದ್ದು ಕೋತಿ ಮತ್ತು ಇತರ ಸಣ್ಣ ಪ್ರಾಣಿಗಳನ್ನು ಆಹಾರವನ್ನಾಗಿ ಉಪಯೋಗಿಸುತ್ತಿವೆ. ಲಾಮ ಮತ್ತು ಆಲ್‌ಪಾಕಗಳು ಒಂಟೆಯಂತಹ ಪ್ರಾಣಿಗಳಾಗಿದ್ದು, ಅವು ಉದ್ದವಾದ ಕುತ್ತಿಗೆಯನ್ನು ಹೊಂದಿವೆ. ಇವುಗಳನ್ನು ಸ್ಥಳೀಯ ನಿವಾಸಿಗಳು ತಮ್ಮ ದೈನಂದಿನ ಕೆಲಸಗಳಲ್ಲಿ ಬಳಸಿಕೊಳ್ಳುತ್ತಾರೆ. ಗಾಲ್ಪಗೋಸ್ ದ್ವೀಪಗಳು ಬೃಹದಾಕಾರದ ಆಮೆಗಳಿಗೆ ಪ್ರಖ್ಯಾತಿಯಾಗಿವೆ. ಅಲ್ಲಿನ ನೊಣಗಳು ಮತ್ತು ಕೀಟಗಳು ನಿದ್ರಾ ಹೀನತೆಗೆ ಕಾರಣಗಳಾಗಿವೆ. ಅಮೆಜಾನ್ ನದಿಯು ವೈವಿಧ್ಯಮಯ ಮೀನುಗಳನ್ನು ಹೊಂದಿದೆ.ಅವುಗಳೆಂದರೆ ಸ್ಟಿಂಗ್ ರೇ, ಎಲೆಕ್ಟ್ರಿಕ್ ಫಿಷ್ ಮತ್ತು ಪಿರಾನ್ಹ [ವಿಶ್ವದಲ್ಲೇ ಅತಿ ಅಪಾಯಕಾರಿ ಮೀನು]ಗಳಾಗಿವೆ. ನದಿಗಳು ಮೊಸಳೆಗಳನ್ನು ಸಹ ಹೊಂದಿವೆ.



ಲಾಮ



ಜಾಗ್ವಾರ್



ಕಾಂಡರ್



ಅನಕೊಂಡ



ಆಲ್‌ಪಾಕ



ಪ್ಯೂಮ



ಆಮೆ

NOT TO BE REPUBLISHED



ಪಿರಾನ್ಹ ಮೀನು



ರ್‍ಹಿಯಾ

## ಕೃಷಿ ಮತ್ತು ಪ್ರಾಣಿಸಾಕಣೆ

ದಕ್ಷಿಣ ಅಮೆರಿಕದಲ್ಲಿನ ಕೃಷಿ ಭೂಮಿ ಕಡಿಮೆಯಿದೆ. ಇದು ಕೇವಲ ಶೇ.10ರಷ್ಟು ಸಾಗುವಳಿ ಭೂಮಿಯಲ್ಲಿ ವ್ಯವಸಾಯದ ಬೆಳೆ ಬೆಳೆಯಲಾಗುತ್ತಿದೆ. ಪ್ರಮುಖವಾದ ಕೃಷಿ ಪ್ರದೇಶಗಳೆಂದರೆ ಅರ್ಜೆಂಟೈನದ ಪಂಪಾಸ್ ಮತ್ತು ಉರುಗ್ವೆ ಬ್ರೆಜಿಲ್‌ನ ಉನ್ನತ ಪ್ರದೇಶಗಳ ಭಾಗಗಳು ಹಾಗು ಮಧ್ಯ ಚಿಲಿಯ ಪೂರ್ವ ಕರಾವಳಿಗಳಾಗಿವೆ. ದಕ್ಷಿಣ ಅಮೆರಿಕದ ಅತಿ ಪ್ರಮುಖವಾದ ಬೆಳೆಗಳೆಂದರೆ ಮೆಕ್ಕೆ ಜೋಳ, ಗೋಧಿ, ಭತ್ತ, ಕಾಫಿ, ಹತ್ತಿ, ಕಬ್ಬು ಇತ್ಯಾದಿಗಳು.

ಮೆಕ್ಕೆ ಜೋಳವು ದಕ್ಷಿಣ ಅಮೆರಿಕದ ದೇಶೀಯ ಬೆಳೆಯಾಗಿದೆ ಹಾಗೂ ಇದು ಬೆಚ್ಚನೆಯ ಉಷ್ಣವಲಯ ಪ್ರದೇಶದಲ್ಲಿ ಅತಿ ಪ್ರಮುಖವಾದ ಆಹಾರ ಬೆಳೆಯಾಗಿದೆ. ಗೋಧಿಯನ್ನು ಅರ್ಜೆಂಟೈನ ಮತ್ತು ಚಿಲಿ ದೇಶಗಳ ತಂಪಾದ ಸಮಶೀತೋಷ್ಣವಲಯ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಗೋಧಿಯನ್ನು ಅರ್ಜೆಂಟೈನದಿಂದಲೂ ಸಹ ರಫ್ತು ಮಾಡಲಾಗುತ್ತದೆ. ಆಲುಗಡ್ಡೆಯನ್ನು ಆ್ಯಂಡೀಸ್ ಪ್ರದೇಶದಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಭತ್ತವನ್ನು ಬ್ರೆಜಿಲ್‌ನ ಕರಾವಳಿ ತೀರದುದ್ದಕ್ಕೂ ಬೆಳೆಯಲಾಗುತ್ತಿದೆ.

ಬ್ರೆಜಿಲ್‌ನ್ನು 'ಪ್ರಪಂಚದ ಕಾಫಿಯ ಪಾತ್ರೆ' ಎಂದು ಕರೆಯಲಾಗಿದೆ. ಆಫ್ರಿಕದಲ್ಲಿರುವ ಇಥಿಯೋಪಿಯಾ ದೇಶದ 'ಕಾಫಿ' ಪ್ರದೇಶವು ಕಾಫಿ ಬೆಳೆಯ ಮೂಲವಾಗಿದ್ದು 'ಕಾಫಾ' ಅಥವಾ ಕಾಫೀ ಎನ್ನುತ್ತಾರೆ. ಬ್ರೆಜಿಲ್‌ನಲ್ಲಿ ಸಾವಿರಾರು ಕಾಫಿ ತೋಟಗಳಿವೆ. ರಿಯೋಡಿ ಜನೈರೊವನ್ನು 'ವಿಶ್ವದ ಕಾಫಿ ಬಂದರು' ಎಂದು ಕರೆಯಲಾಗಿದೆ.

NOT TO BE REPUBLISHED ©KTBS



*ಕಾಫಿ ತೋಟ*

ಆಹಾರೇತರ ಬೆಳೆಗಳಾದ ಕಾಫಿ ಹಾಗು ಕೋಕಾಗಳನ್ನು ಉತ್ಪಾದಿಸುವುದರಲ್ಲಿ ದಕ್ಷಿಣ ಅಮೆರಿಕವು ಒಂದು ಪ್ರಮುಖವಾದ ರಾಷ್ಟ್ರವಾಗಿದೆ. ಬ್ರೆಜಿಲ್ ವಿಶ್ವದಲ್ಲಿ ಅತಿ ಹೆಚ್ಚು ಕಾಫಿಯನ್ನು ಉತ್ಪಾದಿಸುತ್ತದೆ. ಕೊಲಂಬಿಯ ಮತ್ತು ಈಕ್ವೆಡಾರ್‌ಗಳು ಸಹ ಪ್ರಮುಖವಾಗಿ ಕಾಫಿಯನ್ನು ಉತ್ಪಾದಿಸುತ್ತವೆ. ಬ್ರೆಜಿಲ್‌ನ ಕರಾವಳಿ ಪ್ರದೇಶದಲ್ಲಿ ಅಪಾರ ಪ್ರಮಾಣದ ಕೋಕೊವನ್ನು ಉತ್ಪಾದಿಸಲಾಗುತ್ತಿದೆ.



*ಕಬ್ಬು*

©KTBS NOT TO BE REPUBLISHED

ಹತ್ತಿಯನ್ನು ಆ್ಯಂಡೀಸ್ ಪ್ರದೇಶದ ಶುಷ್ಕ ಇಳಿಜಾರುಗಳಲ್ಲಿ ಬೆಳೆಯಲಾಗುತ್ತಿದೆ ಹಾಗೂ ಇತರ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆ. ದಕ್ಷಿಣ ಅಮೆರಿಕವು ಕಬ್ಬು ಉತ್ಪಾದನೆಯ ಒಂದು ಪ್ರಮುಖ ರಾಷ್ಟ್ರವಾಗಿದ್ದು. ಬ್ರೆಜಿಲ್ ಕಬ್ಬನ್ನು ಉತ್ಪಾದಿಸುತ್ತಿರುವ ಪ್ರಮುಖ ರಾಷ್ಟ್ರವಾಗಿದ್ದು, ಇದು ಜಗತ್ತಿನ ಎರಡನೇ ಅಧಿಕ ಉತ್ಪಾದನಾ ರಾಷ್ಟ್ರವಾಗಿದೆ.

ಪಂಪಾಸ್ ಹುಲ್ಲುಗಾವಲುಗಳು ಪ್ರಾಣಿ ಸಾಕಣೆಗೆ ಸೂಕ್ತವಾಗಿವೆ. ಪ್ರಾಣಿ ಸಾಕಣೆಯು ಮುಖ್ಯವಾಗಿ ಕುದುರೆಗಳು, ಹಂದಿಗಳು, ಕುರಿ ಮತ್ತು ಹಸುಗಳನ್ನು ಒಳಗೊಂಡಿದೆ. ಒಂದು ಕಾಲದಲ್ಲಿ ಪ್ರಪಂಚದಲ್ಲಿ ದನದ ಮಾಂಸವನ್ನು ಅಧಿಕ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದ ದೇಶ ಅರ್ಜೆಂಟೈನವಾಗಿತ್ತು. ಮಾಂಸಕ್ಕಾಗಿ ಹಸು ಸಾಕಣೆ ಮಾಡಲು ಮೇವಿಗಾಗಿ ಪಂಪಾಸ್‌ಗಳು ಉತ್ತಮ ಹುಲ್ಲುಗಳಾಗಿವೆ. ಉತ್ತಮ ಹಾಗು ದಟ್ಟವಾದ ಹಸಿರು ಮೇವಿರುವ ಪ್ರದೇಶಗಳು ಡೈರಿ ಉತ್ಪನ್ನನೀಡುವ ಪ್ರಾಣಿಸಾಕಣೆಗಾಗಿ ಮೀಸಲಾಗಿದೆ. ಹಾಗೆಯೇ ಕಡಿಮೆ ಪ್ರಮಾಣದ ಮೇವಿರುವ ಪಟಗೋನಿಯದ ಮೈದಾನಗಳು ಮತ್ತು ಪರ್ವತಗಳು ಕುರಿ ಸಾಕಣೆಗೆ ಮೀಸಲಾಗಿವೆ. ಗೋಪಾಲಕರು (**ಗೌಶೋಸ್**) ಪಶುಪಾಲನೆ ಮಾಡುತ್ತಾರೆ.



*ಕುರಿ ಸಾಕಣೆ*



*ಹಸು ಸಾಕಣೆ*

ಪೆಸಿಫಿಕ್ ಮಹಾಸಾಗರದ ಕರಾವಳಿಯಂಚಿನಲ್ಲಿ ಅತ್ಯುತ್ತಮವಾದ ಮೀನುಗಾರಿಕಾ ಪ್ರದೇಶಗಳು ನೆಲೆಗೊಂಡಿವೆ. ಪೆರು ಮತ್ತು ಚಿಲಿ ದೇಶಗಳ ಕರಾವಳಿ ತೀರಗಳು ಅತಿ ಮುಖ್ಯವಾದ ಮೀನುಗಾರಿಕಾ ಕೇಂದ್ರಗಳನ್ನು ಹೊಂದಿದೆ. ಆದರೆ ಬಹುತೇಕ ಪ್ರಮಾಣದ ಇಲ್ಲಿನ ಮೀನುಗಳನ್ನು ಆಹಾರಕ್ಕಿಂತ ಹೆಚ್ಚಾಗಿ ಕೈಗಾರಿಕಾ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ. ಟಿಟಿಕಾಕ ಸರೋವರ ಮತ್ತು ಅಮೆಜಾನ್ ನದಿಗಳು ಸಿಹಿನೀರಿನ ಮೀನುಗಾರಿಕೆಗೆ ಪ್ರಾಮುಖ್ಯತೆ ಪಡೆದಿವೆ.







*ಮೀನುಗಾರಿಕೆ*

@KTBS NOT TO BE REPUBLISHED

## ಜನಸಂಖ್ಯೆ

ದಕ್ಷಿಣ ಅಮೆರಿಕದ ನಿವಾಸಿಗಳು ಮಿಶ್ರ ಜನಾಂಗೀಯ ಗುಂಪುಗಳಿಗೆ ಸೇರಿದವರಾಗಿದ್ದಾರೆ. ಯೂರೋಪಿಯನ್ನರು ಚಿನ್ನವನ್ನು ಅರಸಿ ಬಂದ ನಂತರ ಇಲ್ಲಿಯೇ ನೆಲೆಸಿ, ಇಲ್ಲಿನ ತೋಟಗಳಲ್ಲಿ ಕೆಲಸಮಾಡಲು ಆಫ್ರಿಕದಿಂದ ಗುಲಾಮರನ್ನು ಕರೆದು ತಂದರು. ಈ ಗುಂಪುಗಳ ನಡುವೆ ವಿವಾಹವೇರ್ಪಟ್ಟ ಪ್ರಯುಕ್ತ ಮಿಶ್ರ ಜನಾಂಗವು ನಿರ್ಮಾಣವಾಯಿತು. ದಕ್ಷಿಣ ಅಮೆರಿಕದಲ್ಲಿ ಮೂರು ಪ್ರಮುಖವಾದ ಜನಾಂಗಗಳಿವೆ.

ದಕ್ಷಿಣ ಅಮೆರಿಕವು ವಿಶ್ವದ ಸರಾಸರಿ (47%) ನಗರೀಕರಣ ಪ್ರಮಾಣಕ್ಕಿಂತ ಅತ್ಯಧಿಕ ಪ್ರಮಾಣದ ನಗರೀಕರಣ ಪ್ರಮಾಣವನ್ನು (80%) ಹೊಂದಿದೆ. ಅತ್ಯಧಿಕ ನಗರ ಜನಸಂಖ್ಯೆಯು ಉರುಗ್ವೆಯಲ್ಲಿದ್ದು (93%), ಕನಿಷ್ಟ ನಗರ ಜನಸಂಖ್ಯೆಯು ಗಯಾನದಲ್ಲಿದೆ (36%).

ದಟ್ಟಕಾಡಿನ ಅಮೆಜಾನ್ ಹಾಗೂ ಆ್ಯಂಡಿಯನ್ ಪರ್ವತಗಳು, ಅಟಕಾಮ ಮರುಭೂಮಿಗಳು ಮತ್ತು ಪೆಟಗೋನಿಯಗಳಂತಹ ಸಾಂದ್ರವಾದ ಅರಣ್ಯಗಳು ಅತಿ ವಿರಳ ಜನಸಂಖ್ಯೆಯಿಂದ ಕೂಡಿವೆ. ಬಹುತೇಕ ಜನಸಾಂದ್ರತೆಯು ಬೃಹತ್ ನಗರಗಳು ಮತ್ತು ಬಂದರುಗಳಾದ ಬ್ಯೂನಸ್ ಐರಿಸ್, ರಿಯೋಡಿ ಜನ್ನೆರೊ, ಸಾವೊ ಪೌಲೋ ಮುಂತಾದ ನಗರಗಳಲ್ಲಿ ಕಂಡುಬರುತ್ತದೆ.




*ದಕ್ಷಿಣ ಅಮೆರಿಕ – ಜನಸಾಂದ್ರತೆ*

NOT TO BE REPUBLISHED @KTBS

ದಕ್ಷಿಣ ಅಮೆರಿಕ ಖಂಡದ ಅಧಿಕ ಜನರು ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಖಂಡದ ಕೇಂದ್ರಭಾಗವು ವಿರಳ ಜನಸಂಖ್ಯೆಯಿಂದ ಕೂಡಿದ್ದು ಈ ಖಂಡವನ್ನು 'ಬೊಳ್ಳುಭೂಮಿ' ಎಂದು ಕರೆಯುತ್ತಾರೆ.

ದಕ್ಷಿಣ ಅಮೆರಿಕವು ವಿಶ್ವದ ಸರಾಸರಿ ಜನನ ಪ್ರಮಾಣದಷ್ಟೇ ಜನನ ಪ್ರಮಾಣವನ್ನು [21/1000] ದಾಖಲಿಸಿದೆ. ಆದರೆ ಮರಣ ಪ್ರಮಾಣವು ವಿಶ್ವದ [9/1000] ಸರಾಸರಿ ಪ್ರಮಾಣಕ್ಕಿಂತ ಕಡಿಮೆ [6/1000] ಇದೆ. ಆದುದರಿಂದ ದಕ್ಷಿಣ ಅಮೆರಿಕದ ಸ್ವಾಭಾವಿಕ ಜನಸಂಖ್ಯಾ ಹೆಚ್ಚಳದ ದರವು ಪ್ರಪಂಚದ ಸರಾಸರಿ ದರಕ್ಕಿಂತ ಅಧಿಕವಾಗಿದೆ.

### ಹೊಸ ಪದಗಳು

ರೆಡ್ ಇಂಡಿಯನ್ಸ್, ಆ್ಯಂಡೀಸ್, ಅಗ್ನಿಯುಂಗುರ, ಈಕ್ವೆಡಾರ್, ಗಯಾನ, ಓರಿನೊಕೊ, ಅಮೆಜಾನ್, ಲಾಪ್ಲಾಟಾ, ಗ್ರಾನ್‌ಚಾಕೋ, ಗಾಲಪಗೋಸ್, ಹೋರ್ನೋಸ್, ಪರಾನ, ಪರಾಗ್ವೆ, ಉರುಗ್ವೆ, ಟಿಟಿಕಾಕ, ಉಷ್ಣೋದಕ, ಶೀತೋದಕ, ಸೆಲ್ವಾಸ್, ಲ್ಯಾಟೆಕ್ಸ್, ಕಾಂಪಾಸ್, ಪಂಪಾಸ್, ಪಿರಾನ್ಹ, ಗೌಶೋಸ್, ಪಟಗೋನಿಯ, ಅಟಕಾಮ.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ದಕ್ಷಿಣ ಅಮೆರಿಕ ಖಂಡದ ಸ್ಥಳೀಯರನ್ನು 'ರೆಡ್ ಇಂಡಿಯನ್ಸ್' ಎಂದು ಏಕೆ ಕರೆಯುತ್ತಾರೆ?
2. ದಕ್ಷಿಣ ಅಮೆರಿಕದ ಸ್ಥಾನ ಮತ್ತು ವಿಸ್ತೀರ್ಣಗಳನ್ನು ತಿಳಿಸಿರಿ.
3. ದಕ್ಷಿಣ ಅಮೆರಿಕದ ಅತಿ ದೊಡ್ಡ ಹಾಗೂ ಅತಿ ಚಿಕ್ಕ ರಾಷ್ಟ್ರಗಳನ್ನು ಹೆಸರಿಸಿರಿ.
4. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ವಿಶ್ವದ ಅತಿ ಎತ್ತರ ಜಲಪಾತ ಯಾವುದು? ಅದು ಯಾವ ನದಿಯಿಂದ ನಿರ್ಮಾಣಗೊಂಡಿದೆ?
5. ದಕ್ಷಿಣ ಅಮೆರಿಕದ ಪ್ರಮುಖ ಹುಲ್ಲುಗಾವಲುಗಳನ್ನು ತಿಳಿಸಿರಿ.
6. ದಕ್ಷಿಣ ಅಮೆರಿಕದ ಪ್ರಮುಖ ಸಸ್ಯ ಹಾಗೂ ವನ್ಯಜೀವಿಗಳನ್ನು ಹೆಸರಿಸಿರಿ.
7. ದಕ್ಷಿಣ ಅಮೆರಿಕದ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಪ್ರಮುಖ ನಗರಗಳನ್ನು ಹೆಸರಿಸಿರಿ.

© KTBS NOT TO BE REPUBLISHED

**ಚಟುವಟಿಕೆಗಳು**



1. ದಕ್ಷಿಣ ಅಮೆರಿಕ ಖಂಡದ ಬಾಹ್ಯರೇಖಾ ನಕ್ಷೆಯಲ್ಲಿ ಅಟ್ಲಾಸ್ ಪುಸ್ತಕದ ಸಹಾಯದಿಂದ ದೇಶಗಳು ಮತ್ತು ಅವುಗಳ ರಾಜಧಾನಿ, ಪ್ರಮುಖ ಪರ್ವತಗಳು, ನದಿಗಳು, ಸರೋವರಗಳು ಮತ್ತು ಹುಲ್ಲುಗಾವಲುಗಳನ್ನು ಪಟ್ಟಿಮಾಡಿ ಗುರುತಿಸಿರಿ.
2. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಸಸ್ಯ, ಪ್ರಾಣಿ ಹಾಗೂ ಪಕ್ಷಿಗಳನ್ನು ಪಟ್ಟಿಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸಿರಿ.